ಕಿಟೆಲ್ ಕೋಶದ ಗಾದೆಗಳು

ಮುನ್ನುಡಿ

ಕನ್ನಡ ಗಾದೆಗಳ ಕ್ಷೇತ್ರದಲ್ಲಿ ಅತ್ಯಂತ ಪರಿಶ್ರಮ ವಹಿಸಿ ರಾಗೌ (ಶ್ರೀ ರಾಮೇಗೌಡರು) ಆಗಲೇ ಹೆಸರುವಾಸಿಯಾಗಿರುತ್ತಾರೆ. "ನಮ್ಮ ಗಾದೆಗಳು" ಎಂಬ ಅವರ ಸಂಕಲನ ಒಂದು ಸಾಹಸದ ಕೃತಿ. ಇದರಲ್ಲಿ ಹಿಂದೆ ಪ್ರಕಟವಾಗದೆ ಉಳಿದುಕೊಂಡ ಸುಮಾರು ಎರಡುಸಾವಿರಕ್ಕೂ ಮಿಕ್ಕ ಹೊಸ ಗಾದೆಗಳು ಅಡಕವಾಗಿವೆ. ಅವರು ಆ ಸಂದರ್ಭದಲ್ಲಿ ಬರೆದಿರುವ ಸುದೀರ್ಘವಾದ ಪ್ರಸ್ತಾವನೆ ಗಾದೆಯನ್ನು ಕುರಿತು ಕನ್ನಡಕ್ಕಿರುವ ಏಕಮಾತ್ರ ವಿಮರ್ಶಾತ್ಮಕ ಪ್ರಬಂಧವೆನ್ನಬಹುದು. ಬಹಳ ಅಮೂಲ್ಯವಾದ ಬರಹವದು.

ಅವರೀಗ ರೆ॥ ಕಿಟ್ಟಲರವರ ಕನ್ನಡ-ಇಂಗ್ಲಿಷ್ ನಿಘಂಟುವಿನಲ್ಲಿ ಚದರಿ ಹೋಗಿರುವ ಎಲ್ಲ ಗಾದೆಗಳನ್ನು ಸಂಗ್ರಹಿಸಿ ವರ್ಣಾನುಕ್ರಮವಾಗಿ ಸಂಪಾದಿಸಿರುತ್ತಾರೆ. 1894ರಲ್ಲಿ ಜರ್ಮನಿಯ ಆ ಘನವಿದ್ವಾಂಸರು ರಚಿಸಿದ ನಿಘಂಟು ಇಂದಿಗೂ ಮಹತ್ವದ ಆಧಾರಗ್ರಂಥವಾಗಿ ನಿಂತಿದೆ. ಶಬ್ದಗಳನ್ನು-ಅದರಲ್ಲೂ ದೇಶ್ಯ ಶಬ್ದಗಳನ್ನು-ಕೊಡುವಲ್ಲಿ ಸಂದರ್ಭೋಚಿತವಾಗಿ ಗಾದೆಗಳನ್ನು ಕೊಟ್ಟು ಶಬ್ದಾರ್ಥಜ್ಞಾನ ಮತ್ತಷ್ಟು ಮಂದಟ್ಟಾಗುವಂತೆ ಮಾಡಿದುದು ಈ ಮಹಾಕೃತಿಯ ಒಂದು ವೈಶಿಷ್ಟ್ಯ. ಅಂದು ಜನತೆಯಲ್ಲಿ ಪ್ರಚಲಿತವಾಗಿದ್ದ ಅನೇಕ ನಾಣ್ಣುಡಿಗಳು ಇಂದು ಇಲ್ಲದಾಗಿವೆ. ಅವುಗಳು ಬಹಳ ಬೆಲೆಯುಳ್ಳವು. ಅಂಥವನ್ನು ಉಳಿಸಿಕೊಂಡು ಅವು ಮತ್ತೊಮ್ಮೆ ಚಲಾವಣೆಗೆ ಬರುವಂತೆ ಮಾಡಲು ಈ ಪ್ರಯತ್ನ ಸಹಾಯಕವಾಗುವುದು. ಅಳಿಸಿ ಗಳಿಸುವುದಕ್ಕಿಂತ, ಅಳಿಸದೆಯೆ ಉಳಿಸಿಕೊಳ್ಳುವುದು ಲೇಸಲ್ಲವೆ? ಈ ಗಾದೆಗಳ ಮೌಲ್ಯವನ್ನು ಮತ್ತೊಮ್ಮೆ ಸಮೀಕ್ಷಿಸಬಹುದು. ಬಾಯಲ್ಲಿ ಮಿಠಾಯಿಯನ್ನು ಇಟ್ಟುಕೊಂಡು ಸವಿಯುತ್ತಿರುವಂತೆ, ಅವನ್ನು ಸವಿಯಬಹುದು. ಹಾಗೆ ಸವಿಯುತ್ತಾ ಹೋದಂತೆ, ಗಾದೆಗಳಲ್ಲಿ ಅಡಕವಾದ ಅನುಭವದ ಬೆಲೆ ಮತ್ತಷ್ಟು ಮಂದಟ್ಟಾಗುವುದು.

ಗಾದೆಯ ಇನ್ನೊಂದು ಹೆಸರು, ಅದು ನಾಣ್ಣುಡಿಯೂ ಹೌದು ಜಾಣ್ಣುಡಿಯೂ ಹೌದು. ಗಾದೆಯ ಮಾತು ಎಂದರೆ ಸಾವಿರಕ್ಕೊಂದು ಮಾತು. ಕಿರಿದರಲ್ಲಿ ಹಿರಿದಾದ ಅರ್ಥವನ್ನು ತುಂಬಿಕೊಂಡಿದೆ. It is an Iliad in

a nutshell ಎಂದರೆ ತಪ್ಪಾಗದು. ಬಿಂದಿಗೆಯಲ್ಲಿ ಕಡಲನ್ನು ತುಂಬಿದಂತೆ. ಲೋಕಾನುಭವ, ಸಂಸ್ಕೃತಿ, ನೀತಿ—ಇವುಗಳ ತ್ರಿವೇಣಿ ಸಂಗಮವನ್ನು ಅಲ್ಲಿ ಕಾಣಬಹುದು.

ಮಾನವ ಮನೋವೃತ್ತಿ ಮೂಲತಃ ಒಂದೇ ಎಂಬುದನ್ನು ಒತ್ತಿ ಹೇಳಲು ವಿವಿಧ ಭಾಷೆಗಳಲ್ಲಿರುವ ಗಾದೆಗಳ ತುಲನಾತ್ಮಕ ಅಭ್ಯಾಸ ಅತ್ಯಂತ ಉಪಯುಕ್ತವಾಗಬಹುದು. ಈ ಸಂದರ್ಭದಲ್ಲಿ ದಕ್ಷಿಣಭಾಷಾ ಪುಸ್ತಕ ಸಂಸ್ಥೆಯ ವತಿಯಲ್ಲಿ ಮದರಾಸು ವಿಶ್ವವಿದ್ಯಾನಿಲಯದ ದ್ರಾವಿಡ ಭಾಷಾ ಪ್ರಾಧ್ಯಾಪಕರು ಸಂಪಾದಿಸಿರುವ "ನಾಲ್‌ನುಡಿ-ನಾಣ್ಣುಡಿ" ಎಂಬ ಜ್ಞಾತಿ ದ್ರಾವಿಡ ಗಾದೆಗಳ ಸಂಗ್ರಹವನ್ನು ನೆನಪಿಸಬಹುದು. ಈ ದಿಸೆಯಲ್ಲಿ ರಾಗೌ ಅವರಂಥವರ ವಿಮರ್ಶದೃಷ್ಟಿ ಮುಂದುವರಿಯಲಿ. ಅವರು ಮಾಡಿರುವ ಕಾರ್ಯ ತುಂಬ ಪ್ರಶಂಸನೀಯ. ಮಾನಸಗಂಗೋತ್ರಿಯ ಪವಿತ್ರಕ್ಷೇತ್ರದಲ್ಲಿ ಇನ್ನೆಷ್ಟೋ ಬುಗ್ಗೆಗಳು ಚಿಮ್ಮಿಬರಲಿ.

ಕನ್ನಡ ಶಾಖೆ, ಮದರಾಸು
ವಿಶ್ವವಿದ್ಯಾನಿಲಯ
24-6-69

ಎಂ. ಮರಿಯಪ್ಪಭಟ್ಟ

ಪ್ರಸ್ತಾವನೆ

೧

ಭಾರತದ ಇತಿಹಾಸದಲ್ಲಿ ಕಳೆದ ಶತಮಾನವೊಂದು ಸಂಕ್ರಾಂತಿಯ ಕಾಲ. ಇದು ಅನೇಕ ಮಹಾಪುರುಷರ ಸಾಧನೆಯ ರಂಗವಾಗಿ ಸಿದ್ಧಿಯ ಶಿಖರವಾಗಿರುವುದು ಮಾತ್ರವಲ್ಲದೆ; ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಹಲವಾರು ಘಟನೆಗಳ, ಚಿಂತನಮಂಥನಗಳ, ಆಲೋಚನಾಂದೋಲನಗಳ ಸಮರಾಂಗಣವಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ, ಸಾಹಿತ್ಯಿಕವಾಗಿ—ಹೀಗೆ ಹಲವಾರು ವಿಧಗಳಲ್ಲಿ ಭಾರತೀಯ ಜೀವನದ ಹೊಸ ಸ್ವರೂಪದ ಸಂಕ್ರಮಣ ಸ್ಥಿತಿಯನ್ನು ಇಲ್ಲಿ ಕಾಣಬಹುದಾಗಿದೆ. ಅಜ್ಞಾನಾಂಧಕಾರದ ಮೌಢ್ಯತೆಯ ವಿರುದ್ಧ ಎದ್ದ ದಂಗೆಯನ್ನು ಒಂದು ಕಡೆ ಕಂಡರೆ, ಹಿಂದೂ ಧರ್ಮದ ಪುನಶ್ಚೇತನವನ್ನು ಮತ್ತೊಂದು ಕಡೆ ಕಾಣುತ್ತೇವೆ. ಸ್ವಾತಂತ್ರ್ಯಕ್ಕೆ ಎಲ್ಲ ಪೂರ್ವಸಿದ್ಧತೆಗಳು ನಡೆಯುತ್ತಿದ್ದು, ಇದೊಂದೇ ಮತ್ತೆಲ್ಲವನ್ನೂ ಆವರಿಸಿಕೊಂಡಿತ್ತು. ದಾಸ್ಯದಿಂದ ನಡುಬಾಗಿ ಗೂನಾಗಿದ್ದ ಭಾರತೀಯ ಸಿಡಿದೆದ್ದು ಎದುರಾಳಿಗಳ ಎದುರಿಗೆ ಗುರಾಣಿ ಎದೆಯೊಡ್ಡಿ ನಿಲ್ಲುವ ಶಕ್ತಿಯನ್ನು ಪಡೆದುಕೊಳ್ಳುತ್ತಿದ್ದ. ಹೀಗಾಗಿ, ಹಲವಾರು ಮೇಧಾವಿ ಮನೀಷಿ ಮಹರ್ಷಿಗಳ ಸಂತತ ಹೋರಾಟದ ಫಲವಾಗಿ ಹೊಸದೃಷ್ಟಿ, ಹೊಸ ಚೈತನ್ಯ, ಹೊಸ ವಿಚಾರ, ಹೊಸ ಹುರುಪು ಭಾರತದ ಎಲ್ಲೆಡೆಯಲ್ಲೂ ಗೋಚರವಾಗುತಿತ್ತು. ಮಹಾನ್ ರೂವಾರಿಗಳ ಕೈಲಿ ಭಾರತ ಅಪೂರ್ವವಾಗಿ ರೂಪಿತವಾಗುತಿತ್ತು.

ಹೀಗೆ ರಾಷ್ಟ್ರದ ಉದ್ದಗಲಗಳಲ್ಲಿ ಮಿಂಚಿನಂತೆ ಹರಿದಾಡುತ್ತಿದ್ದ ವಿನೂತನ ಕ್ರಾಂತಿಗೆ ಸಾಹಿತ್ಯಕ್ಷೇತ್ರಕೂಡ ಹೊರತಾಗಿರಲಿಲ್ಲ. ಅಲ್ಲಿಯೂ ಹೊಸ ಸೂರ್ಯ ಉದಯವಾಗ ತೊಡಗಿದ್ದ. ಧರ್ಮ ಪ್ರಚಾರಕ್ಕಾಗಿ ಆಗಮಿಸಿದ ಕ್ರಿಶ್ಚಿಯನ್ ಮಿಶನರಿಗಳು ದೇಶ ಭಾಷೆಗಳ ಪ್ರಾಚೀನ ಗ್ರಂಥಗಳ ಸಂಪಾದನ, ಪ್ರಕಟನ ಹಾಗೂ ವಿಮರ್ಶನಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ನಮಗೇ ಅರಿವಿಲ್ಲದೇ ಇದ್ದ ನಮ್ಮದೇ ಆದ ಈ ಜ್ಞಾನ ನಿಧಿಯನ್ನು ನಮ್ಮ ಮುಂದೆಯೇ ತೆಗೆದಿಟ್ಟವರಲ್ಲಿ ಈ ಪಾಶ್ಚಾತ್ಯ ವಿದ್ವಾಂಸ ಮಿಶನರಿಗಳೇ ಮೊದಲಿಗರಾದರು.

ಹೀಗೆ ಇವರ ಆಸಕ್ತಿಯಿಂದ ಅಧ್ಯಯನದಲ್ಲಿ ಹೊಸ ಮನ್ವಂತರವೇ ಪ್ರಾರಂಭ ವಾಯಿತೆನ್ನಬೇಕು. ಇದರಿಂದ ಎಚ್ಚತ್ತ ದೇಶೀಯ ವಿದ್ವಾಂಸರು ಪಾಶ್ಚಾತ್ಯ ಸಾಹಿತ್ಯ ಸಂಪರ್ಕವನ್ನು ಪಡೆದುಕೊಳ್ಳಲಾರಂಭಿಸಿದರು. ಫಲವಾಗಿ, ನಮ್ಮ ಸಾಹಿತ್ಯ ಕ್ಷೇತ್ರದಲ್ಲೂ ನೂತನ ವಿಧಾನಗಳ ಹವಣಿಕೆ ಗೋಚರವಾಗತೊಡಗಿದವು. ಅದರಲ್ಲೂ ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕ ನಮ್ಮ ಸಾಹಿತ್ಯದಲ್ಲಿ ನೂತನ ಕ್ರಾಂತಿಯೇ ನಡೆದು ಹೋಯಿತು. ಎಲ್ಲಿ ನೋಡಿದರೂ ಪಾಶ್ಚಾತ್ಯ ಸಾಹಿತ್ಯದ ಹೊಸ ಗಾಳಿ ಬಿರುಸಾಗಿಯೇ ಬೀಸತೊಡಗಿತು.

ಹೀಗೆ, ಭಾರತೀಯ ಭಾಷಾ ಸಾಹಿತ್ಯಗಳೆಲ್ಲದರಲ್ಲಿಯೂ ಹೊಸ ಪರಿವರ್ತನೆ ನಡೆಯುತ್ತಿದ್ದಾಗ ಕನ್ನಡವೂ ಹೊರತಾಗಿರಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಕೂಡ ಹೊಸ ಅಭಿರುಚಿಯ ನೂತನ ಸಾಹಿತ್ಯದ ರಚನೆಗೆ ಸಿದ್ಧತೆಗಳು ನಡೆಯುತ್ತಿದ್ದುವು. ಪಾಶ್ಚಾತ್ಯ ಸಾಹಿತ್ಯದ ಅಧ್ಯಯನದ ಫಲವಾಗಿ ಇಲ್ಲಿಯೂ ಕಥೆ, ಕಾದಂಬರಿ, ಭಾವಗೀತೆ, ಪ್ರಬಂಧ, ವಿಮರ್ಶೆ ಮೊದಲಾದ ಹೊಸ ಸಾಹಿತ್ಯ ಪ್ರಕಾರಗಳು ಕಾಣಿಸಿಕೊಂಡವು. ಪ್ರಕೃತ ಶತಮಾನದಲ್ಲಿಯೇ ಇದರ ಎಲ್ಲ ಬೆಳವಣಿಗೆಗಳನ್ನು ಕಂಡರೂ, ಅದರ ಸಮಸ್ತ ಬೀಜಾಣುಗಳನ್ನೆಲ್ಲ ಕಳೆದ ಶತಮಾನವೇ ಹುದುಗಿಸಿಕೊಂಡಿದೆಯೆಂದು ಹೇಳಬೇಕು. ಸೂರ್ಯ ಉದಯವಾಗುವ ಮುನ್ನ ಬೆಳಕು ಪ್ರಸರಿಸುವ ಹಾಗೆ, ಹೊಸಗನ್ನಡ ಸಾಹಿತ್ಯದ ಸೂರ್ಯೋದಯಕ್ಕೆ ಮುಂಬೆಳಗಾಗಿ ಹತ್ತೊಂಬತ್ತನೆಯ ಶತಮಾನ ಕಾಣಿಸಿಕೊಳ್ಳುತ್ತದೆ. ಆದ್ದರಿಂದ, ಕಳೆದ ಶತಮಾನ ಹಳೆಯ ಮತ್ತು ಹೊಸ ಸಾಹಿತ್ಯಗಳ ಕೊಂಡಿ ಎಂದು ಕರೆಯಬೇಕೆನಿಸುತ್ತದೆ.

೧೯ನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ಮಿಶನರಿಗಳ ಪಾತ್ರ ಮಹತ್ತ್ವಪೂರ್ಣವಾದುದು. ಅವರು ಕನ್ನಡಭಾಷಾ ಸಾಹಿತ್ಯಗಳಿಗೆ ಹೊಸ ಸ್ವರೂಪವನ್ನು ಕೊಟ್ಟರಲ್ಲದೆ, ನೂತನ ತಿರುವನ್ನೂ ತಂದುಕೊಟ್ಟರು. ಪ್ರಾಚೀನ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸುವುದು ; ಕನ್ನಡಭಾಷೆ ಸಾಹಿತ್ಯ ಸಂಸ್ಕೃತಿಗಳನ್ನು ಕುರಿತು ಗ್ರಂಥಗಳನ್ನು ಬರೆಯುವುದು ; ನಿಘಂಟು, ವ್ಯಾಕರಣ, ಗಣಿತ, ಧರ್ಮ ಇತ್ಯಾದಿ ಶಾಸ್ತ್ರೀಯ ವಿಷಯಗಳನ್ನು ಕುರಿತು ಗ್ರಂಥಗಳನ್ನು ರಚಿಸುವುದು, ಟೀಕೆ ವ್ಯಾಖ್ಯಾನಾದಿಗಳನ್ನು ಮಾಡುವುದು ; ಶಾಲೆಗಳಿಗೆ ಬೇಕಾದ ಪಠ್ಯಪುಸ್ತಕಗಳನ್ನು ರಚಿಸುವುದು—ಇವು ಇವರ ಸಾಮಾನ್ಯ ಕೆಲಸಗಳಾದುವು. ಹೀಗೆ

ಹಲವಾರು ವಿಧದಲ್ಲಿ ಕನ್ನಡದಲ್ಲಿ ಕೆಲಸ ಮಾಡಿದ ಮಿಶನರಿಗಳೆಂದರೆ ರೈಸ್, ಕಿಟ್ಟೆಲ್, ಜಾನ್‌ಹ್ಯಾಂಡ್ಸ್, ಪ್ಲೀಟ್, ರೀವ್, ಕ್ಯಾರಿ, ಮ್ಯಾಕೆರೆಲ್, ಮೊಗ್ಲಿಂಗ್, ಸ್ಯಾಂಡರ್ಸನ್ ಇವರೇ ಮುಂತಾದವರು. ಇವರಲ್ಲಿ ಮೊದಲ ಮನ್ನಣೆಗೆ ಪಾತ್ರರಾಗಿರುವವರೆಂದರೆ ರೆವರೆಂಡ್ ಎಫ್ ಕಿಟ್ಟೆಲ್ ಅವರು.

೨

ರೆವರೆಂಡ್ ಎಫ್ ಕಿಟ್ಟೆಲ್ ಅವರು ಹೊಸಗನ್ನಡದ ಮೂಲ ಪುರುಷರಲ್ಲಿ ಒಬ್ಬರು. ದೇಶದಿಂದ ದೇಶಕ್ಕೆ ಬಂದು, ಕನ್ನಡ ಕಲಿತು, ವಿದ್ವತ್ತನ್ನು ಸಂಪಾದಿಸಿ ಮುಕ್ತ ಮನಸ್ಸಿನಿಂದ ಕನ್ನಡ ಭಾಷಾ ಸಾಹಿತ್ಯಗಳಿಗೆ ಅವರು ಮಾಡಿರುವ ಸೇವೆ ಕನ್ನಡ ಸಾರಸ್ವತ ಲೋಕಕ್ಕೆ ಚಿರಪರಿಚಿತವಾದುದು. ಆತನೊಬ್ಬ ಮಹಾ ವಿದ್ವಾಂಸ; ಕನ್ನಡದ ಅಭಿಮಾನಿ ಶಕ್ತಲೇಖಕ.

ಕಿಟ್ಟೆಲ್ ಅವರ ಜನ್ಮಭೂಮಿ ಜರ್ಮನಿ. ತಂದೆ ಧರ್ಮಾಧಿಕಾರಿಯಾಗಿದ್ದ ಪ್ಯಾಸ್ಟರ್ ಕಿಟ್ಟೆಲ್ ಅವರು. ೧೮೩೨ ರ ಏಪ್ರಿಲ್ ೭ ನೇ ತಾರೀಖು ಜರ್ಮನಿಯ ರೋಸ್ಟರ್‌ಹಾಫೆ ಎಂಬಲ್ಲಿ ಜನಿಸಿದರು. ಔರಿಕ್ ನಗರದಲ್ಲಿ ಹೈಸ್ಕೂಲು ವಿದ್ಯಾಭ್ಯಾಸಮಾಡಿದ ಮೇಲೆ ಬಾಸೆಲ್ ನಗರದ ಬಾಸೆಲ್ ಮಿಶನ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಅನಂತರ ಕ್ರೈಸ್ತ ಮತದ ಪ್ರಚಾರಕ್ಕಾಗಿ, ೧೮೫೩ ರ ಅಕ್ಟೋಬರ್‌ನಲ್ಲಿ ಭಾರತಕ್ಕೆ ಬಂದು ಮಂಗಳೂರಿನಲ್ಲಿ ನೆಲೆಸಿದರು. ಆಗ ಅವರಿಗೆ ಕೇವಲ ಇಪ್ಪತ್ತೆರಡು ವರ್ಷ ವಯಸ್ಸು ಮಾತ್ರ ಆಗಿತ್ತು. ಇಲ್ಲಿಗೆ ಬಂದ ಕೂಡಲೇ ಕನ್ನಡವನ್ನು ಕಲಿತುಕೊಂಡುದಲ್ಲದೆ ಕನ್ನಡ ಸಾಹಿತ್ಯದಲ್ಲೂ ಅಗಾಧ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಕೆಲವೇ ವರ್ಷಗಳಲ್ಲಿ ಕನ್ನಡದ ಪೂರ್ಣ ಜ್ಞಾನ ಅವರ ಕೈಸೇರಿತ್ತು.

ಕಿಟ್ಟೆಲ್ ಅವರು ಮಂಗಳೂರಿನಲ್ಲಿ ನೆಲೆಯೂರಿದ ಸುಮಾರು ಏಳುವರ್ಷಗಳ ನಂತರ, ಕ್ರಿ.ಶ. ೧೮೬೦ ರಲ್ಲಿ ಪಾಲ್ಯೆನ್ ಎಫ್ ಐತ್ ಎಂಬುವಳನ್ನು ಮದುವೆಯಾದರು. ಆದರೆ ಮದುವೆಯಾದ ನಾಲ್ಕನೆ ವರ್ಷದಲ್ಲಿಯೇ ಈ ಮೊದಲ ಹೆಂಡತಿ ತೀರಿಕೊಂಡರು. ಆಗ ಬೇಸರಗೊಂಡ ಕಿಟ್ಟೆಲ್ ಅವರು ತಮ್ಮ ಇಬ್ಬರು ಗಂಡು ಮಕ್ಕಳೊಡನೆ ೧೮೬೬ ರಲ್ಲಿ ಮತ್ತೆ ಜರ್ಮನಿಗೆ ಹೊರಟು ಹೋದರು. ಅಲ್ಲಿ ೧೮೬೭ರಲ್ಲಿ ತಮ್ಮ ಮೊದಲ ಹೆಂಡತಿಯ ತಂಗಿ 'ಜುಲಿಯಾ'ಳನ್ನು ಮದುವೆ

ಯಾಗಿ ಮತ್ತೆ ಭಾರತಕ್ಕೆ ವಾಪಸಾದರು. ಅನಂತರ ಅವರ ಸಂಸಾರ ಕಡೆಯ ವರೆಗೂ ಸುಖವಾಗಿಯೇ ಸಾಗಿತು.

೧೮೬೭ ರಲ್ಲಿ ಮತ್ತೆ ಭಾರತಕ್ಕೆ ಬಂದ ಮೇಲೆ, ಕಿಟ್ಟೆಲ್ ಅವರು ತಮ್ಮ ಸ್ವದೇಶಕ್ಕೆ ಮಧ್ಯೆ ಮಧ್ಯೆ ಹೋಗುತ್ತಿದ್ದರೂ ಕನ್ನಡದ ಕೆಲಸವನ್ನು ಸತತವಾಗಿ ಸಾಗಿಸಿದರು. ಧಾರವಾಡ, ಹುಬ್ಬಳ್ಳಿ, ಮಂಗಳೂರು, ಮಡಕೇರಿ ಮೊದಲಾದ ಕಡೆಗಳಲ್ಲಿ ಕನ್ನಡದ ಕೈಂಕರ್ಯವನ್ನು ಕೈಗೊಂಡರು. ಹೀಗೆ ಸತತ ಶ್ರಮದ ಫಲ ವಾಗಿ ಛಂದೋಂಬುಧಿ, ಶಬ್ದಮಣಿದರ್ಪಣಗಳ ಪರಿಷ್ಕೃತ ಮುದ್ರಣಗಳು ಬೆಳಕು ಕಂಡವು. ವಿಖ್ಯಾತ ಕನ್ನಡ ಶಬ್ದಕೋಶ ರಚಿತವಾಯಿತು. ಅವರ ವಿದ್ವತ್ಪೂರ್ಣ ವ್ಯಾಕರಣ ಪ್ರಕಟವಾಯಿತು. ಇವಲ್ಲದೆ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಹಲವಾರು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಬರೆದರು. ಕನ್ನಡ ಭಾಷಾ ಶಾಸ್ತ್ರವನ್ನೂ, ವ್ಯಾಕರಣ ಛಂದಸ್ಸನ್ನೂ ಕುರಿತು ಆಲೋಚಿಸಿದರು. ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಲೇಖನಗಳನ್ನೂ ಗ್ರಂಥಗಳನ್ನೂ ಬರೆದಿದ್ದಾರೆ. ಹಲವಾರು ವಿಷಯಗಳನ್ನು ಕುರಿತ ಅವರ ಜ್ಞಾನ ಬೆರಗುಗೊಳಿಸುವಂಥದ್ದು. ಅವರ ವಿದ್ವತ್ತು ಅಸಾಮಾನ್ಯ, ಅಪರೂಪ. ಇದಕ್ಕೆ ಸ್ಪಷ್ಟ ನಿದರ್ಶನ ಅವರ ಶಬ್ದಕೋಶ. ಈ ಮಹಾಗ್ರಂಥಕ್ಕೆ ಟುಬಿನ್‌ಜೆನ್ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ಕೊಟ್ಟು ಕಿಟ್ಟೆಲ್ ಅವರನ್ನು ಗೌರವಿ ಸಿತು. ಹೀಗೆ ತಮ್ಮ ಇಡೀ ಬದುಕನ್ನೆ ಕನ್ನಡಕ್ಕಾಗಿ ಅರ್ಪಿಸಿಕೊಂಡ ಈ ಮಹಾನುಭಾವ ೧೯೦೩ ರ ಡಿಸೆಂಬರ್ ೧೯ ನೇ ತಾರೀಖು ತೀರಿಕೊಂಡರು. ಆಗ ಅವರಿಗೆ ೭೧ ವರ್ಷ ವಯಸ್ಸಾಗಿತ್ತು.

೩

ಕಿಟ್ಟೆಲ್ ಅವರು ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಗ್ರಂಥಗಳನ್ನು ರಚಿಸಿದ್ದಾರೆ ಎಂಬುದನ್ನು ಹಿಂದೆ ನೋಡಿದೆವು. ಪ್ರಕೃತದಲ್ಲಿ ಕನ್ನಡದಲ್ಲಿ ರಚಿತ ವಾದ ಪ್ರಮುಖಗ್ರಂಥಗಳನ್ನಿಲ್ಲಿ ಅವಲೋಕಿಸಬಹುದು. ಕಿಟ್ಟೆಲ್ ಮೊದ ಮೊದಲು ಬೈಬಲ್ ಅನುವಾದದ ಕೆಲಸವನ್ನು ಪ್ರಾರಂಭಿಸಿ, ಕ್ರಮೇಣ ಪಠ್ಯ ಪುಸ್ತಕಗಳ ನಿರ್ಮಾಣದ ಕಡೆಗೆ ಗಮನಕೊಟ್ಟಿರಬೇಕು. ಅನಂತರ ವ್ಯಾಕರಣ, ಛಂದಸ್ಸು, ಭಾಷಾಶಾಸ್ತ್ರ–ಇವುಗಳ ಕಡೆಗೆ ಹೆಚ್ಚು ಹೆಚ್ಚು ಆಸಕ್ತಿ ಬೆಳೆದಿರು

ವಂತೆ ಕಾಣಬರುತ್ತದೆ. ಕನ್ನಡದಲ್ಲಿ ‘ ಕನ್ನಡ ಪಂಚತಂತ್ರ ’ವನ್ನೂ, ‘ ಪರಮಾತ್ಮ ಜ್ಞಾನ ’ವನ್ನೂ, ‘ ಕ್ರೈಸ್ತ ಸಭಾ ಚರಿತ್ರ ’ವನ್ನೂ ರಚಿಸಿರುವಂತೆ ತಿಳಿದುಬರುತ್ತದೆ. ಕನ್ನಡ ಗ್ರಂಥ ಸಂಪಾದನಾ ಚರಿತ್ರೆಯಲ್ಲಿ ಕಿಟ್ಟೆಲ್‌ರ ಹೆಸರನ್ನು ಮರೆಯುವಂತಿಲ್ಲ ; ಮಾತ್ರವಲ್ಲ ಅದರ ಮೊದಮೊದಲ ಸಂಪಾದಕರಲ್ಲಿ ಅವರೇ ಅಗ್ರಗಣ್ಯರು. ಅವರ ಈ ಸಂಪಾದನ ಪ್ರಕಟಣೆಗಳಲ್ಲಿ ಶಬ್ದಮಣಿ ದರ್ಪಣ ಮತ್ತು ಛಂದೋಂಬುಧಿ ಗಮನಾರ್ಹವಾದವುಗಳು.

ಕೇಶಿರಾಜನ ಶಬ್ದಮಣಿ ದರ್ಪಣವನ್ನು ನಿಟ್ಟೂರ ನಂಜಯ್ಯನ ವ್ಯಾಖ್ಯಾನ ಸಹಿತ ಮೊಟ್ಟಮೊದಲು ಕಿಟ್ಟೆಲ್ ೧೮೭೨ ರಲ್ಲಿ ಪರಿಷ್ಕರಿಸಿ ಹೊರ ತಂದರು. ಕಿಟ್ಟೆಲ್ ಇದಕ್ಕೆ ಪ್ರಸ್ತಾವನೆ ಬರೆಯುತ್ತಾ, ಈ ಪರಿಷ್ಕೃತ ಮುದ್ರಣಕ್ಕೆ ೯ ಹಸ್ತ ಪ್ರತಿಗಳನ್ನು ನೋಡಿರುವೆನೆಂದೂ, ಅವುಗಳಲ್ಲಿ ಕೆಲವು ಪೂರ್ಣ ಮತ್ತೆ ಕೆಲವು ಅಪೂರ್ಣವಾದವುಗಳೆಂದೂ ಹೇಳಿಕೊಂಡಿದ್ದಾರೆ. ಶಬ್ದಮಣಿ ದರ್ಪಣದ ಪ್ರತಿಸೂತ್ರಕ್ಕೂ ಅದರ ಪಕ್ಕದಲ್ಲಿ ಇಂಗ್ಲಿಷಿನಲ್ಲಿ ಅದರ ವ್ಯಾಖ್ಯ ಸಾರವನ್ನು ಕೊಟ್ಟದ್ದಾರೆ. ಪ್ರಸ್ತಾವನೆಯಲ್ಲಿ ಕೇಶಿರಾಜನ ಜೀವನ ಕಾಲ ವಿಚಾರ, ಕೃತಿ ವಿಶಿಷ್ಟತೆ, ಪಾಠಾಂತರಗಳ ವಿಚಾರ–ಮೊದಲಾದವುಗಳನ್ನು ಕುರಿತು ಚರ್ಚಿಸಿದ್ದಾರೆ. ಕಡೆಯಲ್ಲಿ ಕೆಲವು ಪಾಠಗಳ ಭಿನ್ನತೆಗಳನ್ನು ವಿವರವಾಗಿ ಕೊಟ್ಟದ್ದಾರೆ. ಒಟ್ಟನಲ್ಲಿ ಶಬ್ದಮಣಿದರ್ಪಣವನ್ನು ಮೊದಲು ಹೊರ ತಂದ ಕೀರ್ತಿ ಕಿಟ್ಟೆಲ್ ಅವರಿಗೆ ಸೇರುತ್ತದೆ.

ನಾಗವರ್ಮನ ಛಂದೋಂಬುಧಿ ಕಿಟ್ಟೆಲ್ ಅವರ ಸಂಪಾದನಾ ಕಾರ್ಯದ ಎರಡನೆಯ ದೊಡ್ಡ ಸಾಧನೆ. ಹಲವಾರು ಪ್ರಕ್ಷಿಪ್ತಗಳಿಂದ ಕೂಡಿದ ಈ ಗ್ರಂಥದ ಪ್ರಕಟಣೆ ನಿಜಕ್ಕೂ ಒಂದು ಸಾಹಸದ ಕೆಲಸ. ಇದನ್ನು ಪರಿಷ್ಕರಿಸಿ ಪ್ರಕಟಿಸಲು ಸುಮಾರು ೧೪ ಹಸ್ತಪತ್ರಿಕೆಗಳನ್ನು ನೋಡಿದ್ದೇನೆಂದು ಸಂಪಾದಕರೇ ಪ್ರಸ್ತಾವನೆಯಲ್ಲಿ ತಿಳಿಸುತ್ತಾರೆ. ಈ ಒಟ್ಟು ಹಸ್ತಪ್ರತಿಗಳಲ್ಲಿ ೪ ಬಿ. ಎಲ್. ರೈಸ್ ಅವರ ಹತ್ತಿರ ಇದ್ದವು; ಇನ್ನು ೩ ಹಸ್ತಪ್ರತಿಗಳು ತಿರುಮಲೆ ಶಾಮಣ್ಣನವರ ಹತ್ತಿರ ಇದ್ದವು ಎಂದು ಅವರೇ ಉಲ್ಲೇಖಿಸಿದ್ದಾರೆ. ಇಲ್ಲಿನ ಪ್ರತಿ ಪದ್ಯಕ್ಕೂ ಇಂಗ್ಲಿಷಿನಲ್ಲಿ ಸಾರವನ್ನು ಕೊಟ್ಟದ್ದಾರೆ. ಪ್ರಕ್ಷಿಪ್ತದ ಕೆಲವು ಭಾಗಗಳನ್ನು, ಪದ್ಯಗಳನ್ನು, ಸಾಲುಗಳನ್ನು ಹಾಗೂ ಅರ್ಥಕೋಶವನ್ನು ಕೊನೆಯಲ್ಲಿ ಕೊಟ್ಟದ್ದಾರೆ. ಇದಲ್ಲದೆ ಪ್ರಸ್ತಾವನೆಯಲ್ಲಿ ನಾಗವರ್ಮನ ಕಾಲ, ಛಂದಸ್ಸಿನ ವಿಚಾರ

ಹಾಗೂ ಸಂಪಾದಿಸಿದ ರೀತಿ ಮುಂತಾದವುಗಳ ಬಗ್ಗೆ ಚರ್ಚಿಸಿದ್ದಾರೆ. ಪ್ರಸ್ತಾವನೆಗೆ ಸೇರಿದಂತೆಯೇ ಇರುವ "An Essay on Canarese Literature" ಎಂಬ ಕನ್ನಡ ಸಾಹಿತ್ಯವನ್ನು ಕುರಿತ ಪ್ರೌಢ ಪ್ರಬಂಧ ಮನಸೆಳೆಯುತ್ತದೆ. ಆ ಕಾಲಕ್ಕೆ ದೊರೆತಿದ್ದ ಕನ್ನಡ ಗ್ರಂಥಗಳ ಸ್ಥೂಲ ಚರಿತ್ರೆ ಇಲ್ಲಿದೆ. ಇದೊಂದು ಉಪಯುಕ್ತ ಲೇಖನ. ಇದರಿಂದಾಗಿ ಛಂದೋಂಬುಧಿಯ ಕೀರ್ತಿ ಮತ್ತಷ್ಟು ಹೆಚ್ಚಿದೆ. ಈ ಕೃತಿ ಮೊಟ್ಟಮೊದಲು ಪ್ರಕಟಣೆಗೊಂಡಿದ್ದು ೧೮೭೫ರಲ್ಲಿ.

ಕನ್ನಡ ಸಾರಸ್ವತ ಪ್ರಪಂಚದಲ್ಲಿ ಕಿಟ್ಟೆಲ್ ಅವರ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿರುವ ಗ್ರಂಥವೆಂದರೆ ಅವರ ಕನ್ನಡ–ಇಂಗ್ಲಿಷ್ ಡಿಕ್ಸನರಿ. ಇದೊಂದು ಅದ್ಭುತವೂ ಪವಾಡ ಸದೃಶವೂ ಆದ ಅಸಾಮಾನ್ಯ ಕೃತಿ. ಕಿಟ್ಟೆಲ್ ಅವರ ಅಪಾರವೂ ನಿಷ್ಕೃಷ್ಟವೂ ಆದ ವಿದ್ವತ್ತಿಗೆ ಸ್ಮಾರಕ. ಇಂದೂ ಈ ಕೃತಿಯನ್ನು ಮೀರಿಸುವಂಥ ಶಬ್ದಕೋಶವೊಂದನ್ನು ರಚಿಸುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ಇದರ ಮಹತ್ತನ್ನೂ ಬೃಹತ್ತನ್ನೂ ಶ್ರುತಪಡಿಸುತ್ತದೆ. ಇದಕ್ಕಿಂತಲೂ ಹಿಂದೆಯೇ ಸುಮಾರು ೧೮೨೪ರಲ್ಲಿಯೇ ರೀವ್ ಎಂಬ ಮಿಷನರಿ ಕನ್ನಡ ಶಬ್ದಕೋಶವೊಂದನ್ನು ರಚಿಸಿದ್ದ. ಇದು ಮೊದಲ ಶಬ್ದಕೋಶವಾದರೂ ಅಸಮರ್ಪಕವೂ ಅಪೂರ್ಣವೂ ಆದ ಕೃತಿಯಾಗಿತ್ತು. ಈ ಕೊರತೆಯನ್ನು ಕಂಡ ಆಗಿನ ಸರಕಾರ ಪರಿಪೂರ್ಣ ಶಬ್ದಕೋಶವೊಂದನ್ನು ರಚಿಸಲು ಕಿಟ್ಟೆಲ್ ಅವರಿಗೆ ವಹಿಸಿತು. ಈ ಕೆಲಸಕ್ಕಾಗಿ ಕಿಟ್ಟೆಲ್‌ರವರು ತಮ್ಮ ಜೀವಮಾನದ ಬಹುತೇಕ ಕಾಲವನ್ನು ಮೀಸಲಿರಿಸಿದರು. ತುಂಬ ಜವಾಬ್ದಾರಿಯುತವೂ ಶ್ರಮಸಾಧ್ಯವೂ ಆದ ಈ ಕಾರ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಕರ್ಣಾಟಕದ ನಾನಾ ಭಾಗಗಳಲ್ಲಿ ಸಂಗ್ರಹಿಸಿದ ಸಾಮಗ್ರಿಗಳೊಡನೆ ೧೮೭೭ ರಲ್ಲಿ ಸ್ವದೇಶಕ್ಕೆ ಮರಳಿದರು. ಅಲ್ಲಿ ಆರು ವರ್ಷಗಳ ಸತತ ಶ್ರಮದಿಂದ ಕೋಶವನ್ನು ಒಂದು ರೂಪಕ್ಕೆ ತಂದರು. ಅನಂತರ ೧೮೮೩ರಲ್ಲಿ ಮತ್ತೆ ಭಾರತಕ್ಕೆ ಬಂದು ಅದನ್ನು ಪರಿಷ್ಕರಿಸಿ ಮಂಗಳೂರಿನ ಬ್ಯಾಸೆಲ್ ಮಿಷನ್ ಪ್ರೆಸ್ಸಿಗೆ ಅಚ್ಚು ಹಾಕಿಸಲು ಕೊಟ್ಟರು. ೧೮೯೪ರಲ್ಲಿ ಕಿಟ್ಟೆಲ್ ಡಿಕ್ಸನರಿ ಮೊದಲ ಬಾರಿಗೆ ಹೊರಬಂದಿತು. ಇದಕ್ಕಾಗಿ ಕಿಟ್ಟೆಲ್‌ರು ಹದಿನೈದು ವರ್ಷಗಳು ಸತತವಾಗಿ ದುಡಿದಿದ್ದರು. ಹಲವಾರು ವೈಶಿಷ್ಟ್ಯಗಳಿಂದ ಕೂಡಿರುವ ಈ ಗ್ರಂಥ ಇವೊತ್ತಿಗೂ ಪ್ರಮಾಣಗ್ರಂಥವಾಗಿಯೇ ಉಳಿದಿದೆ. ಕಿಟ್ಟೆಲ್ ಅವರ ಕನ್ನಡ ಅಭಿಮಾನ, ವಿಷಯ ಜ್ಞಾನ,

ಪಕ್ವ ವಿದ್ವತ್ತು–ಇವುಗಳ ದ್ಯೋತಕವಾಗಿದೆ ಈ ಮಹಾ ಶಬ್ದಕೋಶ.

ಕಿಟ್ಟೆಲ್‌ರ ಕೊನೆಯ ಮಹಾ ಗ್ರಂಥವೆಂದರೆ ೧೯೦೩ ರಲ್ಲಿ ಪ್ರಕಟವಾದ 'ಕನ್ನಡ ವ್ಯಾಕರಣ'. ಇದು ಇಂಗ್ಲಿಷಿನಲ್ಲಿ ರಚಿತವಾಗಿದೆ. ಕನ್ನಡ ಭಾಷೆಯ ಬೆಳವಣಿಗೆಯ ಮೂರು ಸ್ತರಗಳಾದ ಹಳಗನ್ನಡ, ನಡುಗನ್ನಡ ಹಾಗೂ ಹೊಸ ಗನ್ನಡವನ್ನು ಕುರಿತ ವಿಸ್ತೃತ ವಿವೇಚನೆ ಇಲ್ಲಿದೆ. ಸಾಮಾನ್ಯವಾಗಿ ಇದಕ್ಕೆ ಕೇಶಿರಾಜನ ಶಬ್ದಮಣಿ ದರ್ಪಣವನ್ನು ಪ್ರಧಾನವಾಗಿ ಆಧಾರವಾಗಿಟ್ಟುಕೊಂಡಿದ್ದಾರೆ. ೨೮ ಅಧ್ಯಾಯಗಳಿರುವ ೪೮೩ ಪುಟಗಳ ಈ ದೊಡ್ಡ ಪುಸ್ತಕ ಕನ್ನಡ ವ್ಯಾಕರಣಗಳಲ್ಲಿ ಗಮನಾರ್ಹವಾದ ಮಹತ್ವದ ಪ್ರಕಟಣೆ. ಕನ್ನಡ ಭಾಷೆಯನ್ನು ಕುರಿತು ಆಲೋಚಿಸುತ್ತಿದ್ದರೂ, ಅಲ್ಲಲ್ಲಿ ಇತರ ದ್ರಾವಿಡ ಭಾಷೆಗಳನ್ನೂ ಗಮನಿಸಿದ್ದಾರೆ. ಅದಕ್ಕೆ ಅವರು ಕೊಡುವ ನಿದರ್ಶನಗಳೇ ಸಾಕ್ಷಿ. ಕಿಟ್ಟೆಲ್ ಅವರ ಪರಿಣತ ವಿದ್ವತ್ತಿಗೆ ಇದು ಸೊಗಸಾಗಿ ಕನ್ನಡಿ ಹಿಡಿಯುತ್ತದೆ.

ಹೀಗೆ ಕಿಟ್ಟೆಲ್ ಅವರ ಕನ್ನಡ ಸೇವೆ ಬಹುಮುಖವಾದುದು; ಬಹುಶ್ರುತವಾದುದು. ಯಾರೂ ಹೆಮ್ಮೆಪಟ್ಟುಕೊಳ್ಳುವಂಥ ಕೆಲಸವನ್ನು ಮಾಡಿರುವ ಕಿಟ್ಟೆಲ್ ಅವರು ಅಪಾರ ಗೌರವಕ್ಕೆ ಭಾಜನರಾಗಿದ್ದಾರೆ. ಕನ್ನಡ ಜನಕೋಟಿ ಅವರ ಕೆಲಸವನ್ನು ಕಂಡು ಮೆಚ್ಚಿ ಹೃತ್ಪೂರ್ವಕವಾಗಿ ಹೊಗಳಿದ್ದಾರೆ, ಕಣ್ಣು ತುಂಬಿ ನೋಡಿ ಕೃತಜ್ಞತೆಯನ್ನು ಅರ್ಪಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುವ ಯಾರೂ ಕಿಟ್ಟೆಲ್ ಅವರನ್ನು ಮರೆತು ಹೋಗುವಂತಿಲ್ಲ. ಆಚಾರ್ಯ ಡಿ. ಎಲ್. ಎನ್. ಅವರು ಹೇಳುವ ಹಾಗೆ 'ಇಂದಿನ ಪರಿಸ್ಥಿತಿಗೆ ಕಾರಣಭೂತರಾದವರಲ್ಲಿ ಕಿಟ್ಟೆಲ್‌ರವರು ಅಗ್ರಗಣ್ಯರಾದ ಪ್ರಾಚೀನರು; ಕನ್ನಡದ ಋಷಿಗಳಲ್ಲಿ ಅವರು ಒಬ್ಬರು.'* ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳಿಗೆ ಇಂಥವರು ನಿಜಕ್ಕೂ ಸಂಸ್ಕೃತಿ ಸೇತುವೆಯಾಗುತ್ತಾರೆ. ಕಿಟ್ಟೆಲ್ ಅವರು ಜರ್ಮನಿಯವರಾದರೂ ಕನ್ನಡಿಗರು. ಎರಡು ದೇಶಗಳೂ ಕಣ್ಣನ್ನು ಒದ್ದೆಮಾಡಿಕೊಂಡು ನೆನೆಯುವಂಥ ಮಹಾ ವಿದ್ವಾಂಸರು.

---

* ರೆವರೆಂಡ್ ಎಫ್ ಕಿಟ್ಟೆಲ್—ಡಿ. ಎಲ್. ಎನ್. ಪ್ರ. ಕ. ಸಂ. 40, ಸಂಚಿಕೆ 3. ಪುಟ. 188.

೪

ಈಗ ನಿಮ್ಮ ಮುಂದಿರುವ ಪುಸ್ತಕ 'ಕಿಟ್ಟೆಲ್ ಕೋಶದ ಗಾದೆಗಳು'. ಕಿಟ್ಟೆಲ್ ಡಿಕ್ಷನರಿಯಲ್ಲಿ ಚದುರಿ ಹೋಗಿರುವ ಸಮಸ್ತ ಗಾದೆಗಳನ್ನೂ ಒಂದೆಡೆ ಸೇರಿಸಿ ಕೊಡಲು ಇಲ್ಲಿ ಪ್ರಯತ್ನ ಮಾಡಲಾಗಿದೆ. ಇಲ್ಲಿ ನಾಲ್ಕು ಸಾವಿರದ ನೂರಅರವತ್ತೆಂಟು ಗಾದೆಗಳಿವೆ. ಒಂದು ಶತಕದ ಹಿಂದೆಯೇ ಕಿಟ್ಟೆಲ್ ಅಂಥ ವಿದ್ವಾಂಸರು ಕರ್ಣಾಟಕದ ನಾನಾ ಭಾಗಗಳಿಂದ ಹೇರಳವಾಗಿ ಗಾದೆಗಳನ್ನು ಸಂಗ್ರಹಿಸಿದ್ದರೆಂಬುದು ಗಮನಿಸಬೇಕಾದ ಸಂಗತಿ. ಕಿಟ್ಟೆಲ್ ಅವರು ಕೋಶದ ರಚನೆಯ ಕಾಲದಲ್ಲಿ ಸಂಗ್ರಹಿಸಲಾಗಿದ್ದ ಗಾದೆಗಳನ್ನು ಕೋಶದಲ್ಲಿ ಗ್ರಾಮ್ಯಶಬ್ದ ಗಳು ಬಂದಾಗ ಅದರ ಅರ್ಥದ ವಿಶದತೆಗೆ ಹಾಗೂ ಸ್ಪಷ್ಟೀಕರಣಕ್ಕೆ ಉದಾಹರಿಸುತ್ತಾ ಹೋಗುತ್ತಾರೆ. ಇದೊಂದು ಕಿಟ್ಟೆಲ್ ಡಿಕ್ಷನರಿಯ ದೊಡ್ಡ ಆಕರ್ಷಣೆ. ಈ ಕೋಶದಲ್ಲಿ ಕಂಡುಬರುವ ಎರಡು ಪ್ರಧಾನ ವೈಶಿಷ್ಟ್ಯಗಳೆಂದರೆ, ಇಲ್ಲಿ ಅಪಾರ ಸಂಖ್ಯೆಯಲ್ಲಿ ಸಂಗ್ರಹಿತವಾಗಿರುವ ಗಾದೆಗಳು ಮತ್ತು ಗ್ರಾಮ್ಯ ಶಬ್ದಗಳು. ಕಿಟ್ಟೆಲ್ ಕೋಶದ ಘನತೆ ಇವುಗಳಿಂದ ಹೆಚ್ಚಿದೆ ಎನ್ನಬೇಕು. ಪಾಶ್ಚಾತ್ಯ ವಿದ್ವಾಂಸರ ಈ 'ಜಾನಪದ ಜ್ಞಾನ' ಮೆಚ್ಚತಕ್ಕದ್ದೇ. ಅಲ್ಲದೆ, 'ಜಾನಪದ ಶಬ್ದಕೋಶ'ವೊಂದು ಅಗತ್ಯವಿದೆ ಎಂಬುದಕ್ಕೆ ಇಲ್ಲಿಯ ಅಪೂರ್ವ ಗ್ರಾಮ್ಯ ಶಬ್ದಗಳು ಸಾಕ್ಷಿ ನುಡಿಯುತ್ತವೆ.

ಗಾದೆಗಳ ಸಂಗ್ರಹವನ್ನು ಕುರಿತು ಕಿಟ್ಟೆಲ್ ಅವರು ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ತಿಳಿಸಿದ್ದಾರೆ: ಇಲ್ಲಿಯ ಗಾದೆಗಳು ಮಹಾರಾಷ್ಟ್ರದ ದಕ್ಷಿಣ ಭಾಗ, ಮೈಸೂರು ಮತ್ತು ಕನ್ನಡ ಜಿಲ್ಲೆಗಳಿಂದ ಸಂಗ್ರಹಿತವಾದವುಗಳು. ಮುಂದುವರಿದು ಅವರೇ ಹೇಳುತ್ತಾರೆ: Most of them are old and very instructive, some adopted from Tulu, and some of late origin. ತಮ್ಮ ಕೋಶದಲ್ಲಿನ ಪದಗಳಿಗೆ ಅರ್ಥದ ವಿಷಯವನ್ನು ಪ್ರಸ್ತಾಪಿಸುತ್ತಾ ಕಿಟ್ಟೆಲ್‌ರು 'ಇಲ್ಲಿಯ ಬಹುತೇಕ ಪದಗಳ ಅರ್ಥವನ್ನು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಲೇಖಕರ ಕೃತಿಗಳ ನಿದರ್ಶನಗಳಿಂದ ಮಾತ್ರವಲ್ಲದೆ, ಗಾದೆಗಳಿಂದಲೂ ವಿವರಿಸಲಾಗಿದೆ' ಎಂದಿದ್ದಾರೆ. ಆದ್ದರಿಂದ ಅವರು ಕೋಶದಲ್ಲಿ ಗಾದೆಗಳನ್ನು ಬಳಸುವ ಕಾರಣ ಸ್ಪಷ್ಟವಾದಂತಾಯಿತು.

ಗಾದೆಗಳನ್ನು ಸಂಗ್ರಹಿಸುವಾಗ ನಾನು ಮಾರ್ಪಾಡುಗಳೇನನ್ನೂ ಮಾಡಿ

ಕೊಂಡಿಲ್ಲ. ಅವುಗಳನ್ನು ಇದ್ದ ಹಾಗೆಯೇ ಕೊಡಲಾಗಿದೆ. ಆದರೆ ಎರಡರಲ್ಲಿ ಮಾತ್ರ ಸ್ವಲ್ಪ ಬದಲಾಯಿಸಿಕೊಂಡಿದ್ದೇನೆ. ಒಂದು ಇಲ್ಲಿಯ 'ಱ' ಮತ್ತು 'ೞ'ಕ್ಕೆ ಬದಲಾಗಿ ರೂಢಿಯಲ್ಲಿರುವ 'ರ' ಮತ್ತು 'ಳ'ವನ್ನು ಬಳಸಿಕೊಂಡಿರುವುದು ; ಮತ್ತೊಂದು ಸಂಬಂಧಪಟ್ಟ ಅನುನಾಸಿಕ ಅಕ್ಷರಗಳನ್ನು ಬಳಸಿಕೊಂಡು ಒತ್ತಕ್ಷರವನ್ನು ಬರೆಯುವುದಕ್ಕೆ ಬದಲಾಗಿ ಸೌಲಭ್ಯದ ದೃಷ್ಟಿಯಿಂದ ಬಳಕೆಯಲ್ಲಿರುವ 'ಬಿಂದು'ವನ್ನು ಪಯೋಗಿಸಿಕೊಂಡಿರುವುದು. ೧೯ ನೇ ಶತಮಾನಕ್ಕಿಂತ ಬಹಳ ಹಿಂದೆಯೇ ಇಲ್ಲವಾಗಿದ್ದ ಹಳಗನ್ನಡದ 'ಱ' ಮತ್ತು 'ೞ'ಗಳನ್ನು ಗಾದೆಗಳಲ್ಲಿ ಮತ್ತೆ ಬಳಸಿಕೊಂಡಿರುವುದರ ಔಚಿತ್ಯ ಗೊತ್ತಾಗುವುದಿಲ್ಲ. ಪ್ರಾಯಶಃ ಗಾದೆಗಳು ಬಹಳ ಪ್ರಾಚೀನ ಎಂದು ತೋರಿಸಿಕೊಡುವುದಕ್ಕಾಗಿ ಹೀಗೆ ಮಾಡಿರಬಹುದೆಂದು ತೋರುತ್ತದೆ. ಈಗ ಅವುಗಳನ್ನು ಮತ್ತೆ ಬಳಸುವುದರಿಂದ ತೊಂದರೆಯಾಗುವುದರಿಂದ ಸಕಾರಣವಾಗಿಯೇ ನಾನಿಲ್ಲಿ ಬಿಟ್ಟಿದ್ದೇನೆ. ಅನಂತರ ಅನುನಾಸಿಕ ಒತ್ತಕ್ಷರಗಳು ಬಂದಾಗ, ಉದಾಹರಣೆಗೆ, ಕಿಟ್ಟೆಲ್ 'ಅನ್ನದ' ಎಂಬುದನ್ನು 'ಅನ್ದ' ಎಂದು ಬರೆಯುತ್ತಾರೆ. ಇದು ಉಚ್ಚಾರಣೆ ದೃಷ್ಟಿಯಿಂದ ಸರಿಯಾದದ್ದು. ಹಾಗೆ ಬರೆದರೆ ತಪ್ಪೇನೂ ಆಗುವುದಿಲ್ಲ. ಆದರೆ, ಈಗ ರೂಢಿಯಲ್ಲಿರುವುದರಿಂದ ಹಾಗೂ ಬರವಣಿಗೆ ಸುಲಭವಾಗುವುದರಿಂದ 'ಬಿಂದು'ವನ್ನು ಉಪಯೋಗಿಸಿ 'ಅಂದ' ಎಂದೇ ಬರೆದಿದ್ದೇನೆ. ಇದರಿಂದ ಯಾವ ರೀತಿಯಲ್ಲೂ ಅರ್ಥಕ್ಕೆ ತೊಂದರೆಯೊಗುವುದಿಲ್ಲ. ಇದಲ್ಲದೆ ಕಿಟ್ಟೆಲ್ 'ಪ' ಕಾರವಾಗಿಯೇ ಬಳಕೆಯಲ್ಲಿರುವ ಹಲವಾರು ಶಬ್ದಗಳನ್ನು 'ಹ' ಕಾರವಾಗಿ ತಿದ್ದಿಕೊಟ್ಟಿದ್ದಾರೆ. ಇದಕ್ಕೂ ಕನ್ನಡ ಭಾಷೆಯಲ್ಲಿ ಎಲ್ಲ ಕಡೆಯಲ್ಲೂ 'ಪ' ಸಂಪೂರ್ಣವಾಗಿ 'ಹ' ಆಯಿತು ಎಂಬುದರ ಭ್ರಾಂತಿ ಇದ್ದಿರಬೇಕು. ಹೀಗೆ ಬಳಕೆಯಾಗಿರುವ ಶಬ್ದಗಳು ಗಾದೆಗಳಲ್ಲಿ ವಿರಳವಾಗಿರುವುದರಿಂದ ಅವನ್ನು ತಿದ್ದುವುದಕ್ಕೆ ಹೋಗಿಲ್ಲ.

ಕಿಟ್ಟೆಲ್ ಡಿಕ್ಸನರಿಯ ಗಾದೆಗಳನ್ನು ಹೀಗೆ ಒಂದುಕಡೆ ಕಲೆಹಾಕಿಕೊಡುವುದರಿಂದ ಗಾದೆಗಳ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಬಹುದೆಂದು ನಿರೀಕ್ಷಿಸುತ್ತೇನೆ. ಒಟ್ಟಾರೆ ಹೇಳುವುದಾದರೆ, ಕಿಟ್ಟೆಲ್ ಕೋಶದ ಗಾದೆಗಳಿಗೆ ಐತಿಹಾಸಿಕವಾಗಿ ಬಹಳ ಮೌಲ್ಯವಿದೆ.

ಇಲ್ಲಿನ ಪ್ರತಿ ಗಾದೆಯೂ ಡಿಕ್ಸನರಿಯಲ್ಲಿ ಎಲ್ಲಿ ಬರುತ್ತದೆ ಎಂಬುದನ್ನು

ಸತ್ತೆ ಹಚ್ಚಲು ಕೋಶದ ಆಯಾ ಪುಟವನ್ನು ಗಾದೆಯ ಪಕ್ಕದಲ್ಲಿ ಕೊಟ್ಟಿದ್ದರೆ ಇನ್ನೂ ಅನುಕೂಲವಾಗುತಿತ್ತೇನೊ. ಆದರೆ ಈಗ ಅದನ್ನು ಮಾಡಲಾಗಲಿಲ್ಲ. ಮುಂದಿನ ಮುದ್ರಣಕ್ಕೆ ಅದನ್ನೂ ಪೂರೈಸುತ್ತೇನೆ. ಈ ಗ್ರಂಥದ ಕಡೆಯಲ್ಲಿ ಅರ್ಥಕೋಶವನ್ನು ಕೊಟ್ಟಿದ್ದೇನೆ. ಇದಲ್ಲದೆ, ಕಿಟ್ಟೆಲ್ ಅವರ ಜೀವನ ಕೃತಿ ವಿಚಾರಗಳನ್ನು ಸಮೀಕ್ಷಿಸಿದ್ದೇನೆ. ಕಿಟ್ಟೆಲ್ ಕೋಶದಲ್ಲಿ ಗಾದೆಗಳು ಬಳಕೆ ಯಾಗಿರುವ ಕೆಲವು ವಿಚಾರಗಳನ್ನೂ ಆಲೋಚಿಸಲಾಗಿದೆ. ಪಾಠಾಂತರಗಳು ಕಂಡುಬಂದ ಕಡೆಯಲ್ಲಿ ಒಂದನ್ನು ಉಳಿಸಿಕೊಂಡು, ಉಳಿದವುಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟಿದ್ದೇನೆ. ಆದರೆ ಗಾದೆಗಳ ಸಾಮಾನ್ಯ ಸ್ವರೂಪ ಲಕ್ಷಣ ಗಳನ್ನು ಕುರಿತು ಇಲ್ಲಿ ವಿಚಾರ ಮಾಡಿಲ್ಲ. ನನ್ನ ' ನಮ್ಮ ಗಾದೆಗಳು ' ಎಂಬ ಕೃತಿಯಲ್ಲಿ ಇದರ ಬಗ್ಗೆ ವಿವರವಾಗಿ ಬರೆದಿರುವುದರಿಂದ, ಇಲ್ಲಿಮತ್ತೆ ಅದನ್ನು ಪುನರಾವರ್ತಿಸಲು ಅಗತ್ಯಕಾಣದು. ಆಸಕ್ತಿ ಇದ್ದವರು ' ನಮ್ಮ ಗಾದೆಗಳು ' ಗ್ರಂಥದ ಪ್ರಸ್ತಾವನೆಯನ್ನು ಅವಲೋಕಿಸಬಹುದು.

'ಕಿಟ್ಟೆಲ್ ಕೋಶದ ಗಾದೆಗಳು' ಕಿಟ್ಟೆಲ್ ಡಿಕ್ಷನರಿಯ ಪುನರ್ ಮುದ್ರಣದ ಕಾಲದಲ್ಲಿಯೇ ಪ್ರಕಟಗೊಳ್ಳುತ್ತಿರುವುದು ಹರ್ಷದ ಸಂಗತಿ. ಈ ಕೃತಿಗೆ ಪೂಜ್ಯರಾದ ಪ್ರೊ. ಎಂ. ಮರಿಯಪ್ಪಭಟ್ಟರು ಮುನ್ನುಡಿಯನ್ನು ಬರೆದುಕೊಟ್ಟು ಇದರ ಅಂದವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಅವರ ಪ್ರೀತಿ ವಾತ್ಸಲ್ಯಗಳು ಪ್ರಾತಃ ಸ್ಮರಣೀಯವಾದವುಗಳು. ಅದನ್ನು ನಾನೆಂದೂ ಮರೆಯಲಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಇಷ್ಟು ದೊಡ್ಡ ಗಾತ್ರದ ಗ್ರಂಥವೊಂದನ್ನು ಪ್ರಕಟಿಸುವುದು ಸುಲಭವಾದ ಕೆಲಸವಲ್ಲ. ಈ ಹೊಣೆಯನ್ನು ಸಂತೋಷವಾಗಿಯೇ ಹೊತ್ತುಕೊಂಡವರು ಉಷಾ ಸಾಹಿತ್ಯ ಮಾಲೆಯ ಒಡೆಯರೂ ಸನ್ಮಾನ್ಯ ಹಿರಿಯರೂ ಆದ ಶ್ರೀಮಾನ್ ರಾ. ನ. ಹಬ್ಬು ಅವರು. ಸುಂದರವಾಗಿ ಮುದ್ರಿಸಿಕೊಟ್ಟವರೂ ಅವರೇ. ಅವರು ನನ್ನ ಬಗ್ಗೆ ತೋರಿದ ಪ್ರೀತಿ ವಿಶ್ವಾಸಗಳಿಗೆ ನಾನು ಬಹಳವಾಗಿ ಋಣಿಯಾಗಿದ್ದೇನೆ. ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಕಿಟ್ಟೆಲ್ ಅವರ ಭಾವ ಚಿತ್ರವನ್ನು ಕೊಟ್ಟು ಉಪಕರಿಸಿದ ಮಹಾರಾಜಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ ಪ್ರಿಯ ಗುರುಗಳೂ ಆದ ಶ್ರೀ ಸುಜನಾ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಮಹಾರಾಜಾ ಕಾಲೇಜು
ಮೈಸೂರು

ರಾಗೌ

ಗ್ರಂಥಋಣ

1. ಕಿಟ್ಟೆಲರ ಕನ್ನಡ—ಇಂಗ್ಲಿಷ್ ಡಿಕ್ಷನರಿ.
2. ಕೇಶಿರಾಜನ ಶಬ್ದಮಣಿದರ್ಪಣಂ—ಸಂ: ಕಿಟ್ಟೆಲ್.
3. ನಾಗವರ್ಮನ ಛಂದೋಂಬುಧಿ—ಸಂ: ಕಿಟ್ಟೆಲ್.
4. A Grammar of Kannada Language—Kittel.
5. A Biographical Note—Prof. M. Mariyappa Bhat, Kittel's Kannada-English Dictionary (2nd Edition)
6. ರೆವೆರೆಂಡ್ ಎಫ್. ಕಿಟ್ಟೆಲ್–ಡಿ.ಎಲ್.ಎನ್., ಪ್ರ. ಕ. ಸಂ. 40. ಸಂಚಿಕೆ 3.
7. ರೆ. ಡಾ॥ ಎಫ್. ಕಿಟ್ಟೆಲ್–ಡಾ. ಎ.ಎನ್. ನರಸಿಂಹಯ್ಯ, ಪ್ರ.ಕ. ಸಂ. 21, ಸಂಚಿಕೆ-2.

ಕಿಟ್ಟೆಲ್ ಕೋಶದ ಗಾದೆಗಳು

೧. ಅ ಆ ಬಾರದಿದ್ದರೆ ಅಮರವಾದರೂ ಹೇಳು ಎಂಬಂತೆ.

೨. ಅಕ್ಕ ನನ್ನವಳು ಆದರೆ ಬಾವ ನನ್ನವನೇ ?

೩. ಅಕ್ಕನ ಹಗೆ, ಬಾವನ ನೆಂಟು.

೪. ಅಕ್ಕನ ಬಂಗಾರವಾದರೂ
ಅಕ್ಕಸಾಲೆ ಟೊಣೆಯದೆ ಬಿಡ.

೫. ಅಕ್ಕರದ ಅಕ್ಕ ಬಂದಾಗ್ಯೆ
ಸಕ್ಕರೆಯೆಲ್ಲಾ ಕಯ್ಯಿ ಆಯಿತು.

೬. ಅಕ್ಕಸಾಲೆಗಿಂತ ಕಳ್ಳನಿಲ್ಲ
ಮಕ್ಕಿಗದ್ದೆಗಿಂತ ಬೆಳೆಯಿಲ್ಲ.

೭. ಅಕ್ಷರ ಬಾರದವನಿಗೆ ಶಿಕ್ಷೆಯೇ ಮುಖ್ಯ.

೮. ಅಗಸನಲ್ಲಿ ಬೊಗಸೆ ನೀರು ಸಿಕ್ಕದೊ ?

೯. ಅಗಸನ ಶವಾ ಹೊರಗೆ ತೆಗೆದ ಮೇಲೆ ಗುಟ್ಟು ಸಿಕ್ಕೀತು.

೧೦. ಅಗುಳು ನುಂಗಲಿಕ್ಕೆ ತೀರದವನ ಬಾಯಲ್ಲಿ
ಕಡಬು ಹೆಟ್ಟಿದ.

೧೧. ಅಗುಳು ಚೆಲ್ಲಿದರೆ ಕಾಗೆ ಮುತ್ತುತ್ತವೆ.

೧೨. ಅಗ್ಗಳನ ಮುಂದೆ ವೆಗ್ಗಳವುಂಟೇ ?

೧೩. ಅಗ್ರಸಾಲೇ ಊಟ, ಚಂದ್ರಸಾಲೇ ನಿದ್ರೆ.

೧೪. ಅಗ್ರಹಾರಕ್ಕೆ ಹೋದರೂ ದುರಾಗ್ರಹ ಬಿಡಲಿಲ್ಲ.

೧೫. ಅಚ್ಚುಕಟ್ಟಾದ ಕೆಲಸ ಚಂದ
ಬಂದುಕಟ್ಟಾದ ಊಟ ಚಂದ.

೧೬. ಅಚ್ಚಿಯೂ ಬೇಕು, ಅಪ್ಪಚ್ಚಿಯೂ ಬೇಕು.

೧೭. ಅಚ್ಚಿನ ಮನುಷ್ಯನಿಗೆ ನುಚ್ಚಿನ ಅನ್ನ.

೧೮. ಅಚ್ಚು ಬೆಲ್ಲ ಅಚ್ಚಪ್ಪಗೆ
ನುಚ್ಚು ಗಂಜಿ ವೆಂಕಪ್ಪಗೆ.

೧೯. ಅಜ್ಜಗೆ ಮೊಮ್ಮಗ ಆಕಳಿಕೆ ಕಲಿಸಿದನು ಅಂತೆ.

೨೦. ಅಜ್ಜ ಊರಿದ್ದು ಮೊಮ್ಮಗ ಹಾರಿದ್ದು
ಜೋಡು ಬರದು.

೨೧. ಅಜ್ಞನ ಬುದ್ಧಿ ಮೊಗ್ಗಿನ ಹಾಗೆ
ಪ್ರಾಜ್ಞನ ಬುದ್ಧಿ ಫಲದ ಹಾಗೆ.

೨೨. ಅಜ್ಞಾತವಾಸದಲ್ಲಿಯೂ ಅಜ್ಞಾನಿಗಳ ಕಾಟ ತಪ್ಪಲಿಲ್ಲ.

೨೩. ಅಜ್ಜಾ, ಮದುವೆ ಎಂದರೆ, ಎನಗೋ ? ಅಂದ.

೨೪. ಅಜ್ಜಿಗೆ ಅರಿವೆಯ ಚಿಂತೆ
ಮಗಳಿಗೆ ಮಿಂಡನ ಚಿಂತೆ.

೨೫. ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡದಾರಕ್ಕೆ ಸರಿ.

೨೬. ಅಜ್ಜಿಯ ಮನೆಗೆ ಅಜ್ಜ ಬಂದ ಹಾಗಾಯ್ತು.

೨೭. ಅಜ್ಜಿ ಸಾಕಿದ ಮಗು
ಬೊಜ್ಜಕ್ಕೂ ಬಾರದು.

೨೮. ಅಟ್ಟಕ್ಕೆ ಹಾರದ ಬಡ್ಡಿ ಆಕಾಶಕ್ಕೆ ಹಾರ್‍ಯಾಳೇ ?

೨೯. ಅಟ್ಟ ಸ್ವರ್ಗವಲ್ಲ, ಗಟ್ಟ ಮೇರುವಲ್ಲ.

೩೦. ಅಟ್ಟದ ಮೇಲೆ ಅಂಬು
ಬೆಟ್ಟದ ಮೇಲೆ ಬಿಲ್ಲು
ಕುಟ್ಟು ಎಲಾ ಮೂಗಾವುದ !

೩೧. ಅಟ್ಟದಿಂದ ಬಿದ್ದವನ ದಡಿಯಿಂದ ಚಚ್ಚಿದರು.

೩೨. ಅಟ್ಟ ಪಾಯಸದಲ್ಲಿ ಕೆರಾ ಹೆಟ್ಟದ ಹಾಗೆ.

೩೩. ಅಟ್ಟ ಮೇಲೆ ಒಲೆ ಉರಿಯಿತು
ಕೆಟ್ಟ ಮೇಲೆ ಬುದ್ಧಿ ಬಂದಿತು.

೩೪. ಅಟ್ಟಿಕ್ಕುವವನಿಗೆ ಹೆಂಡ್ತಿ ಬೇಡ
ಮೊಟ್ಟೆ ಹೊರುವವನಿಗೆ ಆಳು ಆಗಬೇಡ.

೩೫. ಅಟ್ಟು ಉಂಬೋದಕ್ಕಿಂತ ತಿರಿದು ಉಂಬೋದೆ ಲೇಸು.

೩೬. ಅಟ್ಟು ಉಂಬೋದು ಆರು ಕೋಟಲೆ
ತಿರಿದು ಉಂಬೋದು ಪರಮ ಸುಖ.

೩೭. ಅಟ್ಟು ಅಟ್ಟು ಪ್ರಾಣ ಹೋದರೂ
ಹೊಟ್ಟೇ ಹಸಿವು ನಿಲ್ಲಲೇ ಇಲ್ಲ.

೩೮. ಅಟ್ಟೆಯ ಕೆರವನ್ನು ಮೆಟ್ಟಲು ಅಶ್ವವೇರಿದ ಹಾಗಾಯ್ತು.

೩೯. ಅಟ್ಟೇ ಇಲ್ಲವೆಂದರೆ
ತೊಟ್ಟಿಗೇಲಿ ತಂದಿಕ್ಕು ಅಂದ ಹಾಗೆ.

೪೦. ಅಡ ಅಡಾ ಎಂಬುವನನ್ನು
ಅಡವಿಯಲ್ಲಿ ನೀಗು.

೪೧. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

೪೨. ಅಡಿಜಾರಿ ಬಿದ್ದಲ್ಲಿಂದ ಬಡಿದಾರ ಮಾಡಿದನಂತೆ.

೪೩. ಅಡಿಕೆ ಉಡಿಯಲ್ಲಿ ಹಾಕಬಹುದು
ಮರವಾದ ಮೇಲೆ ಕೂಡದು.

೪೪. ಅಡಿಗೆಯ ಗುಣ ಸಾರಿನಲ್ಲಿ ನೋಡು
ಮಡಿಗೆಯ ಗುಣ ಫಲದಲ್ಲಿ ನೋಡು.

೪೫. ಅಡಿಗೆ ಮಾಡುವವನ ಮಕ್ಕಳು ಉಪವಾಸ ಬಿದ್ದಾರೋ ?

೪೬. ಅಡೀಲಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ.

೪೭. ಅಡುಗೂಲಜ್ಜಿಯ ಮನೆಯಲ್ಲಿ
ಅಟ್ಟಡಿಗೆ ಆಯತವಾಗಿರುವುದು.

೪೮. ಅಡ್ಡಗೋಡೆಯ ಮೇಲಣ ದೀಪದ ಹಾಗೆ.

೪೯. ಅಡ್ಡಾದುಡ್ಡಿಗೆ ಮೂರಾದರೆ
ದುಡ್ಡು ಅಡ್ಡಕ್ಕೆ ಎಷ್ಟು ?

೫೦. ಅಡ್ಡಿ ಮಾಡಿದಷ್ಟು ಬಡ್ಡಿ ಹೆಚ್ಚುವುದು
ಅಡಿಗೆ ಮಾಡಿದಷ್ಟು ಉಣ್ಣು ತೀರುವುದು.

೫೧. ಅಡ್ಡೇಟು ತಗಲಿದರೆ ಬಡ್ಡನಾದರೂ ಗೆದ್ದಾನು.

೫೨. ಅಣಕವಾದ ಕೆರೆ ಅನೇಕ ನೀರು ಕೊಳ್ಳುವುದು.

೫೩. ಅಣ್ಣ ಮಣ್ಣು ಮಾಡಿದ
ತಮ್ಮ ರೊಕ್ಕ ಮಾಡಿದ.

೫೪. ಅಣ್ಣ ತನ್ನವನಾದರೆ ಅತ್ತಿಗೆ ತನ್ನವಳೇ ?

೫೫. ಅಣ್ಣ ತಮ್ಮಂದಿರು ಆದರೂ
ಹಣ್ಣು ಹಂಚಿ ಉಣ್ಣುತ್ತಾರೆ.

೫೬. ಅಣ್ಣಗೆ ಸುಣ್ಣವಿಲ್ಲ, ಎತ್ತಿಗೆ ಹುಲ್ಲುಇಲ್ಲ.

೫೭. ಅಣ್ಣಪ್ಪ ಊರಲ್ಲಿ ಇದ್ದರೂ ಸರಿ
ದಂಡಿನಲ್ಲಿ ಇದ್ದರೂ ಸರಿ.

೫೮. ಅಣ್ಣಾ ವಟ್ಟಗಾರನಾದರೆ ಸುಣ್ಣವೂ ದೊರಕದು.

೫೯. ಅತ್ತ ಗಂಡಗೆ ಅಲ್ಲ
ಇತ್ತ ಮಿಂಡಗೆ ಅಲ್ಲ.

೬೦. ಅತ್ಯಾಶೆ ಗತಿಕೆಡಿಸಿತು.

೬೧. ಅತಿಯಾಶೆಯಿಂದ ಆದುದೂ ಹೋಯಿತು.

೬೨. ಅತಿರಥನಾದರೂ ಗತಿ ಕೆಡಬಾರದು.

೬೩. ಅತ್ತಿತ್ತಲ ಮಾರಿ ಬಂದು
ಅತ್ತೆಯ ಬಡಕೊಂಡು ಹೋಗಲಿ.

೬೪. ಅತ್ತಿಯ ಹಣ್ಣು ಅಚ್ಚ ಕೆಂಪಾದರೂ
ಒಳಗೆ ನೋಡಿದರೆ ಹುರುಳಿಲ್ಲ.

೬೫. ಅರ್ತಿಗೆ ಬಳೆ ತೊಟ್ಟು
ಕೈ ಕೊಡವಿದರೆ ಹೋಗುವುದೇ ?

೬೬. ಅತ್ತೂ ಕರೆದು ಅವುತಣಕ್ಕೆ ಹೇಳಿಸಿಕೊಂಡರು.

೬೭. ಅತ್ತೆ ಕಲಿಸಿದ್ದೇ ಕೆಲಸ
ಗಂಡ ಕಲಿಸಿದ್ದೇ ಹಾದರ.

೬೮. ಅತ್ತೆಗೆ ಒಂದು ಮಾತು
ಸೊಸೆಗೆ ಪ್ರಾಣ ಸಂಕಟ.

೬೯. ಅತ್ತೆಯ ತುರುಬು ಮಾವಗೆ ದಾನ.

೭೦. ಅತ್ತೆ ಒಡದ *ಪಾತ್ರೆಗೆ* ಬೆಲೆ ಇಲ್ಲ.

೭೧. ಅತ್ತೆಗೆ ಒಂದು ಕಾಲ
†ಸೊಸೆಗೆ ಒಂದು ಕಾಲ.

೭೨. ಅತ್ತೇ ಮನೆಗೆ ಮಜ್ಜಿಗೆ ನೀರು
ತವರ ಮನೆಗೆ ಹಾಲು ಮೊಸರು.

೭೩. ಅರ್ಥಕ್ಕೆ ಕಡಿಮೆ ಆದರೂ
ಅನರ್ಥಕ್ಕೆ ಕಡಿಮೆ ಇಲ್ಲ.

೭೪. ಅದಕ್ಕದು ಉಳಿ ಕೊಡತಿನ್ಯಾಯ.

೭೫. ಅಧಿಕ ಮಾಸದಲ್ಲಿ ಬರಗಾಲ ಬಂದ ಹಾಗೆ.

೭೬. ಅಧ್ವಾನಕಾಲದಲ್ಲಿ ಮಧ್ಯಾಹ್ನದ ಊಟವೋ ?

---

* ಮಡಿಕೆಗೆ.

† ಸೊಸೆಗೆ ಹಲವುಕಾಲ.

೭೭. ಅನಂತಯ್ಯನ ಮಾತ್ರೆ, ವೈಕುಂಠ ಯಾತ್ರೆ.

೭೮. ಅನ್ನಗತ ಪ್ರಾಣ, ಚರ್ಮಗತ ದೃಷ್ಟಿ.

೭೯. ಅನ್ನದಾನಕ್ಕೆ ಸಮಾನವಿಲ್ಲ
ಬನ್ನ ಪಡುವುದು ತಪ್ಪುವುದಿಲ್ಲ.

೮೦. ಅನ್ಯಾಯದಲ್ಲಿ ಸಂಪಾದಿಸಿದ್ದು
ಅಸಡ್ಡಾಳಾಗಿ ಹೋಯಿತು.

೮೧. ಅಪಕಾರ ಮಾಡುವವ ಅಪಕೀರ್ತಿಗೆ ಅಂಜ್ಯಾನೇ ?

೮೨. ಅಪ್ಪನ ಅಪ್ಪಾ ಅನ್ನದವ
ಚಿಕ್ಕಪ್ಪನ ಅಪ್ಪಾ ಅಂದಾನೇ ?

೮೩. ಅಪ್ಪಂಥವರು ಕೈ ಹಿಡಿದರೆ
ಒಪ್ಪದಿರುವುದು ಹ್ಯಾಗೆ ?

೮೪. ಅಪ್ಪ ನೆಟ್ಟ ಆಲದ ಮರವಾದರೆ
ನೇಣು ಹಾಕಿಕೊಳ್ಳಬಹುದೇ ?

೮೫. ಅಪ್ಪ ಸತ್ತ ಆರು ತಿಂಗಳಿಗೆ ಹುಚ್ಚು ಮಾವ ಬಂದು
ಕೊರಳು ತಬ್ಬಿಕೊಂಡು ಅತ್ತ.

೮೬. ಅಪ್ಪ ಇಲ್ಲದವನ ಹೆಣವ
ಒಪ್ಪ ಮಾಡುವವರು ಯಾರು ?

೮೭. ಅಪ್ಪಂತ ಹುಡುಗಿ ಆಗಬೇಕು
ಇಪ್ಪಣ ಅಡ್ಡ ತೆರ ಆಗಬೇಕು.

೮೮. ಅಪ್ಪ ಹೋದದ್ದಕ್ಕಿಂತ ಅಕ್ಕಾ ಹೋದದ್ದು ಹೀನಾಯವಾಯ್ತು.

೮೯. ಅಪ್ಪಿಗೆ ಹಾಕಿದ ವಸ್ತ್ರವಾದರೂ
ಒಪ್ಪವಾಗಿರಬೇಕು.

೯೦. ಅಬದ್ಧಕ್ಕೆ ಅಪ್ಪಣೆಯೇ ಎಂದರೆ
ಇಲ್ಲ, ಬಾಯಿ ಬಂದ ಹಾಗೆ.

೯೧. ಅಬ್ಬೆ ಕಲಿಸಿದ್ದು ಠಕ್ಕು
ಗುರು ಕಲಿಸಿದ್ದು ವಿದ್ಯೆ.

೯೨. ಅಭಿಚಾರಿಯ ಕೈಯಲ್ಲಾದರೂ ಉಂಡೇನು
ಅವಿಚಾರಿಯ ನೆರೆ ಬೇಡ.

೯೩. ಅಭ್ಯಾಸವಿಲ್ಲದ ಹಾರುವ ಅಗ್ನಿಕಾರ್ಯಮಾಡಿದರೆ
ಗಡ್ಡ ಮೀಸೆ ಹೊತ್ತೀತು.*

೯೪. ಅನುಗದಲ್ಲಿ ಪಾತ್ರ ಮಾಡುವಾಗ
ಮದ್ದಳೆ ಎರವು ಬೇಡಿದರಂತೆ.

೯೫. ಅಮಟೇ ಮರಕ್ಕೆ ತಮಟೇ ಕಟ್ಟಿದರು.

೯೬. ಅಮ್ಮನ ಮನಸ್ಸು ಬೆಲ್ಲದ ಹಾಗೆ
ಮಗಳ ಮನಸ್ಸು ಕಲ್ಲಿನ ಹಾಗೆ.

೯೭. ಅಮ್ಮನವರು ಪ್ರಾಯ ಸಮರ್ಥೆ ಆಗುವಾಗ
ಅಯ್ಯನವರಿಗೆ ಕೈಲಾಸ.†

೯೮. ಅಯನ ನೋಡಿದ್ದೂ ಇಲ್ಲ
ಶಯನ ಮಾಡಿದ್ದೂ ಇಲ್ಲ.

---

* ಅಭ್ಯಾಸವಿಲ್ಲದವ ಔಪಾಸನ ಮಾಡಿದರೆ ಗಡ್ಡ ಸುಟ್ಟುಕೊಂಡ

† ಅಮ್ಮನವರು ಪಟ್ಟಕ್ಕೆ
ಅಯ್ಯನವರು ಚಟ್ಟಕ್ಕೆ

೯೯. ಅಯ್ಗಳೇ ಅಯ್ಗಳೇ ಅಯ್ದರ ಅಂಕೆ
ನೀವೇ ಬರೆದರೆ ಚಂದ !

೧೦೦. ಅಯ್ಯನಿಗಿಂತ ಕೈಯೆ ವಾಸಿ.

೧೦೧. ಅರಮನೆಗೆ ಆರು ಬಾಯಿ.

೧೦೨. ಅರಮನೆ ಬದುಕಿಗೆ ಆಕಾಶವೇ ಕಾವಲು.

೧೦೩. ಅರಮನೆಯ ತುಪ್ಪಕ್ಕೆ ಸೆರಗು ಒಡ್ಡು.

೧೦೪. ಅರಮನೆಯ ಭತ್ತಕ್ಕೆ ಹೆಗ್ಗಣ ಗುದ್ದಾಡಿದ ಹಾಗೆ.

೧೦೫. ಅರಮನೆಯ ಹಣಾ ಕಟ್ಟೆ
ಅಕ್ಕಸಾಲೆಗೆ ಡೊಳ್ಳು ಬಂತು.

೧೦೬. ಅರಮನೆಯ ಹತ್ತರ ನೆರಮನೆ ಇರಕೂಡದು.

೧೦೭. ಅರಣೆ ಕುಡಿದರೆ ಬರಣೀ ಮದ್ದು ಸಾಲದು.

೧೦೮. ಅರಸನ ಕುದುರೆಯ ಕಾಲು ತುಳಿದರೆ
ಇವನಿಗೆ ಬಂದ ಭಾಗ್ಯವೇನು ?

೧೦೯. ಅರಸನ ಕುದುರೆ ಲಾಯದಲ್ಲೇ ಮುಪ್ಪಾಯಿತು.

೧೧೦. ಅರಸನಿಗೂ ಧನಿಷ್ಠೆ, ನನಗೂ ಧನಿಷ್ಠೆ.

೧೧೧. ಅರಸು ಅಂದರೆ ಊರು ನಡುಗುತ್ತದೆ
ಮುದುಕ ಅಂದರೆ ಗಡ್ಡ ನಡುಗುತ್ತದೆ.

೧೧೨. ಅರಸು ಆರು ಮೊಳ, ಬಂಟ ಎಂಟು ಮೊಳ.

೧೧೩. ಅರಸು ಒಲಿದರೆ ಅರ್ಧ ರಾಜ್ಯ
ತಿರುಕ ಒಲಿದರೆ ಮೂರು ಬೊಗಸೆ.

೧೧೪. ಅರಸು ಕಟ್ಟದ ಮೇಲೆ ಆಟ ಉಂಟೇ ?

೧೧೫. ಅರಸು ಯಾರಿಗೆ ಅಪ್ಪ
ಸೂಳೆ ಯಾರಿಗೆ ಅವ್ವ.

೧೧೬. ಅರಳಿ ಮರಾ ನೋಡಲೋ
ಬ್ರಹ್ಮರಾಕ್ಷಸನ್ನ ನೋಡಲೋ ?

೧೧೭. ಅರದವ ಕುಡಿದಾನು.

೧೧೮. ಅರಸಿಗೆ ಅರ್ಧ ರಾಜ್ಯವಾದರೆ
ತಿರಿದುಂಬುವಗೆ ಇಡೀ ರಾಜ್ಯ.

೧೧೯. ಅರಸನ ಅಂಕೆ ಇಲ್ಲ
ದೈವದ ಕಾಟ ಇಲ್ಲ.

೧೨೦. ಅರಿಯೆನು ಅಂಬುದು ಅರವತ್ತು ಗುಣ
ಕಾಣೆನು ಅಂಬುದು ಕೋಟಿ ಗುಣ.

೧೨೧. ಅರಿವು ಇದ್ದಲ್ಲದೆ ಮರವು ಹ್ಯಾಗೆ ಬಂದೀತು ?

೧೨೨. ಅರಿಯೆನ್ ಅಂದರೆ ಅರವತ್ತು ಗುಣ
ಬಲ್ಲೆನ್ ಅಂದರೆ ಬಹಳ ಕಷ್ಟ.

೧೨೩. ಅರಿಯೆ ಎಂಬುವ್ರುದ ಆನೆಯ ಕೊಟ್ಟು ಕಲಿ.

೧೨೪. ಅರಿಯುವವನಿಗೆ ಇನ್ನೂರು
ಬರೆಯುವವನಿಗೆ ಮುನ್ನೂರು.

೧೨೫. ಅರಿವೆಯ ಹರಿಕಿಗೆ ಗೋಣೀತ್ಯಾಪೆ ಹಚ್ಚ್ಯಾರೋ ?

೧೨೬. ಅರೆಕಲ್ಲು ನೆನೆ ಹಾಕಿದಂತೆ.

೧೨೭. ಅರೆಗೆಲಸದಲ್ಲಿ ಅರಸನಿಗೂ ತೋರಿಸಬೇಡ.

೧೨೮. ಅರೆಮರುಳಗೆ ಮರುಳುನಾಯಿ ಕಚ್ಚಿತಂತೆ.

೧೨೯. ಅಲ್ಪಗೆ ಐಶ್ವರ್ಯ ಬಂದರೆ
ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ.

೧೩೦. ಅಲ್ಪ ಕಾರ್ಯಕ್ಕೆ ಅರಮನೆಗೆ ಹೋಗಬಾರದು.

೧೩೧. ಅಲ್ಪರ ಸಂಗ ಅಭಿಮಾನ ಭಂಗ.

೧೩೨. ಅಲ್ಲದ ಕೆಲಸಕ್ಕೆ ಹೋಗಿ
ಹಲ್ಲು ಮುರಿಸಿಕೊಂಡನು.

೧೩೩. ಅಲ್ಲಿ ಇಲ್ಲಿ ಯಾಕೆ ಅಲೆಯುತ್ತೀಯೆ
ಇಲ್ಲಿ ಬಾ ಬಿಸಾಟ ಹಾಗೆ ಸಾಯುವಂತೆ.

೧೩೪. ಅಲ್ಲಿ ಉಂಟು ಇಲ್ಲಿ ಉಂಟು
ಕಲ್ಲೊಳಗುಂಟೇ ಶಿವದಾನ

೧೩೫. ಅಲ್ಲೇ ನ್ಯಾಯ ಇಲ್ಲೇ ಕಂಡಿತು
ಕೊಳ್ಳೇ ಮಲ್ಲಿ ಕೊಂಕುಳ ಕೂಸ.

೧೩೬. ಅವನ ಮಾತು ಕೆಸರಲ್ಲಿ ನೆಟ್ಟ ಕಂಭ.

೧೩೭. ಅವನಿಗೆ ನಾನೇ ಸುಲಿದ ಬಾಳೆಯ ಹಣ್ಣು.

---

* ಬಸ್ತಿಯೊಳಗುಂಟೇ ಶಿವದಾನ.

೧೩೮. ಅವರೆ ಅವರೆ ಎಲ್ಲಾ ಒಂದೇ
ಅವರೆಯ ಕೇರಿದ ಮೊರ ಬೇರೆ.

೧೩೯. ಅವಸರಕ್ಕೆ ಮೂರು ಮೊಳ ನೇಯ ಬೇಡ.

೧೪೦. ಅವಾಂತ್ರದಲ್ಲಿ ಸಿಕ್ಕಿದ ಕುದುರೆ
ದೇಶಾಂತ್ರವಾಗಿ ಓಡಿ ಹೋಯಿತು.

೧೪೧. ಅವುತಣಕ್ಕೆ ಹೋದರೆ ಅಪಮೃತ್ಯು ಬಂತು.

೧೪೨. ಅವುಟು ಇದ್ದವಗೆ ಸವುಟನಿಂದ ಹೊಡೆದ ಹಾಗೆ.

೧೪೩. ಅಷ್ಟಾದಶ ಪ್ರಧಾನ, ಮಂತ್ರಿ ಅರಸ್ಥಾನಕ್ಕೆ,
ತಂತ್ರಿ ದೇವಸ್ಥಾನಕ್ಕೆ.

೧೪೪. ಅಶನ ವಸನ ಸಿಕ್ಕಿದರೆ ವ್ಯಸನ ಯಾಕೆ?

೧೪೫. ಅಸವಲ್ಲದವನ ಕೂಡೆ ಆರಂಭ ಮಾಡಿ
ಹಸೀ ಅವರೇ ಕಾಯಿಗೆ ಮೋಹಿಸಿದ.

೧೪೬. ಅಸಲಿಗೆ ಮೋಸ, ಲಾಭಕ್ಕೆ ಗುದ್ದಾಟ.

೧೪೭. ಅಸಲು ಇಲ್ಲದೆ ಬಡ್ಡಿಯಿಲ್ಲ
ಮೊಸರು ಇಲ್ಲದೆ ಮಜ್ಜಿಗೆಯಿಲ್ಲ.

೧೪೮. ಅಸಲು ಬಾಕಿಯಾದರೂ ಬಡ್ಡಿ ಕೈಲಿ ಬಂತು.

೧೪೯. ಅಳಿಯನ ಕೂಡ ಗೆಳೆಯ ಬಂದ.

೧೫೦. ಅಳಿಯ ಮುನಿದರೆ ಮಗಳ ಕರಕೊಂಡು ಹೋದಾನು.

೧೫೧. ಅಳಿಯನ ಕುರುಡು ಬೆಳಗಾದರೆ ಕಂಡೀತು.*

೧೫೨. ಅಳಿಲು ಏರಿದರೆ ಅರಳೀ ಮರ ಅಲ್ಲಾಡೀತೇ ?

೧೫೩. ಅಳಿಲು ಭಕ್ತಿ, ಮಳಲ ಸೇವೆ.

೧೫೪. ಅಳುವ ಕಂದನಿಗೆ ಅಳಗೇ ಅಂಬಲಿ.

೧೫೫. ಅಳುವ ಮಕ್ಕಳ ಕಣ್ಣೀರ ಒರಸಿದ ಹಾಗೆ.

೧೫೬. ಅಳುವ ಮಕ್ಕಳ ಕೈಗೆ ಬೆಲ್ಲಾ ಕೊಟ್ಟ ಹಾಗೆ.

೧೫೭. ಅಳುವ ಹೆಂಗಸನ್ನೂ ನಗುವ ಗಂಡಸನ್ನೂ ನಂಬ ಬಾರದು.

೧೫೮. ಅಳುವವನ ಎಡಕ್ಕೂ ಹೊಲಿವವನ ಬಲಕ್ಕೂ ಕುಂಡ್ರ ಬಾರದು.

೧೫೯. ಅಳುವುದೂ ಮುಖವೇ, ನಗುವುದೂ ಮುಖವೇ.

೧೬೦. ಅಂಕಣದ ಮನೆ ಆದರೆ
ಕೊಂಕಣಿಗನಿಗೆ ಆಗದೆ ?

೧೬೧. ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು.

೧೬೨. ಅಂಕೆ ತಿಳಿಯದವ ಮಂಕಗಿಂತ ಕಡೆ.

೧೬೩. ಅಂಗಡಿ ಮಾರಿ ಗೊಂಗಡಿ ಹೊದ್ದ ಹಾಗೆ.

೧೬೪. ಅಂಗಡಿಯಲ್ಲಿ ಚುಂಗಡಿ ಸಿಕ್ಕದೇ ?

---

* ಅಳಿಯನ ಮೋರೆ ಬೆಳಗಾತ ಕಾಣಬಹುದು.

೧೬೫. ಅಂಗಡಿ ಇದ್ದರೆ ಸಾಲದು ಮುಂಗಡ ಬೇಕು.

೧೬೬. ಅಂಗಡಿ ವ್ಯಾಪಾರ ಒಸರು ನೀರಿನ ಹಾಗೆ.

೧೬೭. ಅಂಗರಕ್ಷೆ ಇಲ್ಲದ ಮೇಲೆ
ಬಂಗಾರ ಯಾಕೆ ?

೧೬೮. ಅಂಗಲಾಗಿ ಬಿತ್ತಿದ್ದು ಅಗಲವಾಗಿ ಏಳುವುದು.

೧೬೯. ಅಂಗವಸ್ತ್ರ ಇಲ್ಲದಿದ್ದರೆ
ಅಂಗಾರಕೆ ಇಡಬಾರದೆ ?

೧೭೦. ಅಂಗಳದಲ್ಲಿ ಹೇತು, ಮಂಗಳ ಕಷ್ಟ ಅಂದ ಹಾಗೆ.

೧೭೧. ಅಂಗನೆ ಬರುವಾಗ ಅಂಗಿ ತೊಡಬೇಡವೇ ?

೧೭೨. ಅಂಗಾಲಿನ ಮುಳ್ಳು ತೆಗೆಯಲಿಕ್ಕೆ
ಕೊಡಲಿ ಬೇಕೆ ?

೧೭೩. ಅಂಗಾಲಿಗೆ ತ್ರಾಣವಿದ್ದರೆ
ಬಂಗಾಳಕ್ಕೆ ಹೋಗಬಹುದು.

೧೭೪. ಅಂಗಿ ಕೊಟ್ಟು ಬಂಗಿ ಸೇದಿ
ಮಂಗನಾದ.

೧೭೫. ಅಂಗಿಗೆ ಇಲ್ಲದಿದ್ದರೆ ನುಂಗಲಿಕ್ಕೆ ಬೇಡವೇ ?

೧೭೬. ಅಂಗುಷ್ಟ ಬಾತರೆ ಪರ್ವತವಾದೀತೇ ?

೧೭೭. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ?

೧೭೮. ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡ ಹಾಗೆ

೧೭೯. ಅಂಚಿನಲ್ಲಿ ಹೋದರೆ
ಮಿಂಚಿನ ಭಯ ತಪ್ಪಿತೇ ?

೧೮೦. ಅಂಚು ಇಲ್ಲದ ಹೊಲವಿಲ್ಲ
ಸಂಚು ಇಲ್ಲದ ಮಾತು ಇಲ್ಲ.

೧೮೧. ಅಂಚೆ ಕಾಗದ ಮುಂಚೆ ಬಂದರೆ
ಲಂಚ ಯಾಕೆ ?

೧೮೨. ಅಂಜನಕ್ಕೆ ಅಂಜಬೇಡ
ಮಂಜಾನೆಗೆ ಆಡಬೇಡ.

೧೮೩. ಅಂಜಿದವನ ಮೇಲೆ ಕಪ್ಪೆ ಹಾಕಿದ ಹಾಗೆ.

೧೮೪. ಅಂಟವಾಳದ ಕಾಯಿಗೆ
ಬಂಟವಾಳಕ್ಕೆ ಹೋಗಬೇಕೆ ?

೧೮೫. ಅಂಟು ತಪ್ಪಿದರೆ ನಂಟು ತಪ್ಪೀತೇ ?

೧೮೬. ಅಂಡೆಯ ಬಾಯಿ ಕಟ್ಟಬಹುದು
ಮುಂಡೆಯ ಬಾಯಿ ಕಟ್ಟಕೂಡದು.

೧೮೭. ಅಂಡೆಯೊಳಗಣ ನೀರು
ಮುಂಡೆಯ ಕೈಯ್ಯೊಳಗಣ ಹಣ ಸಮ.

೧೮೮. ಅಂತಕನ ಶಿಕ್ಷೆಗೆ ಹೆದರೆ
ಸಂತೆ ಗೋವಿಂದನ ಸಾಲಕ್ಕೆ ಹೆದರುತ್ತೇನೆ.

೧೮೯. ಅಂತ್ಯವಿಲ್ಲದ ಕಡೆ ಇಲ್ಲ
ಆದಿಯಿಲ್ಲದ ಆರಂಭ ಇಲ್ಲ.

೧೯೦. ಅಂತ್ಯಜನಲ್ಲಿ ಹೋಗಿ ಮೆಂತ್ಯ ಕದ್ದ.

೧೯೧. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ.

೧೯೨. ಅಂದ ಚೆಂದ ನೋಡಿದರೆ ಮಂದತ್ವ ಹೋಗುವುದೇ ?

೧೯೩. ಅಂದಿಗೆ ಅದೇ ಸುಖ
ಇಂದಿಗೆ ಇದೇ ಸುಖ.

೧೯೪. ಅಂದು ಬಾ ಎಂದರೆ ಮಿಂದು ಬಂದ.

೧೯೫. ಅಂದೆನಿಸಿಕೊಂಬ ಅಂದಗೇಡಿಗೆ ಮನೆ ಎಲ್ಲಿ ?

೧೯೬. ಅಂಧಕನಿಗೆ ಕತ್ತಲೆ ಇಲ್ಲ
ಮಂದಭಾಗ್ಯನಿಗೆ ದರಿದ್ರವಿಲ್ಲ.

೧೯೭. ಅಂಬಲೀ ಕುಡಿಯುವನಿಗೆ
ಮೀಸೆ ತಿಕ್ಕುವವನೊಬ್ಬ

೧೯೮. ಅಂಬಲಿಗೆ ಗತಿಯಿಲ್ಲದವನಿಗೆ
ಹಂಬಲಿಸುವುದು ಯಾಕೆ?

೧೯೯. ಅಂಬಲೀಲಿ ಕಂಡೆಯಾ ತೊಣಚಿನಾಯಕನನ್ನ?

೨೦೦. ಅಂಬಲೀ ಕುಡಿದವ
ಅಳಿಗೆ ಹೊತ್ತುಕೊಂಡು ಹೋದಾನೇ ?

೨೦೧. ಅಂಬಾರಿಯಲ್ಲಿ ಕೂತರೂ
ಮುಂಗಾರು ಬಿಡಲಿಲ್ಲ.

೨೦೨. ಅಂಬು ತಾಗಿದರೂ ಹಂಬಲ ಬಿಡಲಿಲ್ಲ.

೨೦೩. ಅಂಬು ಬಿಡಲಿಕ್ಕೆ ತಿಳಿಯದೇ ಇದ್ದರೆ
ಚಂಬು ಮುಣುಗಿಸಲಿಕ್ಕೆ ತಿಳಿಯದೇ ?

೨೦೪. ಅಂಬೆಗಾಲು ಹಾಕಿದರೆ ರಂಬೆ ಸಿಕ್ಕ್ಯಾಳೇ ?

೨೦೫. ಅಂಬೋಕೆ ಮಾಡಿದ್ದು ಶಾಸ್ತ್ರ
ಉಂಬೋಕೆ ಮಾಡಿದ್ದು ಅನ್ನ.

೨೦೬. ಆಕಳು ಕಪ್ಪಾದರೆ ಹಾಲು ಕಪ್ಪೇ ?

೨೦೭. ಆಕಾಶಕ್ಕಿಂತ ಎತ್ತರವಿಲ್ಲ
ಭೂಮಿಗಿಂತ ಅಗಲವಿಲ್ಲ.

೨೦೮. ಆಕಾಶ ಹರಿದು ಬೀಳುವಾಗ್ಯೆ
ಅಂಗೈ ಒಡ್ಡಿದರೆ ನಿಂತೀತೇ ?

೨೦೯. ಆಗಭೋಗಕ್ಕೆಲ್ಲಾ ರಂಗಸ್ವಾಮಿ
ಸತ್ಯ ಪ್ರಮಾಣಕ್ಕೆ ಗಂಗಾಧರೇಶ್ವರ.

೨೧೦. ಆಗದ ಹೋಗದ ಬದುಕಿಗೆ ರಾಗಿ ಯಾಕೆ ?

೨೧೧. ಆಗದ ಕಾರ್ಯಕ್ಕೆ ಆಶೆಪಟ್ಟರೆ
ಸಾಗುವುದಿಲ್ಲ, ಹೋಗುವುದಿಲ್ಲ.

೨೧೨. ಆಗಾತ್ಯಗಾರನಿಗೆ ಬ್ರಹ್ಮೇತಿಗಾರ ಸಾಕ್ಷಿ.

೨೧೩. ಆಗೋದು ಹೋಗೋದು ದೇವರ ಇಚ್ಛೆ
ಹೂಡೋದು ಬಿತ್ತೋದು ನನ್ನ ಇಚ್ಛೆ.

೨೧೪. ಆಗೋ ಪೂಜೆ ಆಗುತ್ತಿರಲಿ
ಊದೋ ಶಂಖಾ ಊದಿಬಿಡುವ.*

೨೧೫. ಆಚಾರ್ಯರ ಮಗನಾಗಿ ಪುರಾಣಿಕನ ಅಳಿಯನಾಗಿ
ಘೃತ ಎಂದರೆ, ಅರಿಯನೇ ಎಮ್ಮೆ ಸಗಣಿಯ?

೨೧೬. ಆಚಾರ್ಯರಿಗೆ ವಿದ್ಯೆಯೂ ಇಲ್ಲ, ಗರ್ವವೂ ಇಲ್ಲ.

೨೧೭. ಆಚಾರ್ಯರೇ ದಾವ ಊರು ಅಂದರೆ
ದಾವಳಿ ಮೂರು ಹಣ ಎಂದ.

೨೧೮. ಆಚೆ ಬೀದಿಯಲ್ಲಿ ಅವಮಾನವಾದರೆ
ಈಚೆ ಬೀದಿಯಲ್ಲಿ ಹೊಸ ಆಳು.

೨೧೯. ಆಟಕ್ಕೆ ತಕ್ಕ ವೇಷ
ವೇಷಕ್ಕೆ ತಕ್ಕ ಭಾಷೆ.

೨೨೦. ಆಟದವನಿಗೆ ದೀವಟಿಗೆಯವನ ಮೇಲೆ ಕಣ್ಣು.

೨೨೧. ಆಟವೂ ಮುಗೀತು, ತಂತಿಯೂ ಹರೀತು.

೨೨೨. ಆಟಾಳಿಗೆ ಒಂದು ಮೋಟಾಳು ಬೇಕೋ?

೨೨೩. ಆಡಿದರೆ ಕೊಡದರ ಲೋಭಿ ಬೇಡಿದರೆ ಕೊಟ್ಟಾನೇ?

೨೨೪. ಆಡಿ ಬಂದ ಕತ್ತೆ ಅಡಿಕೆ ತಂದ ಕತ್ತೆಯನ್ನು
ಓಡ್ಯಾಡಿಸಿ ಒದ್ದಿತಂತೆ.

೨೨೫. ಆಡು ಹಾಗ, ಕೂಲಿ ಮುಪ್ಪಾಗ.

---

* ಮಾಧವರಾಯನ ಪೂಜೆ ಯಾವಾಗಲಾದರೂ ಆಗಲಿ
ಊದೋ ಶಂಖ ಊದಿಬಿಡುವ.

೨೨೬. ಆಡುವ ಮಕ್ಕಳು ಆಡಬೇಕು
ಬೇಡುವ ಮಕ್ಕಳು ಬೇಡಬೇಕು.

೨೨೭. ಆಡುವ ಮಗುವಿನ ಕೈಯಲ್ಲಿ
ಕಾಡುವ ಮಗುವನ್ನು ಕೊಟ್ಟ ಹಾಗೆ.

೨೨೮. ಆಡೆ, ಆಡಿದರೆ ಸೋಲೆ, ಸೋತರೆ ಕೊಡೆ,
ಕೊಟ್ಟರೆ ಎಡವಟ್ಟು.

೨೨೯. ಆಣಿಕಾರನ ಮನೆಯು ತೊತ್ತು
ನಾಣ್ಯ ನೋಟವ ಬಲ್ಲಳೇ ?

೨೩೦. ಆತನ ತಮ್ಮ ಈತನೆಂದು ಮಾತಿನಿಂದ ತಿಳಿಯಬಹುದು.

೨೩೧. ಆತುರಗಾರನಿಗೆ ಬುದ್ಧಿ ಮಟ್ಟ.

೨೩೨. ಆದಷ್ಟು ಆಯಿತು ಬರಡೆಮ್ಮೆ ಹಾಲು.

೨೩೩. ಆದರೆ ಅಮವಾಸೆ, ಹೋದರೆ ಹುಣ್ಣಿಮೆ.

೨೩೪. ಆದರೆ ಒಂದು ಅಡಿಕೆ ಮರ
ಹೋದರೆ ಒಂದು ಗೋಟಡಿಕೆ.

೨೩೫. ಆದರೆ ಹೋದರೆ ಹತ್ತಿ ಬೆಳೆದರೆ
ಅಜ್ಜೀ ನಿನಗೊಂದು ಪಟ್ಟೇ ಸೀರೆ.

೨೩೬. ಆದಿ ಹಿಡಿದ ಮನುಷ್ಯನಿಗೆ ಅದೇ ಮುಪ್ಪು.

೨೩೭. ಆನೆಯಾಗಿ *ಕಬ್ಬು ಮೇಯುವುದಕ್ಕಿಂತ*
ಇರುವೆಯಾಗಿ ಸಕ್ಕರೆ ಮೇಯುವುದು ಲೇಸು.

** ಜೊಂಡು ತಿನ್ನುವುದಕ್ಕಿಂತ.

೨೩೮. ಆನೆ ಆಡು ಮೊದಲಾದವಕ್ಕೆ ಎರಡು ಕೊಂಬು
ಅಯ್ಯಂಗಾರರಿಗೆ ಮೂರು ಕೊಂಬು.

೨೩೯. ಆನೆಯ ಕಣ್ಣುಗೊಂಬೆ ತಲೆಕೆಳಗು.

೨೪೦. ಆನೆ ಕಂಡು ಶ್ವಾನ ಬೊಗಳಿದ ಹಾಗೆ.

೨೪೧. ಆನೆ ಕಡಿಯುವೆನೇ ? ಗಜಲಕ್ಷ್ಮಿ
ಕುದುರೆ ಕಡಿಯುವೆನೇ ? ಅಶ್ವಲಕ್ಷ್ಮಿ
ಸಿಪಾಯಿಗಳು ಅಂತು ಸರಿಯೇ ಸರಿ
ತಾನು ಇನ್ನಾರನ್ನ ಕಡಿಯಲಿ ಅಂದರೆ
ಕಡಿಯಲೇ ಬೋಳು ಹಾರುವನ !

೨೪೨. ಆನೆಗೆ ಗುಂಗುರು ಕಾಡಿದ ಹಾಗೆ.

೨೪೩. ಆನೆ ತಿಂಬೋದು ಸೊಪ್ಪು, ಇರುವೆ ತಿಂಬೋದು ಸಕ್ಕರೆ.

೨೪೪. ಆನೆ ನುಂಗಿದ ಬೇಲದಕಾಯಿ ಹಾಗೆ.

೨೪೫. ಆನೆ ಬೆಂಡಾದರೆ ಕೊಟ್ಟಿಗೇ ಹೊಕ್ಕೀತೇ ?

೨೪೬. ಆನೆ ಮಲಗಿದರೆ ಆಡಿನಷ್ಟು ಉದ್ದವಿಲ್ಲವೇ ?

೨೪೭. ಆನೆ ಮೆಟ್ಟಿದ್ದೇ ಸಂದು
ಸೆಟ್ಟಿ ಬಿಟ್ಟಲ್ಲೇ ಪಟ್ಟಣ.

೨೪೮. ಆನೆ ಹೂಸಿದ ಹಾಗೆ ದುಃಶಬ್ದ ಮಾತ್ರವೇ ?

೨೪೯. ಆನೆ ಚಾಕರನ ಹೆಂಡತಿ ಆರುತಿಂಗಳಿಗೆ ಮುಂಡೆ
ಕುದುರೆ ಚಾಕರನ ಹೆಂಡತಿ ದಿನದಿನಕ್ಕೂ ಮುಂಡೆ
ದಂಡಿಗೆ ಹೋದ್ಧವನ ಹೆಂಡತಿ ಎಲ್ಲಿದ್ದರೂ ಮುಂಡೆ.

೨೫೦. ಆನೆ ಮೇಲೆ ಹೋಗುವವನ ಸುಣ್ಣ ಕೇಳಿದ ಹಾಗೆ.

೨೫೧. ಆನೆ ಎತ್ತ ? ಆಡು ಎತ್ತ ?

೨೫೨. ಆ ಮಾತಿಗೆ ಈ ಮಾತು ಪ್ರತ್ಯುತ್ತರವದೆ ಮುಂಡೆ ಅಂದರೆ
ಮುಂಡೇಗಂಡ ಅನ್ನುವುದು.

೨೫೩. ಆಯ ಹಾಕುವಾಗಲೇ ನ್ಯಾಯ ಬಂತು.

೨೫೪. ಆರಿದ ನೀರಿಗೆ ನೆಲವೇ ಸಾಕ್ಷಿ.

೨೫೫. ಆರು ಹೆತ್ತವಳಿಗೆ ಮೂರು ಹೆತ್ತವಳು
ಮುಲಕು ಕಲಿಸಿದಳಂತೆ.

೨೫೬. ಆರು ಆಳು ಮೂರು ಪೌಜು.

೨೫೭. ಆರುಗಾಲ ಮಳೆ ಹುಯ್ದರೂ
ಮುತ್ತುಗಕ್ಕೆ ಮೂರೇ ಎಲೆ.

೨೫೮. ಆಲಸ್ಯದವಗೆ ಎರಡು ಕೆಲಸ
ಲೋಭಿಗೆ ಮೂರು ಖರ್ಚು.

೨೫೯. ಆಲೆ ಇಲ್ಲದ ಊರಿಗೆ ಇಪ್ಪೆಯ ಹೂವೇ ಸಕ್ಕರೆ.

೨೬೦. ಆವ ದೇಶಕ್ಕೆ ಹೋದರೂ ಅಟ್ಟೆಡದ ಅಭಿಲಾಷೆ ಬಿಡದು.

೨೬೧. ಆಶ್ವೀಜದಲ್ಲಿ ಹೊನ್ನು ಕರಗುವ ಬಿಸಿಲು
ಮಣ್ಣು ಕರಗುವ ಮಳೆ.

೨೬೨. ಆಶೆಗೆ ಅಂತ್ಯವಿಲ್ಲ, ಪಾಶಕ್ಕೆ ಕಡೆಯಿಲ್ಲ.

೨೬೩. ಆಸ್ತಿಕನ ದಾನ, ನಾಸ್ತಿಕನ ಭಿಕ್ಷೆ.

೨೬೪. ಆಸೆಗಾರ ಹಾರುವಯ್ಯ
ಗೋನಿಯೊಳಗೆ ಮೂಗಳ ಕಟ್ಟಿದ

೨೬೫. ಆಳಾಗ ಬಲ್ಲವ ಅರಸಾಗ ಬಲ್ಲ.

೨೬೬. ಆಳಿಲ್ಲದವನಿಗೆ ಅರಸುತನವು ಯಾಕೆ ?

೨೬೭. ಆಳು ಕಟ್ಟಿದವನೇ ಅರಸು
ಕೂಳು ಇಕ್ಕಿದವನೇ ದಾತ.

೨೬೮. ಆಳುಕಾಳು ಇದ್ದವನಾದರೆ ಕಾಳಯಮ ಬಿಟ್ಟಾನೇ ?

೨೬೯. ಆಳೂ ಆಗಬೇಕು, ಅರಸೂ ಆಗಬೇಕು.

೨೭೦. ಆಹ್ನಿಕ ಮಾಡದೆ ಪ್ರಾತರ್ಭೋಜನ ಮಾಡುವವನು
ಪ್ರೇತದ ಪಾಲಿಗೆ ಸೇರ್‍ಯಾನು.

೨೭೧. ಇಕ್ಕಲಾರದ ಕೈ ಎಂಜಲು ಎಂಬಂತೆ.

೨೭೨. ಇಕ್ಕುವವನಿಗೆ ತಿಳಿಯದಿದ್ದರೆ
ಉಂಬುವವನಿಗೆ ತಿಳಿಯದೇ ?

೨೭೩. ಇಕ್ಕುವವರಿಗೆ ಇಕ್ಕಿದರೆ ಮಕ್ಕಳಿಗೆ ಏನು ?

೨೭೪. ಇಕ್ಕುವವಳು ನಮ್ಮವಳಾದರೆ
ಕೊಟ್ಟಗೆಯಲ್ಲಿ ಆದರೂ ಉಂಡೇನು.

೨೭೫. ಇಕ್ಕೋದು ಗಾಳ, ಓದುವುದು ಖುರಾನು.

೨೭೬. ಇಟ್ಟುದ ಕಾಣದೇ ಕುಟ್ಟಿಕೊಂಡ.

೨೭೭. ಇಡಿ ಮುಳುಗಿದ ಮೇಲೆ ಚಳಿಯುಂಟೇ ?

೨೭೮. ಇತ್ತ ವರ ಮಿಥ್ಯವಾದರೆ
ಮತ್ತೆ ಬೇಡೋದು ಯಾಕೆ?

೨೭೯. ಇತ್ತಿತ್ತ ಬಾ ಅಂದರೆ
ಇದ್ದ ಮನೆಯನ್ನು ಕಿತ್ತುಕೊಂಡ.

೨೮೦. ಇತ್ತಿತ್ತ ಬಾ ಅಂದರೆ
ಹೆಗಲ ಮೇಲೆ ಹತ್ತಿಕೊಂಡ.

೨೮೧. ಇದ್ದಲು ಮಸಿಯಂಥಾ ಮೈಯ ಉಜ್ಜಿ ಉಜ್ಜಿ ತೊಳೆದರೂ
ಇದ್ದ ರೂಪವಲ್ಲದೇ ಪ್ರತಿರೂಪವಾಗದು.

೨೮೨. ಇದ್ದ ಊರ ಹಗೆ ಸಲ್ಲ
ಕದ್ದು ಕೊಂಬುವರ ನೆರೆ ಸಲ್ಲ.

೨೮೩. ಇದ್ದ ತಂಗಳು ನನಗೆ ಇಕ್ಕು
ನಿನಗೆ ಎಂದಿಗೂ ಹಸಿವಿಲ್ಲದ ಹಾಗೆ ಮಾಡುತ್ತೇನೆ.

೨೮೪. ಇದ್ದದ್ದು ಹೋಗಲಾಡಿಸಿದ್ದಲ್ಲದೆ ಕಲಿತ ಬುದ್ಧಿ ಅಲ್ಲಾ.

೨೮೫. ಇದ್ದದ್ದು ಹೋಯ್ತು ಮದ್ದಿನ ಗುಣ.

೨೮೬. ಇದ್ದ ಮಕ್ಕಳಿಗೆ ಕೂಳಿಲ್ಲ ಮತ್ತೊಂದು ಕೊಡು ಶಿವರಾಯ.

೨೮೭. ಇದ್ದ ಮತಿ ಹಾರಿತೋ ಸಿದ್ಧಿಗಣೇಶ.

೨೮೮. ಇದ್ದ ಮನೆ ಬಿದ್ದು ಹೋದರೆ
ಗೆದ್ದುಕೊಂಡ ರಾವುತ.

೨೮೯. ಇದ್ದಲ್ಲಿ ಇರುವುದಿಲ್ಲ, ಬಿದ್ದ ಗೋಡೆ ಹಾಕುವುದಿಲ್ಲ.

೨೯೦. ಇದ್ದವರು ಇದ್ದ ಹಾಗೆ
ಸಿದ್ಧಾ ದೇವಿಗೆ ಸಿಡಿಲು ಬಡೀತು.

೨೯೧. ಇದ್ದವರು ಮೂವರು ಕದ್ದವರು ಯಾರು ?

೨೯೨. ಇಬ್ಬರಿದ್ದರೆ ಏಕಾಂತ, ಮೂವರಿದ್ದರೆ ಲೋಕಾಂತ.

೨೯೩. ಇಬ್ಬರ ನ್ಯಾಯ ಒಬ್ಬನಿಗಾಯ.

೨೯೪. ಇಬ್ಬಾಯಿ ಇದ್ದವನ ಕುಬ್ಬಾಟ ಬಹಳ.

೨೯೫. ಇರವಾರ ಕೆಟ್ಟ ಪುರವಾರ ಸೇರಿದ.

೨೯೬. ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದ.

೨೯೭. ಇರುಳು ಕಾಗೆಗೆ ಆಗದು.
ಹಗಲು ಗೂಬೆಗೆ ಆಗದು.

೨೯೮. ಇರುಳು ನೋಡಿ ಮರಳುಗೊಂಡ.

೨೯೯. ಇರುವೆಯ ಕಾಲಿಗೆ ಮಣ್ಣಿನ ಸಂಕೋಲೆ.

೩೦೦. ಇರುವೆಯ ಭಾರ ಇರುವೆಗೆ
ಆನೆಯ ಭಾರ ಆನೆಗೆ.

೩೦೧. ಇಲ್ಲದಾಗ ಇಲಿ ಕಚ್ಚಿಕೊಂಡು ಹೋಯ್ತು.

೩೦೨. ಇಲ್ಲದವನು ತಲ್ಲಣಿಸನು.

೩೦೩. ಇಲಿಯನ್ನು ಒಳಗೆ ಬಿಟ್ಟು
ಬಿಲಕ್ಕೆ ಮಣ್ಣು ಮೆತ್ತಿದ.

೩೦೪. ಇಲ್ಲೆಂದು ಹುಲ್ಲು ಮೆಲಬಹುದೇ ?

೩೦೫. ಇವನ ಕೊಂಡು ಹೋಗಿ ಜವನ ತಪ್ಪಿಸು.

೩೦೬. ಇವನು ಅವನಿಗೆ ಎಣ್ಣೆ ಸೀಗೆ.

೩೦೭. ಇಷ್ಟವಾದವರು ಕಷ್ಟಪಡಿಸ್ಯಾರೋ ?

೩೦೮. ಇಹಾ ನಂಬಿ ಸರಾ ಮರತ.

೩೦೯. ಇಂಪು ಸಿಕ್ಕಿದರೆ ಸಂಪು.

೩೧೦. ಈ ಊಟಕ್ಕೆ ಈ ನಾಮ ಸಾಲದೇ ?

೩೧೧. ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದರೆ
ನಾಚಿಗೆಗೇಡು ಆಗದೇ ? *

೩೧೨. ಈಚೆಯಿಂದ ಆಚೆಗೆ ಹೋಗುವುದಕ್ಕೆ
ನೋಚೆಯಿಂದ ಆಗುವುದೇ ?

೩೧೩. ಈಟಿಲ್ಲದವನಿಗೆ ಮೀಟಾದ ಹೆಂಗಸು.†

೩೧೪. ಈಡಿದ್ದವನ ಹೊಲ ತೋಟ ನೋಡಬೇಕು.

೩೧೫. ಈಡು ಇಟ್ಟರೆ ನಾಡು ನಂಬುವುದು.

೩೧೬. ಈತನಾಗಲಿ ಆತನಾಗಲಿ
ಮಾತು ಒಂದಿರಬೇಕು.

೩೧೭. ಈತನಿಗಿಂತ ಆತ ವಾಸಿ ಎಬ್ಬಿಸಿದರೆ ಉಣ್ಣುತ್ತಾನೆ.

೩೧೮. ಈತನ ಮಾತಿಗೆ ಆತ ಸೋತ.

* ಈಚಲ ಮರದ ಕೆಳಗೆ ಕೂತು ಆಳೆ ಕುಡಿದ ಹಾಗೆ.

† ಈಡಿಲ್ಲದವನಿಗೆ ಮಿಾಟಾದ ಹೆಂಗಸು.

೩೧೯. ಈದದ್ದೂ ಅಲ್ಲ, ನೆಕ್ಕಿದ್ದೂ ಅಲ್ಲ.

೩೨೦. ಈ ಮುಖಕ್ಕೆ ಯಾಕೆ ಮೇಲುಗೋಟೆ ನಾಮ?

೩೨೧. ಈರಾರು ಹನ್ನೆರಡೆಂದರೆ
ನ್ಯಾರೋ ಮುಂಡೇ ಹೋಗು ಅಂದ.

೩೨೨. ಈರಣ್ಣನ ಮುಂದಣ ಬಸವಣ್ಣ.

೩೨೩. ಈಶ ನಾಶ ಮಾಡ್ಯಾನೋ?

೩೨೪. ಈಶ್ವರಗಿಂತ ಗಡಬಡೇಶ್ವರ ದೊಡ್ಡವನೋ?

೩೨೫. ಈಶ್ವರಾಂಶಜನಲ್ಲದೇ ಇಳೆಯನ್ನಾಳಲಾರನು.

೩೨೬. ಈಸೀಸು ಅಗಲ ದೋಸೆ
ಏಸೇಸು ಮೆದ್ದೀ? *

೩೨೭. ಈಸುವವನಿಗೆ ಮೀಸೆ ಭಾರವೇ?

೩೨೮. ಈ ಹಳ್ಳ ಆ ಕಳ್ಳಗೆ ಈಡೇ?

೩೨೯. ಈ ಹೊತ್ತು ಹರಿಕಥೆ ಸೀಯೋ ಉಪ್ಪೋ?

೩೩೦. ಉಕ್ಕಿ ಬಂದದ್ದು ತೆಗೆದು ಹಾಕಿದರೆ
ಮಿಕ್ಕಿದ್ದಕ್ಕೆ ಮೋಸವಿಲ್ಲ.

೩೩೧. ಉಕ್ಕಿನ ಕೊಡಲಿಯಾದರೂ ಕಡಿಯಲು ಕಾವು ಬೇಕು.

೩೩೨. ಉಗುರಲ್ಲಿ ಹೋಗುವುದಕ್ಕೆ ಕೊಡಲಿಯೇ?

---

* ಒಂದೊಂದು ದೋಸೆ ಈಸೀಸಗಲ ಏಸೇಸು ಮೆದ್ದೀಯೆ?

೩೩೩. ಉಗುಳಿ ಉಗುಳಿ ರೋಗ
ಬೊಗಳಿ ಬೊಗಳಿ ರಾಗ.

೩೩೪. ಉಚ್ಚ ಸ್ಥಾನವೇ ಪೂಜ್ಯ.

೩೩೫. ಉಚ್ಚೆಯಲ್ಲಿ ಮೀನು ಹಿಡಿಯಬಹುದೇ ?

೩೩೬. ಉಚ್ಚೇ ಕುಡಿದರೂ ತನ್ನಿಚ್ಛೆ ಲೇಸು.

೩೩೭. ಉಚ್ಚೇ ಕುಡಿಯಲಿಕ್ಕೆ ಉಪ್ಪು ಕೇಳಿದ.

೩೩೮. ಉಡಕ್ಕಿಲ್ಲದವ ಮೈಲಿಗೆಗೆ ಹೇಸ
ಉಂಬಕ್ಕಿಲ್ಲದವ ತಂಗಳಿಗೆ ಹೇಸ.

೩೩೯. ಉಡಿಕೆಗಂಡನ ಉಪದ್ರ ಬಹಳ.

೩೪೦. ಉಣ್ಣಲಾರದವ ಇಕ್ಕಲಾರನು.

೩೪೧. ಉಣ್ಣಕ್ಕಿಲ್ಲದವ ಬಣ್ಣಾ ಬಯಸಿದ.

೩೪೨. ಉಣ್ಣುವುದಕ್ಕೆ ಉಡುವುದಕ್ಕೆ ಅಕ್ಕನ ಕರೆ
ಕೊಳಕ್ಕೆ ಹಾಕುವುದಕ್ಕೆ ಬಾವನ್ನ ಕರೆ.

೩೪೩. ಉಣ್ಣೋ ಬಟ್ಟೆ ಬಣ್ಣಕ್ಕಾದೀತೇ ?

೩೪೪. ಉತ್ತ ಹೊಲ ಬಿತ್ತಿಸಿಕೊಂಡೀತು
ಸತ್ತ ಹೆಣ ಸುಡಿಸಿಕೊಂಡೀತು.

೩೪೫. ಉತ್ತಮನು ಎತ್ತ ಹೋದರೂ ಶುಭನೇ.

೩೪೬. ಉತ್ತರಾ ಕೊಡದಿದ್ದರೆ ಸತ್ತವನ ಹಾಗೆ.

೩೪೭. ಉತ್ತರನ ಪಾರುಪತ್ಯ ಒಲೇ ಮುಂದೆ.

೩೪೮. ಉತ್ತಮರನ್ನು ನಿಂದಿಸಿದರೆ ಮುಖದ ತುಂಬ
ಕೇಕರಿಸಿ ಉಗುಳುತ್ತಾರೆ.

೩೪೯. ಉತ್ತು ಬಿತ್ತಿದ ಬತ್ತವಾದರೂ
ಮಳೆಯಿಲ್ಲದೆ ಮೊಳೆಯದು.

೩೫೦. ಉತ್ತು ಬರುವ ಮಗ ತೆವಳಿ ಬಂದರೆ
ಹೆತ್ತ ತಾಯಿಯ ಪುಣ್ಯ.

೩೫೧. ಉತ್ತು ಬಾಳುವವನ ಬದುಕು ಎತ್ತಲೂ ಲೇಸು.

೩೫೨. ಉದರಕ್ಕೋಸ್ಕರ ಸದೆಯಾದರೂ ಹುಡುಕಬೇಕು.

೩೫೩. ಉದ್ದವಾಗಿ ಬೆಳದವನಿಗೆ ಬುದ್ಧಿ ಕಡಿಮೆ.

೩೫೪. ಉದ್ದಾನೆ ಕುತ್ತಿಗೆಗೆ ಮಲಕೇ ?

೩೫೫. ಉದ್ದಿಮೆಗಾರನಿಗೆ ಉದ್ದು ಉರುಳುವಷ್ಟು ಪುರುಸತ್ತು ಇಲ್ಲ.

೩೫೬. ಉದ್ದುರುಟುತನಕ್ಕೆ ಗುದ್ದೇ ಮದ್ದು.

೩೫೭. ಉದ್ದು ಉಬ್ಬಿದರೆ ಮುದ್ದಳಿ ಆದೀತೆ?

೩೫೮. ಉದ್ದು ಮದ್ದಲ್ಲ, ಕದ್ದವ ಸಬಗನಲ್ಲ.

೩೫೯. ಉದ್ದು ಮದ್ದಿಗೆ ಸಲ್ಲ
ನಿದ್ದೆಯೋಗಿಗೆ ಸಲ್ಲ.

೩೬೦. ಉದ್ದು ಮೇದ ಕತ್ತೆಯ ಹಾಗೆ
ಬುದ್ಧಿ ಹೀನನು.

೩೬೧. ಉದ್ದು ಉರುಳಿದರೆ ಹೆದ್ದಾರಿ ದಾಟೀತೇ ?

೩೬೨. ಉದ್ಯೋಗವಿಲ್ಲದ ಊರಲ್ಲಿ
ಉದ್ದು ಉರುಳುವಷ್ಟು ಹೊತ್ತಿರ ಬೇಡ.

೩೬೩. ಉದ್ಯೋಗವಿಲ್ಲದ ತೊತ್ತು
ಉದ್ದು ಹುರಿದು ತಿಂದಳು.

೩೬೪. ಉದ್ಯೋಗವಿಲ್ಲದ ಬಡಗಿ ಮಕ್ಕಳ ತಿಕಾ ಕೆತ್ತಿದ.

೩೬೫. ಉನ್ನತನು ಸನ್ಮತನಾಗಿ ನಡೆಯಬೇಕು.

೩೬೬. ಉಪಕಾರಕ್ಕೆ ಅಪಕಾರ ಮಾಡಬೇಡ.

೩೬೭. ಉಪಕಾರಕ್ಕೆ ಹೋಗಿ ಉಪದ್ರ ಬಂತು.

೩೬೮. ಉಪಕಾರವರಿಯದವನ ನಿಪುಣನೆಂದು ಹೇಳಬೇಡ.

೩೬೯. ಉಪದೇಶ ಕೇಳಿದರೂ ಉಪದ್ರ ತಪ್ಪಲಿಲ್ಲ.

೩೭೦. ಉಪಾಧ್ಯರೇ ನಿಮ್ಮ ಮಗ ಬೇವು ತಿನ್ನುತ್ತಾನೆಂದರೆ
ಕಹಿ ಆದರೆ ತಾನೇ ಬಿಡುತ್ತಾನೆಂದ.

೩೭೧. ಉಪ್ಪರಿಗೆ ಮನೆಯವನಾದರೂ
ಉಪ್ಪಿಲ್ಲದೆ ಆಗದು.

೩೭೨. ಉಪ್ಪಾರನ ಮಗನಾದರೆ ಉಪ್ಪಿಲ್ಲದೆ ಉಂಡಾನೇ ?

೩೭೩. ಉಪ್ಪಿನ ರಾಸೀ ಮೇಲೆ ಮಜ್ಜಿಗೇ ತಟಕು.

೩೭೪. ಉಪ್ಪಿನಲ್ಲೇ ಮುಪ್ಪು ಬಂದರೂ
ಉಪ್ಪು ತಿಂದ ವಿನಹ ಕೂಡದು.

೩೭೫. ಉಪ್ಪಿನವ ಕೆಟ್ಟನೆಂದರೆ
ತೆಂಗಿನಕಾಯಿಯವ ಹೊರಳಿ ಹೊರಳಿ ಅತ್ತ.

೩೭೬. ಉಪ್ಪಿಲ್ಲದೆ ಮೂಗಳ ಗಂಜೀ ಕುಡಿಯುವಗೆ
ಉಪ್ಪಿದ್ದರೆ ನಾಗಳವೂ ಸಾಲದು.

೩೭೭. ಉಪ್ಪಿಟ್ಟವರನ್ನು ಮುಪ್ಪಿನತನಕಾ ಮರೆಯಬಾರದು.

೩೭೮. ಉಪ್ಪು ತಿಂದವ ನೀರು ಕುಡಿದಾನು.

೩೭೯. ಉಪ್ಪು ಸಪ್ಪೆ ಆದರೂ ಕಾರ ಬಿಡದು.

೩೮೦. ಉಬ್ಬಿದ ಕಪ್ಪೆ ಆನೆ ನುಂಗೀತೇ ?

೩೮೧. ಉಬ್ಬೇ ಮಳೆ ಗುಬ್ಬೀ ತಲೆ ನೆನೆಯುವುದಿಲ್ಲ.

೩೮೨. ಉಬ್ಬೇ ಮಳೆ ಅಬ್ಬೇ ಹಾಲು.

೩೮೩. ಉಮ್ಮಿ ಕುಟ್ಟ ಕೈ ಗುಳ್ಳೆ ಆಯಿತು.

೩೮೪. ಉರಿಯುವ ಬೆಂಕಿಯಲ್ಲಿ ಎಣ್ಣೆ ಹೊಯ್ದ.

೩೮೫. ಉರುಟಾದುದು ಉರುಳದೇ ಇರದು.

೩೮೬. ಉರುಳು ಹಾಕಿಕೊಳ್ಳುವವನಿಗೆ
ಕೊರಳ ಚಂದಾ ತೋರಿಸಿದ.

೩೮೭. ಉಸುರುಂಟಾದರೆ ಉಪ್ಪು ಮಾರಿ ತಿನ್ನಬಹುದು.

೩೮೮. ಉಸುರಿಲ್ಲದವ ಉಪ್ಪೋಷ್ಯ ಮಾಡ್ಯಾನೇ ?

೩೮೯. ಉಳಿ ಕೊಡತಿಯ ನ್ಯಾಯ.

೩೯೦. ಉಳಿ ಸಣ್ಣದಾದರೂ ಮರಾ ಕಡಿಯೋದು ಬಿಡದು.

೩೯೧. ಉಳ್ಳಿ ತಿಂದವನಿಗೆ ಉಳುಕಿತು.

೩೯೨. ಉಂಗರ ದೊಡ್ಡದಾದರೆ ಗಂಗರವಾದೀತೇ ?

೩೯೩. ಉಂಟು ಮಾಡಿದ ದೇವರು
ಊಟವ ಕೊಡಲಾರನೋ ?

೩೯೪. ಉಂಡದ್ದು ಉಂಡ ಹಾಗೆ ಹೋದರೆ
ವೈದ್ಯನ ಹಂಗು ಏನು ?

೩೯೫. ಉಂಡದ್ದೆಲ್ಲಾ ಕುಂಡೀಲೇ ಹೋಯ್ತು.

೩೯೬. ಉಂಡದ್ದೇ ಯುಗಾದಿ. ಮಿಂದದ್ದೇ ದೀವಾಳಿಗೆ.

೩೯೭. ಉಂಡವನಿಗೆ ಹಸಿವಿಲ್ಲ
ಮಿಂಡಗಾರನಿಗೆ ನಾಚಿಕೆಯಿಲ್ಲ.

೩೯೮. ಉಂಡವರಿಗೆ ಊಟ ಬೇಡ
ಗುಂಡುಕಲ್ಲಿಗೆ ಎಣ್ಣೆ ಬೇಡ.

೩೯೯. ಉಂಡವ ಹರಸ ಬೇಡ
ನೊಂದವ ಬಯ್ಯಬೇಡ.

೪೦೦. ಉಂಡಿ ಏನೋ ಗುಂಡಾ ಅಂದರೆ
ಮುಂಡಾಸು ಮೂವತ್ತು ಮೊಳ ಅಂದ.

೪೦೧. ಉಂಡಿ ಏನೋ ಗುಂಡಭಟ್ಟ,
ಹೌದು ಕಾಣೆ ರಂಡೆ ಮುಂಡೆ.

೪೦೨. ಉಂಬಕ್ಕೆ ತಿಂಬಕ್ಕೆ ಮಾಳಾಯಿ
ಕಿಚ್ಚು ಹೊರಕ್ಕೆ ಸಾಂತಾಯಿ.

೪೦೩. ಉಂಬೋಕೆ ಉಡೋಕೆ ಅಣ್ಣಪ್ಪ
ಕೆಲಸಕ್ಕೆ ಮಾತ್ರ ದೊಣ್ಣಪ್ಪ.

೪೦೪. ಊಚವಾದ್ದು ನೀಚಲೆಂತ ಹೇಳಬಾರದು.

೪೦೫. ಊಟಕ್ಕಿಲ್ಲದ ಉಪ್ಪಿನಕಾಯಿ
ಕತ್ತೇ ಶಾಟಕ್ಕೆ ಸಮಾನ.

೪೦೬. ಊಟಕ್ಕಿಲ್ಲದವನು ಕಾಟ ಮಾಡದೆ ಇರನು.

೪೦೭. ಊಟಕ್ಕೆ ಕಿಚ್ಚು ಬಿತ್ತು
ಗಂಧ ತೇದು ಹೆಣ ಹೋಯ್ತು.

೪೦೮. ಊಟಕ್ಕೆ ಮುಂಚು, * ಮೀಣಕ್ಕೆ * ಹಿಂಚು.

೪೦೯. ಊಟ ಚಲೋದಾಯಿತು, ಹೊಟ್ಟೆ ಮಾತ್ರ ತುಂಬಲಿಲ್ಲ.

೪೧೦. ಊಟದಲ್ಲಿ ನೀಟಾಗಿರಬೇಕು.

೪೧೧. ಊಟ ಪರಿಸಿದ ಹಾಗೆ.

೪೧೨. ಊಟ ಬಲ್ಲವನಿಗೆ ರೋಗವಿಲ್ಲ
ಮಾತು ಬಲ್ಲವನಿಗೆ ಜಗಳವಿಲ್ಲ.

೪೧೩. ಊಟ ಬೇಡವೆಂದು ನಾಟಲಿಕ್ಕೆ ಹೋದ.

೪೧೪. ಊಟ ಅಂದರೆ ಹೂ
ಓಟ ಅಂದರೆ ಊಹೂ.

೪೧೫. ಊಟ ಬೇರೆ, ಪಡಿ ಬೇರೆ.

೪೧೬. ಊಟ ಹಾಗ, ಫಲಹಾರ ಮುಪ್ಪಾಗ.

---

* (i) ನೀರಿಗೆ (ii) ದಂಡಿಗೆ

೪೧೭. ಊಟಕ್ಕೆ ಬಾರಪ್ಪ ಅಂದರೆ
ಓಟಕೇ ಮುನಕೊಂಡ.

೪೧೮. ಊದಿದಷ್ಟೂ ಬೆಳ್ಳಿ ಬೂದಿ ಆಯಿತು.

೪೧೯. ಊರ ಮುಂದೆ ನೇಗಿಲ ಹೂಡಿದರೆ
ಕಂಡ ಕಂಡವರಿಗೆ ಒಂದೊಂದು ಮಾತು.

೪೨೦. ಊರ ಗುದ್ದಲಿ ತಂದು ನಾಡ ಕಾವಲಿ ತೆಗದ.

೪೨೧. ಊರಲ್ಲಿ ತಿರಿದುಂಡು
ನನ್ನಲ್ಲಿ ಒಂದು ಪದಾ ಹೇಳು.

೪೨೨. ಊರ ಸೇರಿದ ಮೇಲೆ ದಾರಿ ತೀರಿತು.

೪೨೩. ಊರ ಮೇಲೆ ನೂರು ಬಿದ್ದರೆ
ಶ್ಯಾನುಭೋಗನ ಶಂಟಕ್ಕೇನು.

೪೨೪. ಊರಪ್ಪನ ಎತ್ತು, ಮಾರಪ್ಪನ ಗೋಣಿ.

೪೨೫. ಊರಿಗೆ ಒಬ್ಬ ಸೂಳೆ ಪದ್ಮಾವತಿ.

೪೨೬. ಊರಿಗೆ ಗವುಡನಾದರೆ ತೋಳಗೆ ಏನು ?

೪೨೭. ಊರಿಗೆ ಬರುವನಕಾ ಒಬ್ಬ ನೆಂಟ
ಊರಿಗೆ ಬಂದಮೇಲೆ ಎಲ್ಲರೂ ನೆಂಟರು.

೪೨೮. ಊರಿಗೆ ಅರಸನಾದರೂ *ತಾಯಿಗೆ* ಮಗ.

೪೨೯. ಊರಿಗೆ ದಿಕ್ಕಿಲ್ಲ ಯಾರಿಗೆ ಅಳಲಿ.

---

* ತಂದೆಗೆ.

೪೩೦. ಊರಿಗೆ ಬಂದ ಮಾರಿ
ಉಂಡಲ್ಲದೇ ಹೋಗದು.

೪೩೧. ಊರಿಗೆ ಹಬ್ಬವಾದರೆ ನಾಯಿಗೆ ಲೊಲ್ಲಟ್ಟೆ.

೪೩೨. ಊರಿಗೆ ಹೋಗದವರಿಗೆ ದಾರಿಗೊಡವೆ ಯಾಕೆ ?

೪೩೩. ಊರಿದ್ದಲ್ಲಿ ಹೊಲಗೇರಿ.

೪೩೪. ಊರು ಉಪಕಾರವರಿಯದು
ಹೆಣ ಶೃಂಗಾರವರಿಯದು.

೪೩೫. ಊರು ತಿರಿದು ಜೂಲುನಾಯಿಗೆ ಹಾಕಿದ.

೪೩೬. ಊರು ಬಿಟ್ಟು ಹೊಲಗೇರಿಯಲ್ಲಿ ತಂಗಿದರು.

೪೩೭. ಊರು ಬೇರೆಯಾದರೂ ಪ್ರಾರಬ್ಧ ಬೇರೆಯೇ ?

೪೩೮. ಊರು ಮೂರು ಸುತ್ತು ಸುತ್ತಿದರೂ
ಊರ ಬಾಗಿಲಲ್ಲಿಯೇ *ನುಸಿಯಬೇಕು.*

೪೩೯. ಊರು ಒಳ್ಳೇದೇ ಎಂದರೆ
ಬಾಯಿ ಒಳ್ಳೇದಾದರೆ ಊರು ಒಳ್ಳೇದು.

೪೪೦. ಊರು ಸುಟ್ಟರೂ ಹನುಮಂತರಾಯ ಹೊರಗೆ.

೪೪೧. ಊರಕ್ಕಿ ಊರ ಬೇಳೆ
ಉಂಡು ಹೋಗೆ ಮಾರವ್ವ.

೪೪೨. ಊರು ಹಾಳಾದರೂ ಗಾವುದಕ್ಕೆ ಕಡಿಮೆಯೇ ?

---

* ಹೊರಡಬೇಕು.

೪೪೩. ಊರು ಸೂರೆ ಆದ ಮೇಲೆ
ಪಾಲಿ ಕಾದರು.

೪೪೪. ಊರೆಲ್ಲಾ ಬೇಡೋಕೆ ಹೊರಟರೆ
ಕೊಡೋರು ಯಾರು ?

೪೪೫. ಊರೆಲ್ಲಾ ತೊಳೆದರೂ ಮುಸಿ ಬೆಳ್ಳಗಾಗದು.

೪೪೬. ಊರೆಲ್ಲಾ ಕಂಡ ಮಾತನ್ನು
ನನ್ನ ಕಿವಿಯಲ್ಲಿ ಹೇಳಿದ.

೪೪೭. ಊರೊಂದಾಡಿದರೆ ಊಡಕನೊಂದಾಡಿದ.

೪೪೮. ಎಣ್ಣೆದ್ದು ಮಣ್ಣಾಯಿತು, ಹೆತ್ತದ್ದು ಹೆಣ್ಣಾಯಿತು.

೪೪೯. ಎಣ್ಣೆ ತಣ್ಣಗಾದರೆ ಬೆಣ್ಣೆಯ ಹಾಗೆ ಇದ್ದೀತೇ?

೪೫೦. ಎಣ್ಣೆ ಬರುವಾಗ ಗಾಣ ಮುರೀತು.

೪೫೧. ಎಣ್ಣೆ ಸಿಕ್ಕಿದ್ದೇ ಶನಿವಾರ.

೪೫೨. ಎಣ್ಣೆ ಸೀಗೆಗೆ ಹ್ಯಾಗೋ ಹಾಗೆ ಪ್ರೀತಿ.

೪೫೩. ಎಣ್ಣೆ ಚೆಲ್ಲಿದವನೂ ಅತ್ತ
ಕಾಯಿ ಚೆಲ್ಲಿದವನೂ ಅತ್ತ.

೪೫೪. ಎಣ್ಣೆ ಹಾಕಿದರೆ ಕಣ್ಣಿಗೆ ಗುಣ
ಮಣ್ಣು ಹಾಕಿದರೆ ಬುಡಕ್ಕೆ ಗುಣ.

೪೫೫. ಎಣ್ಣೆ ಬರುವಾಗ ಕಣ್ಣು ಮುಚ್ಚಿಕೊಂಡ.

---

* ಬಾಗಿಲು ಹಾಕಿದರು

೪೫೬. ಎಣ್ಣೆ ಮಾರುವವನಿಗೆ ಸಣ್ಣೆ ಯಾಕೆ ?

೪೫೭. ಎತ್ತ ಹೋದರೂ ತುತ್ತು ಹುಡುಕುವುದೇ.

೪೫೮. ಎತ್ತ ಬಿದ್ದರೂ ತಿಂಬಕೆ ಉಂಟು.

೪೫೯. ಎತ್ತ ಹೋದರೂ ಮೃತ್ಯು ಬಿಡದು.

೪೬೦. ಎತ್ತನ್ನು ಹುಲಿ ತಿಂತು
ಸಬರ ಮರಿಯನ್ನು ಗೆದ್ದಲು ತಿಂತು.

೪೬೧. ಎತ್ತಿಗೆ ರೋಗ ಬಂದರೆ ಎಮ್ಮೆಗೆ ಬರೆ ಹಾಕಿದರು.

೪೬೨. ಎತ್ತಿಕೊಂಡು ಹೋಗೋರು ಇದ್ದರೆ
ಸತ್ತ ಹಾಗೆ ಬಿದ್ದೇನು.

೪೬೩. ಎತ್ತಿನ ಮುಂದೆ ತೆಂಗಿನಕಾಯಿ ಒಡೆದ ಹಾಗೆ.

೪೬೪. ಎತ್ತು ಈಯಿತು ಅಂದರೆ
ಕೊಟ್ಟಗೆಯಲ್ಲಿ ತಂದು ಕಟ್ಟು ಅಂದ.

೪೬೫. ಎತ್ತು ಹಾರುವುದಕ್ಕಿಂತ ಮುಂಚೆ
ಕವುದಿ ಹಾರಿತು.

೪೬೬. ಎತ್ತು ಹೇರಿಗೆ ಎಳೆದರೆ
ಕೋಣ ನೀರಿಗೆ ಎಳೆಯುತ್ತದೆ.

೪೬೭. ಎತ್ತೂ ಮಾರಿ ಮತ್ತೂ ಗಂಜಿ.

೪೬೮. ಎತ್ತೋದಕ್ಕೆ ಹೊತ್ತು ಕಳೆದರೆ
ತುತ್ತುಗೊಳ್ಳ ಬೇಡವೇ ?

---

* ಗೋಣಿ

೪೬೯. ಎದ್ದರೆ ಕೆಟ್ಟೆ ಅಂದ ಹಾಗೆ.

೪೭೦. ಎದ್ದವನು ಗೆದ್ದಾನು.

೪೭೧. ಎದ್ದ್ಯಾ ಜೋಗಿ ಅಂದರೆ
ಕಡಾಸು ಹೆಗಲ ಮೇಲೆ ಅಂದ.

೪೭೨. ಎದ್ದು ಹೋಗು ಅಂದರೆ
ಒದ್ದು ಹೋಗುತ್ತೇನೆ ಅಂದ.

೪೭೩. ಎದೆಗುದಿ ಪಟ್ಟು ಕುದಿಯುವ
ಅವರೇ ಬಾಯೊಳಗೆ ಹಾಕಿಕೊಂಡ.

೪೭೪. ಎದ್ದೇಳಲಾರದ ಬಡ್ಡಿ
ಕೊಗ್ಗಿಡಿ ಗಿಡಾ ತಂದಾಳೋ?

೪೭೫. ಎನಗೂ ಹರಿನಾಮ ಮಾಧವನಿಗೂ ಹರಿನಾಮ
ಎನಗೂ ಜಲಶಯನ ಮಾಧವನಿಗೂ ಜಲಶಯನ
ಎನ್ನದು ಕಿರಿದೇನು ಮಾಧವನದು ಹಿರಿದೇನು
ಟೊರೋ ಟೊರೋ ಟೊರೋ ಅಂದಿತು.

೪೭೬. ಎನ್ನ ಮೋರೆ ಬಟ್ಟಲು ಕದ್ದ ಹಾಗಿತ್ತೇ?

೪೭೭. ಎಮ್ಮೆಯ ಮೇಲೆ ಮಳೆಗರೆದ ಹಾಗೆ.

೪೭೮. ಎಮ್ಮೆ ಕರೀತೋ, ಪುಣ್ಯ ಕರೀತೋ?

೪೭೯. ಎಮ್ಮೆ ಕರು ಸಾಯಬೇಕು
ಹಿರೇ ಮಗಳ ಗಂಡ ಸಾಯಬೇಕು.

೪೮೦. ಎಮ್ಮೆಗಿಮ್ಮೆ ತಂದರೆ ಗಿಂದರೆ
ತವರ ಮನೆಗೆ ಕೊಟ್ಟೇಯಾ? ನನಗೆ ಇಕ್ಕೇಯಾ?

೪೮೧. ಎರಡು ಚೊಂಯಿಗೆ ಒಂದು ದೋಸೆ.

೪೮೨. ಎರಕ ಹೊಯಿದರೂ ನರಕ ತಪ್ಪದು.

೪೮೩. ಎರಡು ದಾಸರಿಗೆ ನಂಬಿ
ಕುರುಡು ದಾಸ ಕೆಟ್ಟ.

೪೮೪. ಎರವಿನ ಚಿನ್ನ ಧರಿಸಿ
ತಾನೂ ಅರಸಿ ಎಂದಳು.

೪೮೫. ಎರವು ನಂಬಿ ನಿಜಾ ಮರತ.

೪೮೬. ಎರದು ಕೊಟ್ಟ ಮೇಲೆ
ತಿರುಗು ಕೇಳಬೇಡ.

೪೮೭. ಎರವು ಸಿರಿಯಲ್ಲ, ಬಾವು ಡೊಳ್ಳಲ್ಲ
ನೆರಮನೆಯಕ್ಕನ ಗಂಡ ಬಾವಲ್ಲ.

೪೮೮. ಎಲ್ಲರ ಮನೇಲಿ ದೋಸೆಗೆ ತೂತಾದರೆ
ನಮ್ಮಲ್ಲಿ ಕಾವಲಿಗೇ ತೂತು.

೪೮೯. ಎಲ್ಲದಕ್ಕೆ ಬಡತನವಾದರೆ
ಹಿಡಿ ತುಂಬ ಗಡ್ಡಕ್ಕೂ ಬಡತನವೇ ?

೪೯೦. ಎಲ್ಲರೂ ನಕ್ಕರೆ ಹುಚ್ಚ ತಾನೂ ನಕ್ಕ.

೪೯೧. ಎಲ್ಲರೂ ಸನಗಂಜಿದರೆ
ನಾನು ವೀರಾಜಿಗಂಜುವೆನು.

೪೯೨. ಎಲ್ಲರೂ ಗೋಕರ್ಣಕ್ಕೆ ಹೋದರೆ
ಗೋಕರ್ಣದವರು ಗಾಳಕ್ಕೆ ಹೋದರು.

೪೯೩. ಎಲ್ಲರೂ ಪಾಲಕೀಲಿ ಕೂತರೆ ಹೊರೋರು ಯಾರು ?

೪೯೪. ಎಲ್ಲರೂ ಹೆಣ್ಣು ಹೆತ್ತರೆ
ಮಾರಮ್ಮ ಮರಿಗೆ ಹೆತ್ತಳು.

೪೯೫. ಎಲ್ಲರಿಗೂ ಒಂದೇ ಬಟ್ಟೆ
ಕೊಡಗನಿಗೆ ಬೇರೆ ಬಟ್ಟೆ.

೪೯೬. ಎಲ್ಲರು ತಿರಿಚಿದರು, ನಾನೂ ತಿರಿಚಿದೆ.

೪೯೭. ಎಲ್ಲಾ ದೋಷ ಬೆಲ್ಲದಲ್ಲಿ ಪರಿಹಾರ.

೪೯೮. ಎಲ್ಲಾ ದೇವರ ಜಗಲಿಯಾದರೆ
ನಿಲ್ಲೋದಕ್ಕೆ ಸ್ಥಳವೆಲ್ಲಿ ?

೪೯೯. ಎಲ್ಲಾ ಬಣ್ಣಾ ಮಸಿ ನುಂಗಿತು.

೫೦೦. ಎಲ್ಲಾ ಬಿಟ್ಟ, ಬಂಗೀನೆಟ್ಟ.

೫೦೧. ಎಲ್ಲಾ ಹೊಕ್ಕಿತು, ಬಾಲ ಮಾತ್ರ ಉಳಿಯಿತು.

೫೦೨. ಎಲ್ಲಾ ಹೋದರೂ ಮಲ್ಲ ಉಳಿದ.

೫೦೩. ಎಲ್ಲಿಯೂ ಇಲ್ಲದ್ದು ಗೊಬ್ಬೂರಲ್ಲಿ ಉಂಟಂತೆ.

೫೦೪. ಎಲ್ಲಿಗೆ ಹೋದರೂ ಹೊಟ್ಟೆ ಬಿಡದು.

೫೦೫. ಎಲ್ಲಿಗೆ ಹೋದರೂ ಮನೆಗೆ ಬಪ್ಪ.

೫೦೬. ಎಲು ಇಲ್ಲದ ನಾಲಿಗೆ ಹ್ಯಾಗೂ ಬೊಗಳುತ್ತದೆ.

೫೦೭. ಎಲೆಗೆ ಕಾಯಿ ಮರೆ
ಕಾಯಿಗೆ ಎಲೆ ಮರೆ.

೫೦೮. ಎಲೆ ಮೆಲಲಿಕ್ಕಿಲ್ಲವೆಂದು
ತಲೆ ಅಲ್ಲಾಡಿಸಿದ ಹಾಗೆ.

೫೦೯. ಎಲೆ ಎಂಬುವುದಕ್ಕೆ ಅವಳೇ ಇಲ್ಲ
ಮಗನ ಹೆಸರು ಮುದ್ದುರಂಗ ಎಂಬಂತೆ.

೫೧೦. ಎಷ್ಟು ಮಾಡಿದರೂ ನಷ್ಟವಾಗದೇ ಬಿಡದು.

೫೧೧. ಎಳ್ಳಂತು ಎಣ್ಣೆಗೆ ಒಣಗುತ್ತದೆ
ನೀನು ಯಾಕೆ ಒಣಗುತ್ತಿ ಮುರಳೀ ಬೀಜವೇ ?

೫೧೨. ಎಳೆತನದಲ್ಲಿ ಕಲಿಯದ್ದು
ಎಪ್ಪತ್ತರ ಮೇಲೆ ಬಂದೀತೇ ?

೫೧೩. ಎಳೆಯವ ತೋಳಾಡಿಸಿದ ಅಂತ
ಎಪ್ಪತ್ತರವ ಆಡಿಸಿದರೆ ಒಪ್ಪೀತೇ ?

೫೧೪. ಎಳೇಲಿ ಬರಲೊ ? ಮುಪ್ಪಿಲಿ ಬರಲೊ ?

೫೧೫. ಎಳೆಗರುಂ ತಾಂ ದೊಡ್ಡಿತು ಎತ್ತು ಆಗದೇ ?

೫೧೬. ಎಳೇ ಮರುಳೋ ? ಎಪ್ಪತ್ತೇ ಮರುಳೋ ?

೫೧೭. ಎಂಜಲ ಕೈಯಿಂದ ಕಾಗೆ ಓಡಿಸುವುದಿಲ್ಲ.

೫೧೮. ಎಂಜಲು ಎತ್ತ್ರೋ ಗುಂಡಾ ಎಂದರೆ
ಉಂಡವರು ಎಷ್ಟು ಜನ ಎಂದ.

೫೧೯. ಎಂಜಲಿಗೆ ಹೇಸದವಳು
ತಂಗಳನ್ನಾ ಬಿಟ್ಟಾಳೇ ?

೫೨೦. ಎಂತೆಂತವರು ಅಂತೇ ಹೋದರು
ಸಂಕ್ರಾಂತಿ ಬಂದು ಹುಳಿದೋಸೆ ಬೇಡಿತು

೫೨೧. ಎಂತೆಂತಾ ದೇವರಿಗೆಲ್ಲಾ ಅಂತರಾಟ
ಕಾಲ್ಮುರಕ ದೇವರಿಗೆ ಕೈಲಾಸವೇ ?

೫೨೨. ಎಂದೂ ಇಲ್ಲದ ಮಾಣಿ
ಅಮವಾಸೇ ದಿನ ಓದಕೂತ.

೫೨೩. ಎಂದೂ ಏರದ ರಾವುತ
ಕುದುರೇ ಹಿಂದು ಮುಂದಾಗಿ ಏರಿದ.

೫೨೪. ಏಕಮಾತ್ರ ಕಾಕ ಮಾಡದು.

೫೨೫. ಏಕಾದಶಿಯ ಮನೆಗೆ ಶಿವರಾತ್ರಿಯ
ಅವುತಣಕ್ಕೆ ಬಂದ ಹಾಗೆ.

೫೨೬. ಏಕಾಂತ ಹೋಗಿ ಲೋಕಾಂತವಾಯಿತು.

೫೨೭. ಏಕಾದಶೀ ಉಪವಾಸ, ದ್ವಾದಶೀ ಪಾರಣ.

೫೨೮. ಏನಯ್ಯ ? ಅಂದರೆ ಶ್ವಾನನ ಮರಿ
ಸತ್ತು ಹೋಯಿತು ಅಂದ.

೫೨೯. ಏನಾದರೂ ಮಾಡಿದರೆ ಹ್ಯಾಗಾದರೂ ಆಗುವುದು.

೫೩೦. ಏನು ಮಾಡಿದರೂ ಮಗ ಹರಿಯೆಂಬುದನ್ನು ಬಿಡ.

೫೩೧. ಏನು ಗವುಡ ಅಂದರೆ
ಕಂಬಳಿಗೆ ಮೂರು ಹಣ ಅಂದ.

೫೩೨. ಏನು ಅರಿಯದವ ಶ್ವಾನಕ್ಕಿಂತ ಕಡೆ.

೫೩೩. ಏನೂ ಇಲ್ಲದವ ಯಾವುದಕ್ಕೂ ಹೇಸ.

೫೩೪. ಏರಿಗೆ ನೀರಿನ ಆಶೆ
ನೀರಿಗೆ ಏರಿಯ ಆಶೆ.

೫೩೫. ಏಸು ಕೇಳಿದರೂ ನಾಶ ತಪ್ಪದು.

೫೩೬. ಒಕ್ಕಲಿಗನ ಓಡಾಟ ನಾಯಿ ಒಡನಾಟ.

೫೩೭. ಒಕ್ಕಲ ಮನೆ ಸುಟ್ಟು ಹೋದಮೇಲೆ
ಕಕ್ಕುಲತೆ ಪಟ್ಟು ಪ್ರಯೋಜನವೇನು ?

೫೩೮. ಒಕ್ಕಲಿಗನ ನೆಂಟು ಒಡವೆಗೇಡು.

೫೩೯. ಒಕ್ಕಳ ಹೊನ್ನಿನ ಪರದೇಶಿ.

೫೪೦. ಒಗಟು ಮಾತಿಗೆ ಸಗಾಟ ತಂದ.

೫೪೧. ಒಡಂಬಡಿಕೆಯಿಂದ ಆಗುವದು
ದಡಂಬಡಿಕೆಯಿಂದ ಆದೀತೇ ?

೫೪೨. ಒಡಂಬಡಿಸಿದರೆ ಒಡಲುರಿ ಹೋದೀತೇ ?

೫೪೩. ಒಡಕು ದೋಣಿಗೆ ಗಿಡ್ಡ ಜಲ್ಲು.

೫೪೪. ಒಡಲುರಿ ಒಂದು ಕಡೆ
ಬ್ರಹ್ಮೇತೀ ಕಾಟ ಒಂದು ಕಡೆ.

೫೪೫. ಒಡ್ಡರಲ್ಲಿ ದಡ್ಡನಾಗಬಾರದು.

೫೪೬. ಒಡ್ಡಂತಿ ಮಾಡಿದರೆ ಹೆಡ್ಡತನ ಹೋದೀತೇ ?

೫೪೭. ಒಡ್ಡು ಅರಸಿನ ಒಂಟನ್ ಒಡ್ಡೊಕ್ಕರೇನು ?

೫೪೮. ಒಡೆಯ ಬಂದರೂ ಒಡೆದ ಪಾತ್ರೆ ಕೂಡಲಿಲ್ಲ.

೫೪೯. ಒಡೆಯನ ಕಂಡರೂ ಬಡತನ ಹೋಗಲಿಲ್ಲ.

೫೫೦. ಒಡೆಯನ ಕಂಡ ಮೇಲೆ
ವಡೆ ತಿನ್ನಲಿಕ್ಕೆ ದರಿದ್ರವೇ ?

೫೫೧. ಒಣ ತಿಂಡಿ ತಿಂದರೆ ಬಾಯಿ ಆರುತ್ತದೆ.

೫೫೨. ಒಣಗಿದ ಕಾಡಿಗೆ ಕಿಚ್ಚು ಬಿದ್ದ ಹಾಗೆ.

೫೫೩. ಒಣಗಿದ ಎಲೆ ಉದುರುವಾಗ್ಯೆ
ಹಸಿಯೆಲೆ ನಗಾಡುತ್ತದೆ.

೫೫೪. ಒಪ್ಪಿಲ್ಲದ ಮಾತು ತುಪ್ಪವಿಲ್ಲದ ಊಟ.

೫೫೫. ಒಬ್ಬ ಕೆಟ್ಟರೆ ಹಬ್ಬ ಕೆಟ್ಟೀತೇ ?

೫೫೬. ಒಬ್ಬ ಭೋಗಿ ಆದರೆ ಒಬ್ಬ ಜೋಗಿ.

೫೫೭. ಒಬ್ಬರಿಗೆ ಇಬ್ಬರು ಲೇಸು
ಹಬ್ಬಕ್ಕಿಂತ ಮದುವೆ ಲೇಸು.

೫೫೮. ಒಮ್ಮೆ ನಮ್ಮನೆಯ ಅಕ್ಕಿಯ ಕೊಟ್ಟು
ಅಮ್ಮಾ ನಿಮ್ಮನೆಯ ಪ್ರಸಾದವೇ ?

೫೫೯. ಒರಟನಿಂದ ಹರಟೆ ಉಂಟಾಗುವುದು.

೫೬೦. ಒರಳಲ್ಲಿ ಹರಳು ಹುರಿದರೆ
ಅರಳು ಆದೀತೇ ?

೫೬೧. ಒರಳು ಹೋಗಿ ಮದ್ದಳೇ ಸಂಗಡ ಹೇಳಿದ ಹಾಗೆ.

೫೬೨. ಒರಳಲ್ಲಿ ಕೂತರೆ ಒನಕೆ ಪೆಟ್ಟು ತಪ್ಪೀತೇ ?

೫೬೩. ಒಲಪ್ರಗಾತಿಗೆ ಮನೆಯೆಲ್ಲಾ ಹಿತ್ತಲು.

೫೬೪. ಒಲ್ಲದ ಗಂಡನಿಗೆ *ಮೊಸರಲ್ಲಿ* ಕಲ್ಲು.

೫೬೫. ಒಲಿದರೆ ನಾರಿ, ಮುನಿದರೆ ಮಾರಿ.

೫೬೬. ಒಲ್ಲಿಯಲ್ಲೇ ಮುಂಡಾಸು ಮಾಡು.

೫೬೭. ಒಲೆ ಸೊಟ್ಟಾದರೆ ಬದನೆಕಾಯಿ ಬೇಯದೇ ?

೫೬೮. ಒಲೆ ಊದಲಿಕ್ಕೆ ಹೋಗಿ
ಮೀಸೆಗೆ ಬೆಂಕಿ ತಾಗಿತು.

೫೬೯. ಒಳ್ಳೆಯವರ ಮಾನ ಹಳ್ಳೇಲಿ ಹೋಯಿತು.

೫೭೦. ಒಳ್ಳೇ ಮಾತಿಗೆ ಸುಳ್ಳೇ ಪ್ರಧಾನ.

೫೭೧. ಒಂಟಿ ಮಾರಿ ತಂಟೆ ತೀರಿಸಿದರೂ
ದಂಟ ಕೋಲ ಬಿಡಲಿಲ್ಲ.

೫೭೨. ಒಂಟಿಗನಾದರೂ ತಂಟೆ ಮಾಡೋದು ಬಿಡಲಿಲ್ಲ.

೫೭೩. ಒಂಟಿಗನನ್ನು ನಂಬುವುದು
ಕುಂಟಗಾಲನನ್ನು ನಂಬಿ ಪಯಣ ಮಾಡಿದ ಹಾಗೆ.

೫೭೪. ಒಂಟಿಗೆ ಸೊಂಟವೇನು ? ಕುತ್ತಿಗೆಯೇನು ?

೫೭೫. ಒಂದರಸು ಮತ್ತೊಂದೂರಿಗೆ ಹೋದರೆ
ಕರು ಕಟ್ಟೋ ಗೂಟಕ್ಕಿಂತ ಕಡೆ.

---

* ಬೆಣ್ಣೇಲಿ.

೫೭೬. ಒಂದು ಕೆಂಚಾಯಿತು
ಒಂದು ಮಿಂಚಾಯಿತು
ಮುಂದೆ ಕೂತೆಯಾ ಮುದಿ ಗೂಬೆ ?

೫೭೭. ಒಂದು ಮಳೆಗೆ ಒಂದು ಕೊಡೆ ಹರಿಯಬಾರದು.

೫೭೮. ಒಂದು ಸಿಟ್ಟೆಲಿ ಬಾವಿಲಿ ಬಿದ್ದರೆ
ಏಳು ಸಿಟ್ಟೆನಿಂದ ಏಳತೀರದು.

೫೭೯. ಒಂದು ದಿನ ನೆಂಟ
ಎರಡನೆಯ ದಿನ ಬಂಟ
ಮೂರನೆಯ ದಿನ ಶಂಟ.

೫೮೦. ಓಟಾ ಓಡಿದರೂ ಕಾಟ ತಪ್ಪದು.*

೫೮೧. ಓಡಿ ಸಿಕ್ಕಬೇಡ
ಆಡಿ ತಪ್ಪಬೇಡ.

೫೮೨. ಓಡಿ ಹೋಗುವ ಬಡ್ಡಿ
ಹಾಲಿಗೆ ಹೆಪ್ಪು ಹಾಕ್ಯಾಳೇ.

೫೮೩. ಓಡುವವನ ಕಂಡರೆ ಅಟ್ಟುವವಗೆ ಘನ.

೫೮೪. ಓಡುವವನೂ ಬತ್ತಲೆ
†ಓದಗಿಕೊಂಡು ಹೋಗುವವನೂ ಬತ್ತಲೆ†

೫೮೫. ಓದಿದವನು ಭೇದಾ ತಿಳಿದಾನು.

---

* ನೋಟವಿಲ್ಲದೆ ಓಟಮಾಡಿದರೆ ಕಾಟಾ ತಪ್ಪದು.

† ತರುಬುವವನೂ ಬೆತ್ತಲೆ.

೫೮೬. ಓದಿಯೋದಿ ಮರುಳಾದ ಕೋಚು ಭಟ್ಟ.

೫೮೭. ಓದೋದು ಶಾಸ್ತ್ರ, ಇಕ್ಕೋದು ಗಾಳ.

೫೮೮. ಓಮು ತಿಂದ ಕತ್ತೇ ಹಾಗೆ.

೫೮೯. ಓಮು ತಿಂದರೆ ಕ್ಷಾಮು ಹೋದೀತೇ ?

೫೯೦. ಕಚ್ಚೋ ನಾಯಿ ಬೊಗಳದು
ಬೊಗಳೋ ನಾಯಿ ಕಚ್ಚದು.

೫೯೧. ಕಚ್ಚೋ ನಾಯಿಯ ಮುಂದೆ
ಖಂಡುಗ ಹಾಕಿದ.

೫೯೨. ಕಜ್ಜಿ ಇದ್ದವಗೆ ಲಜ್ಜೆ ಇಲ್ಲ
ಅಜ್ಜಿ ಇದ್ದವಗೆ ಯೋಚನೆ ಇಲ್ಲ.

೫೯೩. ಕಟ್ಟಿದ ಮನೆ ಮೆಟ್ಟಲಿಲ್ಲ
ಅಟ್ಟಿಕೊಂಡು ಬಂದೆಯೋ ಯಮನೇ ?

೫೯೪. ಕಟ್ಟು ಹರಿದ ಪಂಜು.

೫೯೫. ಕಡ ಹುಟ್ಟಿ ಬಡವ ಕೆಟ್ಟ.

೫೯೬. ಕಡ ಸಿಕ್ಕೋದಾದರೆ ಹಡಗ ನನಗಿರಲಿ ಅಂದ.

೫೯೭. ಕಡಗ ಇದ್ದವಳು ಕಡಗೋಲು ಹಿಡಿಯಲಾರಳೇ ?

೫೯೮. ಕಡಿದವನ ಪಾಪ ಖಡ್ಗ ಮಾಡಿದವನಿಗುಂಟೇ ?

೫೯೯. ಕಡ್ಡಿ ಕಂಡುಗ ನೀರ ತರುಬುವುದು.

೬೦೦. ಕಡು ಕೋಪ ಬಂದಾಗ
ತಡಕೊಂಡವನೇ ಜಾಣ.

೬೦೧. ಕಡ್ಲೆಗೆ ಮುಂದು, ಕಡಿವಾಣಕ್ಕೆ ಹಿಂದು.

೬೦೨. ಕಡ್ಲೆಗೆ ಬಾಯಿ ತೆರೆದು
ಕಡಿವಾಣಕ್ಕೆ ಬಾಯಿ ಮುಚ್ಚಿದರೆ ಆದೀತೇ?

೬೦೩. ಕಡ್ಲೆ ಇದ್ದವರಿಗೆ ಹಲ್ಲಿಲ್ಲ
ಹಲ್ಲಿದ್ದವರಿಗೆ ಕಡ್ಲೆ ಇಲ್ಲ.

೬೦೪. ಕಡ್ಲೇ ತಿಂದು ಕೈ ತೊಳದ ಹಾಗೆ.

೬೦೫. ಕಡ್ಲೇ ಸಂಗಡ ರಾಗಿ ಕೂಡಿ ಹುರಿದ ಹಾಗೆ.

೬೦೬. ಕಣ್ಣಾರೆ ಕಂಡರೂ ಪರಾಮ್ಮರಿಸಿ ನೋಡಬೇಕು.

೬೦೭. ಕಣ್ಣಿನಷ್ಟು ಪ್ರಕಾಶವಿಲ್ಲ
ಮಣ್ಣಿನಷ್ಟು ಆಧಾರವಿಲ್ಲ.

೬೦೮. ಕಣ್ಣು ಕೊಂಡು ಹೋದ ದೈವ
ಮತೀ ಕೊಟ್ಟಿತು.

೬೦೯. ಕಣ್ಣು ಕಾಣದ ಹೊಟ್ಟೆಗೆ
ಮಣ್ಣೇನು? ಮಸಿಯೇನು?

೬೧೦. ಕತ್ತಲೇ ಗುದ್ದ್ಯಾಟ.

೬೧೧. ಕತ್ತಿಗೆ ಮೆತ್ತಿದ ಜೇನು.

೬೧೨. ಕತ್ತೀ ಬಾಯಲ್ಲಿದ್ದ ತುಪ್ಪ ನೆಕ್ಕಿ
ನಾಲಿಗೆ ಸೀಳಕೊಂಡ.

೬೧೩. ಕತ್ತೆಯ ಮೊಲೆಯಲ್ಲಿ ಕಂಡುಗ ಹಾಲಿದ್ದರೇನು ?

೬೧೪. ಕತ್ತೆ ಕಂಡುಗ ಹೊತ್ತರೆ
ಸೆಟ್ಟೀತನ ಮಾಡೀತೇ ?

೬೧೫. ಕತ್ತೆ ಕಸ್ತೂರಿ ಹೊತ್ತ ಹಾಗೆ.*

೬೧೬. ಕತ್ತೆಗೆ ಕುದುರೆ ಸೋದರಮಾವನೇ ?

೬೧೭. ಕತ್ತೆಗೆ ಯಾಕೆ ಕಾಲುಕಡಗ ?

೬೧೮. ಕತ್ತೆ ಚಿತ್ರಗಾರನ ಮಿಂಡ
ಹಣ ನೋಟಗಾರನ ಮಿಂಡ
ಟವಣೆ ಶ್ಯಾನುಭೋಗನ ಮಿಂಡ.

೬೧೯. ಕತ್ತೆ ತಪ್ಪಿಸಿ ಕೊಂಡರೆ ಹಾಳುಗೋಡೆ.

೬೨೦. ಕತ್ತೆ ತಿಂದೂ ಹಾಳು, ಹೊರಳಿಯೂ ಹಾಳು.

೬೨೧. ಕತ್ತೆ ಬಲ್ಲುದೆ ಬತ್ತದ ಸುಗ್ಗಿಯ ?

೬೨೨. ಕತ್ತೆ ಬೆಲ್ಲಾ ಹೇತರೆ ಡೊಂಬಗೆ ಯಾಕೆ ಬಿಕ್ಕೆ ?

೬೨೩. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ.

೬೨೪. ಕತ್ತೆ ಮೊಸರನ್ನದ ರುಚಿ ಬಲ್ಲದೇ ?

೬೨೫. ಕತ್ತೆ ಬಲ್ಲುದೆ ಹೊತ್ತ ಕಸ್ತೂರಿಯ ಪರಿಮಳವ ?

೬೨೬. ಕತ್ತೆ ಕುರುಬ ಎಲುಗಳನ್ನು ಕೂಡಿಸಿದ ಹಾಗೆ.

---

* ಕತ್ತೆಗೆ ಭಾಗ್ಯ ಕಸ್ತೂರಿ ಹೊರುವುದೇ ?

೬೨೭. ಕತ್ತೇ ಮೇಲೆ ಅತ್ತೆ ಏರಿದರೆ
ಕೊಡೆ ಹಿಡಿಯಲಿಕ್ಕೆ ಮಾವ ಬರಬೇಕು.

೬೨೮. ಕಥೆ ಕೇಳಿದರೆ ವ್ಯಥೆ ಹೋಗುವುದೇ ?

೬೨೯. ಕಥೆಗೊಂದು ಕಾಲುಂಟೇ ?

೬೩೦. ಕದಾ ತಿಂಬುವನಿಗೆ ಹಪ್ಪಳ ಈಡೇ ?*

೬೩೧. ಕದ್ದು ತಿಂಬುವುದಕ್ಕಿಂತಾ
ಬೇಡಿ ತಿಂಬುವುದು ಲೇಸು†

೬೩೨. ಕದ್ದು ಮದುವೆ ಮಾಡುತ್ತೇನೆ
ಮತ್ತೆ ಬೇಕಾದರೆ ಕೊಲ್ಲು.

೬೩೩. ಕನಕನ ಕವಿತ್ವ ತಿಣಕಿದರೂ ಸಿಕ್ಕದು.

೬೩೪. ಕನಸಿನ ನೆಂಟು ಕನ್ನಡಿಯೊಳಗಣ ಗಂಟು.

೬೩೫. ಕನ್ನ ಇಡುವ ಕಳ್ಳನಿಗೆ ಮನ್ನಿಸಿ ತಂದನಂತೆ.

೬೩೬. ಕನ್ನಂಬಾಡಿಯಲ್ಲಿ ಕಂಬಳೀ ಕಿತ್ತುಕೊಂಡರೆ
ಬಲಮುರಿಯಲ್ಲಿ ಹಲ್ಲುಮುರೀ ಕಚ್ಚಿಕೊಂಡ.

೬೩೭. ಕಪಿಮುಷ್ಟಿ ಹಿಡಿದ ಹಾಗೆ.

೬೩೮. ಕಪೀ ಕುಣಿಸಿ ಕಲ್ಲು ಕರಗಿಸಿದ ಹಾಗೆ.

೬೩೯. ಕಪ್ಪೆ ಕೂಗಿ ಮಳೆ ಬರಿಸಿದಂತೆ.

---

* ಕದ ನುಂಗವವನಿಗೆ ಹಪ್ಪಳ ಲಟಪಟ.

† ಬೇಡಿಕೊಂಡು ತಿನ್ನಬಹುದು
ಕದ್ದುಕೊಂಡು ತಿನ್ನಬಾರದು.

೬೪೦. ಕಪ್ಪೆಯ ತುಲಾಭಾರ ಕೊಟ್ಟ ಹಾಗೆ.

೬೪೧. ಕಪ್ಪೆ ಕೂಗಿದ ಮಾತ್ರಕ್ಕೆ ಕೆರೆ ತುಂಬೀತೇ ?

೬೪೨. ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಅಗ್ಗ ?

೬೪೩. ಕಬ್ಬಿಣದ ಅಂಗಡಿಯಲ್ಲಿ ಕಡ್ಲೆ ಹುಡುಕಿದ ಹಾಗೆ.

೬೪೪. ಕಬ್ಬಿಣದ ಉಳಿಯಾದರೂ ಕೈ ಕಡಿಯದೆ ?

೬೪೫. ಕಬ್ಬಿನ ಹೊಟ್ಟೇಲಿ ಸೂಲಂಗಿ ಹುಟ್ಟಿದ ಹಾಗೆ.

೬೪೬. ಕಬ್ಬಿನ ಮೇಲೆ ಜೇನು ಇಕ್ಕಿದಂತೆ.

೬೪೭. ಕಬ್ಬು ಕೊನೆಯಿಂದ ಮೆದ್ದರೂ
ಬುಡದಿಂದ ಮೆದ್ದರೂ ಸವಿ ಒಂದೇ.

೬೪೮. ಕಬ್ಬು ಡೊಂಕಾದರೆ ಸವಿ ಡೊಂಕೇ ?

೬೪೯. ಕಬ್ಬು ಸೀಯೆಂತ ಬುಡ ಪರಿಯಂತರ ಅಗಿಯಬಾರದು*

೬೫೦. ಕಬ್ಬು ಸೀಯೆಂತ ಬೇರು ನುಂಗಿದರೆ
ದವಡೆ ಹರಿದೀತು.

೬೫೧. ಕಮ್ಮಗೆ ಉಣ್ಣಿಸಿ, ಬಿಮ್ಮಗೆ ಕಟ್ಟಿದ.

೬೫೨. ಕರಕರೇ ದೇವರಿಗೆ ಕಾಯಿ ಹಣ್ಣು.

೬೫೩. ಕರಡಿಗೆ ಕೂದಲು ಯಾವುದು ? ರೋಮ ಯಾವುದು ?

೬೫೪. ಕರಡಿಯ ಕೈಗೆ ಹೆದರದವ
ಕರಿಯ ಕಂಬಳಿಗೆ ಹೆದರ್ಯಾನೇ ?

---

* ಕಬ್ಬು ಸೀಯೆಂದು ಬೇರು ಡರಿಗಲೆ ತಿನ್ನಬಾರದು.

೬೫೫. ಕರದು ಹೆಣ್ಣು ಕೊಟ್ಟರೆ ಮಲನಾಗರು ಹಿಡೀತು.

೬೫೬. ಕರಿಯಾದರೂ ಮರಿಯಾಗಿರದೆ ಬೆಳೆಯದು.

೬೫೭. ಕರಿಯ ಬ್ರಾಹ್ಮಣನ ನಂಬಬಾರದು.
ಬಿಳೀ ಹೊಲೆಯನ ನಂಬಬಾರದು.

೬೫೮. ಕರುಳು ಒಂದಾದರೇನು, ಮರುಳು ಒಂದೋ ?

೬೫೯. ಕರೆದರೆ ಉಂಟು, ತೆರದರೆ ಮುಚ್ಚು
ಸೇರಿದ ಒಡೆಯಗೆ ಎರಡು ಬಗೆಯಬೇಡ.

೬೬೦. ಕರೆಯುವ ಹಸಾ ಕೊಟ್ಟು
ಒದೆಯುವ ಕತ್ತೆ ತಂದ ಹಾಗೆ.

೬೬೧. ಕಲ್ಲನಾದರೂ ಕರಗಿಸಬಹುದು, ಕಪಟಿಯ ಎದೆ ಕರಗದು.

೬೬೨. ಕಲಕಾಲ ದಾಸಯ್ಯನಾದರೆ ತಿರುಮಂತ್ರ ಹೇಳ್ಯಾನು.

೬೬೩. ಕಲ್ಲಲ್ಲಿ ಇಟ್ಟವನ ಬೆಲ್ಲದಲ್ಲಿ ಇಡಬೇಕು.

೬೬೪. ಕಲ್ಲಾದರೇನು ಗುಂಡಾದರೇನು ತಲೆ ಒಡೆಯಲಿಕ್ಕೆ ?

೬೬೫. ಕಲಿತ ಬಡ್ಡಿ ಹಾಡದೆ ಬಿಟ್ಟಾಳೇ ?

೬೬೬. ಕಲ್ಲು ಕರಗಿ ಪಾತ್ರೆ ಆದ ಹಾಗೆ.

೬೬೭. ಕವಡಿಗೆ ಅತ್ತು ಕಣ್ಣು ಕಳಕೊಂಡ.

೬೬೮. ಕವಿ ಕಂಡಷ್ಟು ರವಿ ಕಾಣ.

೬೬೯. ಕಸಾ ಗುಡಿಸು ಅಂದರೆ
ಬಸ ಬಸ ಸುರೀತೋ ?

೬೭೦. ಕಳ್ಳ ಹೊಕ್ಕ ಮನೆಗೆ ಎಣ್ಣೆ ದಂಡ.

೬೭೧. ಕಳ್ಳರಲ್ಲಿ ಕಡು ಕಳ್ಳರು ಹೊಕ್ಕ ಹಾಗೆ.

೬೭೨. ಕಳ್ಳಗೆ ಕಡು ನಾಲಿಗೆ
ಹಾದರಗಿತ್ತಿಗೆ ಹಲವು ನಾಲಿಗೆ.

೬೭೩. ಕಳ್ಳನ ತಾಯಿಯ ಸಂಗಡ
ಕಣಿ ಕೇಳಿದ ಹಾಗೆ.

೬೭೪. ಕಳ್ಳ ಕಳ್ಳಗೆ ನಂಟು
ಹುಳಿ ಮೆಣಸಿಗೆ ನಂಟು.

೬೭೫. ಕಳ್ಳ ಕಳ್ಳಗೆ ಬಲ್ಲ.

೬೭೬. ಕಳ್ಳ ಕಳ್ಳರು ಕೂಡಿ
ಸಂತೇ ಕಟ್ಟಿದ ಹಾಗೆ.

೬೭೭. ಕಳ್ಳಗೆ ಚೇಳು ಬಡಿದ ಹಾಗೆ.

೬೭೮. ಕಳ್ಳಗೆ ಸಂದು ಕೊಟ್ಟು
ಒಡವೆಗೆ ಹುಯ್ಯಲಿಕ್ಕಿದ.

೬೭೯. ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ.

೬೮೦. ಕಳ್ಳನ ಹೆಜ್ಜೇ ಕಳ್ಳನೇ ಬಲ್ಲ.

೬೮೧. ಕಳ್ಳ ಬಂಟ ಒಡೆಯಗೆ ಹಿತ.

೬೮೨. ಕಳ್ಳ ಹೊನ್ನಿಗೆ ದೊಡ್ಡ ಮುದ್ರೆ.

೬೮೩. ಕಳ್ಳನ ನಂಬಿದರೂ ಕುಳ್ಳನ ನಂಬಬಾರದು.

೬೮೪. ಕಳ್ಳತನ ಎಂಬ ಕಾಮಧೇನು ಇರುವಾಗ
ಬೇಡಿ ತಿಂಬುವ ಬಂಡ ಜನ್ಮ ಯಾಕೆ ?

೬೮೫. ಕಾಕು ಮಾತು ಆಡಬೇಡ
ಪೋಕ ವಿದ್ಯೆಗೆ ಹೋಗಬೇಡ.

೬೮೬. ಕಾಗುಣಿತ ಬಾರದವನಿಗೆ ಕಾವ್ಯ ಹೇಳುವುದು ಹ್ಯಾಗೆ ?

೬೮೭. ಕಾಗೆ ಕೋಗಿಲೆಯು ಹಾಗಿದ್ದರೂ
ರಾಗದಲ್ಲಿ ಭೇದವಿಲ್ಲವೇ ?

೬೮೮. ಕಾಗೆ ಕರಿದಾದರೆ ಕೋಗಿಲೆ ಆದೀತೇ ?

೬೮೯. ಕಾಟನಾಯಕನ ಮನೆಗೆ ಕನ್ನಾ ಹಾಕಿದರೆ
ನೇತಾಡುವುದು ಎರಡು ಬಂಗೀ ಚೀಲ.

೬೯೦. ಕಾಡ ಕೋಳಿಗೆ ಮಕರ ಸಂಕ್ರಾಂತಿಯೇ ?

೬೯೧. ಕಾಡಲ್ಲಿ ಹೊಂಬಾಳೆ ಬಯಸಿದ ಹಾಗೆ.

೬೯೨. ಕಾಡಿನಲ್ಲಿ ಹುಲಿ ಕೂಗಿದರೆ
ನಾಡಿನಲ್ಲಿ ಒಕ್ಕಲು ತೆಗೆದರಂತೆ.

೬೯೩. ಕಾಡಿನಲ್ಲಿ ತಿರುಗಿ ಕಟ್ಟಿಗೆ ಇಲ್ಲಾ ಅಂದ ಹಾಗೆ.

೬೯೪. ಕಾಡಿಗೆ ಅತ್ತು ಕಣ್ಣು ಪೋಟಿ ಹೋಯಿತು.

೬೯೫. ಕಾಡುವ ಬ್ರಾಹ್ಮಣನಿಗೆ ನಾರುವ ಉಪ್ಪಿನಕಾಯಿ.

೬೯೬. ಕಾಡು ಬೆಳೆದರೆ ಬೇಡನಿಗೆ ಬಿಡಬೇಕು
ನಾಡು ಸೊಕ್ಕಿದರೆ ಬೇತಾಳನಿಗೆ ಬಿಡಬೇಕು.

೧೯೭. ಕಾಣದ ಮುರವ ಕನಸು ಕಂಡರೆ
ಏಳು ಬಾರಿ ಎದ್ದು ಕೂತ.

೧೯೮. ಕಾದ ಹಾಲು ಕಹಿ ಆದೀತೇ ?

೧೯೯. ಕಾಮನ ಹುಣ್ಣಿಮೆಗೆ ಕಲಕ ನೀರು.

೨೦೦. ಕಾಯಪಾಶ ಬಿಡಿಸಬಹುದು
ಮಾಯಪಾಶ ಬಿಡಿಸ ಕೂಡದು.

೨೦೧. ಕಾರ್ಯ ಬಂದರೆ ಕತ್ತೇ ಕಾಲು ಹಿಡಿಯಬೇಕು.*

೨೦೨. ಕಾರಣವಿಲ್ಲದ ಕಾರ್ಯವಿಲ್ಲ
ಮಾರಣವಿಲ್ಲದ ಮಾಟವಿಲ್ಲ.

೨೦೩. ಕಾರ ಮಳೆ ಬಿದ್ದರೂ ಕಾರ್ಯವಿಲ್ಲ.

೨೦೪. ಕಾಲಕ್ಕೆ ತಕ್ಕ ಕೋಲ.

೨೦೫. ಕಾಲ ಕೆಟ್ಟಿತು, ಕಾಗೆ ರಾಗಿ ತಿಂತು.

೨೦೬. ಕಾಲ ತೊಂತಿದ ಹಾವು ಕಚ್ಚದೆ ಬಿಡದು.

೨೦೭. ಕಾಲಾಟವುಳ್ಳವನಿಗೆ ಕಷಾಯದ ಗಸಣಿಯಾಕೆ ?

೨೦೮. ಕಾಲಿದ್ದವರು ಕಾಸಿಗೆ ಹೋದರೆ
ನೀನೆಲ್ಲಿಗೆ ಹೋದೀ ಕುಂಟ ಮುರವ ?

೨೦೯. ಕಾವಿಲ್ಲದ ಬಾಚಿ ಯಾತಕ್ಕೂ ಬೇಡ.

೨೧೦. ಕಾವು ಕೊಟ್ಟು ನೋವು ಪಡಕೊಂಡ.

---

* ಕಾರ್ಯವಾಸಿಗೆ ಕತ್ತೇ ಕಾಲು ಕಟ್ಟು.

೨೧೧. ಕಾಶಿಗೆ ಹೋಗಿ ತಂಗಿದರೂ
ಕಾಸಿನ ಆಸೆ ಬಿಡಲಿಲ್ಲ.

೨೧೨. ಕಾಶಿಗೆ ಹೋಗಬೇಕಾದರೂ ಕಾಸು ಬೇಕು.

೨೧೩. ಕಾಸಿಗೆ ಒಂದು ಬ್ರಹ್ಮೇತಿ ಅಂದರೆ
ನನಗೆ ಮೂರು ಕಾಸಿಗೆ ಇರಲಿ.

೨೧೪. ಕಾಸಿದ್ದರೆ ಕೈಲಾಸ.

೨೧೫. ಕಾಸು ಬಿಟ್ಟವ ದೇಶ ಬಿಟ್ಟಾನು.

೨೧೬. ಕಾಸು ಇದ್ದರೆ ಕೊಡೆಯಾಲ
ಇಲ್ಲದಿದ್ದರೆ ನಡೆ ಅಲ !

೨೧೭. ಕಾಳು ಭೈರವ ಬಂದರೆ
ಕನಕಾಭಿಷೇಕ ಮಾಡಿಸಬೇಕೋ ?

೨೧೮. ಕಿಚ್ಚಿಗೆ ಅಂಜದವ ಬೂದಿಗೆ ಅಂಜ್ಯಾನೇ ?

೨೧೯. ಕಿಚ್ಚು ನುಂಗುವವ ನುಚ್ಚು ಬಿಟ್ಟಾನೇ ?

೨೨೦. ಕಿಟಕಿಯಿಂದ ನುಸುಳುವವ ಹೆಬ್ಬಾಗಿಲಿನಿಂದ ಬಾರನೇ ?

೨೨೧. ಕಿಟ್ಟದಿಂದ ಹೊಡದು ಲೊಟ್ಟೆ ಹಾಕಿದ.

೨೨೨. ಕಿಡಿಯಿಂದ ಕಾಡು ಸುಡಬಹುದು.

೨೨೩. ಕಿರಿದಿನಲ್ಲೇ ಪಲ್ಲಕ್ಕಿ ಸೇವೆ.

೨೨೪. ಕಿಲಬಿನ ಬಟ್ಟಲಲ್ಲಿ ಹುಳೀಕಲಿಸಿ ಉಣ್ಣಬಹುದೇ ?

೨೨೫. ಕಿವಿ ಕಿತ್ತ ಮೂಳಿ
ಬೇಲಿ ನುಗ್ಗ ಹೆದರುವಳೇ ?

೭೨೬. ಕಿವಿ ಕೇಳದಿದ್ದರೆ ಕೈ ಮೊಗುಚದೇ ?

೭೨೭. ಕಿವುಡ ಕಿಚ್ಚಡಿ ಬೇಡಿದರೆ
ಗವುಡ ಹಚ್ಚಡ ಬೇಡಿದ.

೭೨೮. ಕಿವುಡ ಯಜಮಾನಗೆ ಮೂಗ ಬಂಟ

೭೨೯. ಕಿಸವಾಯ ಕಂಡರೆ ಬಿಡದೇ ಬೇಹಾರ.

೭೩೦. ಕಿಸೆಯಲ್ಲಿ ಆಯುಧವಿದ್ದು
ನಸೆಯೆಂದು ತಿಳಿಯಬಹುದೇ ?

೭೩೧. ಕೀಟ ಸಣ್ಣದಾದರೂ ಕಾಟ ಬಹಳ.

೭೩೨. ಕೀಲು ಸಣ್ಣದಾದರೂ ಗಾಲಿ ನಡಸುತ್ತದೆ.

೭೩೩. ಕೀಳ ಕೆಣಕ ಬೇಡ
ಮೇಗಾಲು ತುರಿಸಬೇಡ.

೭೩೪. ಕೀಳ ಕೆಣಕ ಬೇಡ
ಹಾಳ ಮೆಟ್ಟ ಬೇಡ.

೭೩೫. ಕುಚೇಷ್ಟೆಯಿಲ್ಲದೆ ಪ್ರತಿಷ್ಠೆಬಾರದು.

೭೩೬. ಕುಚೋದ್ಯದ ಅರಸಗೆ
ಕುಲಗೇಡಿ ಪ್ರಧಾನಿ.

೭೩೭. ಕುಜನರ ಸಂಗ ಅಜನಿಗೂ ತಕ್ಕದ್ದಲ್ಲ.

೭೩೮. ಕುಟ್ಟಲಾರದ ಬಡ್ಡಿ ಊದ್ಯೂದಿ ನೋಡಿದಳಂತೆ.

೭೩೯. ಕುಡಿಯುವ ಪಾನಕದಲ್ಲಿ ಕಡ್ಡಿ ಸಿಕ್ಕಿದ ಹಾಗೆ.

೭೪೦. ಕುಡೀ ಕಿತ್ತರೂ ಅಡಿ ಸಾಯುವುದೇ ?

೭೪೧. ಕುಣಿಯಲಾರದ ಬೋಡ್ಡಿ
ನೋಳದವರ ಮೇಲೆ ಬಿದ್ದಾಳು.

೭೪೨. ಕುಣಿ ಅಗಿಸಿದರೆ ರುಣ ತೀರೀತೇ ?

೭೪೩. ಕುಣಿಯಲಿಕ್ಕೆ ತಿಳಿಯದಿದ್ದರೆ
ಅಂಗಳ ಓರೆ ಎಂಬಂತೆ.

೭೪೪. ಕುಣಿಯುವಾಗ ಮುಸುಕೇ ?

೭೪೫. ಕುತ್ತರಿಗೆ ಬೆಂಕಿ ಹತ್ತಲು
ಬತ್ತೇರಿಗೆ ಓಡಿದರೆ ನಂದೀತೇ ?

೭೪೬. ಕುತ್ತಿಗೆ ಕೊಯ್ಯುವ ಊರಲ್ಲಿ
ಸುಲದು ಬಿಟ್ಟದೇ ಗುಣ.

೭೪೭. ಕುದುರೆ ಹಿಂದಿರಬೇಡ
ಅರಮನೆ ಮುಂದಿರಬೇಡ.

೭೪೮. ಕುದುರೆ ಹಿಂದಿರಬೇಡ
ಹಾರುವನ ಮುಂದಿರಬೇಡ.

೭೪೯. ಕುದುರೆಯ ಬಾಲವಿದ್ದರೆ ಲಾಯಕ್ಕೆಲ್ಲಾ ಬೀಸೀತೇ ?

೭೫೦. ಕುಪ್ಪನ ನಂಬಿ ಕೊಳಕೇ ಬಿತ್ತಿದೆ
ಕುಪ್ಪ ಓಡಿ ಹೋದ
ಕೊಳಗೆ ಹೊತ್ತಿ ಹೋಯಿತು.

೭೫೧. ಕುಮಾರ ರಾಮನು ಸೋರೇಕಾಯಿ ತಿಂದ ಹಾಗೆ.

೭೫೨. ಕುರಿ ಕಬ್ಬಿನೊಳು ಪೊಕ್ಕು ಅರಿವದೇ ತನಿರಸವ ?

೨೫೩. ಕುರಿ ಹೆಚ್ಚಿದಷ್ಟು ಕುರುಬಗೆ ಲಾಭ.

೨೫೪. ಕುರಿ ಸತ್ತು ಮೂರು ತಿಂಗಳಾಯಿತು
ತೊಗಲ ಹದಾ ನೋಡೆ.

೨೫೫. ಕುರಿ ಹಿಂಡಿಗೆ ತೋಳ ಹಾರಿದ ಹಾಗೆ.

೨೫೬. ಕುರುಡು ಎತ್ತಿಗೆ ಕರಡವೇ ಕೈಲಾಸ.

೨೫೭. ಕುರುಡ ಕಂಡರಿಯ, ಕಿವುಡ ಕೇಳರಿಯ.

೨೫೮. ಕುರುಡ ಕುದುರೆಗೆ ಹುರಿದ ಹುರುಳಿ.

೨೫೯. ಕುರುಡೀ ಹಾದರಕ್ಕೆ
ಮನೇ ಮಕ್ಕಳೆಲ್ಲಾ ಕೆಲಸ ಕೆಟ್ಟರು.

೨೬೦. ಕುರುಜು ಮೇರುವೆ ಇಲ್ಲ
ನೊರಜುಗಳ ಸ್ವರ ಹೆಚ್ಚು.

೨೬೧. ಕುರುಡ ಕಣ್ಣು ಮುಚ್ಚಿದರೂ ಒಂದೇ
ತೆರೆದರೂ ಒಂದೇ

೨೬೨. ಕುರುಡನ ಹೆಂಡತಿಗೆ ದೈವದ ಕಾವಲು.

೨೬೩. ಕುರುಡಗೆ ಹಗಲೇನು ? ಇರುಳೇನು ?

೨೬೪. ಕುರುಡನ ಕೈಯಲ್ಲಿ ಕನ್ನಡಿ ಕೊಟ್ಟ ಹಾಗೆ.

೨೬೫. ಕುರುಡನಿಗೆ ತರಡಿನ ಮೇಲೆ ಕೈ.

೨೬೬. ಕುರುಡರೊಳಗೆ ಮೆಳ್ಳನೇ ಶ್ರೇಷ್ಠ.

೨೬೭. ಕುರುಡಿಯ ಮದುವೆಯಾದರೆ
ಮನೇ ಗಡಿಗೆಗೆ ಮೂಲ.

೭೬೮. ಕುರಡೀ ಹಾದರವು ಊರಉಬ್ಬಸ.

೭೬೯. ಕುರುಡ ದೂಮಗೆ ಶ್ರೀಮುದ್ರೆ ಸಿಕ್ಕಿದ ಹಾಗೆ.

೭೭೦. ಕುರುಡ ಬಟ್ಟರೇ ನಮಸ್ಕಾರ ಅಂದರೆ
ಕುತಂತ್ರಕ್ಕೆ ಮೂಲವೋ ಅಂದ ಹಾಗೆ.

೭೭೧. ಕುರುಡೇಟು ತರಡು ತಗಲಿತು.

೭೭೨. ಕುರುವಿನಷ್ಟು ನೋವಿಲ್ಲ
ನೋಡ ಬರುವ ನಾರಿಯಿಲ್ಲ.

೭೭೩. ಕುರುಬನ ಕುರಿ ಹೋತ
ಬಾವೀಲಿ ಬಿದ್ದ ಹಾಗೆ.

೭೭೪. ಕುರುಬನ ಮಂದೇ ತೋಳ ಕಾದ ಹಾಗೆ.

೭೭೫. ಕುಲಕ್ಕೆ ತಕ್ಕ ಬುದ್ಧಿ
ಆಹಾರಕ್ಕೆ ತಕ್ಕ ಲದ್ದಿ.

೭೭೬. ಕುಲವನ್ನು ನಾಲಿಗೆ ಹೇಳುವುದು.

೭೭೭. ಕುಲವಿದ್ದರೂ ಮಲ ಹೋಗದು.

೭೭೮. ಕುಲಗೇಡಿಯ ಕೂಡೆ ಸರಸವೇ ?

೭೭೯. ಕುಲಗೋತ್ರಕ್ಕೆ ಕಡಿಮೆ ಆದರೂ
ಮಲಮೂತ್ರಕ್ಕೆ ಕಡಿಮೆ ಇಲ್ಲ.

೭೮೦. ಕುಲ ಪ್ರಮಾಣ ನಾಲಿಗೆ
ಜಲ ಪ್ರಮಾಣ ತಾವರೆ.

೭೮೧. ಕುಲಹೀನನಾದರೂ ವರಹೀನನಾಗಬಾರದು.

೭೮೨. ಕುಳವಾರು ಇಲ್ಲದ ಊರಿಗೆ
ತಳವಾರ ಏನು ಮಾಡ್ಯಾನು ?

೭೮೩. ಕುಳ್ಳನ ಕರೆಯಬಾರದು
ಕಳ್ಳನ ಕರೆಯಬಹುದು.

೭೮೪. ಕೂಗಟೆ ಹುಣ್ಣು ಆದರೆ
ಜಾಗಟೆ ಬಡಿಯುವುದಕ್ಕೆ ಆಗದೇ ?

೭೮೫. ಕೂಗಿ ಹೇಳಿದರೆ ತೂಗುವ ತ್ರಾಸು ಕೇಳುತ್ತದೋ ?

೭೮೬. ಕೂಗುವ ಕೋಳಿಗೆ ಕುಂಡೆ ನೊಂದೀತೇ ?
ಎದ್ದು ರಾಗಿ ಬೀಸುವವಳೇ ಬಲ್ಲಳು !

೭೮೭. ಕೂಡದ ಕೆಲಸಕ್ಕೆ ಮಾಡದ ಅಡಿಗೆ.

೭೮೮. ಕೂತರೂ ನಾತ ಹೋದೀತೇ ?
ಹೇತದ್ದಕ್ಕಿಂತ ಹೆಚ್ಚು !

೭೮೯. ಕೂತು ಉಂಬುವವನಿಗೆ ಕುಡಿಕೇ ಹಣವೂ ಸಾಲದು.

೭೯೦. ಕೂಸು ಕಾಸ ಹಡೆಯದು
ಜೋಗುಳ ಮುಗಿಲು ಮುಟ್ಟದು.

೭೯೧. ಕೂಳ ಚೆಲ್ಲಿದ ಕಡೆ ಸಾವಿರ ಕಾಗೆ.

೭೯೨. ಕೂಳಿಕ್ಕುವವನೇ ಒಡೆಯ
ಕೊಂಡು ಹೋಗುವವನೇ ಜವರಾಯ.

೭೯೩. ಕೂಳಿಗೆ ಹೀನನಾದರೆ ಕುಲಕ್ಕೆ ಹೀನನೇ ?

೨೯೪. ಕೂಳು ತೆಗೆದ ಮೇಲೆ ಬೋಳಿ ಮಗ ಅಂದರೆ
ಕೇಳ್ಯಾನೇ ?

೨೯೫. ಕೆಟ್ಟತನಕ್ಕೆ ಒಪ್ಪಿದವ ಕಟ್ಟನ್ನಕ್ಕೂ ಒಪ್ಪಬೇಕು.

೨೯೬. ಕೆಟ್ಟ ಅಡಿಗೆ ಅಟ್ಟೋಳೆ ಜಾಣೆ.

೨೯೭. ಕೆಟ್ಟ ಗದ್ದೆಗೆ ಮನೇ ನೆಲ್ಲು ಏರ ಹಾಕಿದರು.

೨೯೮. ಕೆಟ್ಟ ಭೂಮಿಗೆ ಮನೇ ದವಸಾ ಕೊಟ್ಟು
ಕೂಲಿ ಮಾಡಿಸಿದ.

೨೯೯. ಕೆಟ್ಟ ಮುಂಡೆ ಕುಲಾ ಸೇರಳು.

೩೦೦. ಕೆಟ್ಟರೂ ಪಟ್ಟಣಾ ಸೇರಬೇಕು.

೩೦೧. ಕೆಟ್ಟವನೆನಿಸಿಕೊಂಡು ನೂರು ವರುಷ ಬಾಳೋದಕ್ಕಿಂತಲೂ
ಒಳ್ಳೆಯವನೆನಿಸಿಕೊಂಡು ಮೂರು ದಿವಸ ಇದ್ದರೆ ಸಾಲದೇ ?

೩೦೨. ಕೆಟ್ಟವರಿಗೂ ಅಳಿದವರಿಗೂ
ಗೊಟ್ಟಕೆರೆ ತವರ ಮನೆ.

೩೦೩. ಕೆಟ್ಟು ನೆಂಟರ ಸೇರಬೇಡ
ಕೊಟ್ಟ ಧರ್ಮಾ ತಿರಿಗಿ ಕೇಳಬೇಡ.

೩೦೪. ಕೆಟ್ಟು ಮುರಿದವರೆಲ್ಲಾ ಹುಚ್ಚರಾಯನ ಗುಡಿ ಸೇರಿ !

೩೦೫. ಕೆಮ್ಮಿನಿಂದ ಹೂಸು ಮರಸಿದ.

೩೦೬. °ಕೆರದ ಅಳತೆಗೆ ಕಾಲು ಕೊಯಿಸಿದ ಹಾಗೆ.

೩೦೭. ಕೆರೆಯೊಡೆದವನ ಕೈಯ್ಯಿಂದ
ಕಂಬಳೀ ಕಿತ್ತುಕೊಂಡ.

---

* ಗೊಂಗಡಿ

೮೦೮. ಕೆರೆಯ ಮುಂದೆ ಅರವಟ್ಟಿಗೆಯೇ ?

೮೦೯. ಕೆಲಸಗಳ್ಳತಿಗೆ ಕೂಸು ಹುಟ್ಟಿದ ಹಾಗೆ.

೮೧೦. ಕೆಲಸವಿಲ್ಲದ ಕುಂಬಾರ
ಮಕ್ಕಳ ಕುಂಡೇ ತಟ್ಟಿದ.*

೮೧೧. ಕೆಲಸಿ ಒಳ್ಳೆಯವನೇ ಸರಿ
ಹೊಲಸಿನಿಂದ ಕುಂಡ್ರ ಕೂಡದು.

೮೧೨. ಕೆಸರಲ್ಲಿ ನಟ್ಟ ಕಂಬದಂತೆ

೮೧೩. ಕೆಸರಿಗೆ ಹರಿಗೋಲು ಬೇಕೇ ?

೮೧೪. ಕೇಡು ಬರುವ ಕಾಲಕ್ಕೆ
ಕೂಡುವುದು ದುರ್ಬುದ್ಧಿ.

೮೧೫. ಕೇಡು ಬರುವ ಕಾಲಕ್ಕೆ
ಪೆಟ್ಟಿಗೆಯಲ್ಲಿ ಇದ್ದರೂ ತಪ್ಪದು.

೮೧೬. ಕೇಡುಗಾಲಕ್ಕೆ ನಾಯಿಮರಿ ಮೊಟ್ಟೆಯಿಕ್ಕಿತು.

೮೧೭. ಕೇಡುಗಾಲಕ್ಕೆ ಬುದ್ಧಿಯಿಲ್ಲ
ಮರಣ ಕಾಲಕ್ಕೆ ಮದ್ದು ಇಲ್ಲ.

೮೧೮. ಕೇಳದ ಕಿವಿ ಊರಿಗೆ ಮಾರಿಯ ತಂತು.

೮೧೯. ಕೇಳುವವರಿಗೆ ಬುದ್ಧಿ, ಹೇಳುವವರಿಗೆ ಸುದ್ದಿ.

೮೨೦. ಕೈಯ್ ಬಾಯ್ ಕಚ್ಚೆ ಇವು ಮೂರು ಸುದ್ದವಾಗಿದ್ದರೆ
ಎತ್ತ ಹೋದರೂ ಭಯವಿಲ್ಲ.

---

* ಕೆಲಸವಿಲ್ಲದ ಬಡಗಿ ಮಕ್ಕಳ ಕುಂಡೆ ಕೆತ್ತಿದ.

೮೨೧. ಕೈಯ್ ತೋರಿಸಿ ಅವಲಕ್ಷಣ ಅನ್ನಿಸಿಕೊಂಡ ಹಾಗೆ.

೮೨೨. ಕೈಯ್ ಬಾಯ್ ಆಡದಿದ್ದರೆ ಯಾರೂ ಬರುವುದಿಲ್ಲ.

೮೨೩. ಕೈಯ್ಯಿಗೆ ಬಂದರೂ ಬಾಯಿಗೆ ಬರಲಿಲ್ಲ.

೮೨೪. ಕೈಯ್ಯಲಿದ್ದರೆ ಗಂಟು, ಭಾವಿಸಿದರೆ ನಂಟು.

೮೨೫. ಕೈಯ್ಲಿದ್ದ ಕಲ್ಲು ಕೊಡೆ
ಮನೆಗೆ ಬಂದರೆ ಬೆಲ್ಲಾ ಕೊಟ್ಟೇಯಾ ?

೮೨೬. ಕೈಯ್ಲಿದ್ದರೆ ಅರ್ಥ
ಹತ್ತರವಿದ್ದರೆ ಹೆಂಡತಿ.

೮೨೭. ಕೈಲಾಸದವರು ಬಲ್ಲರು
ವೈಕುಂಠದವರು ಬಲ್ಲರು.

೮೨೮. ಕೈಯಿ ಕೆಸರಾದರೆ, ಬಾಯಿ ಮೊಸರು.

೮೨೯. ಕೊಟ್ಟಣ ಕುಟ್ಟಿ ಮಿಂಡನ ಸಾಕಿದ ಹಾಗೆ.

೮೩೦. ಕೊಟ್ಟ ದೇವರು ಕೊಂಡು ಹೋದರೆ
ಕುಟ್ಟಿಕೊಂಡು ಅಳೋದು ಯಾಕೆ ?

೮೩೧. ಕೊಟ್ಟ ಸಾಲ ಕೇಳದೆ ಹೋಯಿತು
ಮಾಡಿದ ಆರಂಬ ನೋಡದೆ ಹೋಯಿತು.

೮೩೨. ಕೊಟ್ಟು ಬರುವ ನಿಷ್ಠುರಕ್ಕಿಂತ
ಕೊಡದೇ ಬರುವ ಮುನಿಸು ಲೇಸು.

೮೩೩. ಕೊಟ್ಟು ಕೆಟ್ಟವನಿಲ್ಲ, ತಿರಿದು ಬದುಕಿದವನಿಲ್ಲ.

---

* ಮನೆಗೆ ಬಾ, ಬಿರಿದ ಬಾಳೆ ಹಣ್ಣು ಕೊಡುವೆನು.

೮೩೪. ಕೊಡಲೀ ಕಾವು ಕುಲಕ್ಕೆ ಮೃತ್ಯು.

೮೩೫. ಕೊಡೋದು ಒಂದು ಕಾಸು
ಕೋಣೆ ತುಂಬ ಹಾಸು.

೮೩೬. ಕೊಡೋದು ಕೊಡು
ಆಡೆಗೇ ಮನೆಗೆ ಹೋಗುತ್ತೇನೆ ಎಂಬಂತೆ.

೮೩೭. ಕೊಡೋದು ಒಂದು ಕಾಸು
ಕೆಲಸ ಎರಡು ತಾಸು.

೮೩೮. ಕೊತ್ತಿಯ ಪಾತ್ರ ಒಲೆಯ ಮುಂದೆ.

೮೩೯. ಕೊನೇ ಮೇಲೆ ತಿಂತು
ತಾಳು ಕಡಿದ ಹಾಗೆ.

೮೪೦. ಕೊರಳ ಮಟ್ಟಿಗೂ ಹುಳಿ
ಮುಗಿಲ ಮಟ್ಟಿಗೂ ಹಾಳು ಅಂದಂತೆ.

೮೪೧. ಕೊಸರು ಕೊಟ್ಟು ಬದುಕಿದವರಿಲ್ಲ.
ಮೊಸರು ಮಾರಿ ಕೆಟ್ಟವರಿಲ್ಲ.

೮೪೨. ಕೊಳಚೀ ಮೇಲೆ ಹೆಂಟೆ ಹಾಕಿ
ಮೋರೆ ಮೇಲೆ ಸಿಡಿಸಿಕೊಂಡ.

೮೪೩. ಕೊಳತ ಕುಂಬಳಕಾಯಿಗೆ
ಕೆಟ್ಟ ತೆಂಗಿನಕಾಯಿ.

೮೪೪. ಕೊಳ್ಳೀ ತೆಗೆದುಕೊಂಡು
ತಲೇ ತುರಿಸಿ ಕೊಂಡಂತೆ

೮೪೫. ಕೊಳ್ಳೆಯವರು ಕೊಳ್ಳೆಗತ್ತರು
ಸೂರೆಯವರು ಸೂರೆಗತ್ತರು.

೮೪೬. ಕೋಗಿಲೆಯ ಸುತ್ತಲೂ ಕಾಗೆಗಳು ಕೂಡಿದ ಹಾಗೆ.

೮೪೭. ಕೋಟಿ ವರಹಾ ಕೊಟ್ಟರೂ
ಕೋಮಟಿಯ ಸಾಕ್ಷಿ ನಂಬಕೂಡದು.

೮೪೮. ಕೋಟಿ ಭಾಗ್ಯವು ಇದ್ದವನಾದರೂ
ಕಡೆಗೆ ಕಾಡಿನಲ್ಲೇ ಇರಿಸುತ್ತಾರೆ.

೮೪೯. ಕೋಟೆ ಹೋದ ಮೇಲೆ ಪಹರೆ ಕಾದರು.

೮೫೦. ಕೋಟೆಯ ದೇವರಿಗೆ ಓಟೆಯ ದೀಪ.

೮೫೧. ಕೋಣನ ಮುಂದೆ ಕಿನ್ನರಿ ಬಾರಿಸಿದ.

೮೫೨. ಕೋಣ ಗದ್ದೆ ಉತ್ತರೆ
ಮೊಸರೋಗರಾ ಇಕ್ಕೋರೋ ?

೮೫೩. ಕೋಣ ಬೆಳೆದರೆ ಆನೆ ಆದೀತೇ ?

೮೫೪. ಕೋಣೇಲಿ ಬೆಳಕಿಲ್ಲೆಂದು
ರಾತ್ರೀಲಿ ಕಿಟಕಿ ತೆರೆದನಂತೆ.

೮೫೫. ಕೋತಿಗೆ ಭಂಗಿ ಇಕ್ಕಿದಂತೆ.

೮೫೬. ಕೋತಿ ಕೈಯ್ಯಲ್ಲಿ ಹೂಮಾಲೆ ಕೊಟ್ಟಂತೆ.

೮೫೭. ಕೋಪ ತಾಪ ತಿಂತು, ತಾಪ ಬ್ರಹ್ಮೇತಿ ತಿಂತು.

೮೫೮. ಕೋಮಟಿ ಮೋಸ ಹೋಗುವುದಿಲ್ಲ
ಮೋಸ ಹೋದರೆ ಹೇಳುವುದಿಲ್ಲ.

೮೫೯. ಕೋಲು ಮುರಿಯಬಾರದು
ಹಾವು ಸಾಯಬಾರದು.

೮೬೦. ಕೋವಿ ನೋಡಿ ಹೆದರುವವ
ಫಿರಂಗಿಗೆ ಬೆಂಕಿ ಕೊಟ್ಟಾನೇ ?

೮೬೧. ಕೋಳಿಯಾಗಲಿ ಹೋಳಿಗೆಯಾಗಲಿ
ಪೋಲಿ ಮಾಡುವವಗೆ ಬೇಡೆಂದಿಲ್ಲ.

೮೬೨. ಕೋಳಿ ಕೇಳಿ *ಮೆಣಸು* ಅರಿಯುತ್ತಾರೋ ?

೮೬೩. ಕೋಳಿ ನುಂಗಿದ ಕಲ್ಲಿನ ಹಾಗೆ.

೮೬೪. ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದರೆ
ತಿಪ್ಪೇ ಕೆರೆಯದೆ ಇರುವುದೋ ?

೮೬೫. ಕ್ಷಯರೋಗ ವಾಸಿ ಆಗೋದು ಕಷ್ಟ
ಬರದಲ್ಲಿ ಅನ್ನ ದೊರೆಯುವುದು ಕಷ್ಟ.

೮೬೬. ಕ್ಷಾಮದಲ್ಲಿ ಕ್ಷೋಭೆಗೆ ಕಡಿಮೆಯೇ ?

೮೬೭. ಕ್ಷಾಮ ಕಾಲಕ್ಕೆ ಸಾಮ ಮಾತ್ರ ಲಾಭ.

೮೬೮. ಕ್ಷುದ್ರ ಕೇಳುವವನು ಶೂದ್ರನಿಂದ ಕಡೆ.

೮೬೯. ಕ್ಷೇಮವಿಲ್ಲದಿದ್ದರೂ ಹೇಮದಾಶೆ ಬಿಡ.

---

* ಮಸಾಲೆ.

೮೭೦. ಕ್ಷೌರಕ್ಕೆ ಕೂತಲಿ ಸೀನು ಬಂದ ಹಾಗೆ.

೮೭೧. ಕ್ಷೌರ ಕತ್ತಿ ಚಲೋದು, ಯಾಕೆ ಅಳುತ್ತೀರಮ್ಮ?

೮೭೨. ಕಂಕುಳಲ್ಲಿ ದೊಣ್ಣೆ, ಕೈಯ್ಯಲ್ಲಿ *ಶರಣಾರ್ಥಿ*

೮೭೩. ಕಂಡ ದೇವರಿಗೆಲ್ಲಾ ಕೈ ಮುಗಿದರೂ
ಗಂಡನಿಲ್ಲದೆ ಮಕ್ಕಳಾಗದು.

೮೭೪. ಕಂಡದ್ದಲ್ಲ ಕೇಳಿದ್ದಲ್ಲ, ಗಂಡನ ಸೋದರ.

೮೭೫. ಕಂಡದ್ದು ಮಾತಾಡಿದರೆ ಕೆಂಡದಂಥಾ ಕೋಪ.

೮೭೬. ಕಂಡರೆ ಕಣ್ಣುರಿ, ಕಾಣದಿದ್ದರೆ ಹೊಟ್ಟೆಯುರಿ.

೮೭೭. ಕಂಡರೆ ಕೋಪ, ಕಾಣದಿದ್ದರೆ ತಾಪ.

೮೭೮. ಕಂಡರೆ ಮಣಿ, ಉಂಡರೆ ಗೋಣಿ.

೮೭೯. ಕಂಡರೆ ಸೇರದವಗೆ ಉಂಡರೆ ಸೇರೀತೇ ?

೮೮೦. ಕಂಡರೆ ಸುಂಕ, ಕಾಣದಿದ್ದರೆ ಬಿಂಕ

೮೮೧. ಕಂಡವರ ಕಾಲು ಹಿಡಿದರೂ
ಗಂಡನ ಮನೆಗೆ ಹೋಗೋದು ತಪ್ಪದು.

೮೮೨. ಕಂಡವರ ಮಕ್ಕಳನ್ನ ಬಾವೀಲಿ ದೂಡಿ
ಆಳಾ ನೋಡಿದ ಹಾಗೆ.

೮೮೩. ಕಂಡಕಂಡವರಿಗೆಲ್ಲಾ ಹಲ್ಲು ಕಿರಿದರೂ
ಗಂಡ ಸತ್ತ ಮುಂಡೆಗೆ ಬೋಳಿಸದೆ ಬಿಡರು.

---

* ಸಲಾಮು.

೮೮೪. ಕಂಡುಗ ಉಣ್ಣೋರ ಮನೆಗೆ
ಕಡನ ಯಾರು ಕೊಟ್ಟಾರು ?

೮೮೫. ಕಂಡುಗ ಹಾಲಿಗೆ ಒಂದೇ ಬೊಟ್ಟು ಹೆಪ್ಪು.

೮೮೬. ಕಂಡು ದಣಿದೆಯೋ ? ಉಂಡು ದಣಿದೆಯೋ ?

೮೮೭. ಕಂಬಳಿಯ ಮೇಲೆ ಕಣಿಕಾ ನಾದಿದ.

೮೮೮. ಕಂಬಳಿಯವನ ಹೊಡೆದು ಹಚ್ಚಡದವನ ಹೆದರಿಸಬೇಕು.

೮೮೯. ಕಿಂಚಿತದಲ್ಲಿ ವಂಚನೆ ಏನು ?

೮೯೦. ಕುಂಗಿದ್ದವನನ್ನು ನುಂಗ ನೋಡುವರು.

೮೯೧. ಕುಂಟಗೆ ಎಂಟು ಚೇಷ್ಟೆ
ಕುರುಡಗೆ ಹದಿನಾರು ಚೇಷ್ಟೆ.

೮೯೨. ಕುಂಟಗೆ ಸೊಂಟದಲ್ಲಿ ಪ್ರಾಣ.

೮೯೩. ಕುಂಟನಾದರೂ ಒಂಟಿಯ ಜೋಕೆ ಬಹಳ.

೮೯೪. ಕುಂಟಿಕೊಳ್ಳುತ್ತಾ ತಂಟೆ ತೀರಿಸ್ಯಾನು.

೮೯೫. ಕುಂಟಿತ್ತಿಗೆ ಕೊಳಕನೀರೆ ಪಂಚಾಮೃತ.

೮೯೬. ಕುಂಡಿಗೆ ತೊಣಚಿ ಹೊಕ್ಕ ಹಾಗೆ.

೮೯೭. ಕುಂಡೆಯಿಂದ ಬಂಡೆ ಒಡೆದನಂತೆ.

೮೯೮. ಕುಂಡೆ ಬೆಳೆದರೆ ಗವುಡನಾದನೇ ?

೮೯೯. ಕುಂಡೆ ಬಟ್ಟೆ ಇಟ್ಟದ್ದೇ ಮುಹೂರ್ತ.

೯೦೦. ಕುಂಡೆ ಬಟ್ಟನ ಚಂಡು
ಕಂಡವರಿಗುಂಟು, ಕಾಣದವರಿಗಿಲ್ಲ.

೯೦೧. ಕುಂಡೇ ಮೇಲೆ ಬಡಿದರೆ
ದವಡೇ ಹಲ್ಲು ಉದುರೀತೇ ?

೯೦೨. ಕುಂದಿದವನಾದರೂ ಮಂದನಾಗಿರಬಾರದು.

೯೦೩. ಕುಂಬಳ ಕಾಯಿ ಕಳ್ಳಾ ಅಂದರೆ
ಭುಜಾ ಮುಟ್ಟಿ ನೋಡಿದ ಹಾಗೆ.

೯೦೪. ಕುಂಬಾರನ ಆವಿಗೆಯಲ್ಲಿ ತಾಮ್ರದ
ಚಂಬು ಹುಡುಕಿದ ಹಾಗೆ.

೯೦೫. ಕುಂಬಾರಗೆ ವರುಷ
ದೊಣ್ಣೆಗೆ ನಿಮಿಷ.

೯೦೬. ಕೆಂಡಕ್ಕೆ ಇರುವೆ ಮುತ್ತೀತೇ ?

೯೦೭. ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ.

೯೦೮. ಕೊಂಕುಳಲ್ಲಿ ಕುರು ಸಲ್ಲ
ಕೊಂಕಣಿಗರ ನೆರೆ ಸಲ್ಲ.

೯೦೯. ಕೊಂಡರೆ ಇಲ್ಲ, ಕೊಸರಿದರೆ ಬಂದೀತೇ ?

೯೧೦. ಕೊಂಡ ಹಾಗೆ ಮಾರಿದರೆ
ಉಂಡ ಊಟಕ್ಕೆ ಮಾರ್ಗವೇನು ?

೯೧೧. ಕೊಂಡೋರಿಗೆ ಕೊಟ್ಟೋರಿಗೆ
ಕೋಟಿ ಲಾಭವೆಂಬಂತೆ.

೯೧೨. ಕೊಂದ ಪಾಪಾ ತಿಂದು ಪರಿಹಾರ.

೯೧೩. ಖರ್ಜೂರ ಹಣ್ಣು ಆಗುವಾಗ್ಯೆ
ಕಾಗೇ ಬಾಯಿಗೆ ಹುಣ್ಣು.

೯೧೪. ಗಟ್ಟದ ಉಪ್ಪು, ಬೆಟ್ಟದ ನೆಲ್ಲಿಕಾಯಿ.

೯೧೫. ಗಡ್ಡಕ್ಕೆ ಬೆಂಕಿ ಹತ್ತಿದಾಗ
ಹಪ್ಪಳ ಕಾಸಲಿಕ್ಕೆ ಬಂದ.

೯೧೬. ಗತಿಯಿಲ್ಲದವಗೆ ಮತಿಯಿಲ್ಲ.

೪೧೭. ಗತಿಗೆಟ್ಟ ಮತಿಹೀನನು ಯತಿಯಾಗುವುದುಂಟೇ ?

೯೧೮. ಗದ್ಯಾದ ತೂಕ ಚಿನ್ನವಿದ್ದರೆ
ಗರ್ವ ಮಾಡಬಹುದು.

೯೧೯. ಗದ್ದೆಗೆ ಬಿಟ್ಟ ನೀರೂ, ಪರರಿಗೆ ಕೊಟ್ಟ ಮಾತೂ
ಬೆನ್ನಿಗೆ ಕೊಟ್ಟ ಪೆಟ್ಟೂ ಹಿಂದಕ್ಕೆ ಬಾರದು.

೯೨೦. ಗವುಜಿ ಏನೂ ಇಲ್ಲ
ಗೋವಿಂದಭಟ್ಟ ಬಾವೀಲಿ ಬಿದ್ದ.

೯೨೧. ಗವುಡನ ಹೆಂಡತಿ ಕಡು ಚೆಲ್ವೆಯಾದರೆ
ಕಸದ ಮುಂಕ್ರಿ ಹೊತ್ತು ತಂದಾಗ ಕಂಡೀತು.

೯೨೨. ಗವುಡಿ ಹಾಡಿಗೆ ತವುಡೇ ತ್ಯಾಗ.

೯೨೩. ಗಾಣದೆತ್ತಿಗೆ ಗೆಜ್ಜೆ ಯಾಕೆ
ಗೋಣಿಗೆ ಗವಸಣಿಗೆ ಯಾಕೆ ?

೯೨೪. ಗಾಣಿಗನ ಮನೆಯೆತ್ತು ಒಯ್ಯಬೇಡ
ಪೂಜಾರೀ ಮನೆಯ ಹೆಣ್ಣು ಒಯ್ಯಬೇಡ.

೯೨೫. ಗಾಣಿಗನ ಸ್ನೇಹಕ್ಕಿಂತ
ಗಂಧದ ಹುಡಿಯವನ ಗುದ್ದ್ಯಾಟ ಲೇಸು.

೯೨೬. ಗಾಣಿಗನ ಸಂಗಡ ಕಡದಾಡಿ
ಒಣರೊಟ್ಟಿ ತಿಂದ ಹಾಗೆ.

೯೨೭. ಗಾಣಿಗಿತ್ತಿ ಅಯ್ಯೋ ಅಂದರೆ
ನೆತ್ತಿ ತಣ್ಣಗಾದೀತೇ ? *

೯೨೮. ಗಾದೆ ವೇದಕ್ಕೆ ತಲೆದಿಂಬು.

೯೨೯. ಗಾಳಿಯಿಂದ ಧೂಳು ಹಾರಿದರೆ
ಕೋಳೀ ಹೊಟ್ಟೆ ತುಂಬೀತೇ ?

೯೩೦. ಗಾಳಿಗೆ ಬಿದ್ದ ಅನ್ನ ಪಿಂಡಕ್ಕೆ ಬಾರದು.

೯೩೧. ಗಾಳಿ ಬಂದಾಗ್ಯೆ ತೂರಿಕೊಳ್ಳಬೇಕು

೯೩೨ ಗಾಳಿಗೆ ಗುದ್ದಿ ಮೆಯ್ ನೋಯಿಸಿಕೊಂಡ ಹಾಗೆ.

೯೩೩. ಗಾಳಿ ಮಂಟಪದ ಜೋಗಿಯ ಹಾಗೆ.

೯೩೪. ಗಾಳಿಯನ್ನಾದರೂ ಅಡಗಿಸಬಹುದು
ಗಯ್ಯಾಳೀ ಬಾಯನ್ನು ಅಡಗಿಸಕೂಡದು.

೯೩೫. ಗಿಡನಾಗಿ ಬೊಗ್ಗದ್ದು ಮರನಾದ ಮೇಲೆ ಬೊಗ್ಗೀತೇ ?

---

* ಬೀದೀಲಿ ಹೋಗುವ ಮಕ್ಕಳನ್ನು ನೋಡಿ ಗಾಣಿಗಿತ್ತಿ ಅಯ್ಯೋ ಅಂದರೆ ನೆತ್ತಿ ತಣ್ಣಗಾದೀತೇ ?

೯೩೬. ಗಿಡ ಸುಳ್ಳಾದರೆ ಭಂಗಿತಿಂದು ನೋಡು
ಜ್ಯೋತಿಷ ಸುಳ್ಳಾದರೆ ಗ್ರಹಣ ನೋಡು.

೯೩೭. ಗಿಡ್ಡಾನೆಯಾಳಾದರೆ
ಒಡ್ಡಾನೆಗೆ ಸಮ ಬಂದಾನೇ ?

೯೩೮. ಗಿಳಿಯ ಸಾಕಿ ಬೆಕ್ಕಿಗೆ ಕೊಟ್ಟ ಹಾಗೆ.

೯೩೯. ಗುಟ್ಟು ಬಹಿರಂಗವಾದ ಮೇಲೆ
ಬಹಿಷ್ಕಾರವಾದರೇನು ? ಪ್ರಾಯಶ್ಚಿತ್ತವಾದರೇನು ?

೯೪೦. ಗುಟ್ಟು ಸಾವಿರಾಳ ಪೆಟ್ಟು.

೯೪೧. ಗುತ್ತಿಗೆ ಕೊಟ್ಟು ಹೋಯಿತು
ಸುತ್ತಿಗೆ ಮುಣುಗಿ ಹೋಯಿತು.

೯೪೨. ಗುದ್ದಿದ ಗುದ್ದೂ ಗದ್ದೆಗೆ ಬಿಟ್ಟ ನೀರೂ ಸರಿ.

೯೪೩. ಗುಬ್ಬಿ ಮೇಲೆ ಬ್ರಹ್ಮಾಸ್ತ್ರವೇ ?

೯೪೪. ಗುಬ್ಬಿ ಎಣ್ಣೇ ಕುಡಿದರೆ
ಬೀಸುವ ಕಲ್ಲು ತೋಯಿಸೀತೇ ?

೯೪೫. ಗುಮ್ಮಗಟ್ಟೆ ಜೋಗಿಗಳಂತೆ
ಇರುಳು ಕೂಡುವುದು, ಹಗಲು ಅಗಲುವುದು.

೯೪೬. ಗುರು ಕೊಟ್ಟ ಜೋಳಿಗೆಯೆಂದು
ಗೂಟಕ್ಕೆ ಸಿಗಹಾಕಿದರೆ ಹೊಟ್ಟೆ ತುಂಬೀತೇ ?

೯೪೭. ಗುರುವಿಗೆ ಗುಟುಕುನೀರು
ಶಿಷ್ಯನಿಗೆ ಎಣ್ಣೆ ಮಜ್ಜನ.

೯೪೮. ಗುರುವಿಗೆ ಇರುವೆ ಕಚ್ಚುವುದೇ ?

೯೪೯. ಗುರುವಿಲ್ಲದ ಮಠವಿಲ್ಲ
ಹಿರಿಯರಿಲ್ಲದ ಮನೆಯಿಲ್ಲ.

೯೫೦. ಗುರುವಿನಂತೆ ಶಿಷ್ಯ, ತಂದೆಯಂತೆ ಮಗ.

೯೫೧. ಗೂಳಿ ಬಿದ್ದರೆ ಆಳಿಗೊಂದು ಕಲ್ಲು.

೯೫೨. ಗೆಣೆಗೆ ಗೆಣಸು ಬೇಡ
ಹುಣಿಸೆಗೆ ಹುಳಿ ಬೇಡ.

೯೫೩. ಗೆದ್ದರೆ ಕೈಕಾಲು, ಸೋತರೆ ಕಿವಿಮೂಗು.

೯೫೪. ಗೆದ್ದರೆ ಆಡುವುದಕ್ಕೆ ಬಂದಿದ್ದೆವು
ಸೋತರೆ ನೋಡುವುದಕ್ಕೆ ಬಂದಿದ್ದೆವು ಎಂಬಂತೆ.

೯೫೫. ಗೆದ್ದರೆ ಹಲವರು ಗೆದ್ದರು
ಸೋತರೆ *ಕೊಂಕಣಿಗರ ಗಂಡು ಸೋತ*

೯೫೬. ಗೆದ್ದಲು ಹುತ್ತವಿಕ್ಕೆ ಹಾವಿಗೆ ಮನೆಮಾಡಿತು.

೯೫೭. ಗೇಣುದ್ದ ತಪ್ಪಿದರೆ ಮಾರುದ್ದ ತಪ್ಪುವುದು.

೯೫೮. ಗೊಡ್ಡಿ ಹೆರುವಳೇನು
ಬೊಡ್ಡಿ ಅಳುವಳೇನು ?

೯೫೯. ಗೊಡ್ಡು ಸಾರಿಗೆ ಜಡ್ಡು ತುಪ್ಪ.

೯೬೦. ಗೊಲ್ಲರ ಅರಸಾಗಿ ಮಜ್ಜಿಗೆಗೆ ದರಿದ್ರ.

---

* ಕೋಮಟಿಗರ ಪೋರ ಸೋತ.

೯೬೧. ಗೋಕರ್ಣದ ಕೆಲಸಿಯ ವ್ಯಾಪಾರ.

೯೬೨. ಗೋಡೆ ಬಿದ್ದರೆ ಜಗಲೀ ಮೇಲೆ.

೯೬೩. ಗೋಡೆ ಇದ್ದರೆ ಚಿತ್ರ ಬರೆಯಬಹುದು.

೯೬೪. ಗೋಡೆ ತೊಳದರೆ ಬರಿ ಮಣ್ಣೇ.

೯೬೫. ಗೋಡೆ ಹಾರುವವ ಬೇಲಿ ಹಾರನೇ ?

೯೬೬. ಗೋಣಿ ಬಲ್ಲುದೆ ಎತ್ತಿನ ಆ ದುಃಖವ ?

೯೬೭. ಗೋದಿ ಕಾಯೋ ಮಗನೇ ಅಂದರೆ
ಊಬು ಚುಚ್ಚಿಕೊಂಡ.

೯೬೮. ಗೋಪಾಲ ಬುಟ್ಟಿಯಲ್ಲಿ ಶನೀಶ್ವರ ಹೊಕ್ಕಹಾಗೆ.

೯೬೯. ಗೋಳಿ ಬೇರು ದಾಟದ ಮೇಲೆ ಗೋಪಾಲರಾಯ.

೯೭೦. ಗ್ರಾಮಶಾಂತಿಗೆ ತಳವಾರ ತಲೆ ಬೋಳಿಸಿಕೊಂಡ.

೯೭೧. ಗಂಗಾ ಸ್ನಾನ, ತುಂಗಾ ಪಾನ.

೯೭೨. ಗಂಗಾಧರ ಪಂಡಿತನ ಏಕಮಾತ್ರೆ
ವೈಕುಂಠ ಯಾತ್ರೆ.

೯೭೩ ಗಂಗೆಗೆ ಹೋಗಿ ತೆಂಗಿನ *ಓಟೇ* ತಂದ ಹಾಗೆ.

೯೭೪. ಗಂಗೆಗೆ ಹೋದರೂ ತಂಬಿಗೇ ಮೇಲೆ ಜ್ಞಾನ.

೯೭೫. ಗಂಜಿ ಬಿಸಿಯಾದರೆ ಉಪ್ಪಿನಕಾಯಿ ಕಚ್ಚಿದ ಹಾಗೆ.

---

* ಬುರುಡೆ

೯೭೬. ಗಂಜೀಪು ಆಡೋರಿಗೆ ಗಂಜಿಯೂ ಸಿಕ್ಕದು.

೯೭೭. ಗಂಟು ಪರರ ಕೈಲಿ ಕೊಟ್ಟು
ಸೊಂಟಾ ಮುರಿಸಿಕೊಂಡ.

೯೭೮. ಗಂಟೆಗೆ ಒಂದೇ ಸ್ವರ.

೯೭೯. ಗಂಡಸು ಕೂತು ಕೆಟ್ಟ
ಹೆಂಗಸು ತಿರುಗಿ ಕೆಟ್ಟಳು.

೯೮೦. ಗಂಡ ಪಟ್ಟೇ ಸೀರೆ ತರುತ್ತಾನೆಂದು
ಇದ್ದ ಸೀರೆ ಸುಟ್ಟಳು.

೯೮೧. ಗಂಡನ ಮದಿವೆಯಾದರೂ
ಗಂಜಿ ಬರ ತಪ್ಪದು.

೯೮೨. ಗಂಡನಿಗೆ ಅಗಲಿಕೆ ತೋರಿಸಬೇಡ
ಮಕ್ಕಳಿಗೆ ತೀನಿ ಕಲಿಸಬೇಡ.*

೯೮೩. ಗಂಡನಿಗೆ ಹೆಂಡತಿ, ಒಡೆಯನಿಗೆ ರಾಜ್ಯ.

೯೮೪. ಗಂಡ ಸತ್ತ ಮೇಲೆ ಮುಂಡೆಗೆ ಬುದ್ಧಿ ಬಂತು.

೯೮೫. ಗಂಡ ಇಲ್ಲದ ಗಯ್ಯಾಳಿ
ದಂಡು ಇಲ್ಲದ ಹಾವಳಿ.

೯೮೬. ಗಂಡನಿಗೆ ಬೇಡವಾದರೆ ಗುಂಡುಕಲ್ಲಿಗೂ ಬೇಡ.

೯೮೭. ಗಂಡ ಹೆಂಡಿರ ಜಗಳದಲ್ಲಿ
ಕೂಸು ಗಾಸಿಯಾಯಿತು.

---

* ಗಂಡನಿಗೆ ಗಳಿಕೆ ತೋರಿಸಬೇಡ, ಮಕ್ಕಳಿಗೆ ಸವಿ ಕಲಿಸಬೇಡ.

೯೮೮. ಗಂಡನಿಗೆ ಹಿರಿಯಳು ಮಂಡೋದರಿ.

೯೮೯. ಗುಂಡ ಬಯ್ದರೆ ಹುಚ್ಚು
ಮಿಂಡ ಬಯ್ದರೆ ಮೆಚ್ಚು.

೯೯೦. ಗಂಡು ಹೆತ್ತರೆ ಗವುಡನ ಹೆಸರು
ಹೆಣ್ಣು ಹೆತ್ತರೆ ಹೆಗ್ಗಡಿತಿಯ ಹೆಸರು.

೯೯೧. ಗಂಡು ಮಕ್ಕಳಿಲ್ಲದ ಮುಂಡೆಯ ಮನಸು
ಗುಂಡಿಗಿಂತಾ ಗಟ್ಟಿ.

೯೯೨. ಗಂಧದ ಕೊರಡು ಸಮಗಾರನಲ್ಲಿ ಬಿದ್ದಹಾಗೆ.

೯೯೩. ಗೊಂಬೆಗೆ ಕೈಮುಗಿದರೂ
ನಂಬಿಕೆ ಇರಬೇಕು.

೯೯೪. ಚಕ್ಕಂದದವನಿಗೆ ತಕ್ಕ ಫಲ ಸಿಕ್ಕುವುದು.

೯೯೫. ಚಟ್ಟದಿನ ಬಿಟ್ಟಿಗೂ ಹೋಗಬೇಡ.

೯೯೬. ಚನ್ನಾಗಿದ್ದರೆ ನಂಟರು
ಕೆಟ್ಟರೆ ಸ್ನೇಹಿತರು.

೯೯೭. ಚಪ್ಪರಕ್ಕೆ ಗತಿಯಿಲ್ಲದವ
ಉಪ್ಪರಿಗೆಯನಪೇಕ್ಷಿಸಿದ.

೯೯೮. ಚಲವಾದಿಯ ಸಂಗಡ ಹಟವಾದಿ ಸೇರಿದ ಹಾಗೆ.

೯೯೯. ಚಳಿಗಿಲ್ಲದ ಕಂಬಳಿ ಮಳೇ ಮೇಲೆ ಬಿದ್ದರೇನು
ಮುಳ್ಳಿನ ಮೇಲೆ ಬಿದ್ದರೇನು?

೧೦೦೦. ಚಳಿಗಾಲಕ್ಕಿಂತ ಮಳೆಗಾಲ ವಾಸಿ.

೧೦೦೧. ಚಾಪೆ ಕೆಳಗೆ ಒಬ್ಬ ತೂರಿದರೆ
ಇನ್ನೊಬ್ಬ ರಂಗೋಲಿ ಕೆಳಗೆ ತೂರಿದ.

೧೦೦೨. ಚಾಪೆಯಿರುವಷ್ಟಕ್ಕೇ ಕಾಲು ನೀಡಬೇಕು.

೧೦೦೩. ಚಿಕ್ಕ ಮಡಿಕೆ ಚೊಕ್ಕ ಭೋಜನ.

೧೦೦೪. ಚಿಕ್ಕಪ್ಪ ತಾನೂ ಇಕ್ಕ
ಭಿಕ್ಷೆಯನ್ನೂ ಬೇಡಲೀಸ.

೧೦೦೫. ಚಿಕ್ಕಪ್ಪನಾದರೆ ಮನೆಗೆ ಬಂದು ಕಾಲು ಹಿಡಿದೇನು
ಅಪರಾಧಕ್ಕೆ ದೋತ್ರಾ ಕೊಡಬೇಕು.

೧೦೦೬. ಚಿಕ್ಕ ಮೀನು ಬಂದು ದೊಡ್ಡ ಮೀನ ನುಂಗಿತಂತೆ

೧೦೦೭. ಚಿಕ್ಕಮೆಣಸಿಗೆ ಕಾರ ಹೆಚ್ಚು.

೧೦೦೮. ಚಿನ್ನದ ಚೂರಿ ಎಂದು ಕುತ್ತಿಗೆ ಕುಯಿಸಿಕೊಳ್ಳಬಹುದೇ

೧೦೦೯. ಚಿನ್ನಕ್ಕೂ ಕಬ್ಬಿಣಕ್ಕೂ ಹೆಚ್ಚು ಕಡಿಮೆ ಇಲ್ಲವೇ ?

೧೦೧೦. ಚಿನ್ನದ ತಲೆಯಾದರೂ ಒಡೆಯಲಿಕ್ಕೆ ಕಬ್ಬಿಣವೇ ?

೧೦೧೧. ಚಿನ್ನದ ಹರಿವಾಣವಾದರೂ
ಮಣ್ಣಿನ ಗೋಡೆಗೆ ಒರಗಬೇಕು.

೧೦೧೨. ಚಿನ್ನಿವಾರನ ಮನೇ ನಾಯಿಯಾದರೆ
ನಾಣ್ಯದ ನೋಟಾ ಬಲ್ಲುದೇ ?

---

* ಚಿನ್ನದ ಕಠಾರಿಯೆಂತ, ಹೊಟ್ಟೆ ತಿವಿಕೊಳ್ಳಬಹುದೆ ?

೧೦೧೩. ಚೀ ಅಂದರೆ ತನ್ನ ಭಲಾ ಅಂದರು ಎಂಬಂತೆ.

೧೦೧೪. ಚೀಟಿಪಾಟಿ ಪಡಿಕಾಳಿಗೆ ಸಾಟಿಯೇ ?

೧೦೧೫. ಚೂರಿ ಹದ ಆದರೂ ಗಿಡ ಕಡಿಯಲಾರದು.

೧೦೧೬. ಚೇಳಿಗೆ ಮುತ್ತು ಕೊಟ್ಟ ಹಾಗೆ.

೧೦೧೭. ಚೇಳಿಗೆ ಪಾರುಪತ್ಯ ಕೊಟ್ಟರೆ
ಜಾವಕ್ಕೊಂದು ಸರ್ತಿ ಮುಟ್ಟಿಸಿತು.

೧೦೧೮. ಚೇಳಿನ ಮಂತ್ರವನ್ನರಿಯದವ
ಹಾವಿನ ಹುತ್ತಕ್ಕೆ ಕೈಯ್ಯಾಕಿದ ಹಾಗೆ.

೧೦೧೯. ಚೈತ್ರದಲ್ಲಿ ವೈತ್ರನಾದರೂ
ವೈ ತಗಲಿಸಕೂಡದು.

೧೦೨೦. ಚೋಟು ಕಡಿಮೆ ಅಗಲು ದಾಟಿದ ಹಾಗೆ.

೧೦೨೧. ಚೋಟುದ್ದ ಮಗುವಿಗೆ ಗೇಣುದ್ದ ಕುಲಾವಿ.

೧೦೨೨. ಚೋಟುದ್ದ ಹುಡುಗನಿಗೆ ಮಾರುದ್ದ ಕಂಬಳಿ.

೧೦೨೩. ಚೌಲೋಪನಯನವಾಗದವ ನವಿಲಿಗಿಂತ ಕಡೆ.

೧೦೨೪. ಚಂದವಿದ್ದಲ್ಲಿ ಮುಂದತ್ವವಿರಬಾರದು.

೧೦೨೫. ಚಂಬು ಚರಿಗೆಗೆ ದರಿದ್ರವಾದರೂ
ಹಂಚು ಹುಡಿಗೆ ದರಿದ್ರವಿಲ್ಲ.

೧೦೨೬. ಚಿಂತೆಯುವ ಚಿಂತೆಗೆ ಅತ್ತರೆ
ಕೆಂಚ ತನ್ನ ಗುದಿಗೆಗೆ ಅತ್ತ.

೧೦೨೭. ಚಿಂತೆಯೇ ಮುಪ್ಪು, ಸಂತೋಷವೇ ಯೌವನ.

೧೦೨೮. ಚಿಂದಿಯಾದರೂ ದೊಂದಿಗೆ ಆಗುತ್ತದೆ.

೧೦೨೯. ಜಗದೀಶ್ವರನ ದಯೆ ಇದ್ದರೆ
ಜಗತ್ತೆಲ್ಲಾ ನನ್ನದು.

೧೦೩೦. ಜಗಲೀ ಹಾರದವ ಗಗನಾ ಹಾರ್‍ಯಾನೇ ?

೧೦೩೧. ಜಗಳವಿಲ್ಲದೆ ಜಾವು ಹೊತ್ತಿದ್ದರೆ
ಜಿಗಳೆ ಬಂದು ಕಚ್ಚಿದ ಹಾಗೆ ಆಗುತ್ತದೆ.

೧೦೩೨. ಜಗಳವಿಲ್ಲವೇ ಜಂಗಮಯ್ಯಾ ಅಂದರೆ
ಹರಕುಮುಂಡೆ ಭಿಕ್ಷಾ ನೀಡೆ ಅಂದ.

೧೦೩೩. ಜಗಾ ಹೊರುವವಳಿಗೆ ಮಗು ಭಾರವೇ ?

೧೦೩೪. ಜಗಾ ಜಾಲಿಸುವ ಬಡ್ಡಿ
ಮಗೂ ತೂಗಲಾರಳೋ ?

೧೦೩೫. ಜಟ್ಟಿಯಾದರೂ ತಟ್ಟನೆ ಹಾರಬೇಕು.

೧೦೩೬. ಜಡದವ ನಡೆದು ಬಂದಾನೇ ?

೧೦೩೭. ಜಡೆಯವರನ್ನೂ ಮಡಿಯವರನ್ನೂ ತೊಡಗಬಾರದು.

೧೦೩೮. ಜಡೆ ದೇವರಿಗೆ ನೆಲೆ ಇಲ್ಲ
ಬೋಳ ದೇವರಿಗೆ ನೆಲೆಯುಂಟೇ ?

೧೦೩೯. ಜತನ ವಿದ್ದವಗೆ ಮಥನವಿಲ್ಲ.

೧೦೪೦. ಜನ ಮರುಳೋ ? ಜಾತ್ರೆಮರುಳೋ ?

೧೦೪೧. ಜನ ನೋಡಿ ಬೇಡಬೇಕು
ಜಾಗ ನೋಡಿ ಉಗುಳಬೇಕು.

೧೦೪೨. ಜನಿವಾರ ಹಾಕಿಕೊಂಡಾಕ್ಷಣ ಬ್ರಾಹ್ಮಣನಾದಾನೇ ?

೧೦೪೩. ಜರೆ ಬಂದರೂ ನರೆ ಬರಬಾರದು.

೧೦೪೪. ಜಳ್ಳುಮಾತಿನಿಂದ ಪೊಳ್ಳುಗಳೆಯುತ್ತಾನೆ.

೧೦೪೫. ಜಾಗವಿದ್ದಲ್ಲಿ ತಾಗಬೇಕು.

೧೦೪೬. ಜಾಡಗಿತ್ತಿಯ ಗಂಡನಾದರೂ
ನೇಯ್ದಲ್ಲದೇ ಬಟ್ಟೆಯಾಗದು.

೧೦೪೭. ಜಾಣನಿಗೆ ಊಣೆಯು ಇರಬಾರದು.

೧೦೪೮. ಜಾಣನಿಗೆ ಜಾಣನಿಗೆ ಮೂರು ಹಾದಿ
ಜಾಣನಿಗೆ ಕೋಣನಿಗೆ ಎರಡು ಹಾದಿ
ಕೋಣನಿಗೆ ಕೋಣನಿಗೆ ಒಂದೇ ಹಾದಿ

೧೦೪೯. ಜಾಣನಿಗೆ ಮಾತಿನ ಪೆಟ್ಟು
ಕತ್ತೆಗೆ ಲತ್ತೇ ಪೆಟ್ಟು

೧೦೫೦. ಜಾಣನಿಗೆ ಮೂರು ಕಡೆ
ಹೆಡ್ಡನಿಗೆ ಒಂದೇ ಕಡೆ.

೧೦೫೧. ಜಾಣೆಯಾದರೆ ವೀಣೆ ಬಾರಿಸ್ಯಾಳು.

೧೦೫೨. ಜಾತಕರ್ಮ ಮಾಡಿದವನಿಗೆ ಪಾತಕವಿಲ್ಲವೋ ?

೧೦೫೩. ಜಾತಿಗೆ ಜಾತಿ ಹಗೆ
ನಾಯಿಗೆ ನಾಯಿ ಹಗೆ.

೧೦೫೪. ಜಾತಿಗೆ ತಕ್ಕ ನೀತಿ.

೧೦೫೫. ಜಾತಿಗೆ ತಕ್ಕ ಮಾತು
ತೂತಿಗೆ ತಕ್ಕ ಬೆಣೆ.

೧೦೫೬. ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲ.

೧೦೫೭. ಜಾತಿ ತಪ್ಪಿದರೂ ನೀತಿ ತಪ್ಪಬಾರದು*.

೧೦೫೮. ಜಾತಿ ಬೇರೆಯಾದರೆ ನೀತಿ ಬೇರೆಯೋ ?

೧೦೫೯. ಜಾತೀ ಬಾಯಲ್ಲಿ ಜೂತಿ ಅಂದರೆ
ಆಳಿಗೆ ಒಂದು ದೊಡ್ಡ ತೂಕ.

೧೦೬೦. ಜಾತಿ ಸ್ವಲ್ಪವಾದರೂ ಪಾತಕಕ್ಕೆ ಕಡಿಮೆಯಿಲ್ಲ.

೧೦೬೧. ಜಾತಿಗಾರನ ಮಾತು ಸೀತಲ್ಲಿ ಕಾಣುವುದು.

೧೦೬೨. ಜಾಪಾಳದ ಮಾತ್ರೆಗೆ ನೇಪಾಳಕ್ಕೆ ಹೋಗಬೇಕೋ

೧೦೬೩. ಜಾರ ಚೋರರ ಜಗಳದಿಂದ ಯಜಮಾನಗೆ ಕ್ಷೇಮ.

೧೦೬೪. ಜಾರೆಗೆ ನೀತಿಯಿಲ್ಲ, ಮಾರಿಗೆ ಕರುಣವಿಲ್ಲ.

೧೦೬೫. ಜಾರೇಗುಣ ಮೋರೆಯಿಂದ ಕಾಣುವುದು.

೧೦೬೬. ಜಾಲೀ ಬಿತ್ತಲು ಕಾಲಿಗೆ ಮೂಲ.

---

* ಜಾತಿ ಕೆಟ್ಟರೂ ನೀತಿ ಕೆಡಬಾರದು.

೧೦೬೭. ಜಿಗಣೆ ಉಪದ್ರಾ ನೋಡಲೋ, ಜಟಿ ಹಾವಳಿ ನೋಡಲೋ?

೧೦೬೮. ಜಿಗಿಯುವುದೆಲ್ಲಾ ನುಂಗುವ ಆಸೆಗೆ.

೧೦೬೯. ಜಿಡ್ಡು ತುಪ್ಪಕ್ಕೆ ಮಡ್ಡು ಬಹಳ.

೧೦೭೦. ಜಿನ್ನೆ ದೇವರ ಮನೆಗೆ ಭೈರವ ದೇವರು ಬಂದ ಹಾಗೆ.

೧೦೭೧. ಜೀತಗಾರಗೆ ಯಾತಕ್ಕೆ ಜೀರಿಗೆ ಬೆಲ್ಲ?

೧೦೭೨. ಜೀನನ ಮನಸ್ಸು ಯಾವಾಗ್ಯೂ ಹೀನವೇ ಸರಿ.

೧೦೭೩. ಜೀನಗಾರಗೆ ಸಿಕಲಿಗಾರ ಸಾಕ್ಷಿ.

೧೦೭೪. ಜೀನಸು ಇದ್ದರೂ ಮನಸ್ಸು ಇಲ್ಲ.

೧೦೭೫. ಜೀವಕ್ಕೆ ಸಂಚಕಾರ ಸೀರೆಯ ಸೆರಗು.

೧೦೭೬. ಜೀವದಲ್ಲಿರುವತನಕ ಬದುಕು ಬಾಳು
ಸತ್ತ ಬಳಿಕ ಮಕ್ಕಳ ಪಾಲು.

೧೦೭೭. ಜುಟ್ಟಿನ ಮೇಲೆ ವಿಷ ಇಲ್ಲ
ರಂಡೇ ಮೇಲೆ ಬಯ್ಗಳಿಲ್ಲ.

೧೦೭೮. ಜುಟ್ಟು ಇದ್ದರೆ ಮಟ್ಟು ತಿಳಿದೀತು.

೧೦೭೯. ಜುಟ್ಟು ಇದ್ದವ ನೆಟ್ಟಗೆ ಸಿಕ್ಕ್ಯಾನು.

೧೦೮೦. ಜುಣುಗುವವನ ಸಂಗಡ ಹೆಣಗಬಾರದು.

೧೦೮೧. ಜುಮ್ಮುಗಾರಗೆ ಹಮ್ಮು ಹೆಚ್ಚು.

೧೦೮೨. ಜೂಜಾಡುವವಗೆ ಜಂಗಮನ ಸುದ್ದಿ ಯಾಕೆ?

೧೦೮೩. ಜೂಜಾಡುವವಗೆ ಸತ್ಯವು ಯಾಕೆ ?

೧೦೮೪. ಜೇಡಿ ಮಣ್ಣು ಜಡಿದರೆ ಸಕ್ಕರೆ ಆಗುವುದ್ಯೋ ?

೧೦೮೫. ಜೇನು ಸವಿಯೆಂತ ಮೇಣ ಸಹಾ ತಿಂದ ಹಾಗೆ.

೧೦೮೬. ಜೇನು ಹುಳು ಕಚ್ಚುವಾಗ್ಯೆ
ಮೂನಿ ಅಂದರೆ ಬಿಟ್ಟೀತೇ ?

೧೦೮೭. ಜೊತೆ ಬಿಟ್ಟರೂ ವ್ಯಥೆ ಬಿಡಲಿಲ್ಲ.

೧೦೮೮. ಜೊತೆಗಾರನ ಸಂಗಡ ಮಥನಿಸಬಾರದು.

೧೦೮೯. ಜೊತೆಗಾರನು ಹೋಗಿ ವ್ಯಥೆ ಆರಂಭಿಸಿತು.

೧೦೯೦. ಜೋಗಿ ಜೋಗಿ ತಬ್ಬಿಕೊಂಡರೆ
ಮೆಯ್ಯೆಲ್ಲಾ ಬೂದಿ.

೧೦೯೧. ಜೋಗಿ ಜೋಗಿ ತಟ್ಟ್ಯಾಡಿದರೆ
ಬುರಡೆ ಬುರಡೆ ತಟ್ಟ್ಯಾಡಿತು.

೧೦೯೨. ಜೋಗುಳದಿಂದ ತೊಟ್ಲು ಆಡುವುದೋ ?

೧೦೯೩. ಜೋ ಜೋ ಅಂದರೆ ಜ್ಞಾನವಂತೆಯೋ ?

೧೦೯೪. ಜೋಡು ಇದ್ದರೆ ನಾಡು ತಿರುಗಬಹುದು.

೧೦೯೫. ಜೋಡು ಬಿಟ್ಟು ಹೋಯಿತು
ಹಾಡು ಮುಗಿದು ಹೋಯಿತು.

೧೦೯೬. ಜೋಲಿಗಾರನ ಬೇಲಿ ಮುರಿದರೆ
ಹೊಲವೆಲ್ಲಾ ಜಾಲಿ.

೧೦೯೭. ಜೋಲುವವನ ಕಾಲು ಹಿಡಿದರೆ
ಸಾಲ ತೀರೀತೇ ?

೧೦೯೮. ಜೋಳ ಹೊಸದಾದರೆ ಮುತ್ತು ಆದೀತೇ ?

೧೦೯೯. ಜೋಳಾ ತಿಂದಾಕ್ಷಣ ಚೋಳ ಕಾಣುವುದೋ ?

೧೧೦೦. ಜ್ಞಾನವಂತಗೆ ಸ್ನಾನ ಯಾಕೆ.

೧೧೦೧. ಜ್ಞಾನಿ ಬಂದರೆ ಮನ್ನಿಸು
ಹೀನ ಬಂದರೆ ತ್ಯಜಿಸು.

೧೧೦೨. ಜ್ಞಾಪಕವಿದ್ದವನು ಭಾಪು ಎನ್ನಿಸುವನು.

೧೧೦೩. ಜ್ಯೋತಿ ಇದ್ದಲ್ಲಿ ಭೀತಿಯಿಲ್ಲ.

೧೧೦೪. ಜ್ಯೋತಿ ಬಣ್ಣದವರ ಪೇಟೆಯಲ್ಲಿ
ಜೂತಿ ಮಾರುವುದುಂಟೋ ?

೧೧೦೫. ಜಂಗಮಕ್ಕೆ ಕುಲವಿಲ್ಲ, ಗಂಗೆಗೆ ಹೊಲೆಯಿಲ್ಲ.

೧೧೦೬. ಜಂಗಮನ ಹೆಂಡತಿ ಜಾಣೆಯಾದರೆ
ಜಗಕ್ಕೆ ಬಂದ ಭಾಗ್ಯವೇನು ?

೧೧೦೭. ಜಂಗಮನಿಗೆ ಯಾಕೆ ಜನಿವಾರ
ಹಾರುವನಿಗೆ ಯಾಕೆ ವ್ಯಾಪಾರ ?

೧೧೦೮. ಜಂಜಾಟ ತಪ್ಪಿದರೆ ಆತನಡ್ಡಿ ಏನು ?

೧೧೦೯. ಜಂಪಾಸೆಟ್ಟಿ ಜಾಡೀ ತಾರೋ ಅಂದರೆ
ಜಲ ಪ್ರಮಾಣವೆಷ್ಟು ಅಂದಹಾಗೆ.

೧೧೧೦. ಜಂಬ ಮಾಡಿ ಜಾತ್ರೆಗೆ ಹೋದರೆ
ಕಿಸೆಯಲ್ಲಿ ಒಂದು ಕಾಸು ಇಲ್ಲ.

೧೧೧೧. ಜಂಬರದವನಿಗೆ ತಂಬೂರವೋ ?

೧೧೧೨. ಟಕ್ಕನಲ್ಲವೆಂತ ಫಕ್ಕನೆ ಹೋಗಲು
ನೆಗಪಿ ನೆಲಕ್ಕೆ ಇಕ್ಕಿದ.

೧೧೧೩. ಟಕ್ಕು ಇರುವವಗೆ ಟಿಕಾಣಿ ಸಿಕ್ಕದು.

೧೧೧೪. ಟವಣೆಯೆಂಬುದು ಕವಣೆಯ ಕಲ್ಲೋ ?

೧೧೧೫. ಟವಳಿಗಾರನ ಮೈಮೇಲೆ ಗವುಳಿ ಬಿತ್ತು.

೧೧೧೬. ಟವಳಿಗಾರನ ಹತ್ತಿರ ಧರ್ಮವುಂಟೋ ?

೧೧೧೭. ಟೊಣಪೆ ಶಾಸ್ತ್ರಕ್ಕೆ ಹೆಣಗೋದೇ ಅರ್ಥ.

೧೧೧೮. ಟೊಳ್ಳು ಮಾತು ಸುಳ್ಳಿಗಿಂತ ಕಡೆ.

೧೧೧೯. ಟಂಗು ಹರಿಯಿತು, *ಕಾಲು*ಮುರಿಯಿತು

೧೧೨೦. ಟೆಂಟೇ ಬೋಳ ಮದನ ಗೋಪಾಲ.

೧೧೨೧. ಟೊಂಕ ಮುರಿದರೂ ಬಿಂಕ ಮುರಿಯಲ್ಲ.

೧೧೨೨. ಟೊಣ್ಣೆಯಾದರೆ ಮಣ್ಣು ಕೆಲಸ ಮಾಡ್ಯಾಳು.

೧೧೨೩. ಠಾಣೆಗಾರಗೆ ನಾಣ್ಯ ಕೊಟ್ಟವನೇ ಜಾಣ.

* ಕೋಲು.

೧೧೨೪. ಠಿಕಾಣೆಯಿಲ್ಲದವ ಮುಖಾ ಮುಚ್ಚಿಹೋದ.

೧೧೨೫. ಠೀವಿಯಿಂದ ನೋವು ಮುಚ್ಚಿಕೊಂಡ.

೧೧೨೬. ಡವಾರದ ಶಬ್ದಕ್ಕೆ ಕೈಕಾಲು ಬಿಟ್ಟ.

೧೧೨೭. ಡಂಗುರಾ ಹೊಡೆದರೆ ಹೊಂಗರಕನ ಮರ ಕೇಳೀತೋ ?

೧೧೨೮. ಡೊಂಕಾದರೆ ಸುಂಕಾ ಬಿಟ್ಟಾನೇ !

೧೧೨೯. ತಕ್ಕವನಲ್ಲಿ ಹೊಕ್ಕಿದ್ದರೆ
ತಕ್ಕಷ್ಟು ಆದರೂ ಸಿಕ್ಕುವುದು.

೧೧೩೦. ತಕ್ಕಡಿ ಬಲ್ಲದೇ ಮನೆಯ ಬಡತನವ ?

೧೧೩೧. ತಕ್ಕಡೀ ಸ್ವರೂಪಾ ತಕ್ಕವನೇ ಬಲ್ಲ.

೧೧೩೨. ತಕ್ರ ಶಕ್ರನಿಗೆ ಸಹಾ ದುರ್ಲಭ.

೧೧೩೩. ತಗಲಿದವನಿಗೆ ಹಗಲಿರುಳೇನು ?

೧೧೩೪. ತಗಲುಗಾರನಿಗೆ ಬಗಲ ಮೇಲೆ ಜ್ಞಾನ.

೧೧೩೫. ತಗ್ಗಿದವ ಎಂದಿಗೂ ನುಗ್ಗಾಗ.

೧೧೩೬. ತಗ್ಗು ದವಸಕ್ಕಾಗಿ ಹಗ್ಗಾ ಕೊಂಡ ಹಾಗೆ.

೧೧೩೭. ತಗ್ಗು ಗದ್ದೆಗೆ ಮೂರು ಬೆಳೆ
ಎತ್ತರದ ಗದ್ದೆಗೆ ಒಂದೇ ಬೆಳೆ.

೧೧೩೮. ತಟಕಿನಿಂದ ತಟಪಟವಾಯಿತು

೧೧೩೯. ತಟಕು ಬಿದ್ದು ಮಠಾ ಕೆಡಿಸಿತು.

೧೧೪೦. ತಟಸ್ಥನಾದವನಿಗೆ ತಂಟೆಯೇನು ?

೧೧೪೧. ತಟದಲ್ಲಾಗಲೀ ಮಠದಲ್ಲಾಗಲೀ
ಹಟದ ಜಂಗಮನ ಕಾಟ ತಪ್ಪುವುದಿಲ್ಲ.

೧೧೪೨. ತಟ್ಟನೆ ಆಡಿದರೆ ಕೊಟ್ಟಷ್ಟು ಫಲ.

೧೧೪೩. ತಟ್ಟನೆ ಬಾ ಎಂದರೆ ತುಟೀ ಬಿಟ್ಟನಂತೆ.

೧೧೪೪. ತಟ್ಟೆ ಬಯಿಸಿಕೊಂಡರೂ
ತಟ್ಟೇ ಹುಳಿ ಚೆನ್ನಾಗಿದೆ.

೧೧೪೫. ತಟ್ಟು ಇದ್ದರೆ ತಟಾಯಿಸಿ ನಡದಾನು.

೧೧೪೬. ತಡವಿದರೆ ಮಡಿ ಸಹಾ ಕೆಡುವುದು.

೧೧೪೭. ತಡವ ಮಾಡುವವನ ಗೊಡವೆ ಬೇಡ.

೧೧೪೮. ತಡೇ ಕಟ್ಟುವವನ ಮುಂದೆ ಮಡಿಯೇನು ?

೧೧೪೯. ತಣ್ಣಗಿದ್ದರೆ ಮಣ್ಣಾದರೂ ಅಸಾಧ್ಯ.

೧೧೫೦. ತಣ್ಣೀರು ಆದರೂ ಪುಣ್ಯದಿಂದ ದೊರಕಬೇಕು.

೧೧೫೧. ತತ್ರಬಿತ್ರಿಯವನ ಮುಂದೆ ಕತ್ರಿಯ ಹಾಗೆ ಆದ.

೧೧೫೨. ತನಗೆ ಇಲ್ಲದ ಮಾರಿ
ತಮ್ಮಡಿಗೆ ವರಾ ಕೊಟ್ಟೇತೇ ?

೧೧೫೩. ತನಗೆ ಬಂದ ಹಾನಿ ಅರ್ಥದಿಂದ ಹೋಯಿತು.

೧೧೫೪. ತನಗೆ ಇಲ್ಲದವನು *ಪರರಿಗೇನು* ಕೊಟ್ಟಾನು ?

೧೧೫೫. ತನಗೆ ಇಲ್ಲ, ಕೂಸಿಗೆ ಏನು ಹೊದ್ದಿಸಲಿ ?

೧೧೫೬. ತನ್ನ ಮರ್ಯಾದೆ ಕೆಟ್ಟವ
ಪರರ ಮರ್ಯಾದೆ ಕೊಟ್ಟಾನೇ ?

೧೧೫೭. ತನ್ನ ನೆರಳು ತಾ ಕಂಡು
ನರಳುವವ ಮರುಳನಲ್ಲವೇ ?

೧೧೫೮. ತನ್ನ ಕಾಲಿಗೆ ತಾನೇ ಶರಣುಮಾಡಿ
ಹರಸಿಕೊಂಡ ಹಾಗೆ.

೧೧೫೯. ತನ್ನ ಅಕ್ಕನ ಅರಿಯದವಳು
ನೆರಮನೆಯ ಬೊಮ್ಮಕ್ಕನ ಬಲ್ಲಳೇ ?

೧೧೬೦. ತನ್ನ ತಾನರಿದರೆ ಸುಜ್ಞಾನಿ.

೧೧೬೧. ತನ್ನ ದಂತಾ ತಾ ಮುರಕೊಂಡು
ಅನ್ಯರ ಮೇಲೆ ದೂರು ಹೇಳಿದ.

೧೧೬೨. ತನ್ನ ಮನೆ ಉಪ್ಪು ಇಲ್ಲ
ಬೆನ್ನ ಹಿಂದೆ ಉರಿಯೋ ?

೧೧೬೩. ತನ್ನ ಸುಖವೇ ಲೋಕದ ಸುಖ
ತನ್ನ ಕಷ್ಟವೇ ಲೋಕದ ಕಷ್ಟ.

೧೧೬೪. ತನ್ನ ಹೊಟ್ಟೇ ತಾನು ಹೊರೆಯದವ
ಮುನ್ನಾರ ಸಲಹುವನು ?

---

* ಮಂದಿಗೆ.

೧೧೬೫. ತನ್ನ ಊರಿಗೆ ರಂಗ
ಪರರ ಊರಿಗೆ ಮಂಗ.

೧೧೬೬. ತನ್ನ ತಾನು ಅರಿತರೆ ತಾನಾದನು
ತನ್ನ ತಾನು ಮರೆತರೆ ತಾನು ಹೋದಾನು.

೧೧೬೭. ತನುವರಿಯದ ನೋವಿಲ್ಲ, ಮನವರಿಯದ ತಾಪವಿಲ್ಲ.

೧೧೬೮. ತಪಸ್ಸಿಗೆಂತ ಹೋಗಿ ಕುಪ್ಪಸಾ ಕಳಕೊಂಡ.

೧೧೬೯. ತಪಸ್ಸು ಇದ್ದವನೇ ಗಭಸ್ತಿ ಉಳ್ಳವನು.

೧೧೭೦. ತಪ್ಪನೆ ಬಾ ಅಂದರೆ
ತಬ್ಬಲಿಕ್ಕೆ ಬಂದ ಹಾಗೆ.

೧೧೭೧. ತಪ್ಪಲೇಲಿ ಇದ್ದದ್ದು ಹೋದರೆ
ಕಪಾಲದಲ್ಲಿ ಇದ್ದದ್ದು ಹೋದೀತೇ ?

೧೧೭೨. ತಪ್ಪಿ ಬಿದ್ದವನಿಗೆ ತೆಪ್ಪ ಏನು ಮಾಡೀತು ?

೧೧೭೩. ತಪ್ಪಿದ್ದವಗೆ ಒಪ್ಪಲಿಲ್ಲ.

೧೧೭೪. ತಪ್ಪು ಹೊರಿಸಿದವನಿಗೆ ಒಪ್ಪುವವನು ಯಾರು ?

೧೧೭೫. ತಫಾವತುಗಾರ ತಪ್ಪಿದರೆ
ತಿಪ್ಪಯ್ಯಗೆ ಏನು ಕೋಪ ?

೧೧೭೬. ತಬ್ಬಲಿ ತಬಕು ಕದ್ದು
ಜಗಲೀಲಿ ಸಿಕ್ಕಿಬಿದ್ದ.

೧೧೭೭. ತಬ್ಬಲಿ ತಲೆ ಬೋಳಿಸಿಕೊಂಡರೆ
ಆನೆಕಲ್ಲು ಮಳೆ ಬಂತು.

೧೧೭೮. ತಬ್ಬಲಿಯಾದವನು ಬೊಬ್ಬೆ ಹಾಕಿ
ಹೆಬ್ಬುಲಿಯನ್ನು ಓಡಿಸ್ಯಾನೇ ?

೧೧೭೯. ತಮ್ಮ ಕುಲಕ್ಕೆ ತಾವು ಅಯ್ಯರು
ಪರರ ಕುಲಕ್ಕೆ ನೂರಾ ಅಯ್ಯರು.

೧೧೮೦. ತಮ್ಮ ಒಳ್ಳೆಯವನೇ ಸರಿ
ಒಮ್ಮಾನಕ್ಕೆಗೆ ಮಾರ್ಗವಿಲ್ಲ.

೧೧೮೧. ತಮ್ಮ ನಮ್ಮವನಾದರೂ ನಾದಿನಿ ನಮ್ಮವಳಲ್ಲ.

೧೧೮೨. ತಮ್ಮನ ಸಂಗಡ ತಂಗಿಯ ಗಂಡ
ದೂರು ಹೇಳಿದರೆ ನಿನಗೇನಪ್ಪ ?

೧೧೮೩. ತಮ್ಮನ ಸಂಗಡ ತಿಮ್ಮ ಬಂದರೆ
ತಂಗಳನ್ನವೇ ಗತಿ.

೧೧೮೪. ತರವಲ್ಲದ ಮಾತು ಮರಾ ಏರಿದರೂ ಆದೀತೇ ?

೧೧೮೫. ತರತರವಾಗಿ ಹೇಳಿದ್ದು
ಮರೆತರೆ ಮರಕ್ಕಿಂತ ಕಡೆ.

೧೧೮೬. ತರಹರಿಸಲಾರದವಳು ಮರಣಕ್ಕೆ ಪಾತ್ರಳು.

೧೧೮೭. ತರಬಲ್ಲವನ ಹೆಂಡತಿ ಅಡಜಾಣೆ.

೧೧೮೮. ತರಲಿಲ್ಲ ಬರಲಿಲ್ಲ, ಬರಹ್ಯಾಗೆ ಹಿಂಗೀತು ?

೧೧೮೯. ತರಗು ತಿಂಬುವುದೇ ಪರಮಸುಖ.

೧೧೯೦. ತರಗು ತಿಂಬುವನಿಗೆ ಒರಗೊಂದು ಕೇಡು.

೧೧೯೧. ತರಗು ತಿನ್ನುವವನ ಮನೆಗೆ ಹಪ್ಪಳಕ್ಕೆ ಹೋದರು.

೧೧೯೨. ತರಗು ಮೊರದಲ್ಲಿ ಹಿಡಿಯದು.

೧೧೯೩. ತರಗು ಲಡ್ಡಿಗೆಗೆ ಡೊಳ್ಳು ಗಣಪತಿಯೇ ಶ್ರೇಷ್ಠ.

೧೧೯೪. ತರಗೆಲೆಯಡಿಕೆ ತಿರಿದು ತಿನ್ನಬೇಕೇ ?

೧೧೯೫. ತರುವವ ಮರತರೆ ಮೊರ ಏನು ಮಾಡೀತು ?

೧೧೯೬. ತರುವವ ಹೋದಮೇಲೆ ಮರುಗುವುದುಂಟೇ ?

೧೧೯೭. ತರುಬಿದವಗೂ ಓಡಿದವಗೂ ಸರಿಪಾಲು ಕಷ್ಟ.

೧೧೯೮. ತರುಬಿ ಹೋಗುವನ್ನ ಕರುಬಿ ಮಾಡುವುದೇನು ?

೧೧೯೯. ತರುಬಿಲ್ಲದ ಒಡ್ಡನು, ಬಿರಿಸಿಲ್ಲದ ಹುರಿಯು.

೧೨೦೦. ತರುಬು ಇದ್ದರೆ ಹರುಬು ನಿಂತೀತೇ ?

೧೨೦೧. ತರ್ಕ ಮಾಡುವವ ಮೂರ್ಖನಿಂದ ಕಡೆ.

೧೨೦೨. ತರ್ಲೆ ಕೇಳುವವ ಮರುಳಿಗಿಂತ ಕಡೆ.

೧೨೦೩. ತಲೆಗೆ ಎಣ್ಣೆ ಇಲ್ಲ
ತನು ಮೃಗನಾಭಿ ಬೇಡಿತು.

೧೨೦೪. ತಲೆ ಗಟ್ಟಿ ಎಂದು ಕಲ್ಲು ಹಾಯಬಾರದು.

೧೨೦೫. ತಲೆ ಚೆನ್ನಾಗಿದ್ದರೆ ಮುಂಡಾಸು ಸಹಸ್ರ ಕಟ್ಟಬಹುದು.

೧೨೦೬. ತಲೆ ತಾಗಿದ್ದಲ್ಲದೆ ಬುದ್ಧಿ ಬಾರದು.

೧೨೦೭. ತಲೆ ಹೋಗುವುದಕ್ಕೆ ಕಾಲು ಹೊಣೆಯಾದ ಹಾಗೆ.

೧೨೦೮. ತಲೇ ಒಡೆದವನೂ ಸಮ
ಲೇಪಾ ಹಚ್ಚಿದವನೂ ಸಮ.

೧೨೦೯. ತಲೇ ಮೂರು ಸುತ್ತು ತಿರುಗಿದರೂ
ತುತ್ತು ಬಾಯಿಲೇ.

೧೨೧೦. ತಲೆಗೆ ಒಂದು ಕಡ್ಡಿ ಆದರೆ
ಒಂದು ತಲೆಯು ಹೊರೆ.

೧೨೧೧. ತಲೇ ಮೇಲಣ ಬರಹ
ಎಲೆಯಿಂದ ಒರಸಿದರೆ ಹೋದೀತೇ ?

೧೨೧೨. ತಲೇ ಸಿಡತಕ್ಕೆ ಮಲಶೋಧನೇ ಕೊಂಡ ಹಾಗೆ.

೧೨೧೩. ತಲೇ ಕೂದಲಿದ್ದರೆ ಎತ್ತ ಬೇಕಾದರೂ
ತುರುಬು ಹಾಕಿಕೊಳ್ಳಬಹುದು.

೧೨೧೪. ತಲೇ ಕೂದಲಿಲ್ಲದವಳು ತುರುಬು ಬಯಸಿದಳಂತೆ.

೧೨೧೫. ತಲೇ ಕೂದಲು ಉದ್ದವಿದ್ದವಳು
ಹ್ಯಾಗೆ ಕಟ್ಟಿದರೂ ಚಂದ.

೧೨೧೬. ತಲೇ ಕೂದಲು ನೆರೆಯಾದ ಮೇಲೆ
ತಬ್ಬಿಕೊಂಡ ತಬ್ಬಲಿ ಮುರವ.

೧೨೧೭. ತವಕಪಟ್ಟವ ತಬ್ಬರಿಸಿ ಬಿದ್ದ.

೧೨೧೮. ತವಡು ತಿಂಬುವವನಿಗೆ ವಯ್ಯಾರ ಯಾಕೆ ?

೧೨೧೯. ತವಡು ತಿಂಬುವವ ಹೋದರೆ
ಉಮ್ಮಿ ತಿಂಬುವವ ಬರುತ್ತಾನೆ.

೧೨೨೦. ತವುಡು ತಿಂದರೂ ಮುರುಕು ಘನ.

೧೨೨೧. ತಳವಾರನಿಗೆ ಪಟ್ಟ ಕಟ್ಟಿದರೆ
ಕುಳವಾರು ಹೋದೀತೋ ?

೧೨೨೨. ತಲಾ ಬಿಟ್ಟು ಬಂಡಿ ಹಾರದು.

೧೨೨೩. ತಳಿಗೆ ಚಂಬು ಹೋದಮೇಲೆ
ಮಳಿಗೇ ಬಾಗಿಲು ಮುಚ್ಚಿದ ಹಾಗೆ.

೧೨೨೪. ತಾ ಕಳ್ಳನಾದರೆ ಪರರ ನಂಬ.

೧೨೨೫. ತಾ ಕಳ್ಳಿ ಪರರ ನಂಬಳು
ಹಾದರಗಿತ್ತಿ ಗಂಡನ ನಂಬಳು.

೧೨೨೬. ತಾ ಕಾಣದ ದೇವರು ಪೂಜಾರಿಗೆ ವರಾ ಕೊಟ್ಟೀತೇ ?

೧೨೨೭. ತಾಗದೆ ಬಾಗದು, ಬಿಸಿಯಾಗದೆ ಬೆಣ್ಣೆ ಕರಗದು.

೧೨೨೮. ತಾಟುಗಾರನು ಆಟಕ್ಕೆ ಹೋಗಿ
ವೋಟಗಾರನಾಗಿ ಬಿದ್ದ.

೧೨೨೯. ತಾತಾಚಾರ್ಯರ ಮನೆಗೆ ಏನಪ್ಪಣೇ ?

೧೨೩೦. ತಾನಾಗಿ ಬೀಳುವ ಮರಕ್ಕೆ ಕೊಡಲಿ ಹಾಕಿದ ಹಾಗೆ.

೧೨೩೧. ತಾನುಂಟೋ ? ಮೂರು ಲೋಕ ಉಂಟೋ ?

೧೨೩೨. ತಾನು ಕೋಡಗ, ಪರರನ್ನು ಅಣಕಿಸಿತು.

೧೨೩೩. ತಾನು ನೆಟ್ಟ ಬೀಳು ತನ್ನ ಎದೆಗೆ ಹಬ್ಬಿತು.

೧೨೩೪. ತಾನು ಜಾರಿಬಿದ್ದು, ಉಣ್ಣೆಯಂತ ನೆಲ ಅಂದ.

೧೨೩೫. ತಾನು ತಿಂಬೋದು ಪಲ್ಲೇ ಸೊಪ್ಪು
ಹಿರೇ ಕುದುರೆ ಜೇಷ್ಟೆ.

೧೨೩೬. ತಾನು ಬಾಳಲಾರದೆ ವಿಧಿಯ ಬಯ್ದಂತೆ.

೧೨೩೭. ತಾನು ಗರ್ತಿ ಆದರೆ, ಸೂಳೆಗೇರಿಯಲ್ಲಿ ಮನೆಕಟ್ಟು.

೧೨೩೮. ತಾನು ಸಾಯಬೇಕು
ಸ್ವರ್ಗಾ ಪಡೆಯಬೇಕು.

೧೨೩೯. ತಾನು ಹೋದರೆ ಮಜ್ಜಿಗೆ ಇಲ್ಲ
ಹೇಳಿ ಕಳಿಸಿದರೆ ಮೊಸರು ಕೊಟ್ಟಾರೇ ?

೧೨೪೦. ತಾನೂ ಕುಡಿಯ. ಕುಡಿಯುವವನಿಗೂ ಬಿಡ.

೧೨೪೧. ತಾನೊಂದೆಣಿಸಿದರೆ ದೈವವೊಂದೆಣಿಸಿತು.

೧೨೪೨. ತಾಪತ್ರಯದವನಿಗೆ ತಾಪೆ ಯಾಕೆ ?

೧೨೪೩. ತಾಯಂತೆ ಕರು, ನಾಯಂತೆ ಬಾಲ.

೧೨೪೪. ತಾಯಂತೆ ಮಕ್ಕಳು, ನೂಲಂತೆ ಸ್ಯಾಲೆ.

೧೨೪೫. ತಾಯಿಗಿಂತ ಹಿತವಂತರು ಇಲ್ಲ
ಸಕ್ಕರೆಗಿಂತ ಸವಿ ಇಲ್ಲ.†

೧೨೪೬. ತಾಯಿಯಿದ್ದರೆ ತವರು ಮನೆ
ನೀರಿದ್ದರೆ ಕೆರೆ ಬಾವಿ.

---

* ಮೊಸರಿಗೆ ಚೀಟು.

† ತಾಯಿಗಿಂತಾ ಬಂಧುವಿಲ್ಲ
ಉಪ್ಪಿಗಿಂತಾ ರುಚಿಯಿಲ್ಲ.

೧೨೪೭. ತಾಯಿಲ್ಲದ ತವರು, ಕಾಟಕರಿದ್ದ ಅಡವಿ.

೧೨೪೮. ತಾಯಿ ಒಂದಾದರೂ ಬಾಯಿ ಬೇರೆ.

೧೨೪೯. ತಾಯಿ ಕಲಿಸಿದ ಊಟ
ತಂದೆ ಕಲಿಸಿದ ಬುದ್ಧಿ.

೧೨೫೦. ತಾಯಿ ಮಾಡಿದ ಹೊಟ್ಟೆ
ಊರು ಮಾಡಿದ ಕೊಳಗ.

೧೨೫೧. ತಾಯಿಯ ಹತ್ತಿರ ತರ್ಕವಲ್ಲ
ಗುರುವಿನ ಹತ್ತಿರ ವಿದ್ಯೆಯಲ್ಲ.

೧೨೫೨. ತಾಯಿಗೆ ಕಂಡರೆ ತಲೆನೋವು.

೧೨೫೩. ತಾಯಿಗೆ ಕುಲವಿದ್ದರೆ ಅಷ್ಟೆ ಮಗಳಿಗೆ ಕುಲ.

೧೨೫೪. ತಾಯಿಗೆ ಸೇರದ್ದು ನಾಯಿಗೂ ಸೇರದು.

೧೨೫೫. ತಾಯಿ ಬೇಕು, ಇಲ್ಲವೆ ಬಾಯಿಬೇಕು.

೧೨೫೬. ತಾಯಿ ಮಾರಿಯಾದರೆ ತರಳನು ಎಲ್ಲಿ ಹೋದಾನು ?

೧೨೫೭. ತಾಯಾನ ನೋಡಿ ಮಗಳನ್ನು ತಕ್ಕೋ
ಹಾಲನ್ನು ನೋಡಿ ಎಮ್ಮೆಯನ್ನು ತಕ್ಕೋ.

೧೨೫೮. ತಾರಕ್ಕೆ ಮೂರು ಸೇರು ಉಪ್ಪಾದರೂ
ತರುವುದಕ್ಕೆ ಗತಿ ಬೇಡವೋ ?

೧೨೫೯. ತಾರಕ್ಕೊಂದು ಸೀರೆಯಾದರೂ
ನಾಯಿ ತಿಕ ಬೆತ್ತಲೆ.

೧೨೬೦. ತಾರತಮ್ಯವರಿಯದವ ದೊರೆಯಲ್ಲ
ಮಾತು ಮೀರಿದವ ಸೇವಕನಲ್ಲ.

೧೨೬೧. ತಾರು ಮಾರು ಮಾಡುವವನಿಗೆ
ಯಾರು ತಾನೆ ನಂಬ್ಯಾರು ?

೧೨೬೨. ತಾರೇ ಮರದ ಕಾಯಾದರೂ ಕರದರೆ ಬಂದೀತೇ ?

೧೨೬೩. ತಾರೇ ಬಡ್ಡಿ ನೀರಾ ಎಂದರೆ
ತರುವೆನು ನಿಲ್ಲೊ ತಿರುಕ ಮುರವ.

೧೨೬೪. ತಾವು ಮಾಡುವುದು ಗಂಧರ್ವರು ಮಾಡಿದರು.

೧೨೬೫. ತಾಸಿನ ಗೊತ್ತು ದಾಸಿಗೆ ತಿಳಿದೀತೇ ?

೧೨೬೬. ತಾಸಿಗೊಂದು ಕೂಸು ಹೆತ್ತರೆ
ಈಸೀಸು ಮುತ್ತು.

೧೨೬೭. ತಾಸಿನ ಬಟ್ಟಲು ನೀರು ಕುಡಿದರೆ
ತಾಸಿಗೆ ಕೊಡತೀ ಪೆಟ್ಟು.

೧೨೬೮. ತಾಳ ತಪ್ಪಿದರೆ ಕುಣಿಯೋದು ತಪ್ಪುವುದಿಲ್ಲ.

೧೨೬೯. ತಾಳದಲ್ಲಿ ಜಾಣನಾದರೆ ತಾಳಿಕೆ ಇದ್ದೀತೇ ?

೧೨೭೦. ತಾಳಲಾರದ ವಿರಹ ತಿಣಿಕಿದರೆ ಹೋದೀತೇ ?

೧೨೭೧. ತಾಳಿಕೆಯುಳ್ಳವನಲ್ಲಿ ಕೇಳಿದರೆ ಕಾಳು ಸಿಕ್ಕುವುದು.

೧೨೭೨. ತಾಳಿದವ ಬಾಳ್ಯಾನು.

೧೨೭೩. ತಾಳು ಬಡಿದರೆ ಕಾಳು ಸಿಕ್ಕೀತೇ ?

೧೨೭೪. ತಾಳೆಮರ ಉದ್ದವಾದರೆ ಕೋಳಿಗೆ ಬಂದದ್ದೇನು ?

೧೨೭೫. ತಾಳೆಮರ ದೊಡ್ಡದಾದರೂ
ತಾಳೆ ಹೂವಿಗೆ ಸರಿಯಾದೀತೇ ?

೧೨೭೬. ತಾಳೆ ಹಣ್ಣು ತಾನೇ ಬಿದ್ದರೂ
ಬಾಳದ ಮುರವಗೆ ಬಾಯಿ ಮುಚ್ಚಿತು.

೧೨೭೭. ತಾಳೆ ಇದ್ದ ಪುರುಷನಲ್ಲಿ
ಬೀಳುಬಿದ್ದರೆ ಬಾಳ್ಯಾನು.

೧೨೭೮. ತಾಳೆ ಹೂ ಶಿವನಿಗೆ ಆಗದು
ಸಂಪಿಗೆಯ ಹೂ ಸಾಲಿಗ್ರಾಮಕೆ ಆಗದು.

೧೨೭೯. ತಿಕ ಮುಖ ಒಂದೇ ತಿಪ್ಪಾಭಟ್ಟರಿಗೆ.

೧೨೮೦. ತಿಗಳ ತಾ ಕೆಡುತ್ತಾ ಏಳು ನೆರೇ ಕೆಡಿಸಿದ.

೧೨೮೧. ತಿಗಳಗಿತ್ತಿಯ ಬಾಯಿ ಕೆಣಕ ಬೇಡ
ಬಗಳೊ ನಾಯಿ ಬಡಿಯ ಬೇಡ.

೧೨೮೨. ತಿಗುಳ ತುತ್ತಿಗೆ ತತ್ವಾರವಾದರೂ
ನೆತ್ತಿತುಂಬಾ ನಾಮಕ್ಕೆ ಕಡಿಮೆ ಇಲ್ಲ.

೧೨೮೩. ತಿಪ್ಪಯ್ಯಗೆ ಸೂಜಿ ಮೇಲು
ಕಳ್ಳಗೆ ಬಾಯಿ ಮೇಲು.

೧೨೮೪. ತಿಪ್ಪೆಯ ಮೇಲೆ ಕುಂಡ್ರುವವಗೆ ತಕ್ಯಯಾತಕ್ಕೆ ?

೧೨೮೫. ತಿಪ್ಪೇ ಮೇಲಣ ಅರಿವೆಯಾದರೂ
ಕಾಲಿಗೆ ಕಟ್ಟಿದರೆ ಬಿರುದು.

೧೨೮೬. ತಿಪ್ಪೇ ಮೇಲಣ ದೀಪ ಉಪ್ಪರಿಗೆಯ ಮೇಲೆ ಬಂದೀತೋ?

೧೨೮೭. ತಿಪ್ಪೇ ಮೇಲೆ ಮಲಗಿ
ಉಪ್ಪರಿಗೇ ಕನಸು ಕಂಡ ಹಾಗೆ.

೧೨೮೮. ತಿಪ್ಪೇ ಮೇಲೆಯೇ ಮುಪ್ಪಾದ ಕುಂಬಾರ ತಿಪ್ಪ.

೧೨೮೯. ತಿಮರು ತುರಿಸಿದರೆ ಅರಸಿನ ಹಾಗೆ.

೧೨೯೦. ತಿರಿದುಂಬುವುದಕ್ಕೆ ಬೀದಿ ಹಂಚಿಕೊಂಡ ಹಾಗೆ.

೧೨೯೧. ತಿರಿತಿರಿಗೆ ಗೋಕರ್ಣಕ್ಕೆ ಹೋಗಿ
ತುರುಕನಿಂದ ದೆಬ್ಬೆ ತಿಂದ.

೧೨೯೨. ತಿರಿತಿರಿಗಿ ತಿಮ್ಮಪ್ಪನ ಹತ್ತರ ಹೋದರೆ
ತಿರಿದುಂಬೋದು ತಪ್ಪೀತೇ?

೧೨೯೩. ತಿರಿದುಂಬುವ ಬಟ್ಟ ದಕ್ಷಿಣೆಯಾದರೂ ಬಿಟ್ಟಾನು
ಭೋಜನ ಸಿಕ್ಕಿದರೆ ಬಿಡಲೊಲ್ಲ.

೧೨೯೪. ತಿರಿಕೆಯ ಕೂಳು ತಿಂದು
ಹರಿಕೆಯ ಕೋಣನಾದ.

೧೨೯೫. ತಿರಿಚಿನಾಪಳ್ಳಿಗೆ ತಿರಿದುಂಬೋದಕ್ಕೆ
ಇಲ್ಲಿಂದ ಕೈ ಸವರಿಸಬೇಕೇ?

೧೨೯೬. ತಿರುಪತಿ ಕ್ಷೌರಿಕರು ತಲೆ ಬೋಳಿಸಿದ ಹಾಗೆ.

೧೨೯೭. ತಿರುಮಲ ದೇವರಿಗೆ ಹೋಗಿ
ಮಲಮೂತ್ರಾ ಬಯಸಿಕೊಂಡ.

೧೨೯೮. ತಿರುಕಗೆ ಎರಕೊಂಡದೇ ಹಬ್ಬ.

೧೨೯೯. ತಿರುಕನ ಬಳಿಗೆ ತಿರುಕ ಹೋದರೆ
ಮರುಕ ತಾ ಬರುವುದೇ ?

೧೩೦೦. ತಿರುಕನಿಗೆ ಮುರುಕು ಇದ್ದಾಗ್ಯೂ
ತಿರಿದುಂಬುವುದು ತಪ್ಪದು.

೧೩೦೧. ತಿರುಪದ ಪುಟ್ಟಿಯಲ್ಲಿ ಶನೀಶ್ವರ ಕೂತ.

೧೩೦೨. ತಿರುಪಿನಂತೆ ಇರಬೇಕು ತಿಳಿದವ.

೧೩೦೩. ತಿರುಳು ತಿಂದರೂ ಮರುಳು ಹೋಗಲಿಲ್ಲ.

೧೩೦೪. ತಿರುಳು ಹೋಗಿ ಬೆಂಡು ಉಳೀತು.

೧೩೦೫. ತಿರೋಕಲ್ಲು ಗಾಳಿಯಿಂದ ಹಾರುವುದೋ ?

೧೩೦೬. ತಿರೋಕಲ್ಲು ಮಳೇಲಿ ಬಿದ್ದರೆ
ಮರಕ್ಕಿಂತಾ ಕಡೆಯಾದೀತೇ ?

೧೩೦೭. ತಿವಿಕೊಂಡರೆ ಬಂದೀತೇ ತಿಮ್ಮಪ್ಪನ ದಯೆ ?

೧೩೦೮. ತಿಳಿದ ಕಳ್ಳ ತಿರಿಗಿದರೂ ಬಿಡ.

೧೩೦೯. ತಿಳಿದವನಾದರೂ ಮಲಮೂತ್ರ ಬಿಟ್ಟೀತೇ ?

೧೩೧೦. ತಿಳಿದವ ಮಾಡ್ಯಾನು ನಳಪಾಕವ.

೧೩೧೧. ತಿಳಿದು ಒಡ್ಡೋ ತೀರು ಬಾಣವ.

೧೩೧೨. ತಿಳಿಯಕ್ಕಿಲ್ಲ ನೋಡಕ್ಕಿಲ್ಲ, ಹುಚ್ಚ ಮೂಕನ ಆಟ.

೧೩೧೩. ತೀಟಿ ಆದರೆ ತಾನೇ ಬರುತ್ತಾನೆ.

೧೩೧೪. ತೀಟಿಗೆ ಮಕ್ಕಳ ಹೆತ್ತು
ತಿರುಮಲ ದೇವರ ಹೆಸರಿಟ್ಟ ಹಾಂಗೆ.

೧೩೧೫. ತೀಡಿದರೂ ನೋಡನು ಅಂಧಕನು ರೂಪವ.

೧೩೧೬. ತೀರಕ್ಕೆ ಬಂದ ಮೇಲೆ ತೆರೆಯ ಭಯವೇ ?

೧೩೧೭. ತೀರದಲ್ಲಿರುವ ಮರಕ್ಕೆ ನೀರು ಯಾತಕ್ಕೇ ?

೧೩೧೮. ತೀರದ ಕಾರ್ಯ ಹಾರಿದರೂ ಆಗದು.

೧೩೧೯. ತೀರಿದ ಅಡಿಗೆ ತಿರಿಗಿ ಬಯಸಿದರೆ ಬಂದೀತೆ ?

೧೩೨೦. ತೀರ್ಥಕ್ಕಿಂತ ಶ್ರೇಷ್ಠವಿಲ್ಲ
ಪಾರ್ಥಗಿಂತ ದೊರೆಯಿಲ್ಲ.

೧೩೨೧. ತುಕಡಿಯಿಲ್ಲದವಗೆ ತಕ್ಕಡಿ ಯಾಕೆ ?

೧೩೨೨. ತುಕ್ಕು ಹಿಡಿದ ಖಡ್ಗ ನಿಕ್ಕಿದವನಿಗೂ ಆಗದು.

೧೩೨೩. ತುಕ್ಕಡಿಯಲ್ಲಿ ತುಕ್ಕಡಿದಾರ ಸೇರಿ
ತುಕ್ಕಡಿಯೆಲ್ಲ ಸುಡಿಸಿದ.

೧೩೨೪. ತುಚ್ಛನ ಸಂಗಡ ಬಾಳೋದಕ್ಕಿಂತಲೂ
ಹುಚ್ಚನ ಸಂಗಡ ಬಾಳೋದು ಲೇಸು.

೧೩೨೫. ತುಚ್ಛ ಮಾತು ಆಡುವವನು ಹುಚ್ಚಗಿಂತ ಕಡೆ.

೧೩೨೬. ತುಟಿ ಮೀರಿದ ಹಲ್ಲು
ತುಟಾರದ ಮಾತು ಸರಿಮಾಡಲಾಸ.

೧೩೨೭. ತುಟಿಗೆ ತುಪ್ಪವಿಲ್ಲ, ಕಟಿಗೆ ಪಂಚಾರ್ತಿ ಬಯಸಿದ ಹಾ

೧೩೨೮. ತುಟಿ ಸುಮ್ಮನಿದ್ದರೂ ಹೊಟ್ಟೆ ಸುಮ್ಮನಿರದು.

೧೩೨೯. ತುಟೀ ಕಟ್ಟಿದ ಮೇಲೆ ಮಠದ ಭೋಜನ ಯಾಕೆ?

೧೩೩೦. ತುಟೀ ಮೀರಿದ ಹಲ್ಲು
ಮಠಾ ಮೀರಿದ ಕಂಬ.

೧೩೩೧. ತುಟೀ ಮೇಲೆ ದೀಪ ಹಚ್ಚಿದ ಹಾಗೆ.

೧೩೩೨. ತುಟ್ಟಿಯಾದಾಗ ಕೊಟ್ಟರೆ ಬಟ್ಟಗಾದ.

೧೩೩೩. ತುಣ್ಣೆಯುಂಡರೂ ತುರಕರ ಸಹವಾಸ ಬೇಡ.

೧೩೩೪. ತುತೂರಿಯೂದಿದರೆ ಕುಪಟ ಬಂದೀತೇ ?

೧೩೩೫. ತುತೂರೀ ಧ್ವನಿ ಕೇಳಿ
ತುರಿಸಿಕೊಂಡು ಓಡಿಹೋದ.

೧೩೩೬. ತುತ್ತು ತೂಕಾ ಕೆಡಿಸಿತು.

೧೩೩೭. ತುತ್ತು ಹೆತ್ತ ತಾಯಿಯಾನ ಮರಸಿತು.

೧೩೩೮. ತುತ್ತು ಕೈಗೆ ಬಂದರೂ ಮತ್ತೆ ಬಾಯಿಗಿಲ್ಲ.

೧೩೩೯. ತುತ್ತು ಸಿಕ್ಕಿದರೆ ತೊತ್ತು ಆಗಿದ್ದಾಳು.

೧೩೪೦. ತುತ್ತು ತುತ್ತಿಗೆ ಬ್ರಹ್ಮಾರ್ಪಣವೋ ?

೧೩೪೧. ತುತ್ತು ಮುಕ್ಕಿಕೊಂಡು ಮಾಯಿಕವಾಯಿತೆಂದ.

೧೩೪೨. ತುದಿಯಲ್ಲಿ ಕಾಣುವುದು ಮದುವೇ ಗುಣ.

೧೩೪೩. ತುದಿಯಲ್ಲಿ ಇದ್ದವ ಎಂದಿದ್ದರೂ ಕೆಳಗೆ.

೧೩೪೪. ತುಪಾಕೀ ಹೊಟ್ಟೇಲಿ ಪಿರಂಗಿ ಹುಟ್ಟದ ಹಾಗೆ.

೧೩೪೫. ತುಫಾನು ಬಂದ ಮೇಲೆ
ತಬ್ಬಿಕೊಂಡರೆ ಆದೀತೇ ?

೧೩೪೬. ತುಪ್ಪ ಅನ್ನ ಉಣ್ಣಲಿಕ್ಕೆ ನಾಯಿಯುಚ್ಚೇಲಿ ಕೈ ತೊಳಸಿದ.

೧೩೪೭. ತುಪ್ಪದಂಥ ಮಾತಿಗೆ ಒಪ್ಪಿಕೊಂಡು
ತಿಪ್ಪೇ ಪಾಲಾದ.

೧೩೪೮. ತುಪ್ಪಕ್ಕೆ ಮುಪ್ಪು ಬಂದರೆ ಸಂದು ಕೂಡಿಸುತ್ತದೆ
ಮನುಷ್ಯನಿಗೆ ಮುಪ್ಪು ಬಂದರೆ ಮಣ್ಣು ಕೂಡಿಸುತ್ತದೆ.

೧೩೪೯. ತುಪ್ಪದ ಆಶೆಗೆ ಎಂಜಲು ತಿಂದ.

೧೩೫೦. ತುಬ್ಬಾಗದ ಕಳವು ಮಬ್ಬಾದ ಮೇಲೆ ಸಿಕ್ಕೀತೇ ?

೧೩೫೧. ತುರಂಗಕ್ಕೂ ಕುರಂಗಕ್ಕೂ ಸಮವೋ ?

೧೩೫೨. ತುರಿಯಿದ್ದವಗೆ ನಾಚಿಕೆ ಇಲ್ಲ
ಮತಿಯಿದ್ದವಗೆ ಮಂದತ್ವವಿಲ್ಲ.

೧೩೫೩. ತುರಿಯಿರುವಲ್ಲಿ ತುರಿಸುವುದು.

೧೩೫೪. ತುರಿಸಿಕೊಂಡರೆ ಬರ ಬಿಟ್ಟೀತೇ ?

೧೩೫೫. ತುರಿಸಿಕೊಂಡವ ಉರಿ ಪಟ್ಟಾನು.

೧೩೫೬. ತುರು ಇಲ್ಲದವ ಮರಕ್ಕಿಂತ ಕಡೆ.

೧೩೫೭. ತುರುಬಿಲ್ಲದ ಒಡ್ಡನು, ಬಿಸಿಯಿಲ್ಲದ ಹುರಿಯು.

೧೩೫೮. ತುರುಬು ಇದ್ದರೆ ಹರಬು ನಿಂತೀತೇ ?

೧೩೫೯. ತುರುಕ ಮಿಂಡ ಬರುವಾಗ್ಯೆ ಎದುರು ಚುಕ್ಕಿಯೇ ?

೧೩೬೦. ತುರುಕರ ಸಂಗ ಎಂದಿಗಾದರೂ ಭಂಗ.

೧೩೬೧. ತುಳ್ಯಾಡಿ ತುಳ್ಯಾಡಿ ಮುಳ್ಳಿನ ಮೇಲೆ ಬಿದ್ದ.

೧೩೬೨. ತುಳಿದ ಧಾನ್ಯ ಮಳಲು ಸಮ.

೧೩೬೩. ತೂಕಕ್ಕೆ ದಯವಿಲ್ಲ, ಪಾಕಕ್ಕೆ ಹಸಿವಿಲ್ಲ.

೧೩೬೪. ತೂಕದ ಗುರುತು ಸೂಕರ ಬಲ್ಲದೇ ?

೧೩೬೫. ತೂಕದಿಂದಿರುವವನು ನಾಕಕ್ಕೆ ಬೇಕು.

೧೩೬೬. ತೂಕವಿದ್ದೂ ತೂಗ್ಯಾಡೀತೇ ?

೧೩೬೭. ತೂಗಲಾರದ ಬಡ್ಡಿ ಕೂಗಿ ಕರದಾಳೇ ?

೧೩೬೮. ತೂತು ಬಿದ್ದದ್ದು ಮಾತಿನಿಂದ ಮುಚ್ಚೀತೇ ?

೧೩೬೯. ತೂಬುಳ್ಳ ಕೆರೆ ತುಳುಕಿದರೆ ಬತ್ತೀತೇ ?

೧೩೭೦. ತೂರುವಾಗ್ಯೆ ಹಾರಿದ್ದೆಲ್ಲ ಮಾರೀ ಪಾಲು.

೧೩೭೧. ತೂಳು ಬಂದು ಹೇಳಿದ ಮಾತು
ಮೂಳ ನಾಯಿ ಹ್ಯಾಗೆ ಕೇಳಬೇಕು.

೧೩೭೨. ತೃಣವಾದರೂ ಹಣ ಕೂಡಿಸುತ್ತದೆ.

೧೩೭೩. ತೃಪ್ತನಿಗಾದರೂ ಮೃತ್ಯು ತಪ್ಪದು.

೧೩೭೪. ತೃಷೆ ಆದವಗೆ ಮಸಿ ಕೆಂಡ ತಂದುಕೊಟ್ಟ.

೧೩೭೫. ತೃಷೆ ಇಲ್ಲದವ ಋಷಿಗೆ ಸಮಾನ.

೧೩೭೬. ತೆಕ್ಕೆಯಿಲ್ಲದ ಎತ್ತು ಬಿಕ್ಕಿ ಪಲ್ಕಿರಿದಂತೆ.

೧೩೭೭. ತೆಗದು ಕೊಂಡಷ್ಟೂ ಮುಗದರೆ
ಮಗನಿಗೇನು ಉಳದೀತು ?

೧೩೭೮. ತೆತ್ತಷ್ಟು ಬಾಕಿ ಬಿದ್ದರೆ ಮತ್ತೇನು ಕೊಟ್ಟಾನು ?

೧೩೭೯. ತೆನೆ ತಿಂದ ಎತ್ತು ತೆವರಿಯನ್ನು ಏರಿತು.

೧೩೮೦. ತೆಪ್ಪ ಹರಿದರೆ ದೋಣಿ.

೧೩೮೧. ತೆಪ್ಪ ಹರಿದರೆ ಮುಪ್ಪಿನವನೇ ಸಾಯುವನೋ ?

೧೩೮೨. ತೆರಪಿಲ್ಲವೆಂತ ತೆರಿಗೇ ಇಟ್ಟುಕೊಂಡು
ಚರಿಗೆ ತಪಲೇ ಮಾರಿಸಿಕೊಂಡ.

೧೩೮೩. ತೆರದ ಕಿಟಕಿಯಿಂದ ಬೆಕ್ಕು ಹೊಕ್ಕಿತು.

೧೩೮೪. ತೆರದು ಬಂದ ಬಾಗಲಿಂದ ಕಳ್ಳ ಹೊಕ್ಕ.

೧೩೮೫. ತೆರೆಯಲಾರದ ಕಣ್ಣು, ಹೊರಲಾರದ ಹೊರೆ.

೧೩೮೬. ತೆರೇ ಕೊಟ್ಟು ಮೊರ ಕೊಂಡು ಕೊಂಡ.

೧೩೮೭. ತೆರೇ ತೆಗೆದು ಮೀಯೋದುಂಟೇ ?

೧೩೮೮. ತೆಳುಪಾದ ಮೆಯ್ಯ್, ಬೆಳುಪಾದ ಗಂಪು ಅಂದ ಹಾಗೆ.

೧೩೮೯. ತೇಗಿಗಿಂತ ಗಟ್ಟಿ ಇಲ್ಲ
ಜೋಗಿಗಿಂತ ಕುಂಬು ಇಲ್ಲ.

೧೩೯೦. ತೇಗಿ ತೇಗಿ ಬೀಗಿ ಬಿದ್ದ.

೧೩೯೧. ತೇಗು ಬಂದು ಪಾಗು ಹರೀತು.

೧೩೯೨. ತೇಜ ಇದ್ದವನೇ ಪೂಜ್ಯ.

೧೩೯೩. ತೇಜವಿದ್ದದ್ದು ಮಾಜ ಕೂಡೀತೇ ?

೧೩೯೪. ತೇಟೀ ಗಂಜಿ ಕುಡಿಯೋನಿಗೆ
ಏಟೇಟು ಪಾರುಪತ್ಯ.

೧೩೯೫. ತೇಟೀ ನೀರು ಓಟೀ ಅಡೀಲಿ ಇದ್ದರೆ
ಕಾಟ ಬಂದೀತೇ ?

೧೩೯೬. ತೇಮಾನದಿಂದ ಹೋಮಾ ಮಾಡಿ
ಗುಮಾನ ಪಟ್ಟ.

೧೩೯೭. ತೇರಾದ ಮೇಲೆ ಜಾತ್ರೆ ನೆರೆಯಿತು.

೧೩೯೮. ತೇರಾಟಕ್ಕೆ ಹೋಗಿ, ಹೋರಾಟ ಮಾಡಿಕೊಂಡ.

೧೩೯೯. ತೇರು ಆಯಿತು
ಹೇರು ಮಾತ್ರ ವ್ಯರ್ಥ ತಂದೆ.

೧೪೦೦. ತೇರು ನುಂಗುವವಗೆ ಪರಿಸೆ ಹಪ್ಪಳಸಂಡಿಗೆ.

೧೪೦೧. ತೈಲದ ಗುಣ ನವಿಲು ತಿಳಿದೀತೇ ?

೧೪೦೨. ತೊಗಲು ತೊಳೆ ಆದೀತೇ ?

೧೪೦೩. ತೊಗಲು ಸಡಲಿ ಮುಪ್ಪು
ಹಗಲು ಸಡಲಿ ಇರುಳು.

೧೪೦೪. ತೊಟ್ಟಿಲೊಳಗಣ ಕೂಸಾದರೂ
ಅತ್ತ ಹೊರ್ತು ಹಾಲು ಕೊಡರು.

೧೪೦೫. ತೊಟ್ಟು ಮುರಿದಡಿ ಅಟ್ಟದರೆ ಹೋಗಿ ತಟ್ಟೀತೇ ?

೧೪೦೬. ತೊಟ್ಟೀ ಕಟ್ಟಿ ಕೊಂಡು, ಮೊಟ್ಟೀ ಹೊತ್ತ.

೧೪೦೭. ತೊಡೆ ಸೋಕಿದ ನಾಯಿ
ಒಡೆಯನ ಗುರುತು ಅರಿಯದು.

೧೪೦೮. ತೊತ್ತಿಗೆ ಯಾಕೆ ಮುತ್ತಿನಾಭರಣ ?

೧೪೦೯. ತೊತ್ತಿಗೆ ಒಂದು ಪಡಿ ತೊತ್ತು.

೧೪೧೦. ತೊತ್ತು ಮಾಡಿದ್ದು ಯಾರೂ ಅರಿಯರು
ತೊತ್ತಿನ ತಲೆ ಹೊಡೆದದ್ದು ಊರೆಲ್ಲಾ ಕೇಳಿತು.

೧೪೧೧. ತೊನ್ನು ಹತ್ತಿದವ ಹೊನ್ನು ಖರ್ಚು ಮಾಡುತ್ತೇನೆಂದು
ಗನ್ನಾ ಹೇಳಿದರೆ ಬಿಟ್ಟೀತೇ ?

೧೪೧೨. ತೊಪ್ಪೆ ಬರುವುದೇ ಹೆಪ್ಪಿಗೆ ?

೧೪೧೩. ತೊರದವಗೆ ಬರದ ಹಂಗೇನು ?

೧೪೧೪. ತೊಲೆಯಿಂದ ಹಲವಾಗುತ್ತದೆ
ಹೊಲೆಯಿಂದ ಭ್ರಷ್ಟವಾಗುತ್ತದೆ.

೧೪೧೫. ತೊಳಲಿದರೂ ಬಳಲೋದು ತಪ್ಪೀತೇ ?

೧೪೧೬. ತೋಟದ ಮೂಳನಿಗೆ ಯಾತರ ಸಿರಿ ಅಂದರೆ
ನೇತಾಡುವ ಎರಡು ಬದನೇಕಾಯಿ ಸಿರಿ.

೧೪೧೭. ತೋಟ ಮೂರು ಮೊಳ
ಕಾಯಿ ಆರು ಮೊಳ.

೧೪೧೮. ತೋಟ ಸೊಕ್ಕಿದರೆ ಆಡನಿರಿಸು
ನಾಡು ಸೊಕ್ಕಿದರೆ ಕೊಂಕಣಿಯನಿರಿಸು.

೧೪೧೯. ತೋಟ ಹಾಳಾಗುವ ಕಾಲಕ್ಕೆ
ಕೋತಿ ಮೋರೆ ಕಾಯಿ ಹುಟ್ಟಿತು.

೧೪೨೦. ತೋಡಿದ ಬಾವಿಗೆ ಜಲವೇ ಸಾಕ್ಷಿ
ಮಾಡಿದ ಪುಣ್ಯಕ್ಕೆ ಫಲವೇ ಸಾಕ್ಷಿ.

೧೪೨೧. ತೋರನಾದವ ಹಾರನು
ಧೀರನಾದವ ದೂರನು.

೧೪೨೨. ತೋರಿಸಿಕೊಟ್ಟ ಗುರು
ಏರಿಸಲಿಕ್ಕೆ ಬಲ್ಲನೇ ?

೧೪೨೩. ತೋಳ ಗುಂಡಿಗೆ ಬಿದ್ದರೆ ಆಳಿಗೊಂದು ಕಲ್ಲು.

೧೪೨೪. ತೋಳಾ ಕುರಿ ಕಾದೀಯಾ ಅಂದರೆ
ಸಂಬಳವೇ ಬೇಡ ಅಂದ ಹಾಗೆ.

೧೪೨೫. ತೋಳು ಪೂಜಿಸಿ ಕೊಳ್ಳುವುದಕ್ಕೆ ಹೋಗಿ
ಮೂಳನಾದ,

೧೪೨೬. ತ್ಯಾಗೀಗುಣ ಭೋಗದಲ್ಲಿ ಕಾಣುವುದು.

---

* ಮಾಡಿದ ಪಾಪಕ್ಕೆ ಮನವೇ ಸಾಕ್ಷಿ.

೧೪೨೭. ತ್ಯಾಜ್ಯಾಮಾಡಿ, ವ್ಯಾಜ್ಯಾ ಆಡಿದ.

೧೪೨೮. ತ್ರಾಣವಿದ್ದವನ ಸಂಗಡ ಹೋಗಿ ತ್ರಾಟಿಸಿಕೊಂಡ.

೧೪೨೯. ತ್ವರಪಟ್ಟರೆ ಮರೆಯಾಗುವುದು.

೧೪೩೦. ತಂಗಾಳಿ ಕಂಡರೆ ಮಂಗವಾದರೂ ಉಲ್ಲಸಿಸುತ್ತದೆ.

೧೪೩೧. ತಂಗಿ ಬಡವಳಾದರೆ ತಂಗಳ ಹಿಟ್ಟಿಗೂ ಗತಿಯಿಲ್ಲವೇ ?

೧೪೩೨. ತಂಗುಳುಂಡ ಬಡ್ಡಿ ಗಂಡನ ಹಸಿವೆ ಅರಿಯಳು.

೧೪೩೩. ತಂಟೆ ತೀರಿದರೂ ತಕರಾರು ಹೋಗಲಿಲ್ಲ.

೧೪೩೪. ತಂಟೆಯವನ ನಂಬಿಕೆ ಸಲ್ಲ
ಒಂಟಿಯಾಗಿ ಹೋಗಸಲ್ಲ.

೧೪೩೫. ತಂಡದ ಜನರು ಹಿಂಡು ಒಡಕೊಂಡು ಹೋದರೆ
ಮುಂಡೆಯರಿಂದ ಕಡೆ.

೧೪೩೬. ತಂಡಾ ಮುಂಡಾ ವಾಸುದೇವ.

೧೪೩೭. ತಂಡುಲಂ ವಸ್ತು ಮೂಲಂ.

೧೪೩೮. ತಂತರವಿದ್ದವಗೆ ಮಂತರ ಬೇಡ.

೧೪೩೯. ತಂತುಗಾರಗೆ ಯಾಕೆ ತಂತಿಯಾಟ?

೧೪೪೦. ತಂತು ಮಾತ್ರ ಬ್ರಾಹ್ಮಣ್ಯಂ.

೧೪೪೧. ತಂತ್ರವನರಿಯೆನು ಮಂತ್ರವನರಿಯೆನು
ಯಂತ್ರವನರಿಯೆನು ಎಂದೆನಬೇಡ.

೧೪೪೨. ತಂತ್ರಗಾರನನ್ನು ಕುತಂತ್ರಗಾರ ಜಯಿಸಿದ.

೧೪೪೩. ತಂದ ಹೊರೆ ಬರಿದೇ ಹೋಯಿತು.

೧೪೪೪. ತಂದೆಯ ಮದಿವೆಗೆ ಪಂಜು ಹಿಡಿಯುವ ಮಗ.

೧೪೪೫. ತಂದೆಯ ಬದುಕು ತಾಯಿಗೆ ದಾನ.

೧೪೪೬. ತಂದೆಯ ಹೋಲೋ ಕಂದಯ್ಯ.

೧೪೪೭. ತಂದೆತಾಯಿಗಳ ಮಾತ ಕೇಳದ ಮಕ್ಕಳು
ನಾಯಿ ಬಾಯಿಗೆ ಹಪ್ಪು.

೧೪೪೮. ತಂಪು ಇದ್ದವಗೆ ಸಂಪು ಇದ್ದೀತು.

೧೪೪೯. ತಂಬಟೆ ಹೋಗಿ ಭೇರಿಗೆ ದೂರು ಹೇಳಿದ ಹಾಗೆ.

೧೪೫೦. ತಂಬು ಒಳ್ಳೇದೇ ಸರಿ
ನೆರಳಿಗೆ ಮಾತ್ರ ಹಂಬಲಿಸ ಬೇಡ.

೧೪೫೧. ತಿಂಗಳು ದಾಟಿದರೂ *ಮಂಗಳ* ದಾಟಲಿಲ್ಲ.

೧೪೫೨. ತಿಂಡಿ ಹೆಚ್ಚಿ ತಿರುಮುತ್ತೂರಿಗೆ ಹೋದರೆ
ತಿರುಪುಟ್ಟಿ ಕೈಗೆ ಬಂತು.

೧೪೫೩. ತಿಂದವನ ತೀನಿ ಹೆಚ್ಚು
ತಿಂದವನ ಕೊಳೆ ಹೆಚ್ಚು.

೧೪೫೪. ತಿಂದರೆ ದಕ್ಕದು ಮುಂದೇ ಹಣ.

೧೪೫೫. ತಿಂದು ಸೊಕ್ಕಿದ ಸಂನ್ಯಾಸಿ ಮಠ ಸುಟ್ಟ.

* ಅಂಗಳ.

೧೪೫೬. ತುಂಗಭದ್ರೆಗೆ ಮಂಗ ಹೋದರೆ
ಭಂಗಪಡೋದು ತಪ್ಪೀತೇ ?

೧೪೫೭. ತುಂಟನಿಗೆ ನಂಟರೆಲ್ಲ ಬಂಟರ ಹಾಗೆ.

೧೪೫೮. ತುಂಟನ ಕೈಯ್ಯಲ್ಲಿ ಗಂಟು ಕೊಟ್ಟರೆ
ಬಂಟನಂತಿರುವನು.

೧೪೫೯. ತುಂಟನ ಮನೆಗೆ ನಂಟರು ಬಂದರೆ
ಗಂಟೆಗಿಂತ ಕಡೆ.

೧೪೬೦. ತುಂಟ ಕುದುರೆಗೆ ಗಂಟು ಲಗಾಮು.

೧೪೬೧. ತುಂಟನಾದವ ಮಂಟಪದಲ್ಲಿ ಕೂತರೂ
ತಂಟೆಮಾಡದೆ ಇರಲಾರ.

೧೪೬೨. ತುಂಟು ಮುಂಡೇ ತಂಟೆ ಹರೀತು.

೧೪೬೩. ತುಂಡಿಲ್ಲದವನಿಗೆ ತುಂಟನ ಭಯವೇನು ?

೧೪೬೪. ತುಂಡು ತುಂಡು ದೊರೆಗಳು ಕೂಡಿ
ಹಿಂಡು ಹಿಂಡು ಸೈನ್ಯ ಕೂಡಿಸಿದರು.

೧೪೬೫. ತುಂಡು ಪಿಂಡ ಸಿಕ್ಕಿದ ಮೇಲೆ
ಮುಂಡೆಗೆ ಯಾರ ಹಂಗೇನು ?

೧೪೬೬. ತುಂಡು ಮಾಡಿದರೂ ನೀರು ಒಂದಾಗದೆ ಇರದು.

೧೪೬೭. ತುಂಡು ದೇವರಿಗೆ ಪುಂಡು ಪೂಜಾರಿ.

೧೪೬೮. ತುಂತುರು ಮಳೆಯಿಂದ ತೂಬಿನಕೆರೆ ತುಂಬೀತೇ !

೧೪೬೯. ತುಂಬಿದ ಕೊಡ ತುಳುಕುವುದಿಲ್ಲ.

೧೪೭೦. ತುಂಬಿದ ಮನೆಗೆ ಉಡು ಸೇರಿದ ಹಾಗೆ.

೧೪೭೧. ತುಂಬಾ ಹೊಯ್ದರೂ ಹಂಬಲು ಹೋಗದು.

೧೪೭೨. ತೆಂಕಣ ಗಾಳಿ ಮುಂಕುಮಳೆ ಬರಸೀತು.

೧೪೭೩. ತೆಂಕಣ ದೇಶಕ್ಕೆ ಹೋಗಿ ಕೊಂಕಣ ಕೆಟ್ಟ.

೧೪೭೪. ತೆಂಗಿನ ಮರ ತೆಂಕಲಾಗಿ ಹೆಚ್ಚು.

೧೪೭೫. ತೆಂಗಿನ ಮರಕ್ಕೆ ಪಟ್ಟೇ ಸೀರೆ ಕಟ್ಟಿದ.

೧೪೭೬. ತೆಂಗಿನ ಮರ ಏರುವವನ ತಿಕಾ
ಎಲ್ಲಿಯತನಕ *ಹಿಡಿದಾನು.*

೧೪೭೭. ತೆಂಗಿನಮರ ಯಾಕೆ ಹತ್ತುತ್ತಿ ಅಂದರೆ
ಬೆಕ್ಕಿಗೆ ಹುಲ್ಲು ಕೊಯ್ಯೋದಕ್ಕೆ ಅಂದ.

೧೪೭೮. ತೊಂಡು ಮುಂಡೆಗೆ ಗಂಡನೇನು ? ಮಿಂಡನೇನು ?

೧೪೭೯. ತೊಂಡೆ ತಿಂದು ಮಂಡೆ ಬೆಳೀತು.

೧೪೮೦. ತೊಂತಿಗೆ ಒಂದು ಕಂತು ಮಾಡಬೇಕೇ ?

೧೪೮೧. ತೊಂಬತ್ತರ ಮೇಲೆ ತೊಗರಿ ಬೇಳೆ.

೧೪೮೨. ದಕ್ಕೀತು ಎಂದು, ತಕ್ಕದ್ದಲ್ಲದ್ದ ಮಾಡಬಾರದು.

೧೪೮೩. ದಗೆಯೆಂಬುವದು ಹಗೆಯೇ ಸರಿ.

---

* ಎತ್ತಿಯಾನು,

೧೪೮೪. ದಟ್ಟ ವ್ಯಾಪಾರ ಮಾಡಿ
ಸೆಟ್ಟ ಕೆಟ್ಟು ಹೋದ.

೧೪೮೫. ದಡದಲ್ಲಿದ್ದ ಮರಕ್ಕೆ ಆಡಿಯೋ ?

೧೪೮೬. ದಡೀ ಯಾತಕ್ಕೆ, ಮಡದೀ ಬಡೀಲಿಕ್ಕೆ.

೧೪೮೭. ದಡ್ಡನಿಗೆ ಹೆಡ್ಡನೆಂದರೆ
ಮಡ್ಡನಿಗೆ ಜಾಣಾ ಅಂದ ಹಾಗೆ.

೧೪೮೮. ದಣದ ಎತ್ತಿಗೆ ಮಣವೇ ಭಾರ.

೧೪೮೯. ದಣೀ ಹೇಳಾಟ, ಬಡಗೀ ಮಾಡಾಟ.

೧೪೯೦. ದಣು ಪಟ್ಟವನು ಹೆಣವಾದರೂ ಹೊರನೇ ?

೧೪೯೧. ದತ್ತ ಪುತ್ರನಿಗೆ ಪಿತೃಭಕ್ತಿ ಹುಟ್ಟುವುದೋ ?

೧೪೯೨. ದತ್ತಾತ್ತಿ ಕೊಟ್ಟು ಮತ್ತೆ ಕೇಳದವ
ಎತ್ತಿಗಿಂತ ಕಡೆ.

೧೪೯೩. ದದ್ದು ಮಡಿಕೆಯಲ್ಲಿ ಕಲ್ಲು ಹರಳು ಹಾಕಿ ಕುಲುಕಿದಂತೆ.

೧೪೯೪. ದನದ ಮನಸ್ಸನ್ನೂ ದಾಯಾದಿಯ ಮನಸ್ಸನ್ನೂ
ಯಾರು ಬಲ್ಲರು ?

೧೪೯೫. ದನದ ಮುಂದೆ ಹೋಗಬೇಡ
ಕುದುರೆ ಹಿಂದೆ ಹೋಗಬೇಡ.

೧೪೯೬. ದನ ಮೇಯಿಸುವವನಿಗೆ ಘನ ಯಾಕೆ ?

೧೪೯೭. ದನವಿನ ವರ್ಣ ಹಾಲಲ್ಲಿ ತಿಳಿದೀತೇ ?

೧೪೯೮. ದನಕ್ಕೆ ಬೆದರಿ ಹುಲಿಯ ಬಾಯಿಗೆ ಬಿದ್ದ ಹಾಗೆ.

೧೪೯೯. ದನಾ ತಿಂಬುವವನಿಗೆ ಗೊಬ್ಬರದಾಣೆ ಏನು?

೧೫೦೦. ದಮ್ಮಯ್ಯ ಅಂದರೆ-ಒಂದು ಎಮ್ಮೆ ಕೊಟ್ಟ ಹಾಗೆ.

೧೫೦೧. ದಮ್ಮು ಕಟ್ಟಿಕೊಂಡು
ಹಮ್ಮು ಕಳಕೊಂಡ.

೧೫೦೨. ದವನದ ಹೂ ಅಂದಾಕ್ಷಣ ಹವನವಾದೀತೇ?

೧೫೦೩. ದವುತಿ ಇಲ್ಲವೆಂದು ಸವತೀ ಸಂಗಡ ಜಗಳವಾಡಿದಳು.

೧೫೦೪. ದಶೆ ಬರುವಾಗ್ಯೆ ಹಸೇ ಮೇಲೆ ರತ್ನ ಬಿತ್ತು.

೧೫೦೫. ದಳವೂ ದಪ್ಪವೂ ಅಗಲವೂ ಇರಬೇಕು
ಕಾಸು ಮೂರು ಕ್ರಯ ಹಡಿಯಬೇಕು.

೧೫೦೬. ದಳಾ ನಡಿಸೋ ಬಂಟ ಬತ್ತಿ ನೂಕ್ಯಾನೇ?

೧೫೦೭. ದಾಕ್ಷಿಣ್ಯಕ್ಕೆ ಬಸುರಾಗಿ ಹೆರುವುದಕ್ಕೆ ಠಾವಿಲ್ಲ.

೧೫೦೮. ದಾಕ್ಷಿಣ್ಯವಂತನು ದಕ್ಷಿಣಕ್ಕೆ ಹೋದರೆ
ಭಕ್ಷಣೆ ಸಿಕ್ಕೀತೇ?

೧೫೦೯. ದಾಟಿಯಿಂದ ಹೋಗಿ ಮೋಟನಾದ.

೧೫೧೦. ದಾಯ ಬಿದ್ದರೆ ಹುಚ್ಚ ಗೆದ್ದ.

೧೫೧೧. ಧಾಯ ಬಿದ್ದಾಗ ಹಾಯಬೇಕು.

೧೫೧೨. ದಾರಿ ತಪ್ಪಿದಮೇಲೆ ಹಾರಿ ಏನು ಫಲ?

೧೫೧೩. ದಾರಿಗೆ ದಾರಿ ! ಓ, ಅಮ್ಮ ಲಾಲಾ !

೧೫೧೪. ದಾರೀಲಿ ಸಿಕ್ಕಿದ್ದು ಧರ್ಮಕ್ಕೆ ಹೋಯಿತು.

೧೫೧೫. ದಾವಣಿ ಕಟ್ಟುವವನಿಗಾದರೂ ಹವಣ ಬೇಕು.

೧೫೧೬. ದಾಸನಾದರೆ ದೋಸೆ ತಿಂದಾನು
ಹೂಸಿನಿಂದ ಕುಂಡ್ರ ಕೂಡದು.

೧೫೧೭. ದಾಸಯ್ಯನೆತ್ತ ? ದನಕರುವೆತ್ತ ?

೧೫೧೮. ದಾಸಣದ ಹೂ ಪಾಸಾಣದ ಮೇಲೆ ಮೊಳದೀತೇ ?

೧೫೧೯. ದಾಸಿಗೆ ಭಯವಿಲ್ಲ, ವೇಶಿಗೆ ದಯವಿಲ್ಲ.

೧೫೨೦. ದಿಕ್ಕಿಲ್ಲದ ಮನುಷ್ಯನಿಗೆ ದೇವರೇ ಗತಿ.

೧೫೨೧. ದಿಕ್ಕಿಲ್ಲದವ ದೈವಾ ತಬ್ಬಿದ.

೧೫೨೨. ದಿಕ್ಕು ದಿಕ್ಕಿಗೆ ಹೋದರೂ ದುಃಖ ತಪ್ಪೀತೇ ?

೧೫೨೩. ದಿಗಿಲು ತಾಗದೆ, ಮಗಳು ಬತ್ತಿದಳು.

೧೫೨೪. ದಿನದೀಪದಂತೆ ದಶಾಹೀನನು.

೧೫೨೫. ದಿನ ಹೋಗಿ ಮಳೆಗಾಲವೇ ?

೧೫೨೬. ದಿನ ದಿನ ಶನಿ ಕಾಡಿದರೆ ಬಾಳೋದು ಯಾವಾಗ.

೧೫೨೭. ದಿನ ದಿನ ಸಾಯುವವರಿಗೆ ಅಳುವವರು ಯಾರು ?

೧೫೨೮. ದಿನ್ನೇ ಮೇಲೆ ಮಳೆ ಹೊಯ್ದರೆ
ಹಳ್ಳಕ್ಕೆ ಬರುವುದು.

೧೫೨೯. ದಿವಸಕ್ಕೆ ತಕ್ಕ ದವಸವಾಗುವದು.

೧೫೩೦. ದೀಕ್ಷೆ ಮಾಡಿದ ಹೊರ್ತು ಮೋಕ್ಷ ಬರಲಿಕ್ಕಿಲ್ಲ.

೧೫೩೧. ದೀನನ ಸಂಗಕ್ಕಿಂತಲೂ, ದಾನಿಯ ಬಡಪಾಟ ಲೇಸು*

೧೫೩೨. ದೀನನಾದರೂ ದಾನಿಯಾದರೂ
ಮಾತು ಮಾತಿಗೆ ದೂರಬಾರದು.

೧೫೩೩. ದೀಪ ದೀಪಾಂತರಕ್ಕೆ ಹೋಯಿತು
ಬತ್ತಿ ಪರ್ವತಕ್ಕೆ ಹೋಯಿತು.

೧೫೩೪. ದೀಪವೆಂಬುವದು ಬೆಂಕಿಯೋ !

೧೫೩೫. ದೀವಟಿಗೆ ಮುಂದೆ ದೀಪವೇ ?

೧೫೩೬. ದುಃಖದ ಮೇಲೆ ಸುಖ
ಸುಖದ ಮೇಲೆ ದುಃಖ.

೧೫೩೭. ದುಗ್ಗಾಣೀ ಮುಂಡೆಗೆ ದುಡ್ಡು ಕೊಟ್ಟು
ತಲೆ ಬೋಳಿಸಿದ ಹಾಗೆ.

೧೫೩೮. ದುಗ್ಗಾಣಿಯ ಮುಂಡೇ ಹತ್ತರ
ದುಡ್ಡಿನ ದೋಸೆಗೆ ಹೋದ.

೧೫೩೯. ದುಡಿಯೋ ಎತ್ತು ಮಡಿದು ಬಿತ್ತು.

೧೫೪೦. ದುಡಿಯಲಿಲ್ಲ, ದುಕ್ಕ ಪಡೆಯಲಿಲ್ಲ
ಇದ್ದದೆಲ್ಲ ನನ್ನದೇ ಅಂದ ಹಾಗೆ.

೧೫೪೧. ದುಡುಕು ಇದ್ದವಗೆ ಬಡತ ತಪ್ಪದು.

* ದೀನನ ಸಿರಿಗಿಂತ ದಾನಿಯ ಬಡತನವೇ ಮೇಲು.

೧೫೪೨. ದುಡುಮೆ ಇರುವ ಪರ್ಯಂತರ ಮಡದಿ.

೧೫೪೩. ದುಡ್ಡಿಗೆ ನೂರು ಕುರುಳು ಸುಟ್ಟುಕೊಂಡು
ಸಾಯುವವರು ಯಾರು ?

೧೫೪೪. ದುಡ್ಡಿಗೆ ಪಂಚೇರು.

೧೫೪೫. ದುರುಳನ ಕಂಡರೆ ಹವಳು ಚೆಲ್ಲಬೇಕು.

೧೫೪೬. ದುರುಳನ ಕಂಡಾಗ ತೆರಳಬೇಕು.

೧೫೪೭. ದುರ್ಗದಲ್ಲಿರುವವನಿಗೆ
ಮಾರ್ಗದ ಗೊಡವೆ ಯಾಕೆ ?

೧೫೪೮. ದುರ್ಗಾ ಏರದವ ಸ್ವರ್ಗ ಏರ್ಯಾನೇ ?

೧೫೪೯. ದುರ್ಜನರ ಸಹವಾಸದಿಂದ ಸಜ್ಜನ ಕೆಡುವನು.

೧೫೫೦. ದುಷ್ಟನಿಗೆ ಕಷ್ಟ ಬಂದರೂ
ನಿಷ್ಠುರ ಗುಣ ಬಿಡಲಾರ.

೧೫೫೧. ದುಷ್ಮಾನನನ್ನು ಹಿಕಮತ್ತಿನಿಂದ ಜಯಿಸಬೇಕು.

೧೫೫೨. ದುಸ್ತು ಇಲ್ಲದವನ ಮನಸು ಸ್ವಸ್ಥವಾಗದು.

೧೫೫೩. ದುಹೀ ಮಾಡುವವ ಅಹೀ ಹಾಗೆ.

೧೫೫೪. ದೂಡಿಸಿಕೊಂಡ ಮನುಷ್ಯ ಹೇಡಿಗಿಂತ ಕಡೆ.

೧೫೫೫. ದೂಡಿಸಿಕೊಂಡವನಿಗೆ
ನಾಡಿನ ಗೊಡವೆ ಯಾಕೆ ?

೧೫೫೬. ದೂತತ್ವ ಮಾಡುವವನಿಗೆ ಭೀತತ್ವ ಸಲ್ಲದು.

೧೫೫೭. ದೂಪಾ ಹಾಕಿದರೆ ಪಾಪಾ ಹೋದೀತೇ ?

೧೫೫೮. ದೂರನ್ನು ಎದುರಿಗೆ ಆಡು
ಹೊಗಳನ್ನು ಹಿಂದೆ ಆಡು.

೧೫೫೯. ದೂರಕ್ಕೆ ಬೆಟ್ಟ ನುಣ್ಣಗೆ.

೧೫೬೦. ದೂರದ ನೀರು ದಾರಿಲಿ ಸಿಕ್ಕೀತೇ ?

೧೫೬೧. ದೂರವಾದ ಊರಿಗೆ ಹಾರಿ ಹೋದಾನೋ ?

೧೫೬೨. ದೂರವಿದ್ದ ಮಗನಿಗೂ, ಹತ್ತಿರವಿದ್ದ ಹೆಂಡತಿಗೂ
ಸರಿಬಾರದು.

೧೫೬೩. ದೂರು ಹೊರೋಕ್ಕಿಂತ ಮಾರಿ ಹೊರೋದುತ್ತಮ.

೧೫೬೪. ದೂಳಲ್ಲಿ ಬಿದ್ದವ ಮೂಳನಿಂದ ಕಡೆ.

೧೫೬೫. ದೂಳಿ ದೂಪವಾದೀತೇ ?
ಮೂಳಿಗೆ ಸ್ವರ್ಗವಾದೀತೇ !

೧೫೬೬. ದೂಳಿಯಲ್ಲಿ ಬಿದ್ದರೆ ಚೇಳಿನ ಕಾಟ ತಪ್ಪೀತೇ ?

೧೫೬೭. ದೂಳಿಯಿಂದ ಮಾಳಿಗೆ ಆದೀತೇ ?

೧೫೬೮. ದೃಢ ಬುದ್ಧಿಯಿಲ್ಲದವ ಕಡು ಮೂರ್ಖ.

೧೫೬೯. ದೆಬ್ಬೆ ಕೊಟ್ಟು ಬೊಬ್ಬೇ ಕೊಂಡ.

೧೫೭೦. ದೆವ್ವ ಹಿಡಿದವಗೆ ದೈವದ ಯೋಚನೆ ಏನು ?

೧೫೭೧. ದೆಸೆಯಿಲ್ಲದವ ಮಸಿಗಿಂತ ಕಡೆ.

೧೫೭೨. ದೇವರ ಗಂಟು ಹೋದರೆ
ಪೂಜಾರೀ ಸಂಟ ಹೋಯಿತು.

೧೫೭೩. ದೇವರ ಕಡೆಗೆ ಕಯ್ಯಿ
ಮನೆಯ ಕಡೆಗೆ ಒಯ್ಯಿ

೧೫೭೪. ದೇವರ ಮನೆ ಕಾಯಿ
ಜವಳೀ ಮನೆ ಹಣ.

೧೫೭೫. ದೇವರನ್ನು ನೋಡಲಿಕ್ಕೆ ಹೋದರೆ
ದೇವಸ್ಥಾನ ಹರಿದು ಬಿತ್ತು.

೧೫೭೬. ದೇವರ ಸತ್ಯಕ್ಕೆ ಕಡಿಮೆಯಾದರೆ
ಕಂಚಿನ ಬೆಲೆಗೆ ಕಡಿಮೆಯಿಲ್ಲ.

೧೫೭೭. ದೇವರು ವರಾ ಕೊಟ್ಟರೂ
ಪೂಜಾರಿ ವರಾ ಕೊಡನು.

೧೫೭೮. ದೇವಲೋಕಕ್ಕೆ ಹೋದರೂ ಭೂಲೋಕ ತಪ್ಪದು.

೧೫೭೯. ದೇವಸ್ಥಾನಕ್ಕೆ ಹೋಗಿ ಶ್ರದ್ಧಿಸದಿದ್ದರೆ
ಧೂಪ ಹಾಕಿದಷ್ಟು ಪುಣ್ಯ.

೧೫೮೦. ದೇಶಾಂತರದವರಿಗೆ ಸ್ವತಂತ್ರ ಕೊಟ್ಟರೆ
ತನ್ನ ಬೋಷ ಹೋಗದೇ ?

೧೫೮೧. ದೇಶಾಂತರ ಹೋದರೂ ಸ್ವತಂತ್ರವಿರಬೇಕು.

೧೫೮೨. ದೇಶಾಂತರ ಹೋದರೆ ದೈವ ಬಿಟ್ಟೀತೇ ?

೧೫೮೩. ದೇಶಾಂತರಕ್ಕೆ ಹೋದರೂ ಶನೀಶ್ವರ ಬಿಡದು.

೧೫೮೪. ದೇಶಾವರಕ್ಕೆ ಹೋಗಿ ಭೋಷ ಕಳಕೊಂಡ.

೧೫೮೫. ದೇಹವಿದ್ದರೆ ಭಾವಿಸಬಹುದು.

೧೫೮೬. ದೈತ್ಯನಾದವಗೆ ಪೈತ್ಯವೆಂಬುದೇನು ?

೧೫೮೭. ದೈನ್ಯದವರಿಗೆ ಮಾನ್ಯ ಮಾಡಿದರೆ
ಮರಣದಲ್ಲಿ ಕಾಣುವದು.

೧೫೮೮. ದೈನ್ಯವಾಗಿ ಬೇಡೋಕ್ಕಿಂತ
ದೈವಾಧೀನವಾಗೋದುತ್ತಮ.

೧೫೮೯. ದೊಡ್ಡ ಮನೆಯೆಂತ ಓಡಿ ಹೋದರೆ
ಹಾಕಿದ್ದು ಎರಡು ಕಾಳು ಅಕ್ಕಿ.

೧೫೯೦. ದೊಡ್ಡವರ ಮನೇ ನೋಟ
ಬಡವನ ಮನೇ ಊಟ.

೧೫೯೧. ದೊಡ್ಡವನಾಡಿದ್ದೇ ಆಟ
ಬಡವನಾಡಿದ್ದೇ ಬಂಡಾಟ.

೧೫೯೨. ದೊಡ್ಡವನುಂಡರೆ ಮದ್ದು
ಬಡವನುಂಡರೆ ಹೇಸಿಗೆ.

೧೫೯೩. ದೊಡ್ಡವನ ನಂಟತನ ಬಡವನಿಗೆ ಬಂಡಾಟ.

೧೫೯೪. ದೊಡ್ಡವರ ಮನೆಗೆ ಬಡನಂಟ ಹೋದಹಾಗೆ.

೧೫೯೫. ದೊಡ್ಡವರ ಸಂಗಡ ಕೂತು
ಒಡ್ಡಾದ ಹಣ್ಣು ತಿನ್ನಬಾರದು.

೧೫೯೬. ದೊಡ್ಡವನ ಮಾತು ಸವಿ
ಬಡವನ ಊಟ ಸವಿ.

೧೫೯೭. ದೊಡ್ಡವನ ಮನೆ ಸುಡಬಾರದು
ಬಡವನ ಹೆಂಡತಿ ಸಾಯಬಾರದು.

೧೫೯೮. ದೊಡ್ಡವನ ಹೆಂಡತಿ ಎಲ್ಲರಿಗೂ ಅತ್ತೆ
ಬಡವನ ಹೆಂಡತಿ ಎಲ್ಲರಿಗೂ ಸೊಸೆ.

೧೫೯೯. ದೊಡ್ಡ ಹೊಟ್ಟೆಯಿದ್ದವ ಹೆಡ್ಡನೋ ?

೧೬೦೦. ದೊಣೆಗೆ ಹೋದರೂ ಹೊಣೆ ತಪ್ಪದು.

೧೬೦೧. ದೊಣ್ಣೇ ಹಿಂಡಿದರೆ ಎಣ್ಣೆ ಬೀಳುವುದೇ ?

೧೬೦೨. ದೊನ್ನೇ ತುಂಬ ತುಪ್ಪ ಹೊಯ್ದರೂ
ದಮ್ಮಯ್ಯ ಎಂಬೋದು ಬೇಡ.

೧೬೦೩. ದೊಬ್ಬಿ ಹಾಕಬಹುದೇ ಮಬ್ಬನ್ನು ?

೧೬೦೪. ದೊರಕಿದ ಬಟ್ಟೆ ಹರಕು ಆದರೆ
ನರಕೋದು ಯಾಕೆ ?

೧೬೦೫. ದೊರಕಿದರೆ ಹರಕೇ ಕೊಡಬಹುದು.

೧೬೦೬. ದೊರೆ ಮುನಿದರೆ ಮರನೇರಿದರೆ ಆದೀತೇ ?

೧೬೦೭. ದೊರೆಯ ರಥವಾದರೂ ಎಣ್ಣೆಯಿಲ್ಲದೆ ತಿರುಗದು.

೧೬೦೮. ದೊರೆಯಾದರೂ ನರೆ ತಪ್ಪೀತೇ ?

೧೬೦೯. ದೊರೆಯ ತನಕ ದೂರು
ಹೊಳೆಯ ತನಕ ಓಟ.

೧೬೧೦. ದೊರೆಯಾದರೂ ತೊರೆಗೆ ದೊಡ್ಡವನೇ ?

೧೬೧೧. ದೊರೆಯಿಂದ ಆಗುವಂಥಾದ್ದು
ನರಿಯಿಂದ ಆದೀತೇ ?

೧೬೧೨. ದೊರೆ ಹೇಳಿದನೆಂದರೆ ಮರದ ಕಾಯಿ ಬಿದ್ದೀತೇ ?

೧೬೧೩. ದೊರೆತನಕ್ಕೆ ಬಡತನವೇ ?

೧೬೧೪. ದೋತ್ರ ದೊಡ್ಡದಾದರೆ ಗೋತ್ರ ದೊಡ್ಡದೇ ?

೧೬೧೫. ದೋಷವೆಲ್ಲಾ ದೋಸೆ ನುಂಗಿತು.

೧೬೧೬. ದೋಷಾ ಮಾಡಿದವಗೆ ದೂಷಣೆ ತಪ್ಪದು.

೧೬೧೭. ದೋಷಾ ಮಾಡುವವಗೆ ರೋಷ ಬಹಳ.

೧೬೧೮. ದೋಸೆಗೆ ತೂತು, ದೋಷಿಗೆ ಮಾತು.

೧೬೧೯. ದೋಸೆ ಬಿಸಿಯೆಂದು
ಮುಸಿ ಕೆಂಡ ತಿಂದ.

೧೬೨೦. ದೋಸೆ ತಿಂದಾಕ್ಷಣ ದೋಷವೆಲ್ಲಾ ಹೋದೀತೇ ?

೧೬೨೧. ದೋಸೆ ತಿನ್ನುವಾಗ ಮೀಸೆ ಮುರಿದ ಹಾಗೆ.

೧೬೨೨. ದೋಸೇ ತೂತು ಕಾವಲಿ ಮುಚ್ಚೀತೇ ?

೧೬೨೩. ದೋಸೇ ಮಾಡಲಿಕ್ಕೆ ಮಾಸಿದವಳಿಂದ ಆಗದೇ ?

೧೬೨೪. ದೋಸೇ ಹಿಟ್ಟು ಕೂಸಾಳಿಗೆ ಸಿಕ್ಕೀತೇ ?

೧೬೨೫. ದೋಸೆಯ ಊಟ ಊಟವಲ್ಲ
ದಾಸರ ಆಟ ಆಟವಲ್ಲ.

೧೬೨೬. ದೋಳು ದೊಡ್ಡದಾದರೆ ಗೆರಸೆ ಆದೀತೇ?

೧೬೨೭. ದೋಳು ಬಡಿದು ಗೆರಸೆ ಮುಚ್ಚಿದ ಹಾಗೆ.

೧೬೨೮. ದ್ರವ್ಯವಿದ್ದವನಲ್ಲಿ ಹವ್ಯವಾದರೂ
ಗವ್ಯಕ್ಕೆ ಮಾತ್ರ ಬಡತನ.

೧೬೨೯. ದ್ರವ್ಯವಿದ್ದವನು ತಿಂದು ಸಾಯಲಿಲ್ಲ
ಸಾಲಾ ಮಾಡಿದವ ತಿದ್ದಿ ಸಾಯಲಿಲ್ಲ.

೧೬೩೦. ದ್ರಾಕ್ಷೆ ಸೀಯೆಂದು ಬಳ್ಳಿಸಹ ತಿನ್ನಬಾರದು.

೧೬೩೧. ದ್ರಾಬೆಯನ್ನು ನಂಬಿ ದೂರದೇಶಕ್ಕೆ ಹೋದರೆ
ಕಳ್ಳರು ಬಂದು ತಲೆ ಹೊಡೆದರು.

೧೬೩೨. ದಂಟು ಮುರಿದರೆ ಕಂಟವಾದೀತೇ?

೧೬೩೩. ದಂಡ ಬೇರೆ ಮುಟ್ಟಗೋಲು ಬೇರೆ.

೧೬೩೪. ದಂಡ ಬಿದ್ದರೆ ಮುಂಡೆ ಗೊಡವೆ ಯಾಕೆ?

೧೬೩೫. ದಂಡಾ ತೆತ್ತವನೂ ಉಂಡು ಹೇತವನೂ ಒಂದೇ.

೧೬೩೬. ದಂಡಾಗಲಿ ದಾಳಿಯಾಗಲಿ ಉಂಡಿರು ಮಗನೇ!

೧೬೩೭. ದಂಡಿಗೆ ಹೊರೋ ಬೋಯಿಯರು ಕರಾ ಹುಡುಕ್ಯಾರೇ?

೧೬೩೮. ದಂಡಿನ ಸುದ್ದಿ ಕೇಳಕೆ ಚಂದ ನೋಡಕ್ಕೆ ಭಯ.

೧೬೩೯. ದಂಡಿನಲ್ಲಿ ಕೆಟ್ಟದು ಹಾದರವಲ್ಲ
ಬರದಲ್ಲಿ ಕದ್ದದು ಕಳವಲ್ಲ.

೧೬೪೦. ದಂಡಿನಲ್ಲೂ ಸೋದರವಾವನೇ ?

೧೬೪೧. ದಂಡಿಗೇ ಮೇಲೆ ನಾಯಿ ಕುಂಡ್ರಿಸಿದರೆ
ಹೇಲು ಕಂಡು ಹಾರಿತು.

೧೬೪೨. ದಿಂಡಾಳುಗಳನ್ನು ಕರೆದರೆ
ಮಿಂಡಾದ ಕೆಲಸವೂ ಆಗುತ್ತದೆ.

೧೬೪೩. ದಿಂಡು ದಂಡದ ಹಾಗೆ ಇದ್ದರೂ
ದಂಡಿಗೆಗೆ ಆದೀತೇ ?

೧೬೪೪. ದೊಂಬಗೆ ದೊಣ್ಣೆಯಾಕೆ
ದೊಣ್ಣೆಗೆ ಕಣ್ಣು ಯಾಕೆ ?

೧೬೪೫. ದೊಂಬರ ಸಾವು ಗಣೆಯ ಮೇಲೆ
ಬಿಲ್ಲವರ ಸಾವು ಮರದ ಮೇಲೆ.

೧೬೪೬. ದೊಂಬಿಗೆ ಹೋದವನು ಶರೀರದ
ಹಂಬಲು ಬಿಟ್ಟರೆ ಲೇಸು.

೧೬೪೭. ದೊಂಬಿ ಸಾಕ್ಷಿ ಹಂಬಿಗೆ ಕಾರಣ.

೧೬೪೮. ಧನವಿಲ್ಲದಿದ್ದರೂ ದನವಿದ್ದರೆ ಸಾಕು.

೧೬೪೯. ಧನಿಕರು ಎಂದು ಹನಿ ಬೀಳುವುದು ತಪ್ಪೀತೇ ?

೧೬೫೦. ಧರ್ಮಕ್ಕೆ ಕೊಟ್ಟದ್ದು ದಾನಕ್ಕೆ ಹೋಯಿತು.

೧೫೯೬. ದೊಡ್ಡವನ ಮಾತು ಸವಿ
ಬಡವನ ಊಟ ಸವಿ.

೧೫೯೭. ದೊಡ್ಡವನ ಮನೆ ಸುಡಬಾರದು
ಬಡವನ ಹೆಂಡತಿ ಸಾಯಬಾರದು.

೧೫೯೮. ದೊಡ್ಡವನ ಹೆಂಡತಿ ಎಲ್ಲರಿಗೂ ಅತ್ತೆ
ಬಡವನ ಹೆಂಡತಿ ಎಲ್ಲರಿಗೂ ಸೊಸೆ.

೧೫೯೯. ದೊಡ್ಡ ಹೊಟ್ಟೆಯಿದ್ದವ ಹೆಡ್ಡನೋ ?

೧೬೦೦. ದೊಣೆಗೆ ಹೋದರೂ ಹೊಣೆ ತಪ್ಪದು.

೧೬೦೧. ದೊಣ್ಣೇ ಹಿಂಡಿದರೆ ಎಣ್ಣೆ ಬೀಳುವುದೇ ?

೧೬೦೨. ದೊನ್ನೇ ತುಂಬ ತುಪ್ಪ ಹೊಯ್ದರೂ
ದಮ್ಮಯ್ಯ ಎಂಬೋದು ಬೇಡ.

೧೬೦೩. ದೊಬ್ಬಿ ಹಾಕಬಹುದೇ ಮಬ್ಬನ್ನು ?

೧೬೦೪. ದೊರಕಿದ ಬಟ್ಟೆ ಹರಕು ಆದರೆ
ನರಕೋದು ಯಾಕೆ ?

೧೬೦೫. ದೊರಕಿದರೆ ಹರಕೇ ಕೊಡಬಹುದು.

೧೬೦೬. ದೊರೆ ಮುನಿದರೆ ಮರನೇರಿದರೆ ಆದೀತೇ ?

೧೬೦೭. ದೊರೆಯ ರಥವಾದರೂ ಎಣ್ಣೆಯಿಲ್ಲದೆ ತಿರುಗದು.

೧೬೦೮. ದೊರೆಯಾದರೂ ನರೆ ತಪ್ಪೀತೇ ?

೧೬೦೯. ದೊರೆಯ ತನಕ ದೂರು
ಹೊಳೆಯ ತನಕ ಓಟ.

೧೬೧೦. ದೊರೆಯಾದರೂ ತೊರೆಗೆ ದೊಡ್ಡವನೇ ?

೧೬೧೧. ದೊರೆಯಿಂದ ಆಗುವಂಥಾದ್ದು
ನರಿಯಿಂದ ಆದೀತೇ ?

೧೬೧೨. ದೊರೆ ಹೇಳಿದನೆಂದರೆ ಮರದ ಕಾಯಿ ಬಿದ್ದೀತೇ ?

೧೬೧೩. ದೊರೆತನಕ್ಕೆ ಬಡತನವೇ ?

೧೬೧೪. ದೋತ್ರ ದೊಡ್ಡದಾದರೆ ಗೋತ್ರ ದೊಡ್ಡದೇ ?

೧೬೧೫. ದೋಷವೆಲ್ಲಾ ದೋಸೆ ನುಂಗಿತು.

೧೬೧೬. ದೋಷಾ ಮಾಡಿದವಗೆ ದೂಷಣೆ ತಪ್ಪದು.

೧೬೧೭. ದೋಷಾ ಮಾಡುವವಗೆ ರೋಷ ಬಹಳ.

೧೬೧೮. ದೋಸೆಗೆ ತೂತು, ದೋಷಿಗೆ ಮಾತು.

೧೬೧೯. ದೋಸೆ ಬಿಸಿಯೆಂದು
ಮಸಿ ಕೆಂಡ ತಿಂದ.

೧೬೨೦. ದೋಸೆ ತಿಂದಾಕ್ಷಣ ದೋಷವೆಲ್ಲಾ ಹೋದೀತೇ ?

೧೬೨೧. ದೋಸೆ ತಿನ್ನುವಾಗ ಮೀಸೆ ಮುರಿದ ಹಾಗೆ.

೧೬೨೨. ದೋಸೇ ತೂತು ಕಾವಲಿ ಮುಚ್ಚೀತೇ ?

೧೬೨೩. ದೋಸೇ ಮಾಡಲಿಕ್ಕೆ ಮಾಸಿದವಳಿಂದ ಆಗದೇ ?

೧೬೨೪. ದೋಸೇ ಹಿಟ್ಟು ಕೂಸಾಳಿಗೆ ಸಿಕ್ಕೀತೇ ?

೧೬೨೫. ದೋಸೆಯ ಊಟ ಊಟವಲ್ಲ
ದಾಸರ ಆಟ ಆಟವಲ್ಲ.

೧೬೨೬. ದೋಳು ದೊಡ್ಡದಾದರೆ ಗೆರಸೆ ಆದೀತೇ?

೧೬೨೭. ದೋಳು ಬಡಿದು ಗೆರಸೆ ಮುಚ್ಚಿದ ಹಾಗೆ.

೧೬೨೮. ದ್ರವ್ಯವಿದ್ದವನಲ್ಲಿ ಹವ್ಯವಾದರೂ
ಗವ್ಯಕ್ಕೆ ಮಾತ್ರ ಬಡತನ.

೧೬೨೯. ದ್ರವ್ಯವಿದ್ದವನು ತಿಂದು ಸಾಯಲಿಲ್ಲ
ಸಾಲಾ ಮಾಡಿದವ ತಿದ್ದಿ ಸಾಯಲಿಲ್ಲ.

೧೬೩೦. ದ್ರಾಕ್ಷೆ ಸೀಯೆಂದು ಬಳ್ಳಿಸಹ ತಿನ್ನಬಾರದು.

೧೬೩೧. ದ್ರಾಬೆಯನ್ನು ನಂಬಿ ದೂರದೇಶಕ್ಕೆ ಹೋದರೆ
ಕಳ್ಳರು ಬಂದು ತಲೆ ಹೊಡೆದರು.

೧೬೩೨. ದಂಟು ಮುರಿದರೆ ಕಂಟವಾದೀತೇ?

೧೬೩೩. ದಂಡ ಬೇರೆ ಮುಟ್ಟಗೋಲು ಬೇರೆ.

೧೬೩೪. ದಂಡ ಬಿದ್ದರೆ ಮುಂಡೆ ಗೊಡವೆ ಯಾಕೆ?

೧೬೩೫. ದಂಡಾ ತೆತ್ತವನೂ ಉಂಡು ಹೇತವನೂ ಒಂದೇ.

೧೬೩೬. ದಂಡಾಗಲಿ ದಾಳಿಯಾಗಲಿ ಉಂಡಿರು ಮಗನೇ!

೧೬೩೭. ದಂಡಿಗೆ ಹೊರೋ ಬೋಯಿಯುರು ಕರಾ ಹುಡುಕ್ಯಾರೇ?

೧೬೩೮. ದಂಡಿನ ಸುದ್ದಿ ಕೇಳಕೆ ಚಂದ ನೋಡಕ್ಕೆ ಭಯ.

೧೬೩೯. ದಂಡಿನಲ್ಲಿ ಕೆಟ್ಟದು ಹಾದರವಲ್ಲ
ಬರದಲ್ಲಿ ಕದ್ದದು ಕಳವಲ್ಲ.

೧೬೪೦. ದಂಡಿನಲ್ಲೂ ಸೋದರವಾವನೇ ?

೧೬೪೧. ದಂಡಿಗೇ ಮೇಲೆ ನಾಯಿ ಕುಂಡ್ರಿಸಿದರೆ
ಹೇಲು ಕಂಡು ಹಾರಿತು.

೧೬೪೨. ದಿಂಡಾಳುಗಳನ್ನು ಕರೆದರೆ
ಮಿಂಡಾದ ಕೆಲಸವೂ ಆಗುತ್ತದೆ.

೧೬೪೩. ದಿಂಡು ದಂಡದ ಹಾಗೆ ಇದ್ದರೂ
ದಂಡಿಗೆಗೆ ಆದೀತೇ ?

೧೬೪೪. ದೊಂಬಗೆ ದೊಣ್ಣೆಯಾಕೆ
ದೊಣ್ಣೆಗೆ ಕಣ್ಣು ಯಾಕೆ ?

೧೬೪೫. ದೊಂಬರ ಸಾವು ಗಣೆಯ ಮೇಲೆ
ಬಿಲ್ಲವರ ಸಾವು ಮರದ ಮೇಲೆ.

೧೬೪೬. ದೊಂಬಿಗೆ ಹೋದವನು ಶರೀರದ
ಹಂಬಲು ಬಿಟ್ಟರೆ ಲೇಸು.

೧೬೪೭. ದೊಂಬಿ ಸಾಕ್ಷಿ ಹಂಬಿಗೆ ಕಾರಣ.

೧೬೪೮. ಧನವಿಲ್ಲದಿದ್ದರೂ ದನವಿದ್ದರೆ ಸಾಕು.

೧೬೪೯. ಧನಿಕರು ಎಂದು ಹನಿ ಬೀಳುವುದು ತಪ್ಪೀತೇ ?

೧೬೫೦. ಧರ್ಮಕ್ಕೆ ಕೊಟ್ಟದ್ದು ದಾನಕ್ಕೆ ಹೋಯಿತು.

೧೬೫೧. ಧರ್ಮಕ್ಕೆ ಕೊಟ್ಟ ಎಮ್ಮೆಯ
ಹಲ್ಲು ಹಿಡಿದು ನೋಡಿದರು.

೧೬೫೨. ಧರ್ಮಕ್ಕೆ ದಟ್ಟಿ ಕೊಟ್ಟರೆ
ಹಿತ್ತಲಿಗೆ ಹೋಗಿ ಮೊಳ ಹಾಕಿದ ಹಾಗೆ.

೧೬೫೩. ಧರ್ಮಕ್ಕೆ ಹೋದರೆ ಕರ್ಮ ಬಂತು.

೧೬೫೪. ಧರ್ಮ ಮಾಡಿದರೂ ಮರ್ಮ ತಿಳಿಯಬೇಕು.

೧೬೫೫. ಧಾತು ಕುಂದಿದರೂ ಮಾತು ಕುಂದಲಿಲ್ಲ.

೧೬೫೬. ಧಾತು ತಿಳಿಯದವನು ವಿಧಾತೃಕ್ಕಿಂತ ಕಡೆ.

೧೬೫೭. ಧಾನ್ಯ ಹೆಚ್ಚಿದರೆ ದೋಮೆಗೆ ಏನು?

೧೬೫೮. ಧಾನ್ಯ ಹೆಚ್ಚಿದವಗೆ ಮಾನ್ಯ ಬರುವುದು.

೧೬೫೯. ಧಾನ್ಯ ಧನವಾಗದೇ? ಮಾನ್ಯಪೂಜ್ಯನಾಗನೇ?

೧೬೬೦. ಧಾರಾಳಕ್ಕೋಸ್ಕರ ದಂಡಣೆಯಾದರೆ
ಊರಾಳು ಏನು ಮಾಡ್ಯಾರು?

೧೬೬೧. ಧಾರಾಳಿದ್ದವನ ಹತ್ತರ ಹೇರಾಳ ಕೇಳಬಹುದು.

೧೬೬೨. ಧಾರೆ ಎರೆದು ಕೊಟ್ಟಮೇಲೆ
ಬೇರೆ ಮಾತು ಉಂಟೇ?

೧೬೬೩. ಧೀರನಿಗೆ ಯಾತಕೆ ನಾರೀ ಯೋಚನೇ?

೧೬೬೪. ಧ್ಯಾನವಿಲ್ಲದವ ಕಾನನಕ್ಕೆ ಹೋದರೇನು?

೧೬೬೫. ಧ್ಯಾನವಿಲ್ಲದಿದ್ದರೂ ಮೌನಬೇಕು.

೧೬೬೬. ಧ್ಯಾನವುಳ್ಳವನಿಗೆ ಜ್ಞಾನ.

೧೬೬೭. ಧ್ಯಾನಿಸಿ ಕೂತಾಗ್ಯೂ ಹಾನಿ ಬರುವುದು ತಪ್ಪೀತೇ ?

೧೬೬೮. ಧ್ಯಾನಿಸಿದವನೇ ಮೌನಿ.

೧೬೬೯. ಧ್ವಜದ ಗುರ್ತು ಗಜಕ್ಕೆ ತಿಳಿದೀತೇ ?

೧೬೭೦. ಧ್ವನಿ ಮಾಡಿದರೆ ಹನಿ ಬಿಟ್ಟೀತೇ ?

೧೬೭೧. ನಕ್ಕರೂ ಠಕ್ಕರಿಗೆ ನಂಬಬಾರದು.

೧೬೭೨. ನಕ್ಕರೂ ನೆಕ್ಕೋದು ಬಿಡದು.

೧೬೭೩. ನಕ್ಕು ನಕ್ಕು ಮಾತಾಡುವವ
ಕೊಕ್ಕರೆಗಿಂತ ಕಡೆ.

೧೬೭೪. ನಕ್ಷತ್ರವಾದರೂ *ಸುಕ್ಷೇತ್ರ*ದಲ್ಲಿರಬೇಕು.

೧೬೭೫. ನಕ್ಷತ್ರಾ ತಿಳಿದವನ ಸಾವು
ಕ್ಷಣ ಹೊತ್ತು ಆದರೂ ನಿಂತೀತೇ ?

೧೬೭೬. ನಕ್ಷತ್ರಾ ತಿಳಿದವ ಪಕ್ಷ ತಿಳಿಯಲಾರನೇ ?

೧೬೭೭. ನಕ್ಷತ್ರಾ ತಿಳಿಯದಿದ್ದರೂ ಭಕ್ಷಣೆಯಲ್ಲಿ ಕಡಿಮೆಯಿಲ್ಲ.

೧೬೭೮. ನಗದು ವ್ಯಾಪಾರ ತೊರೇ ನೀರಿನ ಹಾಗೆ.

೧೬೭೯. ನಗರದಲ್ಲಿದ್ದರೂ ನರಕ ಭಯ ತಪ್ಪೀತೇ ?

---

* ಸ್ವಕ್ಷೇತ್ರ.

೧೭೩೪. ನರಕದಲ್ಲಿ ಬಿದ್ದವಗೆ ಹರಕು ಬಟ್ಟೆಯಾದರೇನು ?

೧೭೩೫. ನರಕದಲ್ಲಿ ಬೀಳುವವನು
ಹರಿಕೆ ಹೇಳಿದರೆ ತಪ್ಪೀತೇ ?

೧೭೩೬. ನರಕದಲ್ಲಿ ಭೇದವಿಲ್ಲ
ಸ್ವರ್ಗದಲ್ಲಿ ರೋಗವಿಲ್ಲ.

೧೭೩೭. ನರಕದ ಸ್ವರೂಪಾ ನಾಯಿ ಬಲ್ಲದು.

೧೭೩೮. ನರಟುಗಾರನು ಒರಟಾಡುತ್ತಾನೆ.

೧೭೩೯. ನರಡ ಮನುಷ್ಯ ಕೊರಡಿಗೆ ಸಮಾನ.

೧೭೪೦. ನರಹತ್ಯಕ್ಕೆ ಹೆದರದವ ಕುರೀಹತ್ಯಕ್ಕೆ ಹೆದರ್‍ಯಾನೇ ?

೧೭೪೧. ನರಳಿದರೂ ಮರುಳು ಹೋಗದು.

೧೭೪೨. ನರಳಿದರೆ ಸಿಕ್ಕೀತೇ ಅರಳು ?

೧೭೪೩. ನರಗುಂದಕ್ಕೆ ಹೋದರೆ ಕುರು ತಪ್ಪೀತೇ ?

೧೭೪೪. ನರಿ ಕೂಗಿದರೆ ನಾಗಲೋಕ ಹಾಳೇ ?

೧೭೪೫. ನರಿ ಮುಣುಗುವಾಗ್ಯೆ ಲೋಕವೇ ಮುಣುಗಿತು.

೧೭೪೬. ನರಿ ಹುರಿಯಾದರೆ ಕರಿಯಾದೀತೇ ?

೧೭೪೭. ನರಿ ಹುಲಿ ವೇಷ ಹಾಕಿಕೊಂಡರೂ
ನಾರೋದು ಬಿಡಲಿಲ್ಲ.

೧೭೪೮. ನರಿ ಕೊಂಬಿದ್ದರೂ ನರರಿಗೆ ಹೆದರಬೇಕು.

೧೭೪೯. ನರಿ ಕೊಂಬಿದ್ದರೂ ಹುರಿಯೋದು ತಪ್ಪೀತೇ ?

೧೭೫೦. ನರೀ ಕೊಂದರೆ ಬರೀ ಹೇಲು.

೧೭೫೧. ನರೀ ಯತ್ನ ಮರೆಯತಕ್ಕದಲ್ಲ.

೧೭೫೨. ನರೀ ಕಥೆಯ ಮುಂದೆ ಹರೀಕಥೆಯೇ ?

೧೭೫೩. ನರೀ ಕಂಡರೆ ಕೊಟ್ಟೀತೇ ಉಪ್ಪು ಕಂಡುಗವ ?

೧೭೫೪. ನರೆ ಬಂತೆಂದು ಕೆರೇಲಿ ಹಾರಿದರೆ ಕಪ್ಪಾದೀತೇ ?

೧೭೫೫. ನರೆ ಬಂದರೆ ಮರೆ ಮಾಡಿದರೆ ಹೋದೀತೇ ?

೧೭೫೬. ನರೆ ಬಂದವ ಹೊರೆ ಹೊತ್ತಾನೇ ?

೧೭೫೭. ನರ್ತನವು ಕೀರ್ತನೆಗೆ ಸಮಾನವಾಗಬೇಕು.

೧೭೫೮. ನರ್ಮದೆಗೆ ಹೋದರೆ ಕರ್ಮ ತಪ್ಪೀತೇ ?

೧೭೫೯. ನಲ್ಲ ಮಲ್ಲನಾದರೂ ಚೆಲ್ಲೋದು ತಪ್ಪದು.

೧೭೬೦. ನವಗ್ರಹ ಕಾಡುವಾಗ್ಯೆ ಸ್ವಂತ ಗೃಹ ಏನು ಮಾಡುತ್ತದೆ ?

೧೭೬೧. ನವದ್ವಾರದಿಂದ ಹೋಗುವಾಗ್ಯೆ
ನಗರ ದ್ವಾರದವರು ಏನು ಮಾಡುವರು ?

೧೭೬೨. ನವಧಾನ್ಯ ಬೆಳೆದವನಿಗೆ ವ್ಯವಧಾನವಿಲ್ಲ.

೧೭೬೩. ನವಮಾಸ ತುಂಬಿದ ಮೇಲೆ
ನವರಾತ್ರೆ ಆಗಲಿ ಎಂದರೆ ನಿಂತೀತೇ ?

೧೭೬೪. ನವರತ್ನವಾದರೂ ಕನಕಕ್ಕೆ ಅಪೇಕ್ಷಿಸುತ್ತದೆ.

೧೭೬೫. ನವರತ್ನವಿದ್ದರೂ ನರರತ್ನ ಬೇಕು.

೧೭೬೬. ನವರಾತ್ರಿಯ ಮಧ್ಯೆ ಶಿವರಾತ್ರಿ ಬಂದೀತೇ?

೧೭೬೭. ನವದರೂ ಭವ ತಪ್ಪದು.

೧೭೬೮. ನವದರೆ ಜವ ಬಿಟ್ಟಾನೇ?

೧೭೬೯. ನವದವನಿಗೆ ನೋವು ತಪ್ಪದು.

೧೭೭೦. ನವಿಲು ಆಡಿದರೆ ಕೆಂಬೋತ ಪುಕ್ಕ ತೆರಕೊಂಡಿತು.

೧೭೭೧. ನವಿಲು ಕುಣಿಯೋದು ನೋಡಿ ಕುಕ್ಕುಟ ಕುಣೀತು.

೧೭೭೨. ನವುರು ಕೂಡಿ ನಗ
ನೊಣ ಕೂತು ವ್ರಣ.

೧೭೭೩. ನಷ್ಟಬಿದ್ದರೂ ಭ್ರಷ್ಟನಾಗಬಾರದು.

೧೭೭೪. ನಷ್ಟಬಿದ್ದರೆ ಪುಷ್ಟಿಯಾದಾನೇ?

೧೭೭೫. ನಷ್ಟವಾದವನಿಗೆ ಕಷ್ಟ ತಪ್ಪೀತೇ?

೧೭೭೬. ನಷ್ಟ ಕಾಲದಲ್ಲಿ ಎಷ್ಟಿದ್ದರೇನು?

೧೭೭೭. ನಸದ ಬೆಣ್ಣೆ ಗಸಿಯ ಹಾಗೆ.

೧೭೭೮. ನಸೀ ಭ್ರಮೆಯಿದ್ದವ ಮಸಿಯಾದರೂ ಹಾಕಿಕೊಂಡಾನು.

೧೭೭೯. ನಸುನಗೆಯಿಲ್ಲದವನ ಮೇಲೆ
ಬುಸು ಬುಸ ಎಂಬುವುದು.

೧೭೮೦. ನಸೆಯಿದ್ದ ಹಲಗೆ ಸಿಕ್ಕಿದರೆ ಹಸೆ ಯಾಕೆ?

೧೭೮೧. ನಸೆಗಸೆಯುಳ್ಳವನು ಹಸಿಯನೇ ?

೧೭೮೨. ನಹಿ ನಹಿ ಎಂಬವ ಮಹಿಗೆ ಹೊರೆ.

೧೭೮೩. ನಹುಷನಾದರೂ ನಾಕದಿಂದ ಬಿದ್ದನು.

೧೭೮೪. ನಹುಷನಿಗೂ ನೋವು ತಪ್ಪಲಿಲ್ಲ.

೧೭೮೫. ನಹುಷರಾಯನ ಭೋಷ ನಾಕದಲ್ಲಿ ಹೋಯಿತು.

೧೭೮೬. ನಳಚಕ್ರವರ್ತಿಯಾದರೂ ಅಳಿವು ತಪ್ಪಲಿಲ್ಲ.

೧೭೮೭. ನಳಿನಕ್ಕಿಂತ ಶ್ರೇಷ್ಠ ಪುಷ್ಪವಿಲ್ಲ
ಅಳಿಗಳಿಗಿಂತ ಮೇಲು ಹುಳುಗಳಿಲ್ಲ.

೧೭೮೮. ನಳಿನವಿಲ್ಲದ ಕೊಳವೂ ಅಳಿಗಳಿಲ್ಲದ ಹೂವೂ ಸಮ.

೧೭೮೯. ನಳ್ಳೀ ರಾಗಕ್ಕೆ ನರಿ ತಲೆ ತೂಗಿದ ಹಾಗೆ.

೧೭೯೦. ನಾಕದವರಿಗೆ ಲೋಕದ ಭಯವೇನು ?

೧೭೯೧. ನಾಕದ ಸುಖ ನಾಯಿಗೆ ತಿಳಿದೀತೇ ?*

೧೭೯೨. ನಾಗಲೋಕದ ಹತ್ತಿರ ನಾಕಲೋಕವೋ ?

೧೭೯೩. ನಾಗಪ್ಪನುಂಟು, ಜೋಗಪ್ಪನುಂಟು.

೧೭೯೪. ನಾಗಮಲ್ಲಿಗೇ ಹೂ ಪೂಗವಾದೀತೇ ?

೧೭೯೫. ನಾಗಸಂಪಿಗೆ ಮುಡಿಯಬೇಕಾದರೆ ನಾರುಯಾಕೆ ?

೧೭೯೬. ನಾಗರಪಂಚಮಿಯಾದರೆ ಹಾದರಗಿತ್ತಿಗೆ ಏನು ?

---

* ನಾಕದ ಸಂತೋಷ ಸೂಕರಗೆ ತಿಳಿದೀತೆ.

೧೭೯೭. ನಾಗರ ಹಾವಿನ ತಲೆ ಮೇಲೆ ಮಾಣಿಕ್ಯವಿದ್ದ ಹಾಗೆ.

೧೭೯೮. ನಾಗರ ಹಾವು ಅಂದಾಕ್ಷಣ
ವಿಷತಾಗಿ ಸಾಯುವನೇ ?

೧೭೯೯. ನಾಗರಿಕನ ಮಾನ ನಾಡಿನಲ್ಲಿ ಹೋಯಿತು.

೧೮೦೦. ನಾಗರಿಕರ ಮಾತು ನಗರದಲ್ಲಿ ಚಂದ.

೧೮೦೧. ನಾಗಲೀಕ ಪುರುಷಗೆ ಭೋಗವಿಲ್ಲದೆ ಹೋದೀತೇ ?

೧೮೦೨. ನಾಗವಾಸವಿದ್ದವರು ನಾಗಲೋಕಕ್ಕೆ ಹೋದಾರೇ ?

೧೮೦೩. ನಾಗವಲ್ಲಿ ಯೆಲೆಯಾದರೂ ಪೂಗೀಫಲವಿಲ್ಲದೆ ಸಲ್ಲದು.

೧೮೦೪. ನಾಗಸರಾ ಊದಿದರೆ ನಾಯಿ ಆಡೀತೇ ?

೧೮೦೫. ನಾಗಾಲಿನ ಮೃಗವಾದರೆ ನಾಕಕ್ಕೆ ಹೋದೀತೇ ?

೧೮೦೬. ನಾಚಿಕೆಯಿಲ್ಲದವರ ಕಂಡರೆ
ಆಚೆಗೆ ಹೋಗಬೇಕು.

೧೮೦೭. ನಾಟಕ ಧಾರಿಯು ಕಾಟಕಾ ಮಾಡಬಾರದು.

೧೮೦೮. ನಾಟರಾಗವಾದರೂ ಪಾಠವಿಲ್ಲದೆ ಬಾರದು.

೧೮೦೯. ನಾಟುವ ಅಂಟುಗಳು ನಾಲ್ಕೆಂಟು ದಿವಸದಲ್ಲೆ
ನೆಲೆಗೊಂಬುವವು.

೧೮೧೦. ನಾಟ್ಯದಲ್ಲಿ ಶ್ರೇಷ್ಠನಾದರೆ ಆಟದಲ್ಲೇ ಆದೀತು.

೧೮೧೧. ನಾಟ್ಯರಂಗಕ್ಕೆ ಹೋಗಿ ಊಟಾ ಅಪೇಕ್ಷಿಸಿದ ಹಾಗೆ.

೧೮೧೨. ನಾಡ ಜಂಗಮನೆಲ್ಲಿ, ನನ್ನ–
ಬೋಡಿ ಜಂಗಮನೆಲ್ಲಿ ?

೧೮೧೩. ನಾಡಿ ಆಡದವ ಓಡಿ ಬಂದಾನೇ ?

೧೮೧೪. ನಾಡಿ ನಿಂತ ಮೇಲೆ ಕಾಡುಪಾಲು.

೧೮೧೫. ನಾಡಿ ನೋಡದೆ ಮದ್ದು ಕೊಟ್ಟರೆ
ಕಾಡುರೋಗ ಬರುವುದು.

೧೮೧೬. ನಾಡೀ ಪರೀಕ್ಷೆ ಆಡು ಬಲ್ಲದೇ ?

೧೮೧೭. ನಾಡಿಗಿಬ್ಬರು ಅರಸರಾದರೆ
ಕೇಡು ಬಪ್ಪದು ತಪ್ಪದು.

೧೮೧೮. ನಾಡಿನ ಭೂತ ಪೀಡಿಸದೇ ಬಿಟ್ಟೀತೇ ?

೧೮೧೯. ನಾಡಿನಲ್ಲಿ ಇದ್ದರೂ ಆಡಿನ ಭಯ ತಪ್ಪಲಿಲ್ಲ.

೧೮೨೦. ನಾಡು ಬೆಳದರೆ ಹಾಡಿ ಉಣ್ಣಬಹುದು.

೧೮೨೧. ನಾಡು ಓಡುವಾಗ ಮೋಡಿಗಾರ ಬಂದ.

೧೮೨೨. ನಾಡು ಕೂಡಿದರೆ ನರಕಕ್ಕೆ ಕೇಡು.

೧೮೨೩. ನಾಡುಗಳೆಲ್ಲ ಓಡುವಾಗ
ಮೂಡೇ ಅಪೇಕ್ಷಿಸಿದ.

೧೮೨೪. ನಾಡುಗಳೆಲ್ಲ ನಾಡಿಯಾದರೆ ನಗರಕ್ಕೆ ಗೂಢೆ.

೧೮೨೫. ನಾಡೆಲ್ಲ ಬಿಟ್ಟರೂ ಸುಡುಗಾಡು ಬಿಡದು.

೧೮೨೬. ನಾಣ್ಯದ ಖೋಟ ಬಲ್ಲವನೇ ಸೆಟ್ಟಿ.

೧೮೨೭. ನಾಣ್ಯವಿದ್ದವ ನಾಯಕ.

೧೮೨೮. ನಾಣ್ಯವಿಲ್ಲದವ ನೊಣಕ್ಕಿಂತ ಕಡೆ.

೧೮೨೯. ನಾಣ್ಯದ ಲಕ್ಷಣ ವಾಣಿಜಗೆ ತಿಳಿಯದೇ ?

೧೮೩೦. ನಾತವಾಗಲಿ ಪರಿಮಳವಾಗಲಿ
ವಾತಕ್ಕೆ ಭೇದವಿಲ್ಲ.

೧೮೩೧. ನಾಥ ಬೇಕೆಂದು ಸ್ವಾರ್ಥಮಾಡಿದರೆ ವ್ಯರ್ಥವೇ ಸರಿ.

೧೮೩೨. ನಾಥನಾದರೂ *ಭೂತ*ಬಿಡದು

೧೮೩೩. ನಾದಿನಿಯಾದರೆ ಹಾದಿಲಿ ಬಿದ್ದಾಳೇ ?

೧೮೩೪. ನಾದಿದ ಹಿಟ್ಟಿಗೆ ಸ್ವಾದ ಹೋದೀತೇ ?

೧೮೩೫. ನಾನಾರಾಯನ ಹತ್ತಿರ ಹೋಗಿ
ನಾಲ್ಕು ಕಾಸು ಬೇಡಿದ.

೧೮೩೬. ನಾನು ನೀನು ಅಂದಾಕ್ಷಣ ಹಾನಿಯೇನು ?

೧೮೩೭. ನಾನು ನಾಯಕ, ನೀನು ನಾಯಕ
ಡೋಣಿ ಒತ್ತುವವ ದೊಣ್ಣಪ್ಪನಾಯಕನೋ ?

೧೮೩೮. ನಾನು ಹಿಡಿದ ಮೊಲಕ್ಕೆ ಮೂರೇ ಕಾಲು.

೧೮೩೯. ನಾನು ಹುಲಿಯಾದರೆ ನನ್ನ ಅಣ್ಣ ಹೆಬ್ಬುಲಿ.

---

* ನಾತ.

೧೮೪೦. ನಾನೂ ನಾಗಪ್ಪನೂ ಕೂಡಿ ಕಚ್ಚಿದ್ದು
ಎಂದು ಓತಿ ಹೇಳಿದಂತೆ.

೧೮೪೧. ನಾನೇ ಒಲ್ಲೆ ಅಂದರೆ
ನಮ್ಮಪ್ಪ ಯಾರಿಗೆ ಮದಿವೆ ಮಾಡ್ಯಾನು ?

೧೮೪೨. ನಾನೊಂದು ಬಗೆಯೆ, ದೇವರೊಂದು ಬಗೆದನು.

೧೮೪೩. ನಾಭಿಪರಿಯಂತರ ಉಟ್ಟ್ಯಾಕ್ಷಣ
ಲೋಭತ್ವ ಹೋದೀತೇ ?

೧೮೪೪. ನಾಮವಿದ್ದವಗೆ ಕಾಮ ಕಡಿಮೆಯೇ ?

೧೮೪೫. ನಾಮವಿದ್ದವ ಗ್ರಾಮದವರಿಗೆ ಬೇಕು.

೧೮೪೬. ನಾಮವಿದ್ದಾಗ್ಯೂ ನಂಬಿಕೆಯಿರಬೇಕು.

೧೮೪೭. ನಾಮವಿಲ್ಲದ ಅರಸನಿಗೆ ನೇಮವಿಲ್ಲದ ಪ್ರಧಾನಿ.

೧೮೪೮. ನಾಮವುಳ್ಳವ ನಾಕ ಪಡೆಯನೇ ?

೧೮೪೯. ನಾಮ ಹಾಕಿದವನಾದರೆ ಹೋಮಮಾಡ್ಯಾನೇ ?

೧೮೫೦. ನಾಮಕರಣವಿದ್ದಲ್ಲಿ ಹೋಮಕರಣ.

೧೮೫೧. ನಾಯಕನಿಲ್ಲದ ಊರಲ್ಲಿ ಕಾಯಕ ಸಿಕ್ಕೀತೇ ?

೧೮೫೨. ನಾಯಿ ಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ.

೧೮೫೩. ನಾಯಿ ಬೊಗಳಿದರೆ ದೇವಲೋಕ ಹಾಳೇ ?

೧೮೫೪. ನಾಯಿ ಬಾಲಾ ನಳಿಗೆಯಲ್ಲಿ ಹಾಕಿದರೆ
ಡೊಂಕು ಬಿಟ್ಟೀತೇ ?

೧೮೫೫. ನಾಯಿಗೆ ಕೆಲಸವಿಲ್ಲ, ಕುಂಡ್ರಲಿಕ್ಕೆ ಸಮಯವಿಲ್ಲ.

೧೮೫೬. ನಾಯಿಗೆ ನರೆ ಬಂದರೆ ಅಜ್ಜ ಅನ್ನಿಸಿಕೊಂಡೀತೇ ?

೧೮೫೭. ನಾಯಿಗೆ ನಾರಂಗದ ಉಪ್ಪಿನಕಾಯೇ ?

೧೮೫೮. ನಾಯಿ ತಿಂದ ಕಜ್ಜಾಯದ ಹಾಗೆ.

೧೮೫೯. ನಾಯಿ ಬಡಿಯಲಿಕ್ಕೆ ಬಣ್ಣದ ಕೋಲೇ ?

೧೮೬೦. ನಾಯಿ ಬಲ್ಲದು, ತೊಗಲು ಬಲ್ಲದು.

೧೮೬೧. ನಾಯಿ ಬಲ್ಲದೆ ದೇವರ ಜಗಲಿಯ ?

೧೮೬೨. ನಾಯಿ ಬೊಗಳಿ ಪಾಳ್ಯಕ್ಕೆ ಕೇಡುತಂತು.

೧೮೬೩. ನಾಯಿ ಹಸಿದಿತ್ತು, ಹಿಟ್ಟು ಹಳಸಿತ್ತು.

೧೮೬೪. ನಾಯಿಯ ಬೊಜ್ಜಕ್ಕೆ ಅಮೇಧ್ಯದ ಹೋಳಿಗೆ.

೧೮೬೫. ನಾಯಿಯೆತ್ತ ? ನಾಕಲೋಕವೆತ್ತ ?

೧೮೬೬. ನಾಯಿ ಸಾಯೋವರೆಗೆ ಕಾಲು ಕೊಳೆಯದೇ ?

೧೮೬೭. ನಾಯಿ ಸಂತೆಗೆ ಹೋಗಿ
ನಳಿಗೇಲಿ ಬಡಿಸಿಕೊಂಡಿತು.

೧೮೬೮. ನಾಯಿ ಹುಣ್ಣಿಗೆ ಬೂದಿಯೇ ಮದ್ದು.

೧೮೬೯. ನಾಯಿ ತಲೆಯಮೇಲಣ ಬುತ್ತಿಯಹಾಗೆ.

೧೮೭೦. ನಾಯಿಗೆ ಹೇಳಿದರೆ, ನಾಯಿ ತನ್ನ ಬಾಲಕ್ಕೆ ಹೇಳಿತು.

೧೮೭೧. ನಾಯಿಯುಳ್ಳೀ ಪಲ್ಯಕ್ಕೆ ಬೆಳ್ಳುಳ್ಳಿ ಒಗ್ಗರಣೆ.

೧೮೭೨. ನಾಯಿ ಮುಟ್ಟಿದ ಗಡಿಗೆ
ಮುಸುರೆಯಾದರೇನು ? ಮಡಿಯಾದರೇನು ?

೧೮೭೩. ನಾರಿಯಾಗಿ ಸಮ ನಡೆಯದಿದ್ದವಳೇ ಮಾರಿ.

೧೮೭೪. ನಾರಿಯಿಲ್ಲದ ಮನೆ, ನೀರು ಇಲ್ಲದ ಊರು
ನೂರು ಬಂದರೂ ತಾರಕ್ಕೆ ಬೇಡ.

೧೮೭೫. ನಾರೀ ಮೋರೆ ನೋಡಿ
ಊರೆ ಕೊತರೆ ನೀರು ಸಿಕ್ಕೀತೇ ?

೧೮೭೬. ನಾರು ಉಟ್ಟಾಕ್ಷಣ ನಾರದವನಾದಾನೇ ?

೧೮೭೭. ನಾರು ಕಟ್ಟಿದರೆ ನಾರೋದು ಬಿಟ್ಟೀತೇ ?

೧೮೭೮. ನಾಲಗೆ ಇದ್ದರೆ ಮಗ ಬದುಕ್ಯಾನು.

೧೮೭೯. ನಾಲ್ಕು ಕಿವಿವರಿವಿಗೆ ಏಕಾಂತ
ಆರು ಕಿವಿಗೆ ಬಿದ್ದಮೇಲೆ ಲೋಕಾಂತ.

೧೮೮೦. ನಾಲ್ವತ್ತರ ಮೇಲೆ ನಡಿಕೆ
ಎಂಬತ್ತರ ಮೇಲೆ ಬಡಿಕೆ
ತೊಂಬತ್ತಕ್ಕೆ ಶಯನ
ನೂರಕ್ಕೆ ಮರಣ.

೧೮೮೧. ನಾಲಿಗೆಯಿಲ್ಲದವನು ನಾರಾಯಣ ಅಂದಾನೇ !

೧೮೮೨. ನಾಲಿಗೆಯಿಲ್ಲದಿದ್ದರೆ ಕಾಲಿಗೆ ಬಡತನವೇ ?

೧೮೮೩. ನಾಲಿಗೆ ಒಳ್ಳೇದಾದರೆ ನಾಡೆಲ್ಲ ಒಳ್ಳೇದು.

೧೮೮೪. ನಾಲಿಗೆ ತಪ್ಪಿದವನು ನಾಯಿಗಿಂತ ಕಡೆ.

೧೮೮೫. ನಾಲಿಗೆ ವಾಸಿಯಿದ್ದವನ ಮಾತು.
ಹಾಲಿಗಿಂತ ಹೆಚ್ಚು.

೧೮೮೬. ನಾಲೆಯಿಲ್ಲದ ಊರೂ ಮಾಲೆಯಿಲ್ಲದ ಪ್ರಸ್ತವೂ ಒಂದೇ.

೧೮೮೭. ನಾವೆ ದಾಟಿಸುವುದಕ್ಕೆ ನಾಳವಾದೀತೇ ?

೧೮೮೮. ನಾವೆಲ್ಲರೂ ಒಂದೇ ಹರಿಗೋಲಲ್ಲಿ ಕುಳಿತಿದ್ದೇವೆ.

೧೮೮೯. ನಾಶವಾಗೋವರೆಗೆ ಆಶೆ ಬಿಡದು.

೧೮೯೦. ನಾಶ ಮಾಡುವವನು ದಾಸನಾದರೆ
ಲೇಸು ಮಾಡ್ಯಾನೇ ?

೧೮೯೧. ನಾಸ್ತಿಕನ ಮನಸ್ಸು ಸ್ವಸ್ಥವಿದ್ದೀತೇ ?

೧೮೯೨. ನಾಳೆ ನಾಳೆ ಎಂದು ನಾಳು ಹೋಗಿ
ಹೋಳೇಲಿ ಬಂದದ್ದು ಕೊಳ್ಳೇಲಿ ಹೋದೀತೇ ?

೧೮೯೩. ನಾಳೆ ಸಾಲೆಗೆ ಹೋದರೆ
ಕಬ್ಬು ತಿಂಬೋದು ಯಾರು ?

೧೮೯೪. ನಾಳೆಯೆಂಬುವುದು ಗಣಪತಿ ಮದುವೆಯ ಹಾಗೆ*

೧೮೯೫. ನಾಳೆ ಮಾಳ ಹಬ್ಬ
ಹೋಳಿಗೆ ಬೇಕಾದಷ್ಟು

೧೮೯೬. ನಾಳೆ ನಾಳೆಯೆಂದು ಸುಳ್ಳು ಹೇಳಿ
ಹೋಳಿಗೆ ತಪ್ಪಿಸಿದಿ.

---

* ಗಣಪತೀ ಮದುವೆ ನಿತ್ಯ ನಾಳೆ.

೧೮೯೭. ನಿಗದಿಯಿದ್ದವನಿಗೆ ಪಗದಿಯಿದ್ದೀತು.

೧೮೯೮. ನಿಜವಾಗಿ ಸಾಯುವವನ ಹಾಗೆ
ಮನೆ ತುಂಬ ಹೇತ.

೧೮೯೯. ನಿಜವಾಡಿದರೆ ನಿಷ್ಠುರ.

೧೯೦೦. ನಿತ್ಯ ದರಿದ್ರನಿಗೆ ನಿಶ್ಚಿಂತೆ.

೧೯೦೧. ನಿತ್ಯ ಪಯಣ ಬುತ್ತಿ ಕೇಡು.

೧೯೦೨. ನಿತ್ಯ ಮುಂಡೇ ಪಟ್ಟಣದಲ್ಲಿ
ಎಚ್ಚರವಿದ್ದವನೇ ಜಾಣ.

೧೯೦೩. ನಿತ್ಯಾ ಸಾಯುವವರಿಗೆ ಅಳುವವರು ಯಾರು.

೧೯೦೪. ನಿದಾನವಿದ್ದವನು ಸ್ವಾಧೀನ ತಪ್ಪ್ಯಾನೇ ?

೧೯೦೫. ನಿದ್ದೆಗೆಟ್ಟವನೋ ? ಬದ್ಧಿಗೆಟ್ಟವನೋ ?

೧೯೦೬. ನಿದ್ದೆ ಮಾಡಿದರೆ ಏನು
ಒದ್ದೆ ಬಟ್ಟೆ ಕೊಡಬಾರದೇ ?

೧೯೦೭. ನಿದ್ದೆ ಮಾಡಿದವನ ಕಾಲು ಒತ್ತಿದ ಹಾಗೆ.

೧೯೦೮. ನಿಧಿಯಿದ್ದರೂ ನಿಧಾನವಿರಬೇಕು.

೧೯೦೯. ನಿನ್ನ ಅಧಿಕಾರ ಹೋದರೆ
ನನ್ನ ಅಧಿಕಾರ ಹೋಯಿತೋ ?

೧೯೧೦. ನಿನ್ನ ಸಾಲಕ್ಕೆ ನನ್ನ ಹಲಸಿನ ಹಣ್ಣು.

೧೯೧೧. ನಿನ್ನ ಹೊರೆಗೆ ನನ್ನ ಮೆಟ್ಟೀ.

೧೯೧೨. ನಿನ್ನ ಬಡಬಡ ಮಾತು ಸಾಕು
ನನ್ನ ಒಡದ ತೆಂಗಿನಕಾಯಿ ತಾ.

೧೯೧೩. ನಿನ್ನಿಂದ ಎತ್ತು ಮಾರಿತು
ನನ್ನಿಂದ ಒಂಟೆ ಮಾರಿತು.

೧೯೧೪. ನಿನ್ನೆ ಉಂಡದ್ದು ಬಯಸೋದು ಯಾಕೆ ?

೧೯೧೫. ನಿನ್ನೆಗೆ ಮೊನ್ನೆಗೆ ಚನ್ನಕ್ಕ.

೧೯೧೬. ನಿಪುಣನಾದವನು ಕೃಪಣನಾಗಬಾರದು.

೧೯೧೭. ನಿಮ್ಮಲ್ಲಿ ಎಷ್ಟು ರೊಕ್ಕ ಉಂಟೋ
ನಮ್ಮಲ್ಲಿ ಅಷ್ಟು ಲೆಕ್ಕ ಉಂಟು.

೧೯೧೮. ನಿಮ್ಮನೆ ಕಾಟಕ್ಕೆ ನಮ್ಮನೆ ಬಟ್ಟೆಯೇ ?

೧೯೧೯. ನಿಮ್ಮನೆ ಯೆಮ್ಮೆ ಇದ್ದರೆ
ನಮ್ಮನೆ ಕೊಮ್ಮೆ ಇದೆ.

೧೯೨೦. ನಿಮ್ಮನೆ ಎಮ್ಮೆ ನಮ್ಮನೆ ಕರು
ತಾ ತಿಮ್ಮಕ್ಕಾ ಪಂಚೇರು ತುಪ್ಪವ.

೧೯೨೧. ನಿಮ್ಮ ಚಿತ್ತ ದುಡೀಬೇಕಾದರೆ
ನಮ್ಮ ಸತ್ತ ಎಮ್ಮೆ ಬರಬೇಕು.

೧೯೨೨. ನಿಮಿಷ ತಡದರೆ ಅನಿಮಿಷನಾದಾನೇ ?

೧೯೨೩. ನಿಯತ್ತಿದ್ದವನಲ್ಲಿ ನ್ಯಾಯ ಚೆಂದ.

೧೯೨೪. ನಿಯಮವುಳ್ಳವನ್ನ ಕಂಡರೆ
ಯಮನಿಗೂ ಭಯ.

೧೯೨೫. ನಿಯಮಿಸಲಾರದ ಸೊಸೆಗೆ ಪಾಯಸವೇ ಕಹಿ.

೧೯೨೬. ನಿರಂತರ ಬರುವವ ಪರ್ಯಂತರ ಬಾರನೇ ?

೧೯೨೭. ನಿರರ್ಥಕವಾದ ಕೆಲಸಕ್ಕೆ ಸ್ವಾರ್ಥ ಪಡೋದು ಯಾಕೆ ?

೧೯೨೮. ನಿರಾಕಾರವಾದ್ದು ಪ್ರತ್ಯಕ್ಷವಾದರೆ
ಆಕಾರವಾದ್ದು ಕಾಣದೆ ಹೋದೀತು.

೧೯೨೯. ನಿರಾಶೆಯುಳ್ಳವನಲ್ಲಿ ಆಶೆಮಾಡಿದರೆ
ಭೋಷ ಹೋಗದೇ ?

೧೯೩೦. ನಿರೂಪವಿದ್ದರೆ ಸ್ವರೂಪ.

೧೯೩೧. ನಿರ್ಬಂಧ ಮಾಡಿದವನ ಸ್ವಬಂಧ ಹೋದೀತೇ ?

೧೯೩೨. ನಿಲವಿಲ್ಲದೆ ಹಲದಿಂದ ಹೊಲದ ಉಕ್ಕೆ
ನಿಲ ನೋಡಿ ಸಂಸಾರ.

೧೯೩೩. ನಿಲಕಡೆಯಿಲ್ಲದವನಲ್ಲಿ ಊಟಕ್ಕೆ ಹೋಗಿ
ಇದ್ದ ಹಲ್ಲು ಉದುರಿಸಿಕೊಂಡ.

೧೯೩೪. ನಿಲ ಬಾಕಿ ಕೇಳಲಿಕ್ಕೆ ಹೋಗಿ
ಗೊಲ್ಲ ಮಿಂಡನಿಂದ ಪೆಟ್ಟು ತಿಂದ.

೧೯೩೫. ನಿಲುಕಿದರೆ ಸಿಕ್ಕದೇ ಇದ್ದದ್ದು
ಕೂತರೆ ಸಿಕ್ಕೀತೇ ?

೧೯೩೬. ನಿಲ್ಲಲಾರದ ಮುದುಕಿ ಕಲ್ಲು ಹೊತ್ತಾಳೇ ?

೧೯೩೭. ನಿಲ್ಲದಿರುವ ಮಲ್ಲನ ಸಂಗಡ
ಕಲ್ಲು ಹೊತ್ತೀಯಾ ಅಂದ ಹಾಗೆ.

೧೯೩೮. ನಿಲ್ಲಲಾರದ ಗುಲ್ಲು ಮಾಡಿ ಕೊಲ್ಲಿಸಿಕೊಂಡ.

೧೯೩೯. ನಿಲ್ಲು ಎಂದರೆ ಹಲ್ಲು ಕಿಸಿದು
ಗುಲ್ಲು ಮಾಡಿದ.

೧೯೪೦. ನಿವಾಳಿ ಮಾಡೋದಕ್ಕೆ ಹೋಗಿ ದಿವಾಳಿಯಾದ.

೧೯೪೧. ನಿವಾಳಿಗೆ ತಂದ ಬಟ್ಟೆ ಕಚ್ಚೆಗೆ ಆದರೆ
ದಿವಾಳಿಗೆ ಏನು ಮಾಡ್ಯಾನು ?

೧೯೪೨. ನಿಶ್ಚಯಕ್ಕೆ ಪಕ್ಷಪಾತವೇ ?

೧೯೪೩. ನಿಷಿದ್ಧವಾದ ವಸ್ತು ಅಶುದ್ಧವೆಂದರೆ
ಕಸೂತಿ ಹಾಕಿದ್ದು ಯಾಕೆ ?

೧೯೪೪. ನಿಷ್ಠೆಯಿದ್ದವಗೆ ನಷ್ಟವಿಲ್ಲ.

೧೯೪೫. ನಿಷ್ಠೆಯಿಲ್ಲದವ ಭ್ರಷ್ಟನಾದಾನು.

೧೯೪೬. ನಿಸ್ತೂಕನಾದವನು ಮಸ್ತಕವನ್ನು ಎತ್ತಲಾರ.

೧೯೪೭. ನೀ ಕಪಟಿಯಾದರೆ ನಿನಗೆಲ್ಲರೂ ಕಪಟಿಗಳೇ.

೧೯೪೮. ನೀಗಿದರೂ ಬಡತನ ಬಿಡದು.

೧೯೪೯. ನೀಗುವವನಿಗೆ ಭಾಗ ಸಿಕ್ಕಿದರೂ
ಭೋಗಕ್ಕೆ ಬಾರದು.

೧೯೫೦. ನೀಚನ ಸಂಗವೂ ಈಚಲ ನೀರೂ
ನಾಚಿಗೆ ಕೆಡಿಸುವುದು.

೧೯೫೧. ನೀಚರ ಸಭೆಗೆ ಹೋದರೆ
ನಾಚಿಕೆಗೇಡಾಗುವುದು.

೧೯೫೨. ನೀಚರ ಸಂಗ ಅಭಿಮಾನ ಭಂಗ.

೧೯೫೩. ನೀಚನಿಗೆ ಊಚು ವಸ್ತು ಕೊಟ್ಟರೂ
ನಾಚಿಕೆಗೇಡಿತನ ಹೋದೀತೇ?

೧೯೫೪. ನೀಟಾಗಿ ನಡೆದರೆ ಕಾಟ ಬಾರದು.

೧೯೫೫. ನೀಡದವನಲ್ಲಿ ಹೋಗಿ ಬೇಡಿಕೊಳ್ಳುವವ ಮೂಢನು.

೧೯೫೬. ನೀತಿಯುಳ್ಳವನ ಮನೆ ದೀಪದಲ್ಲಿ
ಜಾತಿ ಭೇದವೇನು?

೧೯೫೭. ನೀತಿಯುಳ್ಳವನ ಮಾತು ಕೋತಿಯಾದೀತೆ?

೧೯೫೮. ನೀತಿಯಳ್ಳವನು ಖ್ಯಾತಿ ಪಟ್ಟಾನು.

೧೯೫೯. ನೀನು ನಾನು ಎಂಬ ಭೇದ ಜ್ಞಾನಿಗುಂಟೇ?

೧೯೬೦. ನೀನು ಓಲೆ ಕಿವಿಯವಳನ್ನು ನೋಡಿದರೆ
ನಾನು ಒಂಟೇ ಕಿವಿಯವಳನ್ನು ನೋಡುತ್ತೇನೆ.

೧೯೬೧. ನೀನೇ ಸೆಟ್ಟ ಅಂದರೆ
ಮಾನದ ಅಂಡಿನಲ್ಲಿ ಅಳದ ಹಾಗೆ.

೧೯೬೨. ನೀರಟ್ಟ ಮುದ್ದೆ ಗನವಾಯಿತು.

೧೯೬೩. ನೀರ ಕಡೆ ನಾಟಿದ ಮರ
ಚಿಗುರದೆ ಬಿಟ್ಟೀತೇ ?

೧೯೬೪. ನೀರಲ್ಲಿ ನೋಡಿದವನ್ನ ಊರಲ್ಲಿಡಬಾರದು
ಎಣ್ಣೇಲಿ ನೋಡಿದವನ್ನ ಕಣ್ಣಲಿ ನೋಡಬಾರದು.

೧೯೬೫. ನೀರಲ್ಲಿ ಬರದ ಬರಹಾನ ಹಾಗೆ.

೧೯೬೬. ನೀರಾಟಕ್ಕೆ ಹೋಗಿ, ಹೇರಾಟ ಕಳಕೊಂಡ.

೧೯೬೭. ನೀರಾದರೂ ಸಾರಬಾರದು.

೧೯೬೮. ನೀರಾದರೂ ಮಜ್ಜಿಗೆ, ಮರುಳಾದರೂ ತಾಯಿ.

೧೯೬೯. ನೀರಿನ ಒಳಗಣ ಮುಳ್ಳಿನ ಹಾಗೆ.

೧೯೭೦. ನೀರಿನ ಮೇಲಣ ಗುಳ್ಳೇ ಹಾಗೆ.

೧೯೭೧. ನೀರಿನಿಂದ ಪಾಪ ಹೋದರೆ
ನೀತಿಯಿಂದ ಪಾಪ ಹೋಗದೇ ?

೧೯೭೨. ನೀರಿನೊಳಗಣ ಕಪ್ಪೆ ಬಯ್ಲಿಗೆ ಹಾಕಿದ ಹಾಗೆ.

೧೯೭೩. ನೀರಿಲ್ಲದ ತಾವು ಊರು ಕಟ್ಟಿದ ಹಾಗೆ.

೧೯೭೪. ನೀರಿನದು ನೀರಿಗೆ ಹೋಯಿತು
ಹಾಲಿನದು ಹಾಲಿಗೆ ಹೋಯಿತು.

೧೯೭೫. ನೀರುಳ್ಳಿ ನೀರಲ್ಲಿ ತೊಳವರೆ
ನಾರೋದು ತಪ್ಪೀತೇ ?

೧೯೭೬. ನೀರುಳ್ಳಿಯವನ ಸಂಗಡ ಹೋರಾಟಕ್ಕೆ ಹೋದರೆ
ಮೋರೆಯಲ್ಲಿ ನಾರದೇ?

೧೯೭೭. ನೀರು ಇದ್ದರೆ ಊರು
ನಾರಿ ಇದ್ದರೆ ಮನೆ.

೧೯೭೮. ನೀರು ಎಲ್ಲಾ ಒಂದೇ
ಬಡಿದ ಕೋಲು ಮಾತ್ರ ಬೇರೆ.

೧೯೭೯. ನೀರು ಹಳ್ಳಕ್ಕೆ ಹೋದೀತೇ ಹೊರ್ತು
ದಿನ್ನೆಗೆ ಹೋದೀತೇ?

೧೯೮೦. ನೀರು ಹೊರುವ ಬಡ್ಡಿಗೆ
ಊರು ಪಾರುಪತ್ಯವು ಯಾಕೆ?

೧೯೮೧. ನೀರುಳ್ಳಿ ಮುಟ್ಟದ ಬಟ್ಟ
ಬೆಳ್ಳುಳ್ಳಿ ನುಂಗಿಬಿಟ್ಟ.

೧೯೮೨. ನೀರು ಸೇದಿದ ಹಾಗೆ ಬರುತ್ತದೆ
ಮಾತು ಆಡಿದ ಹಾಗೆ ಬರುತ್ತದೆ.

೧೯೮೩. ನೀರೊಳಗಣ ಕಪ್ಪೆ ನೀರು ಕುಡಿಯದೆ ಬಿಟ್ಟೀತೇ?

೧೯೮೪. ನೀರೊಳಗೆ ಮೋರೆ ನೋಡಿ
ಮರನೇರಿದ ಹಾಗೆ.

೧೯೮೫. ನೀರೊಳಗೆ ಹೋಮ ಮಾಡಿದ ಹಾಗೆ.

೧೯೮೬. ನೀಲದ ಮಣಿ ಪವಣಿಸಿದ ನೂಲಾದರೆ
ನೀಲದ ಕ್ರಯ ಬಾಳೀತೇ?

೧೯೮೭. ನೀಲ ಬಾಲಕೆಗೆ ಚಂದ
ಕೋಲು ಓಲೆಕಾರಗೆ ಚಂದ.

೧೯೮೮. ನೀಲ ಮಾರಿ ಓಲೆ ಮಾಡಿದರೂ
ಸಾಲದ ಉಪದ್ರ ತಪ್ಪಲಿಲ್ಲ.

೧೯೮೯. ನೀಲಕಂಠನ ಮದಿವಿಗೆ
ನೀಲೀಸೊಪ್ಪಿನ ಪಳದೆ.

೧೯೯೦. ನೀಲಮಣಿ ಬೇಕಾದರೆ ನೀಲಗಿರಿಗೆ ಹೋಗಬೇಕೇ ?

೧೯೯೧. ನೀಲೀ ಮಾತು ನಿಜವಲ್ಲ.

೧೯೯೨. ನೀವಾದರೇನು ನಾವಾದರೇನು
ಬಾವೀಲಿ ನೀರು ಬಂದರೆ ಸರಿ.

೧೯೯೩. ನೀವು ನಾಗಲೋಕದವರಾದರೆ
ನಾವು ನಾಕಲೋಕದವರು.

೧೯೯೪. ನೀಳವಾದರೂ ಗಾಳಿಗೆ ಏನು ?

೧೯೯೫. ನೀಳದರ ನೆರಳೂ ಜೋಳಿಯ ಮಾತೂ
ಗಾಳಿಯ ಹಾಗೆ.

೧೯೯೬. ನೀಳದರ ಮೇಲೆ ನಿಂತರೆ ಗಾಳಿಗೇನು ?

೧೯೯೭. ನುಗ್ಗಿದವನಿಗೆ ಹಗ್ಗ ತಪ್ಪೀತೇ ?

೧೯೯೮. ನುಗ್ಗೆಯಾದರೂ ಮುಗ್ಗುಲಿಗೆ ಬಂದೀತೇ ?

೧೯೯೯. ನುಚ್ಚಾದರೂ ಹುಚ್ಚಗೆ ಬೇಕು.

೨೦೦೦. ನುಚ್ಚಾದರೂ ಹೆಚ್ಚಿಂತ ಭಾವಿಸಬೇಕು.

೨೦೦೧. ನುಚ್ಚಿಗೆಗೆ ಬೆಚ್ಚುವವ ನೊಚ್ಚಗೆ ಮಾತಾಡಿದರೂ
ನಚ್ಚಿಗೆ ಸಾಲದು.

೨೦೦೨. ನುಚ್ಚು ಉಂಡ ಮಗನು ಇಚ್ಚೇಲಿ ಇರುವನು
ತುಪ್ಪ ಸಕ್ಕರೆ ಉಂಡ ಅಳಿಯ ತಿಪ್ಪೇಲಿ ನಿಂತು ಬೊಗಳುವನು.

೨೦೦೩. ನುಚ್ಚು ಒಂದು ಮಾಣಿಕವು.

೨೦೦೪. ನುಡಿಯಾದರೂ ಕಡೆಯಬಾರದು.

೨೦೦೫. ನುಡಿಗೆ ನಡೆ ಸರಿ ಬೀಳಬೇಕು.

೨೦೦೬. ನುಡಿ ಪುರಾತನದು, ನಡೆ ಕಿರಾತನದು.

೨೦೦೭. ನುಡಿಯಿಂದ ಊರು, ನುಡಿಯಿಂದ ಕಾಡು.

೨೦೦೮. ನುರಿದ ಗಂಧದ ಕೊರಡು ಪರಿಮಳಿಸುವುದು.

೨೦೦೯. ನುಸಿಗೆ ಯಾಕೆ ಕಸಕಸೇ ಪಾಯಸ ?

೨೦೧೦. ನೂಕಿಸಿಕೊಂಡು ಹೋಗೋದಕ್ಕಿಂತ
ಮೇಕೆ ಕಾಯೋದು ಲೇಸು.

೨೦೧೧. ನೂಕುವವನ ಮನೆ ಊಟಕ್ಕಿಂತ
ಬೋಕಿಯ ಊಟ ಲೇಸು.

೨೦೧೨. ನೂಕುವವನು ಹಾಕನು
ಬೋಕಿಯವನು ಕೊಡನು.

೨೦೧೩. ನೂಕುನುಗ್ಗಿನಲಿ ಮಾತನಾಡಬಾರದು
ನಾಚಿಸುವವರ ಮನೇ ಬಾಗಲು ತುಳಿಯಬಾರದು.

೨೦೧೪. ನೂತನವಾದದಕ್ಕೆ ಸೋತವನು
ನಾತದ ವಸ್ತುವಿಗೆ ಸೋತಾನೇ ?

೨೦೧೫. ನೂತದ್ದೆಲ್ಲ ಹಂಜಿ, ಕಲಿತದ್ದೆಲ್ಲ ಗಂಜಿ.

೨೦೧೬. ನೂರಾದರೆ ಲೋಲ, ಸಾವಿರಾದರೆ ಸಂಪನ್ನ.

೨೦೧೭. ನೂರಿಗೆ ನೂರಾದರೂ ಕೆಟ್ಟವನ ನಂಬಬಾರದು.

೨೦೧೮. ನೂರು ಆರು ಇದ್ದರೂ ಕೇರಿ ಬೇಕು.

೨೦೧೯. ನೂರು ಹಾರಿ ಹೋಯಿತು
ಎರಡು ಬೆನ್ನಟ್ಟಿತು.

೨೦೨೦. ನೂಲಿಗೆ ತಕ್ಕ ಶೀಲೆ
ಸಾಲಿಗೆ ತಕ್ಕ ಎಡೆ.

೨೦೨೧. ನೂಲು ಹಿಡಿದು ಜೋಲುವವನ
ಕಾಲು ಹಿಡಿದು ನೇತಾಡಿದ.

೨೦೨೨. ನೂಲೋ ಹೆಂಡತಿಯ ಬಿಟ್ಟು
ಹೇಲೋ ಮೂಳಿಯ ತಂದ.

೨೦೨೩. ನೆಕ್ಕೋ ನಾಯಿಗೆ ಲಿಂಗವೇನು ? ಪೀಠವೇನು ?

೨೦೨೪. ನೆಗಳಿ ಹಾರಿದರೆ ಮುಗಿಲಿಗೆ ಮುಟ್ಟೇತೇ ?

೨೦೨೫. ನೆಗಡಿಯುವ ಸೀನುವಾಗ್ಯೆ
ದಗಡಿ ಮಗ ಎಂದರೆ ನಿಂತಾನೇ ?

೨೦೨೬. ನೆಗಡಿಯಂಥ ಬಡ್ಡು ಇಲ್ಲ
ಬುಗಡಿಯಂಥ ಒಡವೆ ಇಲ್ಲ.

೨೦೨೭. ನೆಗದ ಸೀರು ಅಗದು ನೋಡಬೇಕೆಂದು ಬಗದ.

೨೦೨೮. ನೆಗ್ಗಿದ್ದು ಬಗ್ಗೀತೇ ?

೨೦೨೯. ನೆಚ್ಚಿದ ಎಮ್ಮೆ ಕೋಣನಾಯಿತು.

೨೦೩೦. ನೆಚ್ಚಿದ ಕಾರ್ಯ ಪಚ್ಚಾದರೆ
ಕಿಚ್ಚು ಯಾತಕೆ ?

೨೦೩೧. ನೆಚ್ಚಿದ ಸಿಪಾಯಿಗೆ ಬಚ್ಚಿಟ ಕುದುರೆ.

೨೦೩೨. ನೆಟ್ಟಾನ ಕಲ್ಲು ನಿಟ್ಟೋಟ ಓಡೀತೇ ?

೨೦೩೩. ನೆತ್ತರು ಕುರುವಿನ ನೋವು ಸಲ್ಲ
ಮಂತ್ರಾ ಮಾಡುವರ ಸೊಗಸು ಸಲ್ಲ.

೨೦೩೪. ನೆತ್ತಿಯ ವಾಸನಿಸಿದರೆ ಸತ್ತಿಗೆ ಹಿಡಿದ ಹಾಗೆಯೇ !

೨೦೩೫. ನೆತ್ತೀ ಮೇಲೆ ಮಚ್ಚೆ ಇದ್ದರೆ
ಮೊಚ್ಚೆ ಹಾಕಿಕೊಳ್ಳಬಾರದೇ ?

೨೦೩೬. ನೆನಪಿಲ್ಲದ ಕೆಲಸ ಹಣಕಿದರೆ ಆದೀತೇ ?

೨೦೩೭. ನೆನಸಿದರೆ ಮನಸ್ಸು ಸ್ವಸ್ಥವಾದೀತೇ ?

೨೦೩೮. ನೆನದ ಕೆಲಸಕ್ಕೆ ಮನವೇ ಸಹಾಯ.

೨೦೩೯. ನೆನೆದ ಕಲ್ಲು ಮೆತ್ತಗೆ ಆದೀತೇ ?

೨೦೪೦. ನೆಯ್ದಿಲಿಯಾದರೂ ಕೊಯ್ದರೆ ಬಯ್ದಲೆ ಮೇಲೆ.

೧೯೬ ೨೦೪೧. ನೆಯ್ಯುವವನಿಗೆ ಲಾಳಿ, ನಗಕ್ಕೆ ಗಾಳಿ.

೨೦೪೨. ನೆರಮನೆ ಹಾಳಾದರೆ ಕರುಗಳ ಕಟ್ಟುವೆನು.

೧೯೭ ೨೦೪೩. ನೆರಮನೆ ಜಕಣಿಗೆ ತವರ ಮನೆ ಸೀರೆಯೋ ?

೧೯೮ ೨೦೪೪. ನೆರಮನೇ ಹೋಳಿಗೆಗೆ ತುಪ್ಪ ಕಾಯಿಸಿದ ಹಾಗೆ.

೨೦೪೫. ನೆರಹೊರೆಯವರು ಕೂಡಿದರೂ
೧೯೯ ಬರುವ ಕೇಡು ತಪ್ಪಿಸಲಾರರು.

೧೯೯ ೨೦೪೬. ನೆಲಕ್ಕೆ ಹಲ, ರಾಜ್ಯಕ್ಕೆ ಬಲ.

೧೯೯ ೨೦೪೭. ನೆಲದಲ್ಲಿ ಉಣ್ಣುವವನ ಸಂಗಡ
ಎಲೇ ಕೇಳಿದ ಹಾಗೆ.

೧೯೯ ೨೦೪೮. ನೆಲದ ಸಂಗಡ ಸಾಲ ಮಾಡಿ
ಪಲಾಯನ ಮಾಡಿದಂತೆ.

೧೯೯ ೨೦೪೯. ನೆಲದೊಳಗೆ ಇದ್ದರೂ ಖಲನಿಗೆ ಹೆದರಬೇಕು.

೧೯೯೩ ೨೦೫೦. ನೆಲ ಬಲವಂತನಿಗೆ, ಕುಲ ನೇಮವಂತನಿಗೆ.

೨೦೫೧. ನೆಲು ಹರಿದರೆ ನೆಲದ ಮೇಲೆ.

೧೯೯೬ ೨೦೫೨. ನೆಲು ಹರಿದು ಬೆಕ್ಕಿನ ಮುಂದೆ ಬಿದ್ದ ಹಾಗೆ.

೧೯೯೭ ೨೦೫೩. ನೆಲೆಯುಲ್ಲದವನ ಮಾತು ಹೊಲೆಗಿಂತ ಹೆಚ್ಚು.

೧೯೯೮ ೨೦೫೪. ನೆಲ್ಲೀಕಾಯಿ ಹುಲ್ಲಿಗೆ ಆದೀತೇ ?

೧೯೯೯ ೨೦೫೫. ನೆಲ್ಲೂ ಮೊಸರು ಕಲಿಸಿದ ಹಾಗೆ.

೨೦೫೬. ನೆವದಿಂದ ಹೋದರೆ ನೋವು ತಪ್ಪೀತೇ ?

೨೦೫೭. ನೆವರಿಕೊಂಡು ಹೋಗುವವ ಬವರಕ್ಕೆ ಬಂದಾನೇ ?

೨೦೫೮. ನೆಸ್ತ್ರಾಟಕ್ಕೆ ಹೋಗಿ, ಮಸ್ತ್ರಾಟ ಹೆಚ್ಚಿತು.

೨೦೫೯. ನೆಸೆ ಕೊಟ್ಟವ ಹಸೆ ಕದ್ದುಕೊಂಡು ಹೋದ.

೨೦೬೦. ನೆಳಲು ಇದ್ದ ಮರ ಚಂದ
ನಳಿನವಿದ್ದ ಕೊಳ ಚಂದ.

೨೦೬೧. ನೆಳಲು ಬೂರಗಕ್ಕಿಲ್ಲ, ಕೂಳಗೆ ನೀತಿಯಿಲ್ಲ.

೨೦೬೨. ನೆಳಲು ಸೇರಬೇಕೆಂದು
ಹಳುವಕ್ಕೆ ಹೋದ ಹಾಗೆ.

೨೦೬೩. ನೆಳಲು ನೋಡಿ ನಿಜ ಮರೆತ.

೨೦೬೪. ನೇಗಲು ಉತ್ತರೆ ಹೊಲ
ಹಾಲು ಇದ್ದರೆ ಗೋವು.

೨೦೬೫. ನೇಣು ಹಾಕಿಕೊಳ್ಳುವವನ ಹತ್ತಿರ.
ಕೋಣ ಕೇಳಿದ ಹಾಗೆ.

೨೦೬೬. ನೇತಾಡುವವನ ಹತ್ತಿರ ಮಾತಾಡಲಿಕ್ಕೆ ಹೋದರೆ
ಜೋತಾಡುವುದು ಸಿಕ್ಕೀತು.

೨೦೬೭. ನೇಪಾಳ ದೇಶದ ಭೂಪಾಲನಾದರೆ
ಗೋಪಾಳದವನಿಗೆ ಏನು ?

೨೦೬೮. ನೇಮವಿದ್ದರೆ ವ್ರತ, ಹೋಮವಿದ್ದರೆ ಶೋಭನ.

೨೦೬೯. ನೇಮ ಹೆಚ್ಚಿ ಹೋಮ ಮಾರಿ
ಶ್ವಾನನ ಹಾಗೆ ತಿರಿಗಾಡುವುದಾಯಿತು.

೨೦೭೦. ನೇಯ್ದುದೇ ಬಟ್ಟೆ, ಉಳಿದದೇ ಕರೆ.

೨೦೭೧. ನೇಯಿದರೆ ಬಟ್ಟೆ, ಕಟ್ಟಿದರೆ ಮೊಟ್ಟೆ.

೨೦೭೨. ನೇಯಿಗೆ ನೇಯ್ದರೆ ಕೂಡೀತಲ್ಲದೆ
ನೆಗದರೆ ಕೂಡೀತೇ ?

೨೦೭೩. ನೇಯಿಗೆಯಾದರೂ ನಯವಿದ್ದರೆ ನಾಣ್ಯ ಸಿಕ್ಕೀತು.

೨೦೭೪. ನೇಯಿಗೆಯವನ ಕೈಯೂ, ಓದುವವನ ಬಾಯೂ
ಚುರುಕಾಗಿರಬೇಕು.

೨೦೭೫. ನೇಯಿಗೆಯವನ ಮಟ್ಟು ಕಟ್ಟುವವ ಬಲ್ಲ.

೨೦೭೬. ನೇಯಿಗೆಯವನಿಗೆ ಯಾಕೆ ಕೋತೀ ಮರಿ ?

೨೦೭೭. ನೇವಳವಾದರೆ ಹವಳದ್ದು ಆದೀತೇ ?

೨೦೭೮. ನೈವೇದ್ಯಕ್ಕೆ ನಾಯಿ ಮುಟ್ಟಿದರೆ
ನೈಷಧಪತಿ ಏನು ಮಾಡ್ಯಾನು ?

೨೦೭೯. ನೊಗ ಇದ್ದರೆ ನೇಗಿಲು
ಮಗ ಇದ್ದರೆ ತಂದೆ.

೨೦೮೦. ನೊಣ ಕೂಡಿಸಿದ ಜೇನು ಮಣವಾದರೆ
ಹೆಣ ಹೊತ್ತವನಿಗೇನು ?

೨೦೮೧. ನೊಣ ಕೂತರೆ ವ್ರಣ ಹೊರ್ತು
ಹೆಣ ಜೀವಿಸೀತೇ ?

೨೦೮೨. ನೊಣದಂತೆ ತಾನೂ ಕೆಟ್ಟು, ಪರರನ್ನೂ ಕೆಡಿಸಿದ.

೨೦೮೩. ನೊಣ ಬಿದ್ದ ಊಟ ಮಾಡಿ
ಕಳಕಳಿಸಿದ ಹಾಗೆ.

೨೦೮೪. ನೊಣ ಮಣುವಾದೀತೇ?

೨೦೮೫. ನೊರೆ ಕಾರುವಾಗ್ಯೆ ಹರ ಎಂದರೆ ಬಿಟ್ಟೀತೇ?

೨೦೮೬. ನೊಸಲಿನ ಬರಹ ಬಸಲೆಯಿಂದ ಒರಸಬಹುದೇ?

೨೦೮೭. ನೋಟಕ್ಕೆ ತಕ್ಕ ವೇಷ
ಆಟಕ್ಕೆ ತಕ್ಕ ಭಾಷಾ.

೨೦೮೮. ನೋಟವಿಲ್ಲದೆ ಓಟಮಾಡಿದರೆ ಕಾಟಾ ತಪ್ಪದು.

೨೦೮೯. ನೋಟಕ್ಕೆ ನಾಟ್ಯ, ಊಟಕ್ಕೆ ಕೂಟ.

೨೦೯೦. ನೋಟಕ್ಕೆ ಹೋಗಿ ಊಟಾ ಬಿಟ್ಟು
ಕಾಟಾ ತಂದುಕೊಂಡ.

೨೦೯೧. ನೋಟದಿಂದ ಕಣ್ಣು ಓಟೆ ಆಯಿತು.

೨೦೯೨. ನೋಟ ನೆಟ್ಟಗಿದ್ದರೆ ಕಾಟ ಹ್ಯಾಗೆ ಬಂದೀತು.

೨೦೯೩. ನೋಟ ನೋಡಿದರೆ ಕಾಟ ಉಂಟು.

೨೦೯೪. ನೋಟ ಪರರಿಚ್ಛೆ. ಊಟ ಮನದಿಚ್ಛೆ.

೨೦೯೫. ನೋಡದ ಕಣ್ಣಿಗೆ ಕಾಣದ ಗೊಂಬೆ.

೨೦೯೬. ನೋಡದ ಕೆಲಸಕ್ಕೆ ಆಡದ ಸಂಬಳ.

೨೦೯೭. ನೋಡದ ವಸ್ತು ಆಡಿದರೆ ಬಂದೀತೇ ?

೨೦೯೮. ನೋಡದೆ ಆಡಿದರೆ ಕೇಡು ತಪ್ಪದು.

೨೦೯೯. ನೋಡಿಕೊಂಡು ಉಣ್ಣದಿದ್ದರೆ
ಮಾಡಿದವಳಿಂದ ಏನು ?

೨೧೦೦. ನೋಡಿದರೆ ಕಾಣದ್ದು ಓಡಿದರೆ ಸಿಕ್ಕೀತೇ ?

೨೧೦೧. ನೋಡಿದಷ್ಟೂ ಮಗ ಬಡವನಾದರೆ
ಮಾಡಿದವರ ಪುಣ್ಯ.

೨೧೦೨. ನೋಡಿ ನಡೆಯೋನಿಗೆ ಕೇಡು ಬಾರದು.

೨೧೦೩. ನೋಡಿ ಬರದರೆ ಪರರನ್ನು ತಿಂದಿತು
ನೋಡದೆ ಬರದರೆ ತನ್ನನ್ನೆ ತಿಂದಿತು.

೨೧೦೪. ನೋಡಿ ಗೆಯ್ಯೋಕೆ, ಉಂಡು ಮಲಗೋಕೆ
ಯಾರೂ ಕಲಿಸ ಬೇಡ.

೨೧೦೫. ನೋಡಿ ಬಾ ಅಂದರೆ ಸುಟ್ಟುಬಂದ.

೨೧೦೬. ನೋತವಾದರೆ ಹೇತರೆ ತಪ್ಪೀತೇ ?

೨೧೦೭. ನೋತವುಳ್ಳವನು ಕೋತಿಯ ಹಾಗೆ.

೨೧೦೮. ನೋವು ಕಾಮಿಸುವರಿಲ್ಲ
ನಾಯಿ ಬೊಗಳಿಸುವರಿಲ್ಲ.

೨೧೦೯. ನ್ಯಾಯದಿಂದ ಆಯ ಹುಟ್ಟುವುದು.

೨೧೧೦. ನ್ಯಾಯಕ್ಕೆ ಸಹಾಯವೇ ಬಲ.

೨೧೧೧. ನ್ಯಾಯವಿಲ್ಲದವ ನಾಯಿಗಿಂತ ಕಡೆ.

೨೧೧೨. ನಂಜಿಗೆ ಮದ್ದಿಲ್ಲ, ಬಂಜೆಗೆ ಮಕ್ಕಳಿಲ್ಲ.

೨೧೧೩. ನಂಜುರೋಗದವನಿಗೆ ಗಂಜಿ ಸಲ್ಲದು.

೨೧೧೪. ನಂಟು ಊಳಿಯಬೇಕು
ರತ್ನವೂ ಉಳಿಯಬೇಕು.

೨೧೧೫. ನಂಟು ನೋಡದೆ ಹೋಯಿತು
ಸಾಲ ಕೇಳದೆ ಹೋಯಿತು.

೨೧೧೬. ನಂದರಾಯನ ಬಂಡಾರ ನಾಯಿನರಿ ತಿಂದು ಹೋಯಿತು.

೨೧೧೭. ನಂಬಿದವಗೆ ಇಂಬು, ನಂಬದವಗೆ ಅಂಬು.

೨೧೧೮. ನಿಂದನೆ ಮಾಡುವವನಿಗೆ ವಂದನೆಯಿಲ್ಲ.

೨೧೧೯. ನಿಂದೆಯಿಲ್ಲದೆ ಬೊಂದಿ ಹೋಗದು.

೨೧೨೦. ನಿಂಬೇ ಹಣ್ಣಾದರೆ ಹಂಬಲಿಸಿದರೆ ಬಂದೀತೇ ?

೨೧೨೧. ನುಂಗಲಾರದ ತುತ್ತೂ, ತುಟಿ ಮೀರಿದ ಹಲ್ಲೂ ಸಮ.

೨೧೨೨. ನುಂಗಿದ ತುತ್ತಿನ ರುಚಿ
ಮತ್ತೆ ಬಯಸಿದ ಹಾಗೆ.

೨೧೨೩. ನೆಂಟರು ದೂರ ಇರಬೇಕು
ಬಾವಿ ಹತ್ತಿರ ಇರಬೇಕು.

೨೧೨೪. ನೆಂಟರೆಲ್ಲ ಖರೆ, ಕಂಟಲೆ ಚೀಲಕ್ಕೆ ಕೈಹಾಕಬೇಡಿ.

೨೧೨೫. ನೆಂಟರ ಮನೆಗೆ ಸಾಯಿ ಹೊಕ್ಕರೆ
ಎಂಟು ಊರಿಗೆ ಬೆರಕೆ.

೨೧೨೬. ನೆಂಟರೊಳಗಣ ಸಾಲ ಮೆಟ್ಟನೊಳಗಣ ಕಲ್ಲು.

೨೧೨೭. ನೆಂಟ ನೆಂಟಗೆ ಮಾರಿ
ಕುಂಟೆತ್ತು ಹೊಲಕ್ಕೆ ಮಾರಿ.

೨೧೨೮. ನೊಂದವನಿಗೆ ನೋಯಿಸಿದರೆ ಕೊಂದ ಪಾಪವಲ್ಲವೇ ?

೨೧೨೯. ನೊಂದಿಸಿದಷ್ಟೂ ಉರಿದರೆ
ಹಂದಿ ಏನು ಮಾಡೀತು ?

೨೧೩೦. ಪಕ ಪಕ ನಗುವವರನ್ನು ನೋಡಿ
ಬಿಕ್ಕಿ ಬಿಕ್ಕಿ ಅತ್ತ.

೨೧೩೧. ಪಕಾಲಿ ನೀರು ಕುಡಿಯುವವಗೆ
ಪಕ್ಷ ಪ್ರಾಯಶ್ಚಿತ್ತ ಯಾಕೆ ?

೨೧೩೨. ಪಕ್ಕವಿದ್ದರೆ ಹಕ್ಕಿ
ಹಿಡೀಲಿ ಕೊಟ್ಟ ರೊಕ್ಕಕ್ಕೆ ದುಕ್ಕವೇನು ?

೨೧೩೩. ಪಕ್ಕವಿಲ್ಲದಕ್ಕೆ ಕೊಕ್ಕು ಇದ್ದರೆ ಪ್ರಯೋಜನವೇನು ?

೨೧೩೪. ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ.

೨೧೩೫. ಪಕ್ಷವಿಲ್ಲದವಗೆ ಲಕ್ಷವೇನು ?

೨೧೩೬. ಪಕ್ಷವಿಲ್ಲದಿದ್ದರೂ ಭಕ್ಷಕ್ಕೆ ಕಡಿಮೆಯೇ ?

೨೧೩೭. ಪಕ್ಷ ಭೇದಾ ಮಾಡಿದವಗೆ ಶಿಕ್ಷೆ ತಪ್ಪದು.

೨೧೩೮. ಪಕ್ಷ ಮಾಡುವವ ರಕ್ಷಕನಾದಾನೇ ?

೨೧೩೯. ಪಕ್ಷಿಗೆ ಆಕಾಶವೇ ಬಲ
ಮತ್ಸ್ಯಕ್ಕೆ ನೀರೇ ಬಲ.

೨೧೪೦. ಪಕ್ಷಿಗೆ ಗೂಡು, ಮಕ್ಕಳಿಗೆ ತಾಯಿ.

೨೧೪೧. ಪಗಡೆಯಾಡಿ ಪಾಂಡವರು ಕೆಟ್ಟರು.

೨೧೪೨. ಪಗದಿ ಕೊಡದವನಿಗೆ ನಿಗದಿಮಾಡಿ ಏನು ?

೨೧೪೩. ಪಚ್ಚ ಮಾತಾಡುವವನು ಬೆಚ್ಚು ಬೀಳನೇ ?

೨೧೪೪. ಪಚ್ಚೆಯಾದರೂ ಮೆಚ್ಚಿ ತೆಗೆದುಕೋಬೇಕು.

೨೧೪೫. ಪಚ್ಚೆಯಾದರೆ ಸುಚ್ಚಿಗಿಂತ ಕಡಮೆಯೇ ?

೨೧೪೬. ಪಟ ಹಾರಿದರೆ ಮಠ ಹಾರೀತೇ ?

೨೧೪೭. ಪಟಿಂಗನ ಸಂಗಡ ಪಟ್ಯಾಂಗಕ್ಕೆ ಹೋದರೆ
ಪಡಿ ದವಸ ಕೇಡು.

೨೧೪೮. ಪಟಿಂಗ ಪಟ್ಟೆಯುಟ್ಟುಕೊಂಡರೆ
ಪಟ್ಟಕ್ಕೆ ಸಂದಾನೇ ?

೨೧೪೯. ಪಟ್ಟ ಕಟ್ಟಿದರೂ ಪಟ್ಟು ಹೋಗಲಿಲ್ಲ.

೨೧೫೦. ಪಟ್ಟಣಕ್ಕೆ ಅರಸು ಬಲ
ಕಟ್ಟಣಕ್ಕೆ ಕಲ್ಲು ಬಲ.

೨೧೫೧. ಪಟ್ಟಣಕ್ಕೆ ಹೋದರೂ ಕುಟ್ಟೋದು ತಪ್ಪದು.

೨೧೫೨. ಪಟ್ಟಣದಲ್ಲಿ ಪಟ್ಟಾಭಿಷೇಕವಾದರೆ
ನಟ್ಟಡವಿಯಲ್ಲಿದ್ದವರಿಗೆ ಏನು ?

೨೧೫೩. ಪಟ್ಟೆಯಿಲ್ಲದಿದ್ದರೆ ಜಟ್ಟಿಗೆ ಬಡತನವೇ ?

೨೧೫೪. ಪಟ್ಟೇ ವೀಳ್ಯಕ್ಕೆಂತ ಹೋಗಿ
ಕುಟ್ಟಿಸಿಕೊಂಡು ಬಂದ.

೨೧೫೫. ಪಟ್ಟೇ ವೀಳ್ಯವಾದರೆ ಬಟ್ಟರಿಗಾಗದೇ ?

೨೧೫೬. ಪಟ್ಟೆಗೆ ಮಯ್ಲಿಗೆ ಸಲ್ಲ
ಮುತ್ತಯ್ದೆಗೆ ಹಾದರ ಸಲ್ಲ.

೨೧೫೭. ಪಟ್ಟೆಯುಟ್ಟರೂ ಮಟ್ಟೆಯವನು ಶ್ರೇಷ್ಠನೇ ?

೨೧೫೮. ಪಟ್ಟೇ ಸೀರೆಯುಟ್ಟರೂ ಮೊಟ್ಟೆ ಹೊರುವುದು ತಪ್ಪಲಿಲ್ಲ.

೨೧೫೯. ಪಡವಲಕಾಯಿ ಎಸರು ಎಂದು
ನಡುಮನೆ ಬಿಟ್ಟು ಓಡಿ ಹೋದ.

೨೧೬೦. ಪಡದ ಮಗಸಿಗೆ ಕಡದ ಬೆಣ್ಣೆ ಆಗದೇ ?

೨೧೬೧. ಪಡದಷ್ಟೂ ಹಡದದ್ದಕ್ಕೆ ಹೋಗೆ
ಕಡೆಗೆ ಬಡತನ ತಪ್ಪಲಿಲ್ಲ.

೨೧೬೨. ಪಡಿ ಕೊಟ್ಟರೂ ಪರಡೋದು ಬೇಡ.

೨೧೬೩. ಪಡಿಗೆ ಬಂದವಗೆ ಕಡಿಯಕ್ಕಿ ಆಗದೇ ?

೨೧೬೪. ಪಡುವಣ ಮನೆಗೆ ಮೂಡಣ ದೀಪ.

೨೧೬೫. ಪಡುಸಾಲೇ ಊಟ
ನಡು ಸಾಲೇ ನಿದ್ರೆ.

೨೧೬೬. ಪಣಕಟ್ಟುವವನ ಹತ್ತರ ಹೆಣಗಬಹುದು
ಹಣ ಕೂಡಿಸುವವನ ಹತ್ತರ ನಿಲ್ಲಲಾಗದು.

೨೧೬೭. ಪತಿಯಿದ್ದವಳೇ ಸತಿ
ಯತಿಯಿದ್ದದ್ದೇ ಕ್ಷೇತ್ರ.

೨೧೬೮. ಪತಿಯಿಲ್ಲದ ಸತಿ, ಗತಿಯಿಲ್ಲದ ದಾತಾರ.

೨೧೬೯. ಪತಿಶೂನ್ಯಳಾದರೂ ಮತಿಶೂನ್ಯಳಾಗಬಾರದು.

೨೧೭೦. ಪತ್ಯ ಹಾಕುವವನ ಬೆರಳು ಕಚ್ಚಿದ ಹಾಗೆ.

೨೧೭೧. ಪತ್ಯ ಮಾಡಿ ಮಾಡಿ ಪಿತ್ತ ಹೆಚ್ಚಿತು.

೨೧೭೨. ಪತ್ನಿಯಿದ್ದವನು ಯತ್ನ ಮಾಡಿದರೆ
ರತ್ನ ಸಿಕ್ಕೀತೇ ?

೨೧೭೩. ಪತ್ರೆಯಿಲ್ಲದ ಪೂಜೆ, ಪತ್ರವಿಲ್ಲದ ಸಾಲ.

೨೧೭೪. ಪದ ಕಸ, ಸ್ವರ ಸರ.

೨೧೭೫. ಪದ ತಪ್ಪಿದರೆ ತ್ರಾಸು ತಪ್ಪೀತೇ ?

೨೧೭೬. ಪದದಂತೆ ತಾಳ, ಮದದಂತೆ ಗರ್ವ.

೨೧೭೭. ಪದ ಬಾರದಿದ್ದರೆ ಮದ ಹೋದೀತೇ ?

೨೧೭೮. ಪದಕ ಹೋಯಿತೆಂತ ಬದುಕಲಾರನೇ ?

೨೧೭೯. ಪದಕಕ್ಕಿಂತ ಬದುಕು ಲೇಸು.

೨೧೮೦. ಪದರುಗಾಣಿಸಿದ ಬುದ್ಧಿ
ಗದರಿಸಿದರೂ ಹೋಗದು.

೨೧೮೧. ಪದವಿ ಸಿಕ್ಕಿದ ಮೇಲೆ
ಪದುಮನಾಭನ ಗೊಡವೆ ಏನು ?

೨೧೮೨. ಪದಾರ್ಥವು ರುಚಿಯಿಲ್ಲದವಗೆ
ಕದನ್ನವು ಯಾಕೆ ?

೨೧೮೩. ಪದೇ ಪದೇ ಹೇಳಿದರೂ
ಸದೆ ಕೂಡಿಸೋದು ಬಿಡ.

೨೧೮೪. ಪದ್ಯ ತಿಳಿಯದಿದ್ದರೂ ಗದ್ಯವಾದರೂ ತಿಳಿಯದೇ ?

೨೧೮೫. ಪಯಣಕ್ಕೆ ಹೋಗುವವಗೆ
ಅಯನದ ಸುದ್ದಿ ಯಾಕೆ ?

೨೧೮೬. ಪಯಸ್ವಿನೀ ನದಿಗೆ ಹೋದರೆ ಪಾಯಸ ಸಿಕ್ಕೀತೇ.

೨೧೮೭. ಪರರನ್ನು ಕಾಯೋಕ್ಕಿಂತ ಪಶುಗಳ ಕಾಯೋದು ಲೇಸು.

೨೧೮೮. ಪರರ ಕೇಡು ತನ್ನ ಕೇಡು.

೨೧೮೯. ಪರಕೆ ಹೇಳಿಕೊಂಡರೆ ಪರಕ್ಕೆ ಹೋದಾನೇ ?

೨೧೯೦. ಪರಡೀ ರುಚೀ ಕರಡಿಗೆ ತಿಳಿದೀತೇ ?

೨೧೯೧. ಪರತರವಾದದ್ದು ಹರದರಲ್ಲಿ ಸಿಕ್ಕೀತೇ ?

೨೧೯೨. ಪರದೇಶಕ್ಕೆ ಹೋದರೆ ಪರವಾಸ ತಪ್ಪದು.

೨೧೯೩. ಪರನಿಂದೆ ಗೃಹ ಕ್ಷಯ
ಯತಿನಿಂದೆ ಕುಲಕ್ಷಯ.

೨೧೯೪. ಪರಪಕ್ಷ ಮಾಡುವವನಿಗೆ ಪರಲೋಕವಿಲ್ಲ.

೨೧೯೫. ಪರಮಗತಿಯೆಂಬುದು ನೆರೆಮನೆ ಹಳ್ಳಿಯೇ ?

೨೧೯೬. ಪರಮಾತ್ಮನನ್ನ ತಿಳಿಯದಿದ್ದರೆ
ಪರಮಾನ್ನ ತಿನ್ನಲಿಕ್ಕೆ ಕಡಿಮೆಯೇ ?

೨೧೯೭. ಪರಮೇಶ್ವರನಾದರೂ ಸ್ಮಶಾನ ತಪ್ಪಲಿಲ್ಲ.

೨೧೯೮. ಪರಲೋಕಕ್ಕೆ ಹೋದವಗೆ ನರಲೋಕ ಗೊಡವೆಯೇ ?

೨೧೯೯. ಪರಲೋಕವೆಂಬುದು ಪಲಹಾರದ ಗುಡ್ಡೆಯೇ ?

೨೨೦೦. ಪರವಾಸ ಮಾಡುವವನ ಭರವಸೆ ಸಲ್ಲದು.

೨೨೦೧. ಪರಸು ಸಿಕ್ಕಿದರೂ ವಿರಸವಿದ್ದವಗೆ ಸಲ್ಲದು.

೨೨೦೨. ಪರವಾಸ ಮಾಡಿದರೂ ಸಹವಾಸ ಬೇಕು.

೨೨೦೩. ಪರಸೇ ಯಜಮಾನನೆಂದು
ಪರರ ಹೇಸಿಗೆ ತೆಗೆಸಿದ ಹಾಗೆ.

೨೨೦೪. ಪರಹಿತ ಮಾಡಿ ತನ್ನ ಹಿತ ತಪ್ಪಿಸಿಕೊಂಡ.

೨೨೦೫. ಪರರ ಒಡವೆ ಸಿಕ್ಕಿದರೆ
ಹರಕಾದರೇನು ? ಮುರಕಾದರೇನು ? ತುರಕ ಬಿಟ್ಟಾನೇ ?

೨೨೦೬. ಪರಾಧೀನನಾದರೆ ನರಜನ್ಮ ಹೋದೀತೇ ?

೨೨೦೭. ಪರಾನ್ನಕ್ಕೆ ಹೋಗಿ ಪ್ರಾಣಸಂಕಟ ಬಂತು.

೨೨೦೮. ಪರಿಮಳದ ಹೂ ಪರಿಮಳದಲ್ಲೇ ಇರಬೇಕು.

೨೨೦೯. ಪರೀಕ್ಷೆಗೆಂದು ವಿಷಾನು ತಿಂದರೂ
ಬಾಯಿ ನಾರದೇ ಇದ್ದೀತೇ ?

೨೨೧೦. ಪರ್ವತವೇರಿದವನು ಪರಲೋಕಕ್ಕೆ ಹೋದಾನೇ ?

೨೨೧೧. ಪರ್ವಕಾಲದಲ್ಲಿ ಹಾರ್ವನಾದರೆ ಗರ್ವ ಯಾಕೆ ?

೨೨೧೨. ಪರ್ವಕಾಲದಲ್ಲಿ ಹರ್ವೆಸೊಪ್ಪು ತಿಂದರೂ
ಗರ್ವ ಹೋದೀತೇ ?

೨೨೧೩. ಪರ್ವತ ಅರವತ್ತು ಗಳಿಗೆ ಪ್ರಸವವೇದನೆಪಟ್ಟು
ಕಡೆಗೆ ಚುಂಡಿಲಿ ಹೆತ್ತಿತಂತೆ.

೨೨೧೪. ಪಲ್ಲಕ್ಕೀಲಿ ಕೂತರೂ ನಲ್ಲನಲ್ಲಿ ಹೋಗೋದು ತಪ್ಪದು.

೨೨೧೫. ಪಲ್ಲೀ ಶಕುನ ಕೇಳಿ
ಕಲ್ಲಿನಿಂದ ಹೊಡಿಸಿಕೊಂಡ.

೨೨೧೬. ಪಶುವಿದ್ದರೆ ಪವಿತ್ರ, ಹಸಿವಿದ್ದರೆ ಊಟ.

೨೨೧೭. ಪಳ್ಳಿಮಾಡಿದರೂ ತಳ್ಳಿಬಿಟ್ಟು ಹೋಗದು.

೨೨೧೮. ಪಾಕಾ ಮಾಡಿದವನು ನಾಕವ ಸೇರುವನೋ ?

೨೨೧೯. ಪಾಗಾರ ಹಾರದವನು ಸಾಗರ ಹಾರ್‍ಯಾನೇ ?

೨೨೨೦. ಪಾಟಿಯಿಲ್ಲದವನು ಸಾಟಿಯೊಗದಾನೇ ?

೨೨೨೧. ಪಾಠದಲ್ಲಿ ಕಡಿಮೆಯಾದರೂ
ಮಾತಿನಲ್ಲಿ ಕಡಿಮೆ ಇಲ್ಲ.

೨೨೨೨. ಪಾಠ ಬಾರದಿದ್ದರೂ ಆಟ ಭರುತ್ತದೆ.

೨೨೨೩. ಪಾಠವಿಲ್ಲದಿದ್ದರೂ ನೋಟವಿರಬೇಕು.

೨೨೨೪. ಪಾಠಾ ಹೇಳುವವಗೆ ಕೋಟದ ಸುದ್ದಿಯಾಕೆ ?

೨೨೨೫. ಪಾಡ್ಯ ಪಾಠಕ್ಕಾಗದು, ಮೌಢ್ಯ ಕೆಲಸಕ್ಕಾಗದು.

೨೨೨೬ ಪಾಡ್ಯವಾದರೂ ಸಡ್ಯವಿರಬಾರದು.

೨೨೨೭. ಪಾಣಿಗ್ರಹಣವಾದರೆ ಗಾಣಿಗಿತ್ತಿಗೆ ಏನು ?

೨೨೨೮. ಪಾತಾಳವಾದರೆ ಪಾತ್ರಮೇಳದವರಿಲ್ಲವೇ ?

೨೨೨೯. ಪಾತ್ರವಿದ್ದಷ್ಟೇ ನೀರು ಸಿಕ್ಕೀತು.

೨೨೩೦. ಪಾದಕ್ಕೆ ಪಾಪೋಸು, ಪಾಪಿಗೆ ಪುಟಗೋಸಿ.

೨೨೩೧. ಪಾದಕ್ಕೆ ತಕ್ಕ ಪಾಪೋಸು
ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

೨೨೩೨. ಪಾದಕ್ಕೆ ಬಿದ್ದರೂ ನಾಗಪ್ಪ ಕಚ್ಚದೆ ಬಿಡ.

೨೨೩೩. ಪಾದುಕ ಸಿದ್ಧಿಯಿದ್ದರೂ ನಾರೋದು ತಪ್ಪದು.

೨೨೩೪. ಪಾದ್ಯಕ್ಕೆ ನೀರು ಇಲ್ಲ
ಊಟಕ್ಕೆ ಮಜ್ಜಿಗೆಯೆತ್ತಿ ?

೨೨೩೫. ಪಾನಕಾ ಕುಡಿಯುವಾಗ್ಯ ಮಾಣಿ ಕುತ್ತಿಗೇ ಹಿಡಿದ.

೨೨೩೬. ಪಾನಕಾ ಬೇಕೆಂದು ಶುನಕಕ್ಕೆ ಕರದ ಹಾಗೆ.

೨೨೩೭. ಪಾಪ ಬರಬಾರದೆಂದು ಶಾಪ ಕೊಂಡ.

೨೨೩೮. ಪಾಪದಲ್ಲಿ ತಾಪ ತಪ್ಪದು.

೨೨೩೯. ಪಾಪ ಹೋಗಬೇಕೆಂದು ತೋಪಿಯಿಟ್ಟುಕೊಂಡ.

೨೨೪೦. ಪಾಪಕ್ಕೆ ಹೆಂಡತಿ, ಪುಣ್ಯಕ್ಕೆ ತಾಯಿ.

೨೨೪೧. ಪಾಪ ಕ್ಷಯವಾಗಲೆಂದು ಕಾಸಿಗೆ ಹೋದರೆ
ಕುಲಕ್ಷಯವಾಗಲೆಂದು ಮೊಸಳೆ ಎಳಕೊಂಡು ಹೋಯಿತು.

೨೨೪೨. ಪಾಪಾತ್ಮನನ್ನ ಪರಮಾತ್ಮ ತಿಳಿಯಾನೇ ?

೨೨೪೩. ಪಾಪಿಯಿದ್ದಲ್ಲಿ ಪಾತಾಳ.

೨೨೪೪. ಪಾಪಿಗಳ ದೇವರೆಂದು ಪಾಪೋಸಿನಲ್ಲಿ ಹೊಡೆಯಬಾರದು.

೨೨೪೫. ಪಾಪಿಗೆ ಪರಮಾಯು, ಲೋಭಿಗೆ ಚಿರಾಯು.

೨೨೪೬. ಪಾಪಿಗೆ ಪರಲೋಕವಿಲ್ಲ
ಪಾಪೋಸಿಗೆ ಮಡಿಯಿಲ್ಲ.

೨೨೪೭. ಪಾಪಿಗೆ ಪಾರಾಯಣದ ಯೋಚನೆಯುಂಟೇ ?

೨೨೪೮. ಪಾಪಿ ಗಳಿಸಿದ್ದು ಪರರ ಪಾಲು.

೨೨೪೯. ಪಾಪಿ ಪರಕ್ಕೆ ಹೋದಾನೇ ?

೨೨೫೦. ಪಾಪಿ ಪರರ ಕಷ್ಟ ಬಲ್ಲನೇ ?

೨೨೫೧. ಪಾಪಿಯ ಕೆಡಿಸದವರು ಇಲ್ಲ
ಪುಣ್ಯವಂತನ ಬದುಕಿಸಿದವರಿಲ್ಲ.

೨೨೫೨. ಪಾಪಿಯಾದವ ಭೂಪತಿಯಾದಾನೋ ?

೨೨೫೩. ಪಾಪಿಯ ಧನ ಪರರಿಗೆ
ಲೋಭಿಯ ಧನ ಕತ್ತೆಗೆ.

೨೨೫೪. ಪಾಪಿ ಸಮುದ್ರಕ್ಕೆ ಹೋದರೂ
ಮೊಣಕಾಲುದ್ದ ನೀರು.

೨೨೫೫. ಪಾಪಿಯ ಗಂಟು ಪರರಿಗೆ
ಮುಂಡೇ ಗಂಟು ಕಂಡವರಿಗೆ.

೨೨೫೬. ಪಾಯಸವಾದರೂ ಆಯಾಸದ ಹೊತ್ತು ಸಿಕ್ಕದು.

೨೨೫೭. ಪಾಯಸಕ್ಕೆ ಆಯಾಸ ಪಟ್ಟು
ವಾಯಸಾ ಕೊಂದು ತಿಂದ.

೨೨೫೮. ಪಾರಣೆಯಾದರೂ ಪಾರಾಯಣ ತೀರಲಿಲ್ಲ.

೨೨೫೯. ಪಾರಾಯಣ ಮಾಡುವಾಗ ಭಕ್ತ
ಮದ್ಯಪಾನ ಮಾಡುವಾಗ ಶಾಕ್ತ.

೨೨೬೦. ಪಾರುಪತ್ಯಗಾರನಾದರೆ ಹಾರಿ ಹೋದಾನೋ ?

೨೨೬೧. ಪಾಲಕನು ಬಾಲಕನಾದರೆ ಹಾಲಿಗೇನು ದರಿದ್ರವೋ ?

೨೨೬೨. ಪಾಲನೆಯಿಲ್ಲದಿದ್ದರೆ ಲಾಲನೆಗೆ ಕಡಿಮೆಯೇ ?

೨೨೬೩. ಪಾಲಿನಲ್ಲಿ ಹರಿವೆಯಾದರೂ ಹಾಕಬಾರದು.

೨೨೬೪. ಪಾಲು ತೀರಿಹೋದರೆ
ಹಾಲು ಕೊಡಬಾರದೇ ?

೨೨೬೫. ಪಾಲು ಮಾಡಿದರೆ ಹಾಳು.

೨೨೬೬. ಪಾವಲೆಯಿಲ್ಲದಿದ್ದರೆ ದರಣ ಕೊಡಬಾರದೇ ?

೨೨೬೭. ಪಾಷಾಣದ ಭೋಗ ಸ್ಮಶಾನದ ಸ್ಥಿತಿ ಯಾರು ಬಲ್ಲರು ?

೨೨೬೮. ಪಾಷಾಂಡಿಗೆ ಲೋಕವಿಲ್ಲ
ಪಾಷಾಣಕ್ಕೆ ರೋಗವಿಲ್ಲ.

೨೨೬೯. ಪಿತವಿಲ್ಲದ ಮಗನ್ನ ಸಾಕಿದವನೇ ತಂದೆ.

೨೨೭೦. ಪಿತಾ ಮಾತಾ ಮುನಿದ ಸುತನಿಗೆ ಗತಿಯೇನು ?

೨೨೭೧. ಪಿತೂರಿ ಮಾಡಿದರೂ ತುತೂರೀ ಧ್ವನಿ
ತಡಿಸಲಿಕ್ಕೆ ಕೊಡಲಿಲ್ಲ.

೨೨೭೨. ಪಿತೂರಿ ಮಾಡಿದವ ಪಿತನಿಗೆ ಬಲ್ಲನೇ ?

೨೨೭೩. ಪಿತ್ತ ತಲೆಗೇರಿದವಗೆ ಶಂಖ ಕಪ್ರಗೆ ಕಂಡರೆ
ಅದರ ಬಣ್ಣ ಕೆಟ್ಟೀತೇ ?

೨೨೭೪. ಪಿತ್ತವಿದ್ದರೆ ವಿತ್ತ ಸಿಕ್ಕೀತೇ ?

೨೨೭೫. ಪಿತ್ತ ಭ್ರಮೆಯಿದ್ದವಗೆ ಚಿತ್ತಭ್ರಮೆಯಾಗದೇ ?

೨೨೭೬. ಪಿರಂಗೀ ಗುಣ ಪರಂಗಿ ಅರಿಯನೇ ?

೨೨೭೭. ಪಿರಿಯಾದಿ ಮಾಡದ ಹೊರ್ತು
ದಾಯಾದಿ ಕೇಳ.

೨೨೭೮. ಪಿಶಾಚ ಬಿಟ್ಟರೂ ನಿಶಾಚರ ಬಿಡ.

೨೨೭೯. ಪಿಸರು ತೆಗೆದರೂ ಪಿಶಾಚ ಬಿಡುವುದಿಲ್ಲ.

೨೨೮೦. ಪಿಸರು ಇದ್ದವನ ಹತ್ತರ ಉಸುರಬಾರದು.

೨೨೮೧. ಪಿಸುಣನ ದ್ರವ್ಯ ಲೋಭಿ ಬಯಸಿದ ಹಾಗೆ.

೨೨೮೨. ಪೀಠ ಸಿಕ್ಕಿದರೂ ಕಟಕತನ ಬಿಟ್ಟಾನೇ ?

೨೨೮೩. ಪೀಠ ಶುದ್ಧವಿದ್ದರೆ ಶಿಖರ ಶುದ್ಧವಿದ್ದೀತು.

೨೨೮೪. ಪೀಠಿಗೆ ತಿಳಿಯದವ ಮಂಗಲಪರಿಯಂತರ ಹೇಳ್ಯಾನೇ ?

೨೨೮೫. ಪೀಡೆ ಪಟ್ಟರೂ ಆಡೋದು ಬಿಡ.

೨೨೮೬. ಪೀಡೆ ಪಟ್ಟರೂ ಮೂಢತ್ವ ಹೋದೀತೇ ?

೨೨೮೭. ಪೀತಾಂಬರ ಉಟ್ಟರೂ ಕೋತಂಬರಿ
ಮಾರೋದು ಬಿಡಲಿಲ್ಲ.

೨೨೮೮. ಪೀಳಿಗೆ ಗೊತ್ತಿಲ್ಲದಿದ್ದರೆ ಹೇಳಿಗೆ ಮುಚ್ಚಕೂಡದೇ ?

೨೨೮೯. ಪೀಳಿಗೆ ತಿಳಿಯದಿದ್ದರೆ ಹೋಳಿಗೆ ತಿನ್ನಲಿಕ್ಕೆ ಏನು ?

೨೨೯೦. ಪುಕ್ಕನಾದರೂ ಮುಕ್ಕೋಕೆ ಕಡಿಮೆಯಿಲ್ಲ.

೨೨೯೧. ಪುಕ್ಕನಾದವ ಮಿಕ್ಕಿ ಹೋದಾನೇ ?

೨೨೯೨. ಪುಗಟೆಗೆ ಸಿಕ್ಕಿದ್ದು ಬರಿದೆ ಹೋಯಿತು.

೨೨೯೩. ಪುಟಗೋಸಿಗಿಂತ ದರಿದ್ರವಿಲ್ಲ
ಮರಣಕ್ಕಿಂತ ಶಿಕ್ಷೆಯಿಲ್ಲ.

೨೨೯೪. ಪುಟವಿಕ್ಕಿದರೂ ಸಟಿ ಬಿಡಲಿಲ್ಲ.

೨೨೯೫. ಪುಟ್ಟನಾದರೂ ದಿಟ್ಟನಾಗಿದ್ದಾನೆ.

೨೨೯೬. ಪುಟ್ಟ ತುಂಬಿದರೂ ಹೊಟ್ಟೆ ತುಂಬಲಿಲ್ಲ.

೨೨೯೭. ಪುಣುಗು ತೆಗೆಯಲಿಕ್ಕೆ ಜುಣುಗು ಬಿಟ್ಟರೆ ಆದೀತೇ !

೨೨೯೮. ಪುಣ್ಣಮೆ ಆದರೆ ಹುಣ್ಣೆಮ್ಮೆ ಬಿಡಬಾರದೇ ?

೨೨೯೯. ಪುಣ್ಯಕ್ಕೆ ಹೋದರೆ ಪಾಪ ಬಂತು.

೨೩೦೦. ಪುಣ್ಯ ಮಾಡದೆ ಕೆಟ್ಟ
ಹೆಣ್ಣು ಹುಟ್ಟಿ ಕೆಟ್ಟ.

೨೩೦೧. ಪುಣ್ಯವಿಲ್ಲದೆ ಕಣ್ಣು ಕಿತ್ತುಕೊಂಡರೆ
ಹೆಣ್ಣು ಸಿಕ್ಕೀತೇ ?

೨೩೦೨. ಪುಣ್ಯವೆಂಬುದು ಸಣ್ಣದೇ ?
ಹಣ್ಣು ತಿಂದ ಹಾಗಲ್ಲ.

೨೩೦೩. ಪುಣ್ಯಕ್ಕೆ ಸೀರೆ ಉಡಿಸಿದರೆ
ಹನ್ನೆರಡು ಮೊಳ ಅಂದಳು.

೨೩೦೪. ಪುಣ್ಯದ ಊರಲ್ಲಿ ಮಳೆ ಆದರೆ
ಪಾಪಿಯ ಊರ ಮುಂದೆ ಹಳ್ಳ ಹರಿಯಿತು.

೨೩೦೫. ಪುಣ್ಯವಂತೆ ಹಾಡಿದ್ದೇ ರಾಗ
ವೈದ್ಯ ಹೇಳಿದ್ದೇ ರೋಗ.

೨೩೦೬. ಪುತ್ಥಳಿಗಿಂತ ಮೇಲು ಬಂಗಾರವಿಲ್ಲ
ಮಕ್ಕಳಿಗಿಂತ ಮೇಲು ತೊದಲು ಇಲ್ಲ.

೨೩೦೭. ಪುತ್ರನಾದರೆ ಅವಸಾನದಲ್ಲಿ ಹತ್ತರ ಇದ್ದಾನು.

೨೩೦೮. ಪುತ್ರನಿಲ್ಲದವಗೆ ನಾಕವಿಲ್ಲ.

೨೩೦೯. ಪುತ್ರರಿಲ್ಲದಿದ್ದರೆ ಹೆರಲಿಕ್ಕೆ ಕಡಿಮೆಯೇ ?

೨೩೧೦. ಪುತ್ರರಿಲ್ಲದಿದ್ದರೆ ಗೋತ್ರಕ್ಕೆ ಕಡಿಮೆಯೇ ?

೨೩೧೧. ಪುತ್ರರಿಲ್ಲದಿದ್ದರೆ ಸತ್ರಕ್ಕೆ ಹೋಗಬಾರದೇ ?

೨೩೧೨. ಪುತ್ರರಿಲ್ಲದಿದ್ದರೆ ಒಂದು ಕಷ್ಟ
ಪುತ್ರರಿದ್ದರೆ ಒಂಬತ್ತು ಕಷ್ಟ.

೧೩೧೩. ಪುನಹಾ ಹೋದರೆ ಶನೀಕಾಟ ತಪ್ಪೀತೇ ?

೨೩೧೪. ಪುರ ಹೋದರೆ ಪರ ಹೋದೀತೇ ?

೨೩೧೫. ಪುರಂದರನಿಗೂ ತೊಂದರೆ ತಪ್ಪಲಿಲ್ಲ.

೨೩೧೬. ಪುರಾಣ ತಿಳಿದರೂ ಮಾರಣ ಬಿಡಲಿಲ್ಲ.

೨೩೧೭. ಪುರಾಣ ತಿಳಿದವನಾದರೆ ಹರಣ ಉಳಿಸಲಿ.

೨೩೧೮. ಪುರಾಣ ತಿಳಿಯದಿದ್ದರೆ ನಾರಾಯಣ ಎನ್ನಲಿಕ್ಕೇನು ?

೨೩೧೯. ಪುರಾಣ ಹೇಳಿದರೆ ಪುಷ್ಪ ಬಿದ್ದಾವೇ ?

೨೩೨೦. ಪುರಾಣಾ ಹೇಳಿಹೋಗುವಾಗ್ಯೆ
ಬಾಗಿಲು ಮುಚ್ಚಿ ಹೋಗಿ ಎಂಬಂತೆ.

೨೩೨೧. ಪುರಾತನದ ಕಥೆ ಕಿರಾತ ಏನು ಬಲ್ಲ ?

೨೩೨೨. ಪುರುಷನಾದರೆ ಹರುಷ ಬೇಕು.

೨೩೨೩. ಪುರುಷನಿಗೆ ಮರ್ಷ ಸಲ್ಲದು.

೨೩೨೪. ಪುರ್ಕು ಅಂದರೆ ಹರ್ಕು ಮುಚ್ಚೀತೇ ?

೨೩೨೫. ಪುಷ್ಯ ಮಾಸವಾದರೆ ನಸ್ಯ ಹಾಕಿಕೊಳ್ಳಬಾರದೇ ?

೨೩೨೬. ಪುಸ್ತಕದೊಳಗಿನ ಬದನೆಕಾಯಿ.

೨೩೨೭. ಪುಸ್ತಕ ಅಶುದ್ಧವಾದರೆ ನಾಲಿಗೆ ಅಶುದ್ಧವೇ ?

೨೩೨೮. ಪುಸ್ತಕವಿದ್ದರೆ ಅಕ್ಷರ ತಿಳಿದವಗೇನು ?

೨೩೨೯. ಪೂಜೆ ಮಾಡಿದರೂ ಹೂಜೆ ಸಜ್ಜು ಆಗಲಿಲ್ಲ.

೨೩೩೦. ಪೂಮಾಲೆಯಿಲ್ಲದಿದ್ದರೆ ರುಮಾಲೆ ಬೇಡವೋ ?

೨೩೩೧. ಪೂರ್ಣವಿದ್ದರೂ ಸ್ವರ್ಣದ ಬಯಕೆ ತೀರದು.

೨೩೩೨. ಪೂರ್ಣವಿಲ್ಲದಿದ್ದರೆ ಹೂರ್ಣ ಮಾಡಬಾರದೇ ?

೨೩೩೩. ಪೂರ್ವ ತಿಳಿದವನು ಗರ್ವಿಯಾದಾನೇ ?

೨೩೩೪. ಪೂರ್ವ ಹೇಳಿದರೆ ಹಾರ್ವ ಓಡ್ಯಾನು.

೨೩೩೫. ಪೂರ್ವಿಕರು ಹೇಳಿದ್ದೇ ಪುರಾಣ
ಊರ್ವಿಕರು ಹೇಳಿದ್ದೇ ಗಾದೆ.

೨೩೩೬. ಪೆಗ್ಗ ಆದರೂ ಅಗ್ಗದಲ್ಲಿ ತಂದ.

೨೩೩೭. ಪೆಟ್ಟಿಗೆ ಕದ್ದ ಕಳ್ಳ
ಬೀಗದ ಕೈಗೆ ಬಂದಾನೇ ?

೨೩೩೮. ಪೆಟ್ಟಿಗೆ ತುಂಬ ಹಣವಿದ್ದರೂ
ಕಟ್ಟಿಗೆ ಹೊರ್ತು ಗತಿಯಿಲ್ಲ.

೨೩೩೯. ಪೆಟ್ಟಿಗೆ ಪೆಟ್ಟು ರೊಟ್ಟಿಗೆ ತುಪ್ಪ.

೨೩೪೦. ಪೆಟ್ಟಿಗೆ ಪೆಟ್ಟಾದರೂ ಸಿಟ್ಟು ಬಿಡಲಿಲ್ಲ.

೨೩೪೧. ಪೆಟ್ಟು ಕೊಟ್ಟಾಗ್ಯೂ ಹಿಟ್ಟು ಬಿಡೋದು ಬಿಡಲಿಲ್ಲ.

೨೩೪೨. ಪೆಟ್ಟು ತಿಂದವನೂ ಬಲ್ಲ
ಪೆಟ್ಟು ಕೊಟ್ಟವನೂ ಬಲ್ಲ.

೨೩೪೩. ಪೆಟ್ಟು ಬೆನ್ನು ತಿನ್ನುತ್ತದೆ
ಹೊಟ್ಟೆ ಅನ್ನ ತಿನ್ನುತ್ತದೆ.

೨೩೪೪. ಪೇಚಾಟದಲ್ಲಿ ಬಿದ್ದರೆ ನೀಚಾಟವೇ ಸರಿ.

೨೩೪೫. ಪೇಟೆಗೆ ಜಟ್ಟಿ, ಪಟ್ಣಕ್ಕೆ ಸೆಟ್ಟಿ.

೨೩೪೬. ಪೇಟೆಯಲ್ಲಿರುವವಗೆ ಬೇಟೆಯ ಸುದ್ದಿ ಯಾಕೆ ?

೨೩೪೭. ಪೇಟೆಗೆ ಹೋದರೆ ಸಾಲಗಾರರ ಕಾಟ
ಮನೆಗೆ ಬಂದರೆ ಹೆಂಡತಿಯ ಕಾಟ.

೨೩೪೮. ಪೈತ್ಯನಾದವನಿಗೆ ಸೈತ್ಯವಾಗದೋ ?

೨೩೪೯. ಪೈಸಲುಗೊಂಡ ಮನುಷ್ಯನಿಗೆ ಮೆಯ್ಸಾಲ ನಂಬರು.

೨೩೫೦. ಪೊಟ್ಟಣ ಕಟ್ಟಿಕೊಂಡರೆ ತಟ್ಟನೇ ಹೋಗನೇ ?

೨೩೫೧. ಪೊಡವಿಯಲ್ಲಿದ್ದವಗೆ ಅಡವೀ ಗೊಡವೆ ಯಾಕೆ ?

೨೩೫೨. ಪೊಡವಿಯಾಗಲಿ ಅಡವಿಯಾಗಲಿ ಬಡವಗೇನು ?

೨೩೫೩. ಪೋಕನ ಮಾತು ಸಾಕು
ಸುಳ್ಳನ ಮಾತು ಟೊಳ್ಳು.

೨೩೫೪. ಪೋಕನಿಗೆ ನಾಕ ಸಲ್ಲ
ಮೂಕನಿಗೆ ಸ್ವಪ್ನ ಸಲ್ಲ.

೨೩೫೫. ಪೋರನಿಗೆ ಸೇರಿಕೊಂಡು
ಹಾರೋ ಕುನ್ನಿ ಸೋತು ಹೋದ.

೨೩೫೬. ಪೋರನಾದರೂ ಹೀರೇ ಪಳದೇ ರುಚಿ ಅರಿಯನೇ ?

೨೩೫೭. ಪೋಲಿಯವನ ಕೈಲಿ ತೈಲಿ ಕೊಟ್ಟರೆ
ಖಾಲಿಯಾಗದೇ ?

೨೩೫೮. ಪೋಲಿಯವನ ಹೊಲಕ್ಕೆ ಬೇಲಿಯುಂಟೇ ?

೨೩೫೯. ಪೋಲೀ ದನಕ್ಕೆ ಹಾಲು ಹೆಚ್ಚು
ಕೂಲೀ ಮುಂಡೆಗೆ ನಾಲಿಗೆ ಹೆಚ್ಚು.

೨೩೬೦. ಪೋಷಣಕ್ಕೆ ಹೋಗಿ ಭೂಷಣ ಕಳಕೊಂಡ.

೨೩೬೧. ಪ್ರಕಟವಾದರೂ ಅಗಡುತನ ಬಿಡಲಿಲ್ಲ.

೨೩೬೨. ಪ್ರಕಾಶವಿಲ್ಲದವ ಆಕಾಶಕ್ಕೆ ಹೋದರೇನು ?

೨೩೬೩. ಪ್ರಕೃತಿಯಿಲ್ಲದಿದ್ದರೂ ವಿಕೃತಿ ಬಿಡಲಿಲ್ಲ.

೨೩೬೪. ಪ್ರಖ್ಯಾತಿ ಹೊಂದಿ, ಅಪಖ್ಯಾತಿ ಪಟ್ಟ.

೨೩೬೫. ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು.

೨೩೬೬. ಪ್ರದಕ್ಷಿಣೆ ಮಾಡಿದರೂ ದಕ್ಷಿಣಾಯಾತ್ರೆ ತಪ್ಪದು.

೨೩೬೭. ಪ್ರಧಾನಿಯಾದವನಿಗೆ ನಿಧಾನವಿರಬೇಕು.

೨೩೬೮. ಪ್ರಪಂಚ ಬಿಟ್ಟರೂ ವಂಚನೆ ಬಿಡ.

೨೩೬೯. ಪ್ರಪಂಚ ಬಿಟ್ಟರೆ ಪರಮಾರ್ಥ ಬಿಟ್ಟೀತೇ ?

೨೩೭೦. ಪ್ರಪಂಚ ಬಿಡುತ್ತೇನೆಂದು
ಪಂಚ ಮಹಾ ಪಾಪ ಹೊಂದಿಕೊಂಡ.

೨೩೭೧. ಪ್ರಮಾಣಕ್ಕೂ ನಿರ್ಣಯಕ್ಕೂ ತಾಳಿ ಇರಬೇಕು.

೨೩೭೨. ಪ್ರಮಾಣ ಮಾಡಿದರೂ ಮಾಣಿಕ ಸಿಕ್ಕಲಿಲ್ಲ.

೨೩೭೩. ಪ್ರಮಾಣ ಹೇಳಿ ಭ್ರಮಣೆಯಲ್ಲಿ ಬಿದ್ದ.

೨೩೭೪. ಪ್ರಮುಖನಾದವನು ವಿಮುಖನಾಗಬಾರದು.

೨೩೭೫. ಪ್ರಯಾಸ ಪಡದೆ ಪ್ರಯೋಗ ಸಿಕ್ಕೀತೇ ?

೨೩೭೬. ಪ್ರಯಾಸ ಪಟ್ಟವಗೆ ಆಯಾಸವಿಲ್ಲವೇ ?

೨೩೭೭. ಪ್ರಯೋಗವರಿಯದವ ಪ್ರಯೋಜನ ಮಾಡ್ಯಾನೇ ?

೨೩೭೮. ಪ್ರಯೋಜನಕ್ಕೆ ಬಾರದವ ಪ್ರಸ್ತಕ್ಕೆ ಬಂದಾನೇ ?

೨೩೭೯. ಪ್ರವೇಶ ಮಾಡದ ಸ್ಥಳದಲ್ಲಿ
ಆವೇಶ ಬಂದರೆ ಸೇರ್ಯಾನೇ ?

೨೩೮೦. ಪ್ರವೇಶ ಮಾಡದವಗೆ ಆವೇಶವಿದ್ದರೇನು ?

೨೩೮೧. ಪ್ರಶಸ್ತವಾದ ವಸ್ತುವಿಗೆ
ಪ್ರಶ್ನೆ ಕೇಳಬೇಕೇ ?

೨೩೮೨. ಪ್ರಶ್ನೆ ಕೇಳಿದರೆ ವ್ಯಸನ ಬಿಟ್ಟೀತೇ ?

೨೩೮೩. ಪ್ರಶ್ನೆಗೆ ಪ್ರತ್ಯುತ್ತರವರಿಯದ ಮೂಕ
ಮತ್ತೇನಾದರೂ ಹೇಳ್ಯಾನೇ ?

೨೩೮೪. ಪ್ರಸಂಗ ಕೇಳಲಿಕ್ಕೆ ಹೋದಲ್ಲಿ ಬೆಸನವಾದಳು.

೪೩೮೫. ಪ್ರಸಂಗ ಕೇಳಿದರೂ ಅಸಂಗತಿ ಬಿಡಲಿಲ್ಲ.

೨೩೮೬. ಪ್ರಸವ ಕಾಲದಲ್ಲಿ ಪ್ರಸಾದ ಕೇಳಿದ ಹಾಗೆ.

೨೩೮೭. ಪ್ರಸಾದ ಕೇಳಲಿಕ್ಕೆ ಹೋಗಿ
ಪ್ರಾಸಾದದಿಂದ ಬಿದ್ದ.

೨೩೮೮. ಪ್ರಸಾದ ಕೇಳಿದರೆ ಪ್ರಾಚೀನ ಹೋದೀತೇ ?

೨೩೮೯. ಪ್ರಸಾದವಿದ್ದರೆ ಪರಲೋಕ ಸೇರ್‍ಯಾನೇ ?

೨೩೯೦. ಪ್ರಸಿದ್ಧವಾದದ್ದು ನಿಷಿದ್ಧವಾಗದೇ ?

೨೩೯೧. ಪ್ರಸ್ತಕ್ಕೆ ಭಕ್ಷ್ಯ, ವೈಷ್ಣವರಿಗೆ ಕಕ್ಷ
ನಾರಾಯಣ ಅಂದವರಿಗೆ ಮೋಕ್ಷ.

೨೩೯೨. ಪ್ರಸ್ತದ ಊಟಕ್ಕೆ ಹೋಗಿ
ಸ್ವಸ್ಥವಿಲ್ಲದೆ ಬಿದ್ದ.

೨೩೯೩. ಪ್ರಸ್ತದಲ್ಲಿ ಪ್ರಮಾಣದ ಗೊಡವೆಯೇ ?

೨೩೯೪. ಪ್ರಸ್ತಪ್ರಯೋಜನ ಎದ್ದರೆ ಹೊಸ್ತಿಲಲ್ಲೇ ಕಾಣುವುದು.

೨೩೯೫. ಪ್ರಸ್ತಾಪಕ್ಕೆ ಬಾರದ ಗಾದೆ
ಪ್ರಸ್ತಕ್ಕೆ ಆಗದ ಕಜ್ಜಾಯ.

೨೩೩೬. ಪ್ರಸ್ತಾಪದಿಂದ ಪ್ರಕಟವಾದದ್ದು
ಪ್ರಸಾದ ಕೇಳಿದರೆ ನಿತ್ತೀತೇ ?

೨೩೯೭. ಪ್ರಳಯಕ್ಕೆ ಹೆದರದವ ಪಾಳ್ಯಕ್ಕೆ ಹೆದರ್‍ಯಾನೇ ?

೨೩೯೮. ಪ್ರಾಣ ಹೋಗುವಾಗ್ಯೆ ಕೋಣನ ಯೋಚನೆಯೇನು ?

೨೩೯೯. ಪ್ರಾಣವಿರುವಾಗ್ಯೆ ಕೂಡಿಸಿದ ಹಣ
ಹೆಣವಾದ ಮೇಲೆ ಬಂದೀತೇ ?

೨೪೦೦. ಪ್ರಾಣ ಹೋಗುವಾಗ್ಯೆ ಪಾಣಿ ಮೇಲಾಗಿರಬೇಕು.

೨೪೦೧. ಪ್ರಾಣಬಿಟ್ಟರೂ ತಕ್ಕೊಂಡರೂ ಸತ್ತನೆಂಬುದು ನಿಜ.

೨೪೦೨. ಪ್ರಾಣಬಿಟ್ಟರೂ ಮಾನ ಬಿಡಬಾರದು.

೨೪೦೩. ಪ್ರಾಣದ ಆಶೆಗೆ ಪಲಾಯನಮಾಡಿ
ಪ್ರಾರಬ್ಧವೆಂದನಂತೆ.

೨೪೦೪. ಪ್ರಾಣ ಪ್ರಾಣ ಸ್ನೇಹವಾದರೂ
ಮೀನಿನ ಬುಟ್ಟಿಗೆ ಕೈ ಹಾಕಬೇಡ.

೨೪೦೫. ಪ್ರಾಣಿಗಳ ರಕ್ಷಣೆಗೆಂತ ಗೋಣಿ ಉಟ್ಟರೆ ಆದೀತೇ ?

೨೪೦೬. ಪ್ರಾಪ್ತಿಯಿದ್ದರೆ ಗೋಪ್ಯವಾದ್ದು ಸಿಕ್ಕೀತು.

೨೪೦೭. ಪ್ರಾಯ ಹೆಚ್ಚಾದರೂ ಬಾಯಿ ಚೆನ್ನಾಗಿರಬೇಕು.

೨೪೦೮. ಪ್ರಾಯ ಹೋದರೂ ಪ್ರಯಾಸ ಬಿಡದು.

೨೪೦೯. ಪ್ರಾಯ ಬಂದರೂ ನಾಯಿಯಾದರೂ ಚಂದವಾಗಿದೆ.

೨೪೧೦. ಪ್ರಾಯಸ್ಥನಾದರೂ ಪ್ರಾಚೀನ ಬಿಡಲಿಲ್ಲ.

೨೪೧೧. ಪ್ರಾಯಸ್ಥನಾದವ ನ್ಯಾಯಸ್ಥನಾಗಿರಬೇಕು.

೨೪೧೨. ಪ್ರಾರ್ಥನೆ ಮಾಡಿದರೆ ಸಿಕ್ಕದ್ದು
ಕೀರ್ತನೆ ಹೇಳಿದರೆ ಸಿಕ್ಕೀತೇ ?

೨೪೧೩. ಪ್ರೀತಿ ಇದ್ದರೂ ನೀತಿ ಬಿಡಬಾರದು.

೨೪೧೪. ಪ್ರೀತಿಯಿಂದ ನೀತಿ ಹುಟ್ಟುವುದು
ಲೂತಿಯಿಂದ ಗಜ್ಜಿ ಹುಟ್ಟುವುದು.

೨೪೧೫. ಪ್ರೀತಿ ಇದ್ದರೂ ಭೀತಿ ಇರಬೇಕು.

೨೪೧೬. ಪ್ರೇತಕ್ಕೆ ಹೆದರುವವ ಭೂತಕ್ಕೆ ಹೆದರನೇ ?

೨೪೧೭. ಪ್ರೇತದ ಭೀತಿ ಹೋದರೂ
ನಾತದ ಭೀತಿ ಹೋಗಲಿಲ್ಲ.

೨೪೧೮. ಪ್ರೇಮದಿಂದ ಹೇಮ ಕೂಡಿಸಿ
ಹೋಮಕ್ಕೆ ತಂಟಿ ತೀರಿಸಿದ.

೨೪೧೯. ಪ್ರೋಕ್ಷಣೆ ಮಾಡಿದರೆ ಪ್ರೌಢನಾದಾನೇ ?

೨೪೨೦. ಪಂಕಜವಾದರೆ ಮಂಕಿಗೆ ದೊಡ್ಡದೇ ?

೨೪೨೧. ಪಂಕ್ತೀ ಊಟವಾದರೂ
ಸಂಗ್ತೀಗುಣ ಬಿಡಲಿಲ್ಲ.

೨೪೨೨. ಪಂಕ್ತೀಲಿರುವವನಿಗೆ ಸಂತ ಇರಬಾರದು.

೨೪೨೩. ಪಂಕ್ತಿಗೆ ತಕ್ಕ ಪಕ್ವ ಬಡಿಸುವವನೂ
ಮುಖಕ್ಕೆ ತಕ್ಕ ಮಾತಾಡುವವನೂ ಸಮಸಮ.

೨೪೨೪. ಪಂಗವಾಡವ ಸಂಗಡ ಬಂದಾನೇ ?

೨೪೨೫. ಪಂಗುವಿನಾಶ್ರಯಮಾಡಿ
ಅಂಗ ಕಳಕೊಂಡ.

೨೪೨೬. ಪಂಗುವಾದರೂ ಲಿಂಗಪೂಜೆ ಇದ್ದರೆ
ಭಂಗವಾಗ.

೨೪೨೭. ಪಂಗುವಿಗೆ ಪರವು ಹಿಂಸೆ ಅಲ್ಲವೇ ?

೨೪೨೮. ಪಂಚಮದಶನಿ ಹಂಚಿನಲ್ಲಿ ಉಣಿಸ್ಯಾನು.

೨೪೨೯. ಪಂಚಪಾಂಡವರೆಂಬರು ಮಂಚದ ಕಾಲಿನ ಹಾಗೆ
ಮೂವರೆಂದು, ಎರಡು ಬೆರಳು ತೋರಿಸಿದ.

೨೪೩೦. ಪಂಚವು ಶಾಲೆಯವರ ಕಂಚು
ಪಂತಕ್ಕೆ ಸಿಕ್ಕೀತೇ ?

೨೪೩೧. ಪಂಚರತ್ನಕ್ಕೆ ಮಂಚದ ಕಾಲು ಕ್ರಯವೇ ?

೨೪೩೨. ಪಂಚ ಲೋಹದ ಹಂಚು ಆದರೆ
ಸಂಚಗಾರ ಕೊಡಬಾರದೇ ?

೨೪೩೩. ಪಂಚಾಂಗ ಹೋದರೆ ನಕ್ಷತ್ರ ಹೋದೀತೇ ?

೨೪೩೪. ಪಂಚಾಲ ದೇಶದ ಪಾಲಕನಾದರೆ
ಪಂಚಾಂಗದವನಿಗೇನು ?

೨೪೩೫. ಪಂಚಾಳರು ದಂಡಿಗೆ ಹತ್ತಿದ ಹಾಂಗೆ.

೨೪೩೬. ಪಂಜರದಲ್ಲಿ ಕಾಗೆ ಇಟ್ಟರೆ
ಪಂಚಮಸ್ವರ ಕೊಟ್ಟೀತೇ ?

೨೪೩೭. ಪಂಡಿತರೆಂದರೆ ಹೆಂಡತಿ ಕೊಟ್ಟು ಹೋಗು ಅಂದ.

೨೪೩೮. ಪಂಡಿತನಾದರೂ ಕಂಡಾಬಟ್ಟೆ ಆಡಿದರೆ
ಕುಂಡೆ ಪೆಟ್ಟು ತಿಂದು ಹೋಗಬೇಕಾದೀತು.

೨೪೩೯. ಪಂತ ಹಾಕಿದವರ ಹತ್ತರ ಶಾಂತನಾಗಿರಬೇಕು.

೨೪೪೦. ಪಾಂಡವನಾಗಿ ಕಾಂಡವನಾ ದಹಿಸಲಿಲ್ಲವೇ ?

೨೪೪೧. ಪಾಂಡವರೆಂದರೆ ವಂಡಾರ ಕಂಬಳದ ಕೋಣಗಳೋ ?

೨೪೪೨. ಪಿಂಡಕ್ಕೆ ಬಗೆಯಿಲ್ಲದವ
ದಂಡವೇನು ಕೊಟ್ಟಾನು ?

೨೪೪೩. ಪಿಂಡ ಹಾಕಿದರೂ ಲಂಡನೆನಿಸಿಕೊಳ್ಳೋದು ತಪ್ಪಲಿಲ್ಲ.

೨೪೪೪. ಪಿಂಡ ಪ್ರದಾನ ಮಾಡಿದರೂ
ರಂಡೆಯರಿಗೆ ಗತಿಯಿಲ್ಲ.

೨೪೪೫. ಪುಂಡನಾದವ ಉಂಡನಕ ಹೋಗ.

೨೪೪೬. ಪುಂಡತನ ಮಾಡಿದವ ಬಂಡಾಟ ಬಿಟ್ಟಾನೇ ?

೨೪೪೭. ಪೆಂಗನಾದರೂ ಭಂಗ ಬಿಡದು.

೨೪೪೮. ಪೆಂಡಾರಿಯು ಬರುವಾಗ ಹೆಂಡರ ಗೊಡವೆಯೇನು ?

೨೪೪೯. ಪೊಂಜು ಸುಟ್ಟರೂ ಮಂಜು ಹೋಗಲಿಲ್ಲ.

೨೪೫೦. ಪ್ರಾಂತ್ಯ ಸೇರಿದರೂ ಭ್ರಾಂತಿ ಬಿಡಲಿಲ್ಲ.

೨೪೫೧. ಫರಾಮೋಷಿಯಾದರೂ ಪಡಪೋಸಿಯಾಗಬಾರದು.

೨೪೫೨. ಫಲಕ್ಕೆ ತಕ್ಕ ಬೀಜ, ನೆಲಕ್ಕೆ ತಕ್ಕ ನೀರು.

೨೪೫೩. ಫಲವಿದ್ದ ಬಳೀಲಿ ಪಾರುಪತ್ಯ ಚಂದ.

೨೪೫೪. ಫಲವಿದ್ದಲ್ಲಿ ಪರದಾಟವಾದರೂ ಲೇಸು.

೨೪೫೫. ಫಲವಿಲ್ಲದ ಮರ ಹೊಲದಲ್ಲಿದ್ದರೇನು ?

೨೪೫೬. ಫಲಾ ನೋಡದೆ ಕೆಟ್ಟಿತು
ಹೊಲ ಹೂಡದೆ ಕೆಟ್ಟಿತು.

೨೪೫೭. ಫಲಾ ನೋಡಿದರೆ ಬಾಯಾರಿಕೆ ನಿತ್ತ್ರೀತೇ ?

೨೪೫೮. ಫಲಾ ಬಿತ್ತಿ ಪಾಪ ಕಳೆ.

೨೪೫೯. ಫಾಯಿದೆ ನೋಡಿ ವಾಯಿದೆ ಕಳಕೊಂಡಾ.

೨೪೬೦. ಬಕ ತಪಸ್ಸು ಮಾಡಿದರೆ
ಮಕರಗೆ ಭಯವೇನು ?

೨೪೬೧. ಬಕನ *ಬಾರಿ* ಮಗನ ಮದಿವೆ.

೨೪೬೨. ಬಕಾಸುರನ ಊಟ, ಕುಂಭಕರ್ಣನ ನಿದ್ದೆ.

೨೪೬೩. ಬಗಳೋನು ಹೊಗಳನು
ಹೊಗಳೋನು ಬಗಳನು.

೨೪೬೪. ಬಗೆ ಬಗೆ ಭಕ್ಷ್ಯ ಬಯಸಿದರೆ ಬಂದೀತೇ ?

೨೪೬೫. ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು.

೨೪೬೬. ಬಜ್ಜಿಗೆ ಮಜ್ಜಿಗಿಲ್ಲ, ಅಜ್ಜಿಗೆ ಎಲ್ಲಿ ಮೊಸರು ?

೨೪೬೭. ಬಟ್ಟ ಕೆಟ್ಟ ಕೂಳ ತಿಂದ
ನಿಟ್ಟುಸುರು ಬಿಟ್ಟ.

---

* ಬಾಧೆ.

೨೪೬೮. ಬಟ್ಟ ಕೊಟ್ಟಷ್ಟು ಕೊಂಡರೆ
ಕೆಟ್ಟು ಹೋಗಲಾರ.

೨೪೬೯. ಬಟ್ಟ ತಲೆಯವನಾದರೆ ಹೆಟ್ಟಿಗೆ ಹೊತ್ತಾನೇ ?

೨೪೭೦. ಬಟ್ಟನಿಗೆ ಮಾನ ಕಡಿಮೆಯಾದರೂ
ಹೊಟ್ಟೆ ದೊಡ್ಡದು.

೨೪೭೧. ಬಟ್ಟರಿಗೆ ಮಂತ್ರ ಸ್ವಲ್ಪ, ಉಗುಳು ಬಹಳ.

೨೪೭೨. ಬಟ್ಟರೇ, ತುಪ್ಪವಲ್ಲ, ರಕ್ತ ಅಂದ ಹಾಗೆ.

೨೪೭೩. ಬಟ್ಟರೇ ಯಾವಾಗ ಬಂದಿರಿ ಅಂದರೆ
ಉಟ್ಟುಕೊಳ್ಳಲಿಕ್ಕೆ ಬಟ್ಟೆಯಿಲ್ಲ ಅಂದ.

೨೪೭೪. ಬಟ್ಟರೇ ಕ್ಷೇಮವೋ ಅಂದರೆ
ಎರಡು ದುಡ್ಡು ಇಂಗಿ ಅಂದ.

೨೪೭೫. ಬಟ್ಟೆಯಿಂದ ಆಗುವಂತಾದು ಬೊಟ್ಟನಿಂದ ಆದೀತೇ ?

೨೪೭೬. ಬಟ್ಟೆ ಸುಟ್ಟು ಹೋಯಿತೆಂದರೆ, ಸೆಟ್ಟಿ ಬಿಟ್ಟಾನೇ ?

೨೪೭೭. ಬಟ್ಟೆಯಿಲ್ಲದವಗೆ ಪಟ್ಟೆ
ಊಟಕ್ಕಿಲ್ಲದವಗೆ ಜೀರಿಗೆ ಸಾಲೆ.

೨೪೭೮. ಬಟ್ಟೆಗೆ ಹಾಕಿದ ಕೈ ಬರಿಗೈ.

೨೪೭೯. ಬಟ್ಟೆ ಮಾಸಿದರೆ ಅಗಸನಿಗೆ
ನಾಲಿಗೆ ಮಾಸಿದರೆ ಕೆರಕ್ಕೆ.

೨೪೮೦. ಬಟ್ಟೆಗೇಡು ಬರಗೇಡು
ಬಡ್ಡೀ ಮಕ್ಕಳಿಗೆ ಕೊಟ್ಟ ಹಾಗೆ.

೨೪೮೧. ಬಡ ದಾಸನಿಗೆ ನಾಮವೇ ಆಧಾರ.

೨೪೮೨. ಬಡ ದೇವರನ್ನು ಕಂಡರೆ ಬಿಲ್ಪತ್ರೆ ಬುಸ್ಸೆನ್ನುತ್ತದೆ.

೨೪೮೩. ಬಡವಗೆ ಆಸೆ ಹೇಳಬೇಡ
ಬಲ್ಲಿದವಗೆ ಬಾಸೆ ಹೇಳಬೇಡ.

೨೪೮೪. ಬಡವಗೆ ನಾಡ ಮಾತು ಯಾಕೆ ?

೨೪೮೫. ಬಡವಗೆ ಯಾಕೆ ಸಿರಿವಂತನ ಹೆಣ್ಣು ?

೨೪೮೬. ಬಡವನ ಬಿನ್ನಹ ಎಡೆಯಲೆ ಹೋಯಿತು.

೨೪೮೭. ಬಡವನ *ಸಿಟ್ಟು ದವಡೆಗೆ* ಮೂಲ.

೨೪೮೮. ಬಡವನ ಸಂಕಟ ಮನೆಯೆಲ್ಲ
ಅರಸನ ಸಂಕಟ ರಾಜ್ಯವೆಲ್ಲ.

೨೪೮೯. ಬಡವನ ಹೆಂಡತಿ ಎಲ್ಲರ ಅತ್ತಿಗೆ.

೨೪೯೦. ಬಡವ ನೀ ಮಡಗಿದ ಹಾಗಿರು.

೨೪೯೧. ಬಡವ ಹಾಕಿದ್ದಾನೆ ಕಡೆ ಕೇರಿಲಿ.

೨೪೯೨. ಬಡವ ತಿಂದರೆ ಹೊಟ್ಟೆಗಿಲ್ಲದೆ ತಿಂದ
ಇದ್ದವ ತಿಂದರೆ ಮದ್ದಿಗೆ ತಿಂದ.

೨೪೯೩. ಬಡಸ್ತಿಕೆ ಏಳಗೊಡದು
ದೊಡ್ಡಸ್ತಿಗೆ ಮಲಗಗೊಡದು.

---

* ಕೋಪ ಅವುಡಿಗೆ.

೨೪೯೪. ಬಡವಗೆ ಕಡುಬಿನ ಆಶೆ
ಮಡದಿಗೆ ಗಡಿಗೆಯ ಆಶೆ.

೨೪೯೫. ಬಡಾಯಿ ಬಡಾಯಿ ಬಳ್ಳಿ ಸೊಪ್ಪು
ಸೋತ ಪುರುಕಿಗೆ ಸೋರೇ ಸೊಪ್ಪು.

೨೪೯೬. ಬಡಾಯಿ ಬಲ್ಲವನು ಲಡಾಯಿ ಬಲ್ಲನೇ ?

೨೪೯೭. ಬಡಿಯೋನ ಹತ್ತಿರ ಹೋದರೆ ಬಡತನ ಹೋದೀತೇ ?

೨೪೯೮. ಬಡಿದಾಡುವವರ ಹತ್ತಿರ ಬಡಿವಾರವೇ ?

೨೪೯೯. ಬಡಿವಾರದವನ ಸಂಗಡ ಹೋಗಿ
ನಡು ದಾರಿಲಿ ಬಿದ್ದ.

೨೫೦೦. ಬಡಿವಾರದ ಮೂಳನನ್ನು ಬಡಿಗೇಲಿ ಬಡಿದರೆ
ಅಡಿಗೆಯ ಮನೆತನಕ ಗುಡುಗುಟ್ಟುತ್ತಿದ್ದ.

೨೫೦೧. ಬಡ್ಡಿಗೆ ಯಾತಕ್ಕೆ ಬದುಕಿನ ಯೋಚನೆ ?

೨೫೦೨. ಬಡ್ಡಿ ಬಾಯಿಗೆ ಅಂಜೀಯಾ
ದೊಡ್ಡೆತ್ತಿನ ಕೋಡಿಗೆ ಅಂಜೀಯಾ ?

೨೫೦೩. ಬಡ್ಡಿಗೆ ಕೊಟ್ಟರೆ ಬೊಡ್ಡಿಮಗ.

೨೫೦೪. ಬಡ್ಡು ಕುದುರೆಗೆ ಬಡತನವೇ ಮದ್ದು.

೨೫೦೫. ಬಣಜಿಗ ಕೂಡಿ ಕೆಟ್ಟ
ದೊಂಬ ಅಗಲಿ ಕೆಟ್ಟ.

೨೫೦೬. ಬತ್ತ ಕತ್ತೆ ಹೊತ್ತರೆ, ಅತ್ತೆ ಅಡಿಗೆ ಮಾಡಳೇ ?

೨೫೦೭. ಬತ್ತಲೆಯಿದ್ದವಗೆ ಎತ್ತಲೂ ಭಯವಿಲ್ಲ.

೨೫೦೮. ಬತ್ತಲೆಯಾದ ಮಾತ್ರದಿಂದ ದಿಗಂಬರನಾದಾನೇ ?

೨೫೦೯. ಬತ್ತಿ ನೂಕಲಾರದವ ಬಂಟ ದಳ ನಡಿಸ್ಯಾನೇ ?

೨೫೧೦. ಬತ್ತಿದ ಕೆರೇಲಿ ಬದನೆ ಹಾಕಿದರೆ ಕದನಕ್ಕೆ ಕಾರಣ.

೨೫೧೧. ಬದಕು ಆಳದೆ ಹೋಯಿತು
ಬಾಳು ನೋಡದೆ ಹೋಯಿತು.

೨೫೧೨. ಬದನೇಕಾಯಿ ಬಜ್ಜಿ ಮೈಯೆಲ್ಲಾ ಕಜ್ಜಿ.

೨೫೧೩. ಬದಲು ಮಾತಾಡಿದರೂ ತೊದಲು ಹೋಗಲಿಲ್ಲ.

೨೫೧೪. ಬದಲು ಮಾತಾಡುವವನು ಬೆದರಿಸಿದರೆ ಬಿಟ್ಟಾನೇ ?

೨೫೧೫. ಬನವಾಸೆಗೆ ಹೋದರೂ ಬರಗಾಲ ತಪ್ಪಲಿಲ್ಲ.

೨೫೧೬. ಬನ್ನಿ ಅಂದರೆ ಪನ್ನಿ ಹೆಚ್ಚು.

೨೫೧೭. ಬಯಕೆಯಾದದ್ದು ಬಾರಿಸಿದರೆ ಸಿಕ್ಕೀತೇ ?

೨೫೧೮. ಬಯಕೆ ಕೊಟ್ಟರೂ ಬಯ್ಸಿಕೊಂಬುದು ತಪ್ಪಲಿಲ್ಲ.

೨೫೧೯. ಬಯಸಿದ್ದು ಹಾಲು ಅನ್ನ
ವೈದ್ಯ ಹೇಳಿದ್ದು ಹಾಲು ಅನ್ನ *

೨೫೨೦. ಬಯಸಿ ಬಯಸಿ ಬಾಳು ಹೊಕ್ಕರೆ
ಬಯ್ಯೋ ಗಂಡ ಬಂದ ಹಾಗೆ.

---

* ಬಯಸಿದ್ದು ಹಾಲು ಬೋನ
ನೀಡಿದ್ದು ಹಾಲು ಬೋನ.

೨೫೨೧. ಬಯ್ದು ಬಾಯಿಗೆ ಹೊಯಿದ ಪೆಟ್ಟು.

೨೫೨೨. ಬಯ್ರಿಗೆಯಿಂದ ಹೊರಿಗೆ ಆದೀತೇ ?

೨೫೨೩. ಬಯ್ದು ಹೊಯಿದು ಕೊಟ್ಟದ್ದು
ಧರ್ಮಕ್ಕಾದರೂ ಬೇಡ.

೨೫೨೪. ಬರಗದ ಅನ್ನ ತಿನ್ನುವವ
ಹೊರಿಗೆ ಬಯಸಿದ ಹಾಗೆ.

೨೫೨೫. ಬರಣಿಯಾದರೆ ಕರಣಿಕ ಮಾಡ್ಯಾನೇ ?

೨೫೨೬. ಬರಹದಲ್ಲಿದ್ದ ಕರಿ ಮರಿ ಹಾಕೀತೇ ?

೨೫೨೭. ಬರಹ ಬಲ್ಲವನಾದರೂ ತರಹರಿಕೆ ಇರಬೇಕು.

೨೫೨೮. ಬರದು ತಿಳಿಯದ ಲೆಕ್ಕ ಕಡೆಗೆ ದುಕ್ಕ.

೨೫೨೯. ಬರ ಬಂದ ಕಾಲಕ್ಕೆ
ಮಗ ಉಂಬೋಕೆ ಕಲತ.

೨೫೩೦. ಬರ ಅಂದರೆ ಬಿದರಕ್ಕಿ.

೨೫೩೧. ಬರ ಬಂದರೆ ಊರ ಬಿಡಬಾರದು
ದಂಡು ಬಂದರೆ ಊರಲ್ಲಿರಬಾರದು.

೨೫೩೨. ಬರಡೆಮ್ಮೆಗೆ ಕರಡು ಹುಲ್ಲು.

೨೫೩೩. ಬರೀಗೈಲಿ ಮೊಳ ಹಾಕಿದ ಹಾಗೆ.

೨೫೩೪. ಬರೀ ಮಾತಿಗೆ ಮರುಳಾದರೆ ಬರ ತಪ್ಪೀತೇ ?

೨೫೩೫. ಬರೀ ಮಾತಿನವನಿಗೆ ನರೆಯಿದ್ದರೇನು ?

೨೫೩೬. ಬರೀ ಮಾತಿನವ ಹೊರೆ ಹೊತ್ತಾನೇ ?

೨೫೩೭. ಬರುವುದು ಕಡಮೆಯಾದರೂ
ತೆರುವುದು ತಪ್ಪಲಿಲ್ಲ.

೨೫೩೮. ಬರುವವರ ಸಂಗಡ ಬಂದರೂ ಬರಗಾಲ ತಪ್ಪಲಿಲ್ಲ.

೨೫೩೯. ಬರುವಾಗ ನರಿಯ ಕಂಡರೆ ಕರಕರೆಯಿಲ್ಲ.

೨೫೪೦. ಬರುವಾಗ ಹುಲಿಯ ಹಾಗೆ
ಹೋಗುವಾಗ ಇಲಿಯ ಹಾಗೆ.

೨೫೪೧. ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೆ ಆಯಿತು.

೨೫೪೨. ಬರೆಯದ ಕೈ ಕರೆಯದ ಬಾಯಿ.

೨೫೪೩. ಬರೆಯಲಾರದವ ಕುರಿ ಕಾಯುವವನಿಗಿಂತ ಕಡೆ.

೨೫೪೪. ಬರೆಯಲಿಕ್ಕೆ ಹ್ಯಾಗೂ ಬರೆಯಬಹುದು
ಸುಡೋದು ಹ್ಯಾಗೆ ?

೨೫೪೫. ಬರೆಯುವವನ ಸಂಗಡ ದ್ವೇಷ
ದಾಯಾದಿಯ ಸಂಗಡ ಸ್ನೇಹ.

೨೫೪೬. ಬಲದಲ್ಲಿ ವಾಲಿ ಮೇಲು
ಛಲದಲ್ಲಿ ರಾಮ ಮೇಲು.

೨೫೪೭. ಬಲವಿದ್ದದ್ದು ಲಯವಾದ ಮೇಲೆ
ಭಯಪಡುವುದೇ ಸರಿ.

೨೫೪೮. ಬಲವಿದ್ದರೂ ಕುಲಾ ನೋಡಬೇಕು.

೨೫೪೯. ಬಲವಿದ್ದರೆ ನೆಲ.

೨೫೫೦. ಬಲವಿದ್ದಷ್ಟೇ ಹೊತ್ತರೆ ನೆಲಕ್ಕೆ ಯಾಕೆ ಬೀಳುವನು ?

೨೫೫೧. ಬಲಾತ್ಕಾರದಿಂದ ತಂದ ನಾಯಿ ಮೊಲನ ಹಿಡಿದೀತೇ ?

೨೫೫೨. ಬಲಾತ್ಕಾರವಿದ್ದರೂ ಚಮತ್ಕಾರವಿರಬೇಕು.

೨೫೫೩. ಬಲಿದಾನ ಕೊಟ್ಟರೂ ಸಮಾಧಾನ ಬೇಕು.

೨೫೫೪. ಬಲಿ ಕೊಡದವ ಚಲಕ್ಕೆ ಬಂದಾನೇ ?

೨೫೫೫. ಬಲಿ ತಿಂಬುವವನ ಕೂಡೆ ಕುಲ ಕೇಳುವುದೇನು ?

೨೫೫೬. ಬಲಿ ಹಾಕುವುದಕ್ಕೆ ಬಕ್ಷೀ ಸಾಹೇಬರ ಅಪ್ಪಣೆ ಬೇಕೇ ?

೨೫೫೭. ಬಲಿ ಮುದ್ರೆ ಕೊಟ್ಟರೂ ಸುಲಿಗೆ ತಪ್ಪಲಿಲ್ಲ.

೨೫೫೮. ಬಲೆಗೆ ಸಿಕ್ಕದ್ದು ಕೋಲಿಗೆ ಸಿಕ್ಕೀತೇ ?

೨೫೫೯. ಬಲೆ ನೇಯ್ದು ಮರಕಾಲು ಬಟ್ಟೆ ನೇಯ್ದಾನೇ ?

೨೫೬೦. ಬಲೆಗೆ ಸಿಕ್ಕಿದ ಪಕ್ಷಿ
ಒಲೆಗೆ ಸಿಕ್ಕಿದ ಇರುವೆ.

೨೫೬೧. ಬಲ್ಲವನ ಗುಣ ಮಲ್ಲಿಗೆ ಹಾಗೆ.

೨೫೬೨. ಬಲ್ಲವನೇ ಬಲ್ಲ ಬೆಲ್ಲದ ಸವಿ.

೨೫೬೩. ಬಲ್ಲವನಾದರೂ ಕಲ್ಲು ತಗಲಿದರೆ
ತಲ್ಲಣಿಸದೆ ಇರನು.

೨೫೬೪. ಬಲ್ಲಿದವನ ಹಗೇವು ತೆಗೆಯೋ ಹೊತ್ತಿಗೆ
ಬಡವನ ಪ್ರಾಣ ಹೋಯಿತು.

೨೫೬೫. ಬಸರು ಬಂದಾಕ್ಷಣ ಹಸುರು ಶಾಲೆ ಸಿಕ್ಕೀತೇ ?

೨೫೬೬. *ಬಸರೂರಿನವರು* ಹಾದರ ಮಾಡಿದರೆ
ಕುಮಟೆಯವರು ದಂಡ ತೆರಬೇಕಂತೆ.

೨೫೬೭. ಬಸವನ ಹಿಂದೆ ಬಾಲ.

೨೫೬೮. ಬಸವಾ ಎಂದರೆ ಪಾಪ, ಎಂದರೆ
ಸೊಸೆಗೆ ಮಜ್ಜಿಗೆ ನೀರು ತಾ ಎಂದ.

೨೫೬೯. ಬಸಳೇ ಸೊಪ್ಪು ಬಸವಗೆ ಯಾಕೆ ?

೨೫೭೦. ಬಸೆ ವಾಸನೆಯಲ್ಲಿ ಸೊಸೆಯ ಹ್ಯಾಗೆ ಕರತರೋದು ?

೨೫೭೧. ಬಳಕೆಯಿಲ್ಲದಲ್ಲಿ ಬಾಳಬಹುದು
ಚಳಿಕಾಟ ಸಯ್ರಿಸ ಕೂಡದು.

೨೫೭೨. ಬಳಿದ ಎಣ್ಣೆ ಬಚ್ಚಲಿಗೆ.

೨೫೭೩. ಬಳೆಗಾರನ ಅಂಗಡೀಲಿ ಬಾಳೆ ಹಣ್ಣು ಸಿಕ್ಕೀತೇ ?

೨೫೭೪. ಬಳೆಗಾರನ ಮೊಟ್ಟೆ ಕೆಳಕ್ಕೆ ಬಿದ್ದರೆ
ತೆಗೆಯಲಿಕ್ಕೆ ಹೆಡಿಗೆ ಬೇಕು.

೨೫೭೫. ಬಳ್ಳಿ ಹಿಡಿದು ಕಾಯಿ ಕೊಯ್ಯಬೇಕು.

೨೫೭೬. ಬಹಿರಂಗವಾದರೆ ಬಹಿಸ್ಕರಿಸ್ಯಾರು.

---

* ಗೋಕರ್ಣದವರು.

೨೫೭೭. ಬಹಿರಂಗವಾಗಿ ಕಿವಿಯಲ್ಲಿ ಹೇಳಿದ ಗುಟ್ಟು.

೨೫೭೮. ಬಹಿಷ್ಕಾರದವನಿಗೆ ನಮಸ್ಕಾರವೇ ?

೨೫೭೯. ಬಾಗಿಲು ಮುರಿದು ಹೋಗುವವನಿಗೆ
ಬೀಗ ಕೈ ಯಾಕೆ ?

೨೫೮೦. ಬಾಗಿದರೂ ಬೀಗೋದು ತಪ್ಪಲಿಲ್ಲ.

೨೫೮೧. ಬಾಡಿಗೇ ಮನೆ, ಕೂಡಿಕೇ ನಂಟರು.

೨೫೮೨. ಬಾಡಿದ ಹೂ ನಾಡಿನವರಿಗೆ ಯಾಕೆ ?

೨೫೮೩. ಬಾಣವಿದ್ದರೂ ತ್ರಾಣವಿರಬೇಕು.

೨೫೮೪. ಬಾಣವಿಲ್ಲವೆಂದು ಗೋಣ ಕೊಯ್ಯಿದರೆ ಆದೀತೇ ?

೨೫೮೫. ಬಾಣಸಿಗನಾದರೆ ಹುಣಿಸಿಯಿಲ್ಲದೆ ಅಟ್ಟಾನೇ ?

೨೫೮೬. ಬಾತವರು ಬದುಕುವುದಿಲ್ಲ. ಸೀತವರು ಸಾಯುವುದಿಲ್ಲ.

೨೫೮೭. ಬಾತಿದ್ದವನಿಗೆ ಹೂಸಿದಷ್ಟು ವಾಸಿ.

೨೫೮೮. ಬಾದಿಯಿಲ್ಲದ ಮನುಷ್ಯ ಬೂದಿ ಸಮಾನ.

೨೫೮೯. ಬಾದ್ಯತೆಗೆ ಬಾದ್ಯವಾದರೆ ಚೋದ್ಯವೇನು ?

೨೫೯೦. ಬಾದ್ಯನಾದರೂ ಸ್ವಾಧೀನ ಬರಲಿಲ್ಲ.

೨೫೯೧. ಬಾಧಕ ಬರುವಾಗ್ಯೆ ಸಾಧಕವೇನು ?

೨೫೯೨. ಬಾಧೆ ಪಡುವ ಬಾಳಿಗಿಂತ
ಬಕನ ಬಾಯಿಗೆ ಬೀಳೋದುತ್ತಮ.

೨೪೯೩. ಬಾಯಾರಿಕೆ ಬಂದಾಗ ಬಾವಿ ತೋಡಿದ ಹಾಗೆ.

೨೪೯೪. ಬಾಯಿಂದ ಕೆಟ್ಟ ನಾಯಿಂದ ಮುರವ.

೨೪೯೫. ಬಾಯಿಂದ ಬೆದರಿಸಿ ಹೂಸು ಮರಸಿದ ಹಾಗೆ.

೨೪೯೬. ಬಾಯಿಂದ ಬಂತು ಭಗಂದರ.

೨೪೯೭. ಬಾಯಿಂದ ಹೇಳಿದ್ದು ಗಾಳಿಗೆ ಹೋಯಿತು.

೨೪೯೮. ಬಾಯಿದ್ದರೆ ಮಗ ಬದುಕ್ಯಾನು.

೨೪೯೯. ಬಾಯಿ ಒಳ್ಳೇದಾದರೆ ಊರೂ ಒಳ್ಳೇದು.

೨೫೦೦. ಬಾಯಿಯಲ್ಲಿ ಬಸಪ್ಪ, ಹೊಟ್ಟೆಯಲ್ಲಿ ವಿಷಪ್ಪ.

೨೫೦೧. ಬಾಯಿಯುಳ್ಳವನಾದರೆ ಬರದಲ್ಲಿಯಾದರೂ ಬದುಕ್ಯಾನು.

೨೫೦೨. ಬಾಯಿಗೆ ಬಂತು ಬಗದಾಳ
ಬೆನ್ನಿಗೆ ಬಂತು ಬೇತಾಳ.

೨೫೦೩. ಬಾಯಿತುಂಬ ಮಾತು
ಹೊಟ್ಟೆ ತುಂಬ ಊಟ.

೨೫೦೪. ಬಾಯಿ ಸವಿ ತಿಂದು ನಾಯಿ ಸಾವು ಸತ್ತ.

೨೫೦೫. ಬಾಯೊಳಗೆ ಬೊಮ್ಮ, ಹೊಟ್ಟೆಯೊಳಗೆ ಗುಮ್ಮ.

೨೫೦೬. ಬಾರದ ಬರಹ ಹರದಲ್ಲಿ ಸಿಕ್ಕೀತೇ ?

೨೫೦೭. ಬಾರಿ ಬಾರಿ ಬಂದವರು
ಹಾರಿ ಹಾರಿ ಹೋಗರೇ ?

೨೬೦೮. ಬಾರಿನವರಿಗೆ ಬೇರಿನ ಯೋಚನೆ ಯಾಕೆ ?

೨೬೦೯. ಬಾರು ಬಿಗಿದರೆ ಮದ್ದಳೆ
ನಾರಿ ಇದ್ದರೆ ಶೋಭನ.

೨೬೧೦. ಬಾಲನಾಗಿರುವಾಗ ಹೇಲು ತಿಂದರೆ
ಪ್ರಾಯ ಬಂದಮೇಲೆ ತಿನ್ನಬಹುದೇ ?

೨೬೧೧. ಬಾಲವಿದ್ದರೆ ತನ್ನ ಹಾಳಿತಕ್ಕೆ ಬೀಸಿಕೊಳ್ಳುತ್ತದೆ.

೨೬೧೨. ಬಾಲ ಹುಟ್ಟಿದರೂ ಹಾಲಿಗೆ ಬಗೆಯಿಲ್ಲ.

೨೬೧೩. ಬಾಲ ಸಂನ್ಯಾಸಿಗೆ ಹಾಳು ಹರಟೆಯೇಕೆ ?

೨೬೧೪. ಬಾಲ ಸಂನ್ಯಾಸಿ ಕೆಟ್ಟರೆ
ಕೂಳ ನಾಯಿಗಿಂತ ಕಡೆ.

೨೬೧೫. ಬಾವನಾದರೆ ಭಾರವಾದ ಹೊರೆ ಹೊತ್ತಾನೇ ?

೨೬೧೬. ಬಾವ ನಂಟ ಬಂದಾಗ್ಯೂ
ಹಾಲು ಚೆಲ್ಲೋದು ಬಿಡಲಿಲ್ಲ.

೨೬೧೭. ಬಾವಿಯಲ್ಲಿ ಬಿದ್ದರೂ ಬಾಂಚೋತು ಬಿಡ.

೨೬೧೮. ಬಾವೀ ನೀರಾದರೆ ಭಾವಿಸಿದರೆ ಬಂದೀತೇ ?

೨೬೧೯. ಬಾವು ಎದ್ದರೆ ಬಡಕೊಂಡರೆ ಹೋದೀತೇ ?

೨೬೨೦. ಬಾಸಿಗೆವಾದರೆ ಹಾಸಿಗೆಯಲ್ಲಿ ಯಾಕೆ ?

೨೬೨೧. ಬಾಳಿ ಬದುಕಿದರೆ ಅಕ್ಕ ತಂಗಿ
ಕೆಟ್ಟರೆ ಸ್ನೇಹಿತ.

೨೬೨೨. ಬಾಳುವ ಮನೆಗೆ ಬೊಗಳುವ ನಾಯಿ.

೨೬೨೩. ಬಾಳುವವನಿಗೆ ಒಂದು ಮಾತು
ಬಾಳೆಗೊಂದು ಗೊನೆ.

೨೬೨೪. ಬಾಳುವವನಿಗೆ ಹಾಳೂರ ಸುದ್ದಿ ಯಾಕೆ?

೨೬೨೫. ಬಾಳುವವರ ಮುಂದೆ ಬೋಳುಮುಂಡೆ
ಬಯ್ದುಕೊಂಡು ಅತ್ತ ಹಾಗೆ.

೨೬೨೬. ಬಾಳು ತಪ್ಪಿದ ಬಳಿಕ ಬಳೆಯ ಯೋಚನೆ ಯಾಕೆ?

೨೬೨೭. ಬಾಳೆಗೆ ಕಡಗು, ಸೂಳೆಗೆ ಬೆಡಗು.

೨೬೨೮. ಬಾಳೆಗೆ ಕಾಳಿಯಾದರೇನು ಬೋಳಿಯಾದರೇನು
ನೀರು ಹೊಯಿದರೆ ಸರಿ.

೨೬೨೯. ಬಾಳೆಯೊಳಗೆ ಸೀಗೆಯಿದ್ದ ಹಾಗೆ.

೨೬೩೦. ಬಾಳೇ ಗಿಡ ನೆಟ್ಟರೆ ಹಾಳು ಹುಲ್ಲು ಆದೀತೇ?

೨೬೩೧. ಬಾಳೇ ತೋಟಕ್ಕೆ ಆನೆ ಬಂದ ಹಾಗೆ.

೨೬೩೨. ಬಾಳೇ ಹಣ್ಣಿಗೆ ಕರಗಸವು ಯಾಕೆ?

೨೬೩೩. ಬಾಳೇ ಹಣ್ಣು ತಿನ್ನಬೇಕಾದರೆ
ಬೋರಪ್ಪನಾಯಕನ ಅಪ್ಪಣೆ ಯಾಕೆ?

೨೬೩೪. ಬಾಳೇ ಹಣ್ಣು ತಿನ್ನುವ ಪರದೇಶಿ
ಸಿಪ್ಪೆ ಈಚೆಗೆ ಬಿಸಾಡು ಅಂದ.

೨೬೩೫. ಬಾಳೇ ಹಣ್ಣು ಬಣ್ಣಕ್ಕೆ ಬಂದೀತೇ?

೨೬೩೬. ಬಾಳೇ ಹಣ್ಣಿಗೆ ಬೆಲ್ಲ ಹಾಕಬೇಕು
ಬದನೆಕಾಯಿಗೆ ಕಾರ ಹಾಕಬೇಕು.

೨೬೩೭. ಬಿಕ್ಕಿ ಬಿಕ್ಕಿ ಅತ್ತರೆ
ಬೀಸುವ ಕಲ್ಲು ತಿರುಗೀತೇ ?

೨೬೩೮. ಬಿಚ್ಚಿ ಹೇಳಿದರೂ ಹುಚ್ಚು ಹೋಗದು.

೨೬೩೯. ಬಿಟ್ಟ ಮನೆಗೆ ಸುಟ್ಟ ಒಕ್ಕಲು.

೨೬೪೦. ಬಿಟ್ಟ ಸಾಲ ಕುಟ್ಟಿಕೊಂಡರೆ ಬಂದೀತೇ ?

೨೬೪೧. ಬಿಟ್ಟಿಯಾಳು ಆದರೆ ಹಟ್ಟಿ ಕಟ್ಟಬಾರದೇ ?

೨೬೪೨. ಬಿಟ್ಟಿಯೂಟ ಸಿಕ್ಕಿದರೆ ಕಟ್ಟಿಕಟ್ಟಿ ಉಂಡಾನು.

೨೬೪೩. ಬಿಡದ ಮನೆಗೆ ನುಡಿವುದೇ ಗುರ್ತು.

೨೬೪೪. ಬಿಡಾರವಿರುವವನಿಗೆ ನಡುಮಧ್ಯೆವಾದರೇನು ?

೨೬೪೫. ಬಿಡಿ ಕಟ್ಟಿಗೆಯಾದರೂ ಕಿಡಿ ಹತ್ತಿದರೆ ಸುಡದೇ ?

೨೬೪೬. ಬಿಡಿ ಹೂವಾದರೂ ಹುಡಿಗಿ ಮುಡಿದುಕೊಳ್ಳಬಾರದೇ ?

೨೬೪೭. ಬಿಡಿಸುವವನ ಸಂಗಡ ಬಿಗಿಮಾಡಬಾರದು.

೨೬೪೮. ಬಿಡುಗಡೆಯಾದರೂ ನಡುರಾತ್ರೆ ಸಂಚಾರ ಬಿಡಲಿಲ್ಲ.

೨೬೪೯. ಬಿತ್ತಲಿಲ್ಲ ಬೆಳೆಯಲಿಲ್ಲ
ಎತ್ತಲಾಗಿಂದ ಬಂದಿಯೋ ಹಕ್ಕಿ ರಾಜ.

೨೬೫೦. ಬಿತ್ತಿದ ಪಯ್ರು ಕೆತ್ತಿದರೆ ಆದೀತೇ ?

೨೬೫೧. ಬಿತ್ತಿದ ಬೀಜಕ್ಕೆ ಸತ್ತಿಗೆ ಹಿಡಿದ ಹಾಗೆ.

೨೬೫೨. ಬಿತ್ತುವಾಗ ಮಲಗಿದರೆ ಕೊಯ್ಯುವಾಗ ಹಗುರವಾಯಿತು.

೨೬೫೩. ಬಿದರು ತಟ್ಟೆ ಮುರಿದಾಕ್ಷಣ ಸೆಟ್ಟಿ ಆದಾನೇ ?

೨೬೫೪. ಬಿದ್ದ ಬಳೀಲಿ ಬೆರಣಿ ಆಯಬೇಕು,
ಇದ್ದ ಬಳೀಲಿ ಇರಬೇಕು.

೨೬೫೫. ಬಿದ್ದಿನ ಬಂದು ಹಾಳು
ಮನೆಯೊಡೆಯ ಕೂತು ಹಾಳು.

೨೬೫೬. ಬಿನ್ನವತ್ತಳೆ ಬರದರೆ ಹೊನ್ನು ಬಂದ ಹಾಗಾಯಿತೇ ?

೨೬೫೭. ಬಿಮ್ಮಗೆ ಹಿಡಿದರೆ ಹಮ್ಮು ಹೋಗದೇ ?

೨೬೫೮. ಬಿಮ್ಮನೆ ಬಿಗಿಯು ಬೇಡ
ಬಿಸಿಲಿನಲ್ಲಿ ಹಾಕಬೇಡ
ಬೇಕಾದಷ್ಟು ದಿನ ಬಾಳ್ಯಾನು.

೨೬೫೯. ಬಿರುಗಾಳಿಗೆ ಹಿಡಿದರೆ ಸರಿಗೆ ಆದೀತೇ ?

೨೬೬೦. ಬಿಲ್ಲಾದರೆ ಹುಲ್ಲು ಕೊಯ್ಯೋಕೆ ಆದೀತೇ ?

೨೬೬೧. ಬಿಸಲಲ್ಲಿ ಹೋಗುವಾಗ ಹಸೇ ಸುದ್ದಿಯಾಕೆ ?

೨೬೬೨. ಬಿಸಲು ಬಂದ ಕಡೆ ಕೊಡೆ ಹಿಡಿಯುತ್ತಾನೆ.

೨೬೬೩. ಬಿಸಿಯಾದ್ದು ಆರಿಸಬೇಕು
ಹಸಿಯಾದ್ದು ಕಾಯಿಸಬೇಕು.

೨೬೬೪. ಬಿಸಿಯಿಲ್ಲದೆ ಬೆಣ್ಣೆ ಕರಗದು.

೨೬೬೫. ಬೀಗನ್ನ ಹತ್ತರ ಹೋಗಿ
ಹಾಗೂ ವೀಸ ಕೇಳಿದ ಹಾಗೆ.

೨೬೬೬. ಬೀಜ ವೊಂದಾದರೆ ಫಲವೊಂದೇ ?

೨೬೬೭. ಬೀಜವಿಲ್ಲದೆ ಮರವಿಲ್ಲ
ಮರವಿಲ್ಲದೆ ಬೀಜವಿಲ್ಲ.

೨೬೬೮. ಬೀಜ ಸಣ್ಣದಾದರೆ ಮರ ಸಣ್ಣವೋ ?

೨೬೬೯. ಬೀಡಿಕೆಯೆತ್ತು ಆದರೆ ಹಾಡಿಕೆಯಿಂದ ಬಂದೀತೇ ?

೨೬೭೦. ಬೀದೀಲಿ ಬೆಲ್ಲ ಸುರಿದು
ಹಾದಿಯುವರ ಸಂಗಡ ಜಗಳವಾಡಿದ ಹಾಗೆ.

೨೬೭೧. ಬೀಸುವ ಮುಂಡೆಗೆ ಮುಕ್ಕಿದ್ದೇ ಲಾಭ.

೨೬೭೨. ಬೀಸೊ *ದೊಣ್ಣೆ* ತಪ್ಪಿದರೆ ಸಹಸ್ರ ಕಾಲ.

೨೬೭೩. ಬುಗಡಿ ಆದರೆ ದಗಡಿ ಮಗಳಿಗೆ ಆಗದೇ ?

೨೬೭೪. ಬುಟೇದಾರಿ ಹಚ್ಚಡ ಮದುಮಗನಿಗಲ್ಲದೆ
ಮುದಿಮುದುಕನಿಗೆ ಒಪ್ಪೀತೇ ?

೨೬೭೫. ಬುಡ ಕಡಿದ ಮೇಲೆ ಮರ ಬಾಳೋದುಂಟೇ ?

೨೬೭೬. ಬುಡ ಹತ್ತಲರಿಯದವ ನಡು ಹತ್ತ್ಯಾನೇ ?

೨೬೭೭. ಬುತ್ತಿ ಇದ್ದವ ಎತ್ತಲೂ ಉಂಡಾನು.

೨೬೭೮. ಬುದ್ಧಿ ಇಲ್ಲದ ಮುಕ್ಕ ಇದ್ದವರಿಗೆಲ್ಲ ಕೇಡು ತಂದ.

---

* ಕೈ.

೨೬೭೯. ಬುದ್ಧಿ ಇರುವಾಗ ಗಂಡನಿಲ್ಲ
ಗಂಡನಿರುವಾಗ ಬುದ್ಧಿಯಿಲ್ಲ.

೨೬೮೦. ಬುದ್ಧಿ ಇಲ್ಲದವನ ಸ್ನೇಹ ಇದ್ದ ಮಾನಕ್ಕೆ ಹಾನಿ.

೨೬೮೧. ಬುದ್ಧಿ ಹೇಳಿದವರ ಸಂಗಡ
ಗುದ್ದ್ಯಾಟಕ್ಕೆ ಹೋದ ಹಾಗೆ.

೨೬೮೨. ಬುದ್ಧಿವಂತನೇ ಬಲವಂತನು.

೨೬೮೩. ಬುದ್ಧಿವಂತನಿಗೆ ಮೂರು ಕಡೆ
ಅಪ್ರಬುದ್ಧನಿಗೆ ಒಂದೇ ಕಡೆ.

೨೬೮೪. ಬುದ್ಧಿವಂತ ಬೆಣ್ಣೆ ತಿಂದು
ಅಪ್ರಬುದ್ಧನ ಬಾಯಿಗೆ ಒರಸಿದ.

೨೬೮೫. ಬುದ್ಧಿವಂತರ ಮೋರೆ ಮುದ್ದಿನ ಹಾಗೆ ಇದ್ದೀತು.

೨೬೮೬. ಬುದ್ಧಿವಂತರ ತಾಯಿಯೆಲ್ಲಾ ಒಬ್ಬಾಕೆ.

೨೬೮೭. ಬುಧವಾರವಾದರೆ ಯಾಯವ್ವಾರ ಇಕ್ಕಬಾರದೇ ?

೨೬೮೮. ಬುಧವಾರವಾದರೆ ಸದೆಗೂಡಿಸ ಬಾರದೇ ?

೨೬೮೯. ಬುರುಜು ಇಲ್ಲದಿದ್ದರೆ ಕುರುಜು ಆದರೂ ಕಟ್ಟಬಾರದೇ ?

೨೬೯೦. ಬುರುಡೆಯಾದರೆ ಬರಡೆಮ್ಮೇ ಹಾಲು ಕರೆಯೋಕ್ಕಾಗದೇ ?

೨೬೯೧. ಬೂಟಕತನ ಮಾಡಿದರೆ ಕಾಟಕತನ ತಪ್ಪೀತೇ ?

೨೬೯೨. ಬೂರಗದ ಮರ ಗಿಣಿ ಕಾದ ಹಾಗೆ.

೨೬೯೩. ಬೆಕ್ಕಪ್ಪ ಇಲ್ಲದಲ್ಲಿ ಇಲಿಯಮ್ಮ ಲಂಗ ಬಿಗಿಯಿತು.

೨೬೯೪. ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ.*

೨೬೯೫. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ
ಹೊಕ್ಕವರಿಗೆ ಕಾಣದೇ ?

೨೬೯೬. ಬೆಚ್ಚುವವನಿಗೆ ಕಚ್ಚಿದ ಹಾಗೆ.

೨೬೯೭. ಬೆಟ್ಟ ಅಗಿದು ಇಲಿ ಹಿಡಿದ ಹಾಗೆ.

೨೬೯೮. ಬೆಟ್ಟಕ್ಕೆ ಹೋಗುವವನ ಸೊಂಟದಲ್ಲಿ
ಕುಡುಗೋಲು ಸಿಕ್ಕಿಸಿದ ಹಾಗೆ. †

೨೬೯೯. ಬೆಟ್ಟದ ನಾಯಿಗೆ ಹಿಟ್ಟೂ ಇಲ್ಲ ಪೆಟ್ಟೂ ಇಲ್ಲ.

೨೭೦೦. ಬೆಟ್ಟದ ಮೇಲೆ ಕೂತ ಬಟ್ಟ
ಬೆಲ್ಲ ಬಯಸಿದ ಹಾಗೆ.

೨೭೦೧. ಬೆಟ್ಟ ಬಿಸಿಲಲ್ಲಿ ಬೇಯುತ್ತದೆ ಎಂದು
ಸೆಟ್ಟಿ ಅತ್ತ ಹಾಗೆ.

೨೭೦೨. ಬೆಟ್ಟ ಚಿನ್ನವಾದರೆ ಸೆಟ್ಟಿಗೆ ಆಗದೇ ?

೨೭೦೩. ಬೆಡಗು ಮಾಡುವಾಕೆ ಮಡಗಿ ಬೀಳದೆ ಇರಳು.

೨೭೦೪. ಬೆಣ್ಣೆ ತಿಂದು ಹಲ್ಲು ಬಿದ್ದು ಹೋಯಿತಂತೆ.

೨೭೦೫. ಬೆತ್ತದ ಪೆಟ್ಟು ಹೆತ್ತವರು ಹೊಡದರೆ ನೋಯದೇ ?

೨೭೦೬. ಬೆತ್ತ ಮೆತ್ತಗಾದರೂ ದೆಬ್ಬೆ ನೋಯಿಸದಿರದು.

---

* ಚೀಲಿಗೆ ಚೆಂಗಾಟ, ಇಲಿಗೆ ಪ್ರಾಣಸಂಕಟ.

† ಬೆಟ್ಟಕ್ಕೆ ಹತ್ತುವವನ ತಿಕದಲ್ಲಿ
ಕೊಡ್ಲಿಯನ್ನು ಸರಿದ ಹಾಗೆ.

೨೭೦೭. ಬೆದಕುವನು ಬದುಕು ಮಾಡ್ಯಾನೇ ?

೨೭೦೮. ಬೆನಕನ ಮದುವೆ ನಿತ್ಯಾ ನಾಳೆ.

೨೭೦೯. ಬೆನ್ನ ಹಿಂದೆ ಬಂತು ಬೇತಾಳ.

೨೭೧೦. ಬೆನ್ನು ಬಿಡದ ಪಿಶಾಚಿ
ಹೊನ್ನು ಕೊಟ್ಟರೆ ನಿಂತ್ರೀತೇ ?

೨೭೧೧. ಬೆನ್ನು ಬಿದ್ದ ಮುದುಕ ಬಿಮ್ಮಗೆ ನಿಂತು
ಹಲ್ಲು ಕಿಸಿದನಂತೆ.

೨೭೧೨. ಬೆರಳು ತೋರಿಸಿದರೆ ಕೈ ನುಂಗುತ್ತಾನೆ.

೨೭೧೩. ಬೆರಳು ಬಾತರೆ ಒರಳಷ್ಟು ಆದೀತೇ ?

೨೭೧೪. ಬೆರಣಿ ಸುಟ್ಟು ಬೂದಿಯಾದರೂ
ಧರಣೀ ಮೇಲಿರುತ್ತದೆ.

೨೭೧೫. ಬೆಲೆಯಿಲ್ಲದೆ ಸಿಕ್ಕಿದ್ದು ಒಲೆಗೆ ಹೋಯಿತು.

೨೭೧೬. ಬೆಲೆಯಿಲ್ಲದ ಸರಕಾದರೆ ನೆಲದ ಮೇಲೆ ಚೆಲ್ಲ್ಯಾರೇ ?

೨೭೧೭. ಬೆಲೆ ಬಿದ್ದ ಸರಕಿನಲ್ಲಿ ಲಾಭವುಂಟೇ ?

೨೭೧೮. ಬೆಲೆಯಿಲ್ಲದಿದ್ದರೆ ಬೆಲ್ಲದಂಥ ಮಾತು ಇಲ್ಲವೇ ?

೨೭೧೯. ಬೆಲ್ಲದ ದೇವರಿಗೆ ಅಲ್ಲೇ ನೈವೇದ್ಯ.

೨೭೨೦. ಬೆಲ್ಲದ ಗಣಪತಿಗೆ ತೊಡೆಯ ಚಿವುಟೇ ನೈವೇದ್ಯ.

೨೭೨೧. ಬೆಲ್ಲ ಮುಟ್ಟಿದರೆ ಅನ್ನ ಗಟ್ಟಿ
ಸೊಸೆ ಬಂದರೆ ಮಾಯಿಗಟ್ಟಿ.

೨೭೨೨. ಬೆಲ್ಲವಿದ್ದ ಕಡೆ ನೊಣ
ದಡೆ ನಾಲ್ಕಕ್ಕೆ ಮಣ.

೨೭೨೩. ಬೆಲ್ಲದ ಸವಿ ತಿಂದ ಹೊರತು ತಿಳಿಯದು.

೨೭೨೪. ಬೆಲ್ಲವು ಹೋಯಿತು, ಬೆಲ್ಲಕ್ಕೆ ಹತ್ತಿದ ಕಲ್ಲೂ ಹೋಯಿತು.

೨೭೨೫. ಬೆವರು ಸುರಿದರೂ ಶೌರ್ಯ ಹೋಗಲಿಲ್ಲ.

೨೭೨೬. ಬೆವಸಾಯದವನಾದರೂ ಜನಸಹಾಯಬೇಕು.

೨೭೨೭. ಬೆಳಕು ಇಲ್ಲದಿದ್ದರೂ ಬಳಕೆಗೆ ಕಡಿಮೆಯಿಲ್ಲ.

೨೭೨೮. ಬೆಳಕು ಇಲ್ಲದೆ ಹೊಳಕು ಕಂಡೀತೇ ?

೨೭೨೯. ಬೆಳಕಿಡುವುದಕ್ಕೆ ಇಲ್ಲದವ ಮಲಕು ಬಯಸಿದ ಹಾಗೆ.

೨೭೩೦. ಬೆಳಗವರೆಗೆ ಕಡದ ಬೆಣ್ಣೆ
ಮೋಳ ಬೆಕ್ಕಿನ ಪಾಲು ಆಯಿತು.

೨೭೩೧. ಬೆಳಗಾದ ಮೇಲೆ ಬೆಟ್ಟದ ಯೋಚನೆ.

೨೭೩೨. ಬೆಳಗಾನ ರಾಮಾಯಣ ಕೇಳಿ
ರಾಮನಿಗೆ ಸೀತೆ ಏನಾಗಬೇಕೆಂದ.

೨೭೩೩. ಬೆಳಸುವವ ಬಳಸಿದರೆ ಬಳ್ಳಕಾಲು ಇಲ್ಲವೇ ?

೨೭೩೪. ಬೆಳೆ ಹೊಗಳಿಸಿ ಉಣ್ಣ ಬೇಕು
ಹಯನು ಹಂಗಿಸಿ ಉಣ್ಣ ಬೇಕು.

೨೭೩೫. ಬೆಳೇ ಸಿರಿ ಮೊಳೆಯಲ್ಲೇ ಕಾಣುವುದು.

೨೭೩೬. ಬೆಳ್ಳಿಯಾದರೂ ಬಳ್ಳಿ ಮಾಡಬೇಕಾದರೆ ಕೊಳ್ಳಬೇಕು.

೨೭೩೭. ಬೆಳ್ಳಿಯಾದರೆ ಕಳ್ಳಗೆ ಆಗದೇ ?

೨೭೩೮. ಬೆಳ್ಳಿಯಿದ್ದವನಿಗೂ ಕೊಳ್ಳೀ ಭಯ ತಪ್ಪಲಿಲ್ಲ.

೨೭೩೯. ಬೆಳ್ಳಿ ಬೆಸೆಯಬೇಕಾದರೆ
ಕಳ್ಳಿ ಹಾಲು ಬೇಕೆ ?

೨೭೪೦. ಬೆಳ್ಳುಳ್ಳಿಯಾದರೆ ಹಳ್ಳಿಯವಗೆ ಆಗದೇ ?

೨೭೪೧. ಬೇಕಂತ ಬಯಸಿದ್ದು ಬೇಸರವಾದೀತೇ ?

೨೭೪೨. ಬೇಕಾದ್ದು ಇದ್ದರೂ ಸೋಕೋದು ತಪ್ಪಲಿಲ್ಲ.

೨೭೪೩. ಬೇಕಾದ್ದು ಕೊಟ್ಟರೂ ನೂಕಿಸಿಕೊಳ್ಳೋದು ತಪ್ಪಲಿಲ್ಲ.

೨೭೪೪. ಬೇಕಾದದಾದರೆ ಬೇಗ ಸಿಕ್ಕೀತೇ ?

೨೭೪೫. ಬೇಕು ಅಂದಾಕ್ಷಣ ನಾಕ ಸೇರ್‍ಯಾನೆ.

೨೭೪೬. ಬೇಗ ಮಾಡಿದವನಿಗೆ ಹಾಗೂ ವೀಸ.

೨೭೪೭. ಬೇಗಡೇ ತಗಡಾದರೆ ಬುಗುಡಿಗೆ ಆದೀತೇ ?

೨೭೪೮. ಬೇಗನೇ ಮಾಡಿದ್ದು ಹಾಗೆಯೇ ಹೋಗುವುದು.

೨೭೪೯. ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ತ ಕೇಳಬೇಕೇ ?

೨೭೫೦. ಬೇಟೆಗೋಸ್ಕರ ಬಂದು ಲೂಟಿ ಮಾಡಿದ ಹಾಗೆ.

೨೭೫೧. ಬೇಟೆಯಾಡುವುದಕ್ಕೆ ಕಲಿತ ಮಲ್ಲ
ಬೇಟೆ ನಾಯಿಯ ಟೊಂಕ ಮುರಿದ.

೨೭೫೨. ಬೇಟೆಗಾರ ತೋಟ ಮಾಡ್ಯಾನೇ ?

೨೭೫೩. ಬೇಡರವಗೆ ಗಾಡೀ ಸವಾರಿ ಯಾಕೆ ?

೨೭೫೪. ಬೇಡಂದರೂ ಮಗ ಆಡು ಕಾಯೋದು ಬಿಡುವುದಿಲ್ಲ.

೨೭೫೫. ಬೇಡವಾದ್ದು ಕೂಡಿಸಿದರೆ ಆದೀತೇ ?

೨೭೫೬. ಬೇಡಿಲಿ ಇದ್ದವಗೆ ನಾಡಿನ ಯೋಚನೆಯೇ ?

೨೭೫೭. ಬೇಡಿಲಿ ಬಿದ್ದರೂ ಕೇಡು ತಪ್ಪಲಿಲ್ಲ.

೨೭೫೮. ಬೇಡಿ ಉಂಡ ನಾಲಿಗೆ ನಾಡು ಕಂಡಿತು.

೨೭೫೯. ಬೇಡಿಕೊಂಡಷ್ಟು ಹೇಡಿತನ ಹೋಗಲಿಲ್ಲ.

೨೭೬೦. ಬೇಡಿಕೊಂಡು ತಿನ್ನಬಹುದು
ಕದ್ದುಕೊಂಡು ತಿನ್ನಬಾರದು.

೨೭೬೧. ಬೇಡುವುದೇ ಕಷ್ಟ
ಬೇಡಿದರೂ ಇಲ್ಲವೆನ್ನುವುದು ಅತಿ ಕಷ್ಟ.

೨೭೬೨. ಬೇತಾಳಗೆ ಜ್ಯೇಷ್ಠಾದೇವಿಯೇ ಒಪ್ಪಿದ ಹೆಂಡತಿ.

೨೭೬೩. ಬೇತಾಳನಾದರೆ ನೇತಾಡ್ಯಾನು
ಮಾತಿಗೆ ಪ್ರಸವವೇದನೆ.

೨೭೬೪. ಬೇನೆ ಗಾನದಿಂದ ಹೋದೀತೇ ?

೨೭೬೫. ಬೇನೆ ನಿತ್ತರೂ ಹೇನಿನ ಕಾಟ ನಿಲ್ಲಲಿಲ್ಲ.

೨೭೬೬. ಬೇಯಿಸಿದ ಅನ್ನ ಪಾಯಸವಾಗದೇ ?

೨೭೬೭. ಬೇರು ಇದ್ದರೆ ನಾರು ಸಿಕ್ಕೀತು.

೨೭೬೮. ಬೇರು ಬಲ್ಲವಗೆ ಎಲೆ ತೋರಿಸೋದು ಯಾಕೆ ?

೨೭೬೯. ಬೇರು ಹೋದಮೇಲೆ ಮರದ ಯೋಚನೆ ಯಾಕೆ ?

೨೭೭೦. ಬೇರೆ ಮಾಡಿದರೆ ಸಾರೋದು ತಪ್ಪೀತೇ ?

೨೭೭೧. ಬೇರೆಯಾದರೂ ಹಾರಾಡೋದು ತಪ್ಪಲಿಲ್ಲ.

೨೭೭೨. ಬೇಲಿಯೆದ್ದು ಹೊಲ ಮೇಯುವಾಗ್ಯೆ
ಕಾಯೋದು ಯಾರು ?

೨೭೭೩. ಬೇವು ಸೀಯಾಗದು, ಸಕ್ಕರೆ ಕಹಿಯಾಗದು.

೨೭೭೪. ಬೇಸರಿಗೆಂತಾ ಹಾಸರಕತ್ತೆ ಆಡಿಸಿದ*

೨೭೭೫. ಬೇಳೆ ಸಾರಾದರೆ ಬೋಳಿಗೆ ಆಗದೇ ?

೨೭೭೬. ಬೈರಾಗಿಗೆ ಬಯ್ಲಾದರೇನು ? ಬೇಲಿಯಾದರೇನು ?

೨೭೭೭. ಬೊಕ್ಕನಾದರೂ ಟಕ್ಕುತನ ಬಿಡಲಿಲ್ಲ.

೨೭೭೮. ಬೊಕ್ಕಸದಲ್ಲಿ ಹಣ ಉಂಟೆಂದರೆ ಅಕ್ಕ ಸಾಕ್ಯಾಳೆ ?

೨೭೭೯. ಬೊಕ್ಕೆಯೆದ್ದರೆ ರೊಕ್ಕ ಬಂದೀತೇ ?

೨೭೮೦. ಬೊಕ್ಕೆಗೆ ಮದ್ದು ಬೋರೇ ಹಣ್ಣೇ ?

೨೭೮೧. ಬೊಗರೀ ಹಾಗೆ ತಿರುಗಿದರೂ
ಹಗುರತ್ವ ಹೋಗಲಿಲ್ಲ.

೨೭೮೨. ಬೊಗಸೇ ನೀರು ಅಗಸನಿಗೆ ಯಾಕೆ ?

---

* ಬೇಸರಾಗುತ್ತದೆಂದು ಹಾಸರ ಕತ್ತೆ ಮೇಲೆ
ಸವಾರಿ ಮಾಡಿದನಂತೆ.

೨೭೮೩. ಬೊಗಳುವನ ಹೊಗಳಿದರೆ ಬಿಟ್ಟಾನೇ ?

೨೭೮೪. ಬೊಗಳುವ ನಾಯಿಗೆ ದಡಿಸರಿದ ಹಾಗೆ.

೨೭೮೫. ಬೊಗಳುವ ನಾಯಿ ಕಚ್ಚದು
ಕಚ್ಚುವ ನಾಯಿ ಬೊಗಳದು.

೨೭೮೬. ಬೊಗ್ಗಿ ನೋಡಿದರೆ ತಗ್ಗಿನಲ್ಲಿರುವುದು ಸಿಕ್ಕೀತು.

೨೭೮೭. ಬೊಚ್ಚು ಬಾಯಿಯಾದವನು ಕೆಬ್ಬೆ ಕೆತ್ತಿದ
ಕಬ್ಬು ಬಯಸಿದ ಹಾಗೆ.

೨೭೮೮. ಬೊಟ್ಟು ಸೀಪಿದರೆ ಹೊಟ್ಟೆ ತುಂಬೀತೇ ?

೨೭೮೯. ಬೊಡಬೊಡನೆ ಸುರಿಯುವವನು
ಕಡಕಡನೆ ನಡದಾನೇ ?

೨೭೯೦. ಬೊಡಿಯುವ ಗಂಡನ ಹತ್ತಿರ
ಹಿಡಿ ವರಹಾ ಇದ್ದರೇನು ?

೨೭೯೧. ಬೊಡ್ಡಿ ಮಗನಾದರೆ ಬಡ್ಡಿಗೆ ಅಡ್ಡಿಯೇನು ?

೨೭೯೨. ಬೊಬ್ಬೆ ಮಾಡಿದರೆ ಹಬ್ಬ ಆದೀತೇ ?

೨೭೯೩. ಬೊಬ್ಬೇ ಜಂಗಮನ ಸಂಗಡ
ಕಬ್ಬಿನ ಸಮಾಚಾರವೇ ?

೨೭೯೪. ಬೋಣಿಮಾಡಬೇಕಾದರೆ ಜಾಣನಾಗಬೇಕು.

೨೭೯೫. ಬೋಣಿಗೆ ಇತ್ತ ಹಣ್ಣು ಕಾಣಿಕೆಯಾಯಿತು.

೨೭೯೬. ಬೋದು ಬೆಳದ ಹೊಲ ಹಾದೀಲಿದ್ದರೇನು
ಬೀದೀಲಿದ್ದರೇನು ?

೨೭೯೭. ಬೋದು ಹೊಲ ಬಾಧೆಗೆ ಕಾರಣ.

೨೭೯೮. ಬೋಧಕನಾದರೆ ಸಾಧಕಮಾಡಲಿ, ಹಾದಿಗೇನು ಅಡ್ಡಿ ?

೨೭೯೯. ಬೋಧನೆ ಮಾಡಿದರೆ ತಿದಿ ಅಲ್ಲಾಡೀತೇ ?

೨೮೦೦. ಬೋನವಾದರೆ ಹೀನನಿಗೆ ಆಗದೇ ?

೨೮೦೧. ಬೋರೇ ಗಿಡಕ್ಕೆ ಕಾರೆಹಣ್ಣು ಆದೀತೇ ?

೨೮೦೨. ಬೋಳಿ ತುರುಬು ನೆನಸಿಕೊಂಡ ಹಾಗೆ.

೨೮೦೩. ಬೋಳಿಗೆ ಹಾಳುಮನೆ ಆದರೇನು
ಕೂಳು ಸಿಕ್ಕಿದರೆ ಸರಿ.

೨೮೦೪. ಬೋಳಿಗೆ ಸುಂಕವಿಲ್ಲ, ಸೂಳೆಗೆ ಕರುಣವಿಲ್ಲ.

೨೮೦೫. ಬೋಳು ಮನೆಗೆ ಗಾಳಿ ಅಂಜೀತೇ ?

೨೮೦೬. ಬೌದ್ಧನಾದರೂ ಬುದ್ಧಿಯಿರಬೇಕು.

೨೮೦೭. ಬ್ರಹ್ಮಾಂಡವಾದಂಥಾದ್ದು ಗುಡಾಣದಲ್ಲಿ ಹಿಡಿದೀತೇ ?

೨೮೦೮. ಬ್ರಹ್ಮೇತಿ ಮಾಡುವವನು ಬ್ರಾಹ್ಮಣರಿಗೆ ಇಕ್ಕ್ಯಾನೇ ?

೨೮೦೯. ಬ್ರಾಹ್ಮಣನಾದರೆ ಕಣ್ಣೀರುಬಾರದೇ ?

೨೮೧೦. ಬಂಕಾಪುರಕ್ಕೆ ಹೋದರೆ ಡೊಂಕು ಬಿಟ್ಟೀತೇ ?

೨೮೧೧. ಬಂಗಪಡಿಸುವವನ ಹತ್ತರ ಬಂಗಾರದಾಸೆಯೇ ?

೨೮೧೨. ಬಂಗಾರದ ಕತ್ತಿಯಾದರೆ ರಕ್ತಬಾರದೇ ?

೨೮೧೩. ಬಂಗಾರದ ಸೂಜಿಯಂತ
ಹಿಂಗದೆ ಕಣ್ಣು ಕುಕ್ಕಿ ಕೊಳ್ಳಬಹುದೇ?

೨೮೧೪. ಬಂಗಾರವಿದ್ದರೆ ಶೃಂಗಾರ.

೨೮೧೫. ಬಂಗಾರವೊಂದು, ಒಡವೆ ಹಲವು.

೨೮೧೬. ಬಂಗಾಳಕ್ಕೆ ಹೋದರೂ ಗವುಡ ಬಂಗಾಳಿ ಬಿಡಲಿಲ್ಲ.

೨೮೧೭. ಬಂಗಿ ಕುಡಿಯುವವನಿಗೆ ಹಂಗು ಯಾರದು?

೨೮೧೮. ಬಂಗಿ ಸುಟ್ಟರೂ ಹಂಗು ಬಿಡಲಿಲ್ಲ.

೨೮೧೯. ಬಂಜೆ ಹೋದಲ್ಲಿ ಸಂಜೆ.

೨೮೨೦. ಬಂಟವಾಳ ಸುಂಕಿಯ ಪಾರುಪತ್ಯದ ಹಾಗೆ.

೨೮೨೧. ಬಂಟರಲ್ಲಿ ತಂಟೆ ಹೆಚ್ಚು
ನಂಟರಲ್ಲಿ ಗರ್ವ ಹೆಚ್ಚು.

೨೮೨೨. ಬಂಡದ ಲಾಭ ಹೆಂಡದಲ್ಲಿ ಹೋಯಿತು.

೨೮೨೩. ಬಂಡನಿಗೆ ಪಿಂಡದ ಯೋಚನೆಯೇ?

೨೮೨೪. ಬಂಡನ ಕಂಡರೆ ಕಂಡೀಲಿ ಆದರೂ ಹೋಗಬೇಕು.

೨೮೨೫. ಬಂಡನ ಕೊಲ್ಲುವವರಿಲ್ಲ, ನಾಯಿ ತಿನ್ನುವವರಿಲ್ಲ.

೨೮೨೬. ಬಂಡನ ಸ್ನೇಹಮಾಡಿ ಇದ್ದ *ಬಂಡವಲ* ಕಳಕೊಂಡ.

೨೮೨೭. ಬಂಡನ ಸ್ನೇಹ ಮಾಡಿದರೆ ಬಂಗ ತಪ್ಪದು.

---

* ಬಂಡ.

೨೮೨೮. ಬಂಡದಲ್ಲಿ ಬರದರೂ ಕಣ್ಣು ಚೆನ್ನಾಗಿರಬೇಕು.

೨೮೨೯. ಬಂಡಾರ ದ್ರೋಹ ಮಾಡಿ
ಬೋಳು ಮುಂಡೆ ಮರೆ ಬಿದ್ದ.

೨೮೩೦. ಬಂಡಾರವಿದ್ದರೂ ಬಂಗ ತಪ್ಪಲಿಲ್ಲ.

೨೮೩೧. ಬಂಡಿ ಬಂಡ್ಯಾಟ, ಹೇರು *ಹೆಟ್ಟ್ಯಾಟ*
ತಲೆ ಮೊಟ್ಟೆ ಪರಮ ಸುಖ.

೨೮೩೨. ಬಂಡು ಚಿತ್ರ ಕಂಡ ಪಾಪಕ್ಕೆ
ಬರದವನನೇ ದಂಡಿಸಲಿ.

೨೮೩೩. ಬಂಡೆ ಒಡೆದು ದಿಂಡೆಯನ್ನು ಎಬ್ಬಿಸಿದ.

೨೮೩೪. ಬಂಡೆ ಒಡೆಯಬಹುದು
ರಂಡೇ ಮನಸ್ಸು ಒಡೆಯಕೂಡದು.

೨೮೩೫. ಬಂಡೆಯ ಮೇಲೆ ಕೂತರೆ ಬಣ್ಣ ಬಂದೀತೇ ?

೨೮೩೬. ಬಂದದ್ದು ಬರಲಿ ಬಂಡಹಳ್ಳಿ ಸುಂಕ.

೨೮೩೭. ಬಂದದ್ದೆಲ್ಲ ಬರಲಿ ಗೋವಿಂದನ ದಯವಿರಲಿ.

೨೮೩೮. ಬಂದ ಬಂದವರು ನಿಂದಿಸಿದರೆ
ಗಂಡ ಸತ್ತ ದುಃಖ ಬಿಟ್ಟುಹೋದೀತೇ ?

೨೮೩೯. ಬಂಬು ಹೊರುವವರ ಸಂಗಡ ಹಂಬಲಿಸಿದರೆ
ಇಂಬು ಸಿಕ್ಕೀತೇ ?

೨೮೪೦. ಬಿಂಕ ಮಾಡಿದರೆ ಡೊಂಕು ಹೋದೀತೇ ?

---

* ಹೆಡ್ಡ್ಯಾಟ.

೨೮೪೧. ಬಿಂಗಿಗೆ ಬದಲಾಗಿ ಹಿಂಗು ಹಚ್ಚಿದಂತೆ.

೨೮೪೨. ಬಿಂದಿಗೆ ಒಡೆದರೆ ಹಂದಿಗೆ ನೀರು ಎಲ್ಲಿ ?

೨೮೪೩. ಬೆಂಕಿಗೆ ಕರಗದ್ದು ಬಿಸಿಲಿಗೆ ಕರಗೀತೇ ?

೨೮೪೪. ಬೆಂಕಿ ಆರಿದರೂ ಸುಂಕ ಬಿಡಲಿಲ್ಲ.

೨೮೪೫. ಬೆಂಕಿ ಡೊಂಕಿಗೆ, ಬೆಂಡು ನೀರಿಗೆ.

೨೮೪೬. ಬೆಂಕಿಯಿಂದ ಸುಟ್ಟ ಹುಣ್ಣು ಮಾಯುವುದು
ನಾಲಿಗೆಯಿಂದ ಸುಟ್ಟ ಹುಣ್ಣು ಮಾಯದು.

೨೮೪೭. ಬೆಂಕಿ ಹಾಕಿದರೆ ಸಂಕನ ಮನೆ ಸುಡದೇ ?

೨೮೪೮. ಬೆಂದ ಬಾಯಿಗೆ ಬಂದದೇ ಮಂಗಲಾಷ್ಟಕ.

೨೮೪೯. ಬೆಂದ ಮನೆಗೆ ಹಿರಿದದ್ದೇ ಲಾಭ.

೨೮೫೦. ಬೊಂಬೆ ಆದರೆ ಹಂಬಲಿಸಿದ ಹಾಗೆ ಕೊಟ್ಟೀತೇ ?

೨೮೫೧. ಬೋಂದು ಗಿಡದಲ್ಲಿ ಗೋಂದು ಆದೀತೇ ?

೨೮೫೨. ಭಕ್ತನಾದವಗೆ ಬಕ್ಕರೆ ಸಿಕ್ಕದೇ ?

೨೮೫೩. ಭಕ್ತನಿಗೆ ಬುಕ್ತಿ, ಶಕ್ತನಿಗೆ ಕತ್ತಿ.

೨೮೫೪. ಭಕ್ತಿಯಿಂದ ಮುಕ್ತಿ, ಯುಕ್ತಿಯಿಂದ ಉಕ್ತಿ.

೨೮೫೫. ಭಕ್ಷವಿಲ್ಲದಿದ್ದರೂ ದಕ್ಷಿಣೆ ಸಿಕ್ಕಿದರೆ ಸಾಕು.

೨೮೫೬. ಭಗೀರಥ ಪ್ರಯತ್ನಮಾಡಿ ಭಾಗೀರಥಿ ತಂದ
ನಗರದವ ಯತ್ನಮಾಡಿ ನಗಾ ಕಳಕೊಂಡ.

೨೮೫೭. ಭಟ್ಟರೇ ಬಾಳೆಹಣ್ಣು ತಿನ್ನುತ್ತೀರೋ ಅಂದರೆ
ಚೇಷ್ಟೆ ಮಾಡುತ್ತೀರೋ ಅಂದನಂತೆ.

೨೮೫೮. ಭಟ್ಟ ದಕ್ಷಿಣೆಗಾದರೆ ಮಾತು ಹಿಡಿದಾನು
ಮಂತ್ರಕ್ಕಾದರೆ ಬೆನ್ನು ತೋರಿಸ್ಯಾನು.

೨೮೫೯. ಭದ್ರಾ ಮಾಡಿದಷ್ಟೂ ನಿದ್ರೆ ಬಿಡುವುದಿಲ್ಲ.

೨೮೬೦. ಭದ್ರಾಕರಣ ಮಾಡಿಕೊಂಡರೆ ಭದ್ರವಾದೀತೇ ?

೨೮೬೧. ಭಯವಾದ ವಸ್ತು ನಯವಾದರೂ ನಂಬಬಾರದು.

೨೮೬೨. ಭಯದಿಂದ ಭಕ್ತಿ, ನಯದಿಂದ ಯುಕ್ತಿ.

೨೮೬೩. ಭಯವಾದ್ದು ನಯದಿಂದ ಲಯವಾದೀತೇ ?

೨೮೬೪. ಭಯ ಭಕ್ತಿ ಇಲ್ಲದವ ದಯವೇನು ಮಾಡ್ಯಾನು ?

೨೮೬೫. ಭರತ ರಾಜನ ತಿಕಕ್ಕೆ ಗಂಟೆ ಕಟ್ಟಿದ ಹಾಗೆ.

೨೮೬೬. ಭರದಿಂದ ಹೋಗುವವನ ಸಂಗಡ
ಹೊರೆ ಹೊತ್ತಿಯಾ ಅಂದ.

೨೮೬೭. ಭರಭರನೆ ಹೋಗಿ ಬುರ್ರನೇ ಹಾರಿ ಬಂದ ಹಾಗೆ.

೨೮೬೮. ಭರಭರನೆ ಹೋಗಿ ಭೈರವ ದೇವರ ಸಂಗಡ
ಭೈರವಾಸ ಕೇಳಿದ.

೨೮೬೯. ಭರವಸವಿಲ್ಲದ ಮಾತು ಕೇಳಿ
ಬಂಡವಾಳ ಕಳಕೊಂಡ.

೨೮೭೦. ಭರ್ತಿ ಮಾಡುವವ ಕೀರ್ತಿ ಪಟ್ಟಾನೇ ?

೨೮೭೧. ಭಲರೆ ಬೋನಗಿತ್ತಿ ಅಂದರೆ
ಮೆಯ್ಯೆಲ್ಲ ಅಬ್ರು ಅಂದ ಹಾಗೆ.

೨೮೭೨. ಭಲಾ ಜಟ್ಟೀ ಅಂದರೆ ಕೆಮ್ಮಣ್ಣು ಮುಕ್ಕಿದ.

೨೮೭೩. ಭಾಗಾಕಾರ ತಿಳಿಯದಿದ್ದರೂ ಹಾಗದ ಲಕ್ಷಣ ತಿಳಿಯದೇ ?

೨೮೭೪. ಭಾಗ್ಯ ಬರುವಂಥಾದ್ದು ಭಾಗಮ್ಮ ತಡಪಾಳೇ ?

೨೮೭೫. ಭಾದ್ರಪದ ಮಾಸವಾದರೂ ಭಾಂಡಾ ಹೊರೋದು ತಪ್ಪಲಿಲ್ಲ.

೨೮೭೬. ಭಾರವಾದ ಪಾಪಕ್ಕೆ ಘೋರವಾದ ನರಕ.

೨೮೭೭. ಭಾರವಾದ್ದು ಹೊತ್ತಾತ್ಕ್ಷಣ ಹಾರಲಿಕ್ಕೆ ಕೂಡದೇ ?

೨೮೭೮. ಭಾವಾರ್ಥವಿದ್ದರೂ ಸ್ವಾರ್ಥ ಬಿಡಲಿಲ್ಲ.

೨೮೭೯. ಭಾವಾರ್ಥ ಕೇಳಿ ಮೂಲಾರ್ಥ ಮರೆತಾ.

೨೮೮೦. ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

೨೮೮೧. ಭಾಷೆ ಕೊಟ್ಟವನು ಪೋಷಣೆ ಮಾಡನೇ ?

೨೮೮೨. ಭಿಕಾರಿಯಾದವ ಕಾಶಿಗೆ ಹೋದರೂ
ಭಿಕ್ಷಾನ್ನವಲ್ಲದೆ ಪಕ್ವಾನ್ನ ವುಂಡಾನೇ ?

೨೮೮೩. ಭಿಕ್ಷಾನ್ನದ ಕುಕ್ಕೆಗೆ ಶನೀಶ್ವರ ಬಂದ ಹಾಗೆ.

೨೮೮೪. ಭಿಕ್ಷೆ ಬೇಡ ನಾಯನ್ನ ಹಿಡೀರಿ ಅಂದ.

---

* ಗಡಿಗೆ.

೨೮೮೫. ಭಿನ್ನವಾದ *ಕಾಡಿಗೆ* ಹೊನ್ನುಕೊಟ್ಟರೆ ಸಮನಾದೀತೇ ?

೨೮೮೬. ಭೀಮನಿಗೆ ಭಾನುವಾರವಾದರೇನು
ಭೌಮವಾರವಾದರೇನು, ಭೋಜನ ಸಿಕ್ಕಿದರೆ ಸೈ.

೨೮೮೭. ಭುಕ್ತಿಗೆ ಸಿಕ್ಕಿದಾಕ್ಷಣ ಮುಕ್ತಿ ಸಿಕ್ಕಿದ ಹಾಗಾಯ್ತೆ ?

೨೮೮೮. ಭೂತ ಹೋದರೂ ಹೇತುಕೊಳ್ಳುವುದು ತಪ್ಪಲಿಲ್ಲ.

೨೮೮೯. ಭೂತ ಮರುಳೋ ಮಾಡ ಮರುಳೋ.

೨೮೯೦. ಭೂತವಾದರೂ ಭುಕ್ತಿಗೆ ಹಾಕಿದ ಹೊರ್ತು ಭೀತಿ ತಪ್ಪದು.

೨೮೯೧. ಭೂತಕ್ಕೆ ಭೀತಿಯುಂಟೇ ?

೨೮೯೨. ಭೂಮಿಯಿದ್ದವನಾದರೆ ಭೂರಿದಕ್ಷಿಣೆ ಕೊಟ್ಟಾನೇ ?

೨೮೯೩. ಭೂಮಿ ಮಾರಿ ನಾಮ ಹಾಕಿಕೊಂಡಾ.

೨೮೯೪. ಭೂಮಿಯನ್ನು ಮಹಾಶೇಷ ಹೊತ್ತಿರುವನಾದರೆ
ಮಹಾಶೇಷನನ್ನು ಹೊತ್ತವನು ಯಾರು ?

೨೮೯೫. ಭೂಲೋಕ ಬಿಟ್ಟರೂ ಸಾಲೋಕ್ಯ ತಪ್ಪಬಾರದು.

೨೮೯೬. ಭೇದಾ ತಿಳಿಯದಿದ್ದರೂ ವಾದಾ ಬಿಡುವುದಿಲ್ಲ.

೨೮೯೭. ಭೋಗಿಗೆ ಯೋಗಿ ಮರುಳು
ಯೋಗಿಗೆ ಭೋಗಿ ಮರುಳು.

೨೮೯೮. ಭೋಜನವಿಲ್ಲದಿದ್ದರೂ ಭಜನೆಯಿರಬೇಕು.

೨೮೯೯. ಭೋಜನ ಅಂದರೆ ಯೋಜನ ಹೋದೇನು ಅಂದ ಹಾಗೆ.

* ಗಡಿಗೆ.

೨೯೦೦. ಭ್ರಮರ ಭ್ರಮಿಸಿ ಬೆಳಗೂ ಭಂಗಪಟ್ಟ ಹಾಗೆ.

೨೯೦೧. ಭ್ರಮೆಯಿದ್ದವಗೆ ಶ್ರಮೆಯಿಲ್ಲ
ಶ್ರಮೆಯಿದ್ದವಗೆ ಭ್ರಮೆಯಿಲ್ಲ.

೨೯೦೨. ಭ್ರಷ್ಟನಾದರೂ ಕಷ್ಟ ತಪ್ಪದು.

೨೯೦೩. ಭ್ರಾಂತಿ ಹಿಡಿದವನಿಗೆ ವಾಂತಿ ಕೊಟ್ಟರೆ ಹೋದೀತೇ ?

೨೯೦೪. ಭ್ರಾಂತಿ ಹೋದರೂ ಭಯ ಹೋಗಲಿಲ್ಲ.

೨೯೦೫. ಮಕರರಾಶಿಗೆ ಗುರು ಬಂದರೆ ಶೂಕರಗೆ ಏನು ?

೨೯೦೬. ಮಕ್ಕಳಿಲ್ಲದವರಿಗೆ ಕೊಳ್ಳಿ ಎಲ್ಲಿಯದು ?

೨೯೦೭. ಮಕ್ಕಳಿಲ್ಲದ ಗೊಡ್ಡಿ ಗುಂಡುಕಲ್ಲನ್ನು
ತೊಟ್ಲಲ್ಲಿ ಹಾಕಿ ಜೋ ಜೋ ಅಂದಳು.

೨೯೦೮. ಮಕ್ಕಳಿಗೆಲ್ಲ ಬೆಕ್ಕಿನ ಪಳಿದ್ಯವೇ ?

೨೯೦೯. ಮಕ್ಕಕ್ಕೆ ಹೋದ ಮದೀನಕ್ಕೆ ಹೋದ
ಇದ್ದ ಮಕ್ಕಳನ್ನು ಹೋಗಾಡಿಸಿ ಬಂದ.

೨೯೧೦. ಮಕ್ಕಕ್ಕೆ ಹೋದರೂ ಟಕ್ಕುತನ ಬಿಡಲಿಲ್ಲ.

೨೯೧೧. ಮಕ್ಕಳ ಬಾಯಿಗೆ ಮಣ್ಣು ಸವಿ.

೨೯೧೨. ಮಕ್ಕಳ ಹೇಲು ತಿನ್ನುವವಳು
ತುಪ್ಪದ ಗಸಿ ಬಿಟ್ಟಾಳೇ ?

೨೯೧೩. ಮಕ್ಕಳ ತಲೆ ನೆರೆಯಿತು
ಕೂಳು ಗಂಜಿ ಹರಿಯಿತು.

೨೯೧೪. ಮಕ್ಕಳಿಲ್ಲದವರಿಗೆ ಒಕ್ಕಳ ಹೊನ್ನು ಇದ್ದರೇನು ?

೨೯೧೫. ಮಕ್ಕಳ ಬಯ್ಕೆಯಿಂದ ಮಯ್ಲಾರಕ್ಕೆ ಹೋದರೆ
ಇದ್ದ ತೂತು ಮುಚ್ಚಿ ಹೋಯಿತು*.

೨೯೧೬. ಮಕ್ಕಳಿಲ್ಲದವನಿಗೆ ಹೆಂಡತಿ ಮುದ್ದು
ಹೆಂಡತಿಯಿಲ್ಲದವಗೆ ತಾನೇ ಮುದ್ದು.

೨೯೧೭. ಮಕ್ಕಳೆಲ್ಲ ಮನೆವಾರ್ತೆ ಮಾಡಿದರೆ
ಅಪ್ಪನಿಗೆ ಯಾಕೆ ಇಬ್ಬರು ಹೆಂಡರು.

೨೯೧೮. ಮಕ್ಕಳ ಕೆಲಸ ತಿಳಿಯದು
ಮಕ್ಕಿ ಗದ್ದೇ ಬೆಳೆ ತಿಳಿಯದು.

೨೯೧೯. ಮಕ್ಕಳಿಲ್ಲದವರಿಗೆ ಮುದಿಗೂನೆ ಮುದ್ದು.

೨೯೨೦. ಮಖೆ ಮಳೆ ಆದರೆ ಮೊಕ ತೊಳೆಯುವುದಕ್ಕೆ ಆಗದೇ ?

೨೯೨೧. ಮಗನಿಗೆ ಮಾವ ಸತ್ತರೇನು
ಸೊಸೆಗೆ ಅಪ್ಪ ಸತ್ತರೇನು ?

೨೯೨೨. ಮಗ ಸೋತರೂ ಜೂಜಿನ ಒಳವು ಕಲಿತ.

೨೯೨೩. ಮಗನ ಸಂಗಡ ಪಾಠ
ಅಳಿಯನ ಸಂಗಡ ಊಟ.

೨೯೨೪. ಮಗ ಓದಿ ಓದಿ ಮರುಳಾದ.

೨೯೨೫. ಮಗ ಬದುಕಬೇಕು, ಸೊಸೆ ಮುಂಡೆ ಆಗಬೇಕು.

---

* ಮಕ್ಕಳಿಲ್ಲವೆಂದು ಮಯ್ಲಾರಕ್ಕೆ ಹೋದರೆ
ಮೈಯ್ಯೆಲ್ಲ ಇಳಿದು ಹೋಯಿತು.

೨೯೨೬. ಮಗಳೇ ಮರುಳಾದೆಯಾ ಅಂದರೆ
ಜಗಳವಾಡುವವರು ಯಾರು ಅಂದ ಹಾಗೆ.

೨೯೨೭. ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ
ಮಗನನ್ನು ಹೆತ್ತು ಸೊಸೆಗೆ ಕೊಟ್ಟೆ.

೨೯೨೮. ಮಗ ಹುಟ್ಟಿ ಕಳ್ಳನಾದ
ಮಗಳು ಹುಟ್ಟಿ ಸೂಳೆಯಾದಳು.

೨೯೨೯. ಮಗುವಿನ ಊಟ ಹತ್ತು
ತಾಯಿಯ ಊಟ ಒಂದು.

೨೯೩೦. ಮಗ್ಗದ ಕುಣಿಯಲ್ಲಿ ಹಗ್ಗವಾದೀತೇ ?

೨೯೩೧. ಮಗ್ಗ ನೇಯಲಿಕ್ಕೆ ತಿಳಿಯದಿದ್ದರೂ
ಹಗ್ಗ ನೇಯಲಿಕ್ಕೆ ತಿಳಿಯದೇ ?

೨೯೩೨. ಮಗ್ಗಿ ಬಾರದವನಿಗೆ ಸುಗ್ಗೀಕಾಯಿ ಮದ್ದೇ ?

೨೯೩೩. ಮಗ್ಗಿ ಬಾರದಿದ್ದರೆ ಹಾಗೂ ವೀಸ ಗುಣಿಸು ಅಂದ.

೨೯೩೪. ಮಗ್ಗುಲಲ್ಲಿರುವ ಹಾವು ಕಚ್ಚದೇ ಇದ್ದೀತೇ ?

೨೯೩೫. ಮಘೇ ನೀರು ಮೊಗೇಲಿಡು ಅಂದ ಹಾಗೆ.

೨೯೩೬. ಮಚ್ಚು ಮದ್ದು ಎಂದು ಕೊಟ್ಟದ್ದು
ಹುಚ್ಚು ಮದ್ದಾಯಿತು.

೨೯೩೭. ಮಚ್ಚೆ ನಾಲಿಗೆ ಇದ್ದವನ ಸಂಗಡ
ಕಚ್ಚಾಟ ಮಾಡಬಾರದು.

೨೯೩೮. ಮಜ್ಜನ ನೀಡಲಿಕ್ಕೆ ಹೋಗಿ
ಮಜ್ಜಿಗೆ ಕುಡಿದ ಹಾಗೆ.

೨೯೩೯. ಮಜ್ಜನ ಮಾಡಿ ಕಜ್ಜಾಯ ತಿಂದರೆ
ಅಜ್ಜೀ ಬೊಜ್ಜವಾಯಿತೇ ?

೨೯೪೦. ಮಜ್ಜಿಗೆಗೆ ತಕ್ಕ ರಾಮಾಯಣ ಹೇಳಿದ.

೨೯೪೧. ಮಜ್ಜಿಗೆಗೆ ಹೋದವನಿಗೆ ಎಮ್ಮೇ ಕ್ರಯವು ಯಾಕೆ ?

೨೯೪೨. ಮಟ್ಟ ನೋಡಬೇಕಾದರೆ *ಹೆಟ್ಟಗೆ*ಯಿಂದ ಆದೀತೇ ?

೨೯೪೩. ಮಟ್ಟ ಹಾಕದೆ ಕೆತ್ತಕೂಡದು.
ಕಟ್ಟಡದೆ ಹೊರಕೂಡದು.

೨೯೪೪. ಮಟ್ಟೆಯಿಟ್ಟರೂ ಕೆಟ್ಟತನ ಹೋಗಲಿಲ್ಲ.

೨೯೪೫. ಮಟ್ಟು ತಿಳಿದ ನಾಯಿ ಹಟ್ಟೇಲಿದ್ದೀತೇ ?

೨೯೪೬. ಮಟ್ಟು ಮೀರಿ ಉಂಡರೆ ಚಟ್ಟ ಕಟ್ಟುವುದೇ !

೨೯೪೭. ಮಟ್ಟು ತಿಳಿದವನ ಸಂಗಡ
ಹೆಟ್ಟ್ಯಾಟ ಮಾಡಬಾರದು.

೨೯೪೮. ಮಟ್ಟು ತಿಳಿಯದೆ ಮಾತಾಡಬಾರದು.

೨೯೪೯. ಮಠದ ಮಾಳಿಗೆ ಏರದವ ಗಟ್ಟಾ ಹತ್ತ್ಯಾನೆ ?

೨೯೫೦. ಮಡದಿಯಿಲ್ಲದವನ ಸಂಗಡ
ಮಕ್ಕಳೆಷ್ಟು ಎಂತ ಕೇಳಿದ.

೨೯೫೧. ಮಡಲು ತಿಂದರೆ ಒಡಲು ತುಂಬೀತೇ ?

೨೯೫೨. ಮಡಿಯೊಳಗಿನ ಹುಣ್ಣು, ಮಾವನವರ ವೈದ್ಯ.

---

* ಪೆಟ್ಟಗೆ.

೨೯೫೩. ಮಡಿಯುಟ್ಟರೂ *ಮುಂಡತನ* ಬಿಡಲಿಲ್ಲ.

೨೯೫೪. ಮಡಿಯುಟ್ಟರೂ ಮೈಲಿಗೆ ಬಿಡಲಿಲ್ಲ.

೨೯೫೫. ಮಡಿಯೊಳಗೆ ಇಟ್ಟರೂ ಹಡಿಕೆ ನಾತ ಹೋಗಲಿಲ್ಲ.

೨೯೫೬. ಮಡಿಕೆ ಮಾರುವವನಿಗೆ ದುಡುಕಿನ ಗವುಜಿ ಯಾಕೆ ?

೨೯೫೭. ಮಡಿಕೆಯೊಡೆಯಬೇಕಾದರೆ ಅಡಿಕೆ ಮರ ಬೇಕೆ ?

೨೯೫೮. ಮಡಿದು ಹೋಗುವಾಗ್ಯೆ ಮಡದೀಗೊಡವೆ ಯಾಕೆ ?

೨೯೫೯. ಮಡಿಕೆಯ ಲಾಭ ಕುಡಿಕೆಯಲ್ಲಿ ಹೋಯಿತು.

೨೯೬೦. ಮಡ್ಡನಾದರೆ ಗಡ್ಡ ಹೊತ್ತದೇ ?

೨೯೬೧. ಮಡ್ಡಿತಿನ್ನದ ಎಮ್ಮೆ ಗೊಡ್ಡು ಆದೀತೆ ?

೨೯೬೨. ಮಡಿಯನ್ನಕ್ಕೆ ಗೊಡ್ಡುಸಾರು.

೨೯೬೩. ಮಡ್ಡು ಹುಲ್ಲು ಗೊಡ್ಡು ಎಮ್ಮೆಗೆ.

೨೯೬೪. ಮಣವಿಲ್ಲದೆ ಕಂಡಿಯಿಲ್ಲ
ಹಣವಿಲ್ಲದೆ ವರಹವಿಲ್ಲ.

೨೯೬೫. ಮಣಗದ ಮನುಷ್ಯ ಹೆಣಗಿದರೂ ಬಗ್ಗ.

೨೯೬೬. ಮಣಾ ತೂಗದ ತ್ರಾಸು ಕಂಡಿ ತೂಗೀತೇ ?

೨೯೬೭. ಮಣಿಯಗಾರನ ಹಂಗು ಹಣಗಾರನಿಗೂ ಬೇಕು.

---

* ಮಡ್ಡತನ.

೨೯೭೮. ಮಣೀಸರಕ್ಕೆ ಗತಿಯಿಲ್ಲದವ
ಹಣ ದಕ್ಷಿಣೆ ಕೊಟ್ಟಾನೇ ?

೨೯೭೯. ಮಣಿಯಗಾರನಿಗೆ ದುಃಖ ಸುಖ ಹೇಳಿದರೆ
ಮಣುವಿನ ಲೆಕ್ಕ ಬಿಟ್ಟಾನೆ ?

೨೯೮೦. ಮಣೇ ಕಾಣದವ ಮಾಳಿಗೆ ಕಂಡಾನೇ ?

೨೯೮೧. ಮಣೇಲಿ ಕುಂಡ್ರಲಿಕ್ಕೆ ಹಣೇಲಿ ಇಲ್ಲದವ
ಸಿಂಹಾಸನ ಏರ್ಯಾನೇ ?

೨೯೮೨. ಮಣೇಮೇಲೆ ಕೂತು ಜಪ ಮಾಡಿದರೂ
ಹಣೇಲಿ ಬರದದ್ದು ತಪ್ಪೀತೇ ?

೨೯೮೩. ಮಣ್ಣಿನ ಬೆಕ್ಕಾದರೇನು, ಇಲಿ ಹಿಡಿದರೆ ಸೈ.

೨೯೮೪. ಮಣ್ಣಿನ ಕಾಲು ನೀರಿಗೆ ಆಗದು
ಮರದಕಾಲು ಬೆಂಕಿಗೆ ಆಗದು.

೨೯೮೫. ಮಣ್ಣಿನಿಂದ ಕೌರವ ಕೆಟ್ಟ
ಹೆಣ್ಣಿನಿಂದ ರಾವಣ ಕೆಟ್ಟ.

೨೯೮೬. ಮಣ್ಣು ಬಿಟ್ಟು ಮಡಿಕೆಯಿಲ್ಲ
ತನ್ನ ಬಿಟ್ಟು ದೇವರಿಲ್ಲ.

೨೯೮೭. ಮಣ್ಣು ಹೊಯಿದು ಅಂಬಲಿ ಕಾಸಿದರೆ
ಉಂಬೋಕಾದೀತೇ ?

೨೯೮೮. ಮಣ್ಣು ಹೊರುವವನ ತಲೆಗೆ ಬೆಣ್ಣೆ ಹಚ್ಚಿಕೊಂಡಂತೆ.

೨೯೮೯. ಮಣ್ಣು ದೇವರಿಗೆ ಮಜ್ಜನವೇ ಸಾಕ್ಷಿ.

೨೯೮೦. ಮಣ್ಣು ಕುಂಡೆ ನಂಬಿ ಹೊಳೆ ಹಾದರು *

೨೯೮೧. ಮತಕ್ಕೆ ಭೇದವಾದರೆ ನೀತಿಗೆ ಭೇದವೇ ?

೨೯೮೨. ಮತದ ಸ್ವರೂಪ ಕೋತಿ ಬಲ್ಲುದೇ ?

೨೯೮೩. ಮತ ಬಿಟ್ಟರೂ ಮದ ಬಿಡಲಿಲ್ಲ.

೨೯೮೪. ಮತಿಯಿಲ್ಲದವನಾದರೆ ಗತಿ ನೋಡನೇ ?

೨೯೮೫. ಮತಿಯಿಲ್ಲದವಗೆ ಗತಿಯಿಲ್ಲ.

೨೯೮೬. ಮತಿಯಿಲ್ಲದೆ ಮಾತಾಡಿದರೆ ಕತಿಗೆ ಕಾರಣ.

೨೯೮೭. ಮತಿಗೆಟ್ಟರೆ ಗತಿ ಕೆಡುವುದು.

೨೯೮೮. ಮತ್ತನಾದವನ ಹತ್ತಿರ ಕತ್ತಿಯಿದ್ದರೇನು ?

೨೯೮೯. ಮತ್ತೆ ಹುಟ್ಟಿದ ಕೋಡಿಗಿಂತ
ಮುಂಚೆ ಯಿರುವ ಕಿವಿಯೇ ವಾಸಿ.

೨೯೯೦. ಮಥನ ಕಾಲದಲ್ಲಿ ಕಥೆ ಕೇಳುವುದುಂಟೇ ?

೨೯೯೧. ಮದಮಗನ ಬಿಟ್ಟು ಮದುವೆಗೆ ಹೋದರು.

೨೯೯೨. ಮದವಣಗಿತ್ತಿಗೆ ಕಾವಲಿಗೆ ಕಳುಹಿಸಿದ ಹಾಗೆ.

೨೯೯೩. ಮದುವೆಗೆ ತಂದ ಅಕ್ಕಿ ಸೇಸೆಗೆ ತೀರಿ ಹೋಯಿತು.

೨೯೯೪. ಮದುವೇ ಮನೇಲಿ ಅನ್ನವಿಕ್ಕಿ
ಹಿತವ ಪಡೆದ ಹಾಗೆ.

---

* ಬುಡ್ಡೆಯನ್ನು ನಂಬಿ ಹೊಳೆಹಾದ ಹಾಗೆ.

೧೯೯೫. ಮದುವೇ ಮನೇಲಿ ತೋಪೆಗೆ ಅತ್ತರು
ಗೌರಿಹಬ್ಬದಲ್ಲಿ ಕಾಯಿಗೆ ಅತ್ತರು.

೧೯೯೬. ಮದುವೇ ಮುಗಿದರೂ ಮದುಮಗನ್ನ ನೋಡಲಿಲ್ಲ.

೧೯೯೭. ಮದುವೆ ಚಪ್ಪರದಲ್ಲಿ ಎತ್ತು ಹುಡುಕಿಬಂದ ಹಾಗೆ.

೧೯೯೮. ಮದುವೆ ಚಪ್ಪರದಲ್ಲಿ ಮದುಮಗನೇ ಜಾಣ.

೧೯೯೯. ಮದ್ದು ತಿಳಿದವನಾದರೆ ಒದ್ದ ಪೆಟ್ಟು ಹೋದೀತೇ ?

೨೦೦೦. ಮದ್ದು ಕುಡಿದ ಕೂಡಲೆ ಎದ್ದು ನಿಲ್ಲುವುದುಂಟೇ ?

೨೦೦೧. ಮದ್ದು ಸುಡುವಲ್ಲಿ ಹದ್ದಿಗೇನು ?

೨೦೦೨. ಮಧ್ಯಸ್ತ ಇಲ್ಲದ ಊರಲ್ಲಿ
ಮಧ್ಯಾಹ್ನ ಇರಬಾರದು.

೨೦೦೩. ಮಧ್ಯಾಹ್ನ ತಿಳಿಯದವ ಗದ್ಯಾಣದ ನೋಟ ಬಲ್ಲನೇ ?

೨೦೦೪. ಮಧ್ಯಾಹ್ನದ ನೆಂಟನಲ್ಲ, ಸಂಜೆ ಮಳೆಯಲ್ಲ.

೨೦೦೫. ಮನಗುಂದಿಗೆ ಮದ್ದಿಲ್ಲ.

೨೦೦೬. ಮನವಿಲ್ಲದ ಮನೆವಾರ್ತೆ, ಧನವಿಲ್ಲದ ಐಶ್ವರ್ಯ.

೨೦೦೭. ಮನವರಿಯದ ಪಾಪವಿಲ್ಲ
* ತನು ತಿಳಿಯದ ನೋವಿಲ್ಲ *

೨೦೦೮. ಮನಸ್ಸಿನಲ್ಲಿ ಮಂಡಿಗೆ ಮಾಡಿಕೊಂಡರೆ
ಗೋಧಿ ರೊಕ್ಕ ಯಾರು ಕೊಡಬೇಕು ?

---

* ಶಿವನರಿಯದ ಸಾವಿಲ್ಲ.

೩೦೯. ಮನೆ ಮುರಿದರೆ ಕಟ್ಟ ಬಹುದು
ಮನ ಮುರಿದರೆ ಕಟ್ಟಲಾಸ *

೩೧೦. ಮನೆ ಕಟ್ಟಿ ನೋಡು
ಮದುವೆ ಮಾಡಿ ನೋಡು.

೩೧೧. ಮನೆಯ ದೀಪವೆಂದು ಮುಂದಿಟ್ಟರೆ
ಗಡ್ಡ ಮೀಸೆ ಸುಟ್ಟಿತು.

೩೧೨. ಮನೆಗೆ ಬೆಂಕಿ ಹತ್ತಿದಾಗ
ಬಾವೀ ಕಡಿಯಲಿಕ್ಕೆ ಹೋದರು.

೩೧೩. ಮನೆಯೆಲ್ಲಾ ನಿಮ್ಮದು, ಗಳ ಮಾತ್ರ ಮುಟ್ಟಬೇಡಿ.

೩೧೪. ಮನೆಗೆ ಮಾರಿ, ಪರರಿಗೆ ಉಪಕಾರಿ.

೩೧೫. ಮನೆಗೆ ಒಂದು ಮುದುಕಿ
ಒಲೆಗೆ ಒಂದು ಕುಂಟೆ.

೩೧೬. ಮನೆಗೆ ಬಂದರೆ ಮಜ್ಜಿಗೆ ಕೊಡದಾಕೆ
ಹೇಳಿ ಕಳುಹಿಸಿದರೆ ಹಾಲು ಕೊಡುತ್ತೇನೆ ಅಂದ ಹಾಗೆ.

೩೧೭. ಮನೆಗೆ ಬಂದ ಮರುಳು ಲೇಸು.

೩೧೮. ಮನೆ ಒಲ್ಲೆ, ದಾರಿ ಅರಿಯೆ.

೩೧೯. ಮನೆ ಮಂಗಳವಾರ, ಒಲೆ ಒಂದು ಹೊತ್ತು
ಬಂದ ಬೀಗರು ಕಮರು ತೇಗು ಬಿಡುತ್ತಾರೆ.

---

* ಮನೆ ಕಟ್ಟಬಹುದು
ಮನ ಕಟ್ಟಕೂಡದು.

೩೦೨೦. ಮನೆಯ ದೀಪವಾದರೆ ಮುತ್ತು ಕೊಡಬಹುದೇ ?

೩೦೨೧. ಮನೆ ಮನೆ ತಿರುಗುವ ತೊತ್ತು
ಮಾತು ತಾರದೆ ಬಿಟ್ಟಾಳೇ ?

೩೦೨೨. ಮನೆಯಲ್ಲಿ ರಾತೀಬಿಗೆ ಗತಿಯಿಲ್ಲ
ರತ್ನಪಡಿಯ ವ್ಯಾಪಾರ.

೩೦೨೩. ಮನೆಯ ನಾಯಿಯಾದರೆ ನಾಣ್ಯದ ನೋಟಾ ಬಲ್ಲುದೇ ?

೩೦೨೪. ಮನೆ ಮನೆ ತಿರುಗುವವಗೆ
ಮಾತು ಬಾರದೆ ಬಿಟ್ಟೀತೇ ?

೩೦೨೫. ಮನೇ ಗಂಡ ಗೇದು ಹಾಕುತ್ತಾನೆ
ಪುಕ್ಕಸ್ಯಾಟಿ ಮಿಂಡ ಕೇದು ಹೋಗುತ್ತಾನೆ.

೩೦೨೬. ಮನೇ ತಿಂಬುವವಗೆ ಕದ ಹಪ್ಪಳ ಸಂಡಿಗೆ.

೩೦೨೭. ಮನೇ ಮುಂದೆ ಹಳ್ಳ ಹರಿದರೂ
ಕುಡಿಯುವುದಕ್ಕೆ ನೀರಿಲ್ಲ.

೩೦೨೮. ಮನೋರೋಗಕ್ಕೆ ಮದ್ದಿಲ್ಲ.

೩೦೨೯. ಮನೋರೋಗಕ್ಕೆ ಮರಣವೇ ಮದ್ದು.

೩೦೩೦. ಮನ್ನಣೆ ಸಿಕ್ಕದಿದ್ದರೆ ತಲ್ಲಣಗೊಳ್ಳಬಹುದೇ ?

೩೦೩೧. ಮರದ ಹಣ್ಣು ಮರದ ಬುಡದಲ್ಲೇ.

೩೦೩೨. ಮರ ಹುಟ್ಟಿದಲ್ಲಿ ಮರಣ
ಮನುಷ್ಯ ಹೋದಲ್ಲಿ ಮರಣ.

೩೦೩೩. ಮರವೇರಿ ಕೈಬಿಟ್ಟ ಹಾಗೆ.

೩೦೩೪. ಮರಗಿಣೀ ಕೂಡ ಹೋಗಿ ಅರಗಿಣಿ ಕೆಟ್ಟಿತು.

೩೦೩೫. ಮರಳಿ ಮಂಚಕ್ಕೆ ಎಷ್ಟು ಕಾಲು ಅಂದರೆ
ಮೂರು ಮತ್ತೊಂದು ಅಂದಳು.

೩೦೩೬. ಮರಾಟರ ಹತ್ತರ ಹೋರಾಟ ಸಲ್ಲ.

೩೦೩೭. ಮರುಳಗೆ ಇರುಳಿಲ್ಲ, ಪಿತ್ತದವಗೆ ನಿದ್ರೆಯಿಲ್ಲ.

೩೦೩೮. ಮರುಕವಿಲ್ಲದ ಹೆಂಡತಿಗಿಂತ
ಮರದ ನೆರಳು ಸುಖ.

೩೦೩೯. ಮರ್ಕಟದ ಚೇಷ್ಟೆ ತರ್ಕ ಮಾಡಿದರೆ ನಿಂತೀತೇ?

೩೦೪೦. ಮರ್ಮ ತಿಳಿಯದೆ ಕರ್ಮ ಮಾಡಿದವನ ಮನಸು
ನಿರ್ಮಲವಾದೀತೇ?

೩೦೪೧. ಮಲ ಮೂತ್ರ ಮಾಡದವಗೆ
ಮಲಿನತೆಯೇ ಮಲತಾಯಿ.

೩೦೪೨. ಮಲ್ಯರಂಡೇ ಅಂದರೆ ಉಲ್ಲಾಸಿಸಿ ಕೊಂಡು ಹೋದ ಹಾಗೆ.

೩೦೪೩. ಮಲ್ಲಿಗೆ ಹೂವಿನಿಂದ ಬಾಳೆನಾರು ಪಾವನವಾಯಿತು.

೩೦೪೪. ಮಹಾತ್ಮನಿಗೆ ದುರಾತ್ಮನ ಗೊಡವೆ ಏನು?

೩೦೪೫. ಮಹಾನುಭಾವರೇ ಮಹಾಯುಗದಲ್ಲಿ
ತಮ್ಮ ಪ್ರಾಯವೆಷ್ಟೆಂದು ಕೇಳಿದನಂತೆ.

೩೦೪೬. ಮಹಾಲಕ್ಷ್ಮಿ ಒಲಿದವಗೆ ದಾರಿದ್ರ್ಯವಿಲ್ಲ
ಸರಸ್ವತಿ ಒಲಿದವಗೆ ಹೆಡ್ಡತನವಿಲ್ಲ.

೩೦೪೭. ಮಳೆಯಿಲ್ಲದ ಬೆಳೆ ಮಾತೆಯಿಲ್ಲದ ಕೂಸು ಸಮ.

೩೦೪೮. ಮಳೆಗೆ ಹೆದರಿ ಹೊಳೇಲಿ ಹಾರಿದ ಹಾಗೆ.

೩೦೪೯. ಮಳೆ ಜೋಯಿಸನ ಮಿಂಡ
ಕತ್ತೆ ಗುಡಿಗಾರನ ಮಿಂಡ.

೩೦೫೦. ಮಳೆ ಮಾರು ಮರಣ ಯಾರೂ ಅರಿಯರು.

೩೦೫೧. ಮಳೆಯಾದರೆ ಕೇಡಲ್ಲ. ಮಗನುಂಡರೆ ಕೇಡಲ್ಲ.

೩೦೫೨. ಮಳೆಗಾಲದ ಬಿಸಿಲು ನಂಬಬಾರದು
ನಗೆಗಾರನ ಮಾತು ನಂಬಬಾರದು.

೩೦೫೩. ಮಳೇ ತಡಿಸಿದ ಕೂಡೆ ಸಿಡಿಲು ತಡಿಸೀತೇ ?

೩೦೫೪. ಮಳೇ ನೀರು ಬಿಟ್ಟು ಮಂಜಿನ ನೀರಿಗೆ ಕೈಯ್ಯೊಡ್ಡಿದ ಹಾಗೆ.

೩೦೫೫. ಮಳೇ ಹನಿ ಬಿಟ್ಟರೂ ಮರದ ಹನಿ ಬಿಡಲಿಲ್ಲ.

೩೦೫೬. ಮಾಘ ಸ್ನಾನಕ್ಕೆ ಹೋಗಿ ನಿತ್ಯಸ್ನಾನ ಪೂಜ್ಯ.

೩೦೫೭. ಮಾಡಬಾರದ್ದು ಮಾಡಿದರೆ
ಆಗಬಾರದ್ದು ಆಗುವುದು.

೩೦೫೮. ಮಾಡಿ ಉಂಡರೆ ಮನುಷ್ಯರ ಕಾಟ.
ತಿರುಕೊಂಡು ಉಂಡರೆ ನಾಯಿ ಕಾಟ.

೩೦೫೯. ಮಾಡಿಕೊಂಡ ಗಂಡ ಹಾಡಿಕೊಂಡು ಅತ್ತರೂ ಬಿಡ.

೩೦೬೦. ಮಾಡಿದ ಸೇವೆ ದಂಡಕ್ಕೆ ಸಾಲದು.

೩೦೬೧. ಮಾಡಿತೊ ಕೈ ಉಂಡಿತೋ ಬಾಯ್.

೩೦೬೨. ಮಾಡಿದರೆ ಮನೆ, ಹೂಡಿದರೆ ಒಲೆ.

೩೦೬೩. ಮಾಡಿದವ ಉಂಡಾನು, ಮಲಗಿದವ ಕೆಟ್ಟಾನು.

೩೦೬೪. ಮಾಡಿದವನ ಪಾಪ ಆಡಿದವನ ಬಾಯಲ್ಲಿ.

೩೦೬೫. ಮಾಡಿದವರಿಗೆ ಮಾಡಿದಷ್ಟು
ನೀಡಿದವರಿಗೆ ನೀಡಿದಷ್ಟು.

೩೦೬೬. ಮಾಡಿದ್ದು ಉಣ್ಣೋ ಮಾರಾಯ.

೩೦೬೭. ಮಾಡಿದ್ದು ಆಟ, ಆದದ್ದು ಮಾಟ.

೩೦೬೮. ಮಾಡಿ ಮಾಡಿ ಮಡಿಕೆ ತುಂಬುತ್ತಾನೆ
ನೋಡಿ ನೋಡಿ ಬಾಯಲ್ಲಿ ಹಾಕುತ್ತಾನೆ.

೩೦೬೯. ಮಾಡುವವರ ಕಂಡರೆ ನೋಡು
ನನ್ನ ಸರಿಯೇ ಎಂದ ಹಾಗೆ.

೩೦೭೦. ಮಾಡುವವರ ಮುಂದೆ, ಹೊಡಿಯುವವರ ಹಿಂದೆ ನಿಲ್ಲಬೇಕು.

೩೦೭೧. ಮಾಡೋದೇ ಪಾರಾಯಣ, ಆಡೋದೇ ಸಟೆ ಮಾತು.

೩೦೭೨. ಮಾಡೋದು ದುರಾಚಾರ
ಮನೆ ಮುಂದೆ ವೃಂದಾವನ.

೩೦೭೩. ಮಾಣಿಕ್ಯ ಬಿದ್ದರೆ ಹೆಕ್ಕಬಹುದು
ಮಾತು ಬಿದ್ದರೆ ಹೆಕ್ಕಕೂಡದು.

೩೦೭೪. ಮಾಣೀ ಕೇಡು ಕಂಡಲ್ಲಿ ಬೆಳ್ಳಿವೋಡ,

೨೦೭೫. ಮಾತಿಗೆ ಮೊದಲೇ ಗಾದೆ
ಊಟಕ್ಕೆ ಮೊದಲೇ ಉಪ್ಪಿನಕಾಯಿ.

೨೦೭೬. ಮಾತಿಗೆ ಮೊದಲಿಲ್ಲ, ಆಕಾಶಕ್ಕೆ ನಿಚ್ಚಣಿಗೆಯಿಲ್ಲ.

೨೦೭೭. ಮಾತು ಮಾತಿಗೆ ತಪ್ಪುವವನು ನೀತಿವಂತನಲ್ಲ.

೨೦೭೮. ಮಾತು ಬಲ್ಲವ ಮಾಣಿಕ್ಯ ತಂದ
ಮಾತರಿಯದವ ಜಗಳ ತಂದ.

೨೦೭೯. ಮಾತು ಅರಿಯದ ಮುಸಲ
ಹಾಸುವ ಕವುದಿ ಒಯ್ದ.

೨೦೮೦. ಮಾತು ಅನ್ನೋಕೆ ಮಾಡಿ ಅದೆ
ಜೋನ ಉಣ್ಣೋಕೆ ಮಾಡಿ ಅದೆ.

೨೦೮೧. ಮಾತು ಬರದಿದ್ದರೆ ಸುಮ್ಮನಿರುವವ ಜಾಣ.

೨೦೮೨. ಮಾತು ಕೊಂಡು ಹೋದವ ಉಂಡು ಬಂದ.
ಮಾಣಿಕ್ಯ ಕೊಂಡು ಹೋದವ ಹಸ್ದು ಬಂದ.

೨೦೮೩. ಮಾತು ಮನೆವಾರ್ತೆಗೆ ಕೇಡು
ತೂತು ಮಡಿಕೆಗೆ ಕೇಡು.

೨೦೮೪. ಮಾತು ಮನೆ ಹಾಳುಮಾಡಿತು
ಸೂಳೆ ನೆರೆ ಹಾಳುಮಾಡಿದಳು.

೨೦೮೫. ಮಾತು ಬಂದಾಗ ಸೋತು ಹೋದವನೇ ಜಾಣ.

೨೦೮೬. ಮಾತು ಆಡಿದರೆ ಹೋಯಿತು
ಮುತ್ತು ಒಡೆದರೆ ಹೋಯಿತು.

೩೦೮೭. ಮಾತೆಲ್ಲಾ ಹೋಲಿಕೆ ಕೊಳಗ ಮಾತ್ರ ಕಮ್ಮಿ.

೩೦೮೮. ಮಾತೆಯದಂಥಾ ಮಮತೆಯಿಲ್ಲ
ನೀತಿಯಂಥಾ ನಿಯಮವಿಲ್ಲ.

೩೦೮೯. ಮಾತ್ರೆಯ ಒಂದು ಸುತ್ತಿಗೆ ಒಂದು ವರಹಾ.

೩೦೯೦. ಮಾತ್ರೆ ನುಂಗುವುದಕ್ಕೆ ಗೋತ್ರ ಬೇಕೇ ?

೩೦೯೧. ಮಾದಿಗ ಬೂದಿ ಬಡಕೊಂಡು
ಮಾಧವನೆಂದರೆ ಓದಾಳಿಯಾದಾನೇ ?

೩೦೯೨. ಮಾದಿಗನ ಮನೇಲಿ ಪರಮಾನ್ನವಾದರೆ
ಹಾದೀಲಿ ಹೋಗೋರಿಗೇನು ?

೩೦೯೩. ಮಾದಿಗನ ಮೆಟ್ಟು ಕಚ್ಚುತ್ತದೆ
ನಾದಿಗನ ಕತ್ತಿ ಚುಚ್ಚುತ್ತದೆ.

೩೦೯೪. ಮಾದಿಗನ ಹೊಲಸು ಸಲ್ಲ
ನಾದಿಗನ ಗಾಯ ಸಲ್ಲ.

೩೦೯೫. ಮಾನ ಹೋಗದ ಹಾಗೆ ಬಟ್ಟೆ
ಪ್ರಾಣ ಹೋಗದ ಹಾಗೆ ಅನ್ನ.

೩೦೯೬. ಮಾನ ಹೋದ ಮೇಲೆ ಮರಣವಾದ ಹಾಗೆ.

೩೦೯೭. ಮಾನ ಹೋದರೂ ಮರಿಯಾದೆ ಹೋಗಲಿಲ್ಲ.

೩೦೯೮. ಮಾನದಲ್ಲಿ ಆನೆ ಹಿಡಿದೀತೇ ?

೩೦೯೯. ಮಾನಕ್ಕೆ ಬಾಗಿ ನಿಂತರೆ
ಬೋನಕ್ಕೆ ತರುವವರು ಯಾರು ?

೩೧೦೧. ಮಾನ ಕೊಟ್ಟು ಮರ್ಯಾದೆ ಕೊಳ್ಳಬೇಕು.

೩೧೦೨. ಮಾನ ಹೀನಸಿಗೆ ಬೇರೆ ಮಾನ ಹಾನಿ ಆಗುವುದುಂಟೇ ?

೩೧೦೩. ಮಾನಿಷ್ಠರು ಮಾನಕ್ಕೆ ಅಂಜಿದರೆ
ಮಾನಗೇಡಿ ತನಗೆ ಅಂಜಿದರು ಅಂದ.

೩೧೦೪. ಮಾನ್ಯ ಮಾನ್ಯರೆಲ್ಲ ಮಣ್ಣು ಮುಕ್ಕುವಾಗ
ಡೊಣ್ಣೆಕಾತ ತಲೆ ಹಾಕುತ್ತಿತ್ತು.

೩೧೦೫. ಮಾಯ ಮಾಡುವವರಿಗೆ ಮಾರಿ ಬಲ್ಲಳು.

೩೧೦೬. ಮಾರಮ್ಮನಿಗೆ ಗಂಡನಿಲ್ಲ
ಬೀರೇ ದೇವರಿಗೆ ಹೆಂಡತಿಯಿಲ್ಲ.

೩೧೦೭. ಮಾರಮ್ಮ ಅರಿಯದ ಕೋಣವೇ ?

೩೧೦೮. ಮಾರಿಗೆ ಒಂದು ಕೂಚು
ಮೊಳಕ್ಕೆ ಒಂದು ಗುಜ್ಜು.

೩೧೦೯. ಮಾರಿಯ ಕಣ್ಣು ಹೋತನ ಮೇಲೆ.

೩೧೧೦. ಮಾರಿಯ ಮನೆಗೆ ಹೋತ ಕನ್ನ ಕೊರೆದ ಹಾಗೆ.

೩೧೧೧. ಮಾಸಕ್ಕೆರಡು ಸಲ ಉಪವಾಸ ಮಾಡಿದರೂ
ಕಾಸೊಂದು ಬಿಡಲಾರ.

೩೧೧೨. ಮಾಸಾರ್ಧವಾದರೆ ಅಮಾವಾಸೆಯೋ ಹುಣ್ಣಿಮೆಯೋ
ಎಂದು ಕೇಳಿದನಂತೆ.

೩೧೧೩. ಮಾಸಿದ್ದಕ್ಕೆ ಹೆದರದವಳು ಮುಸುರೆಗೆ *ಹೆದರ್ಯಾಳೇ* ?

---

* ಹೇಸ್ಯಾಳೇ

೩೧೧೪. ಮಾಸುವ ಮೂಳಿಗೆ ಹೇಸುವ ಗಂಡನಂತೆ.

೩೧೧೫. ಮಿಗಿಲಾದವನ ಹತ್ತಿರ ಹಗೆ ಸಲ್ಲ
ನಗೆಗಾರನ ಹತ್ತಿರ ಮೈತ್ರಿ ಸಲ್ಲ.

೩೧೧೬. ಮಿಣುಕು ಹುಳ ತಿಣಕಿದರೆ ಜೇನು ಬಂದೀತೇ ?

೩೧೧೭. ಮಿಣ್ಣಾಗಿದ್ದವನ ಬಣ್ಣವೇ ಬೇರೆ.

೩೧೧೮. ಮಿತವಾದದ್ದು ಬಾಳುವುದು
ಹಿತವಾದದ್ದು ಫಲಿಸುವುದು.

೩೧೧೯. ಮಿತಿ ಮೀರಿದರೂ ಗತಿ ಮೀರಬೇಕು.

೩೧೨೦. ಮಿತ್ರನಿಗೆ ಮರೆಮಾಡಬೇಡ
ಶತ್ರುನಿಗೆ ಹೊಣೆಯಾಗಬೇಡ.

೩೧೨೧. ಮಿತ್ರದ್ರೋಹಿಯಾದವಗೆ ಕಾಣುವವರೆಲ್ಲ ಶತ್ರುಗಳೇ.

೩೧೨೨. ಮೀನು ನೀರಲ್ಲಿ ಮುಣುಗಿದರೆ
ಸ್ನಾನದ ಫಲ ಬಂದೀತೇ ?

೩೧೨೩. ಮುಕ್ತಿಯಾದರೂ ಶಕ್ತಿಯಿಂದ ಸಿಕ್ಕೀತೇ ?

೩೧೨೪. ಮುಖ ನೋಡಿ ಗುರುತು ತಿಳಿಯದಿದ್ದರೆ
ನಖ ನೋಡಿ ತಿಳಿದೀತೇ ?

೩೧೨೫. ಮುಚ್ಚಿ ಇಟ್ಟರೆ ಹುಚ್ಚು ಹೋದೀತೇ ?

೩೧೨೬. ಮುಟ್ಟದ ಕೈಗೆ ಬಟ್ಟ
ಕಟ್ಟದ ಹೊರೆಗೆ ದಿಟ್ಟ.

೩೧೨೭. ಮುತ್ತಯ್ದೇ ಕೈಯ್ಯ ಭಿಕ್ಷ
ಮೂರು ಹಿಡಿ ಸಾಕು.

೩೧೨೮. ಮುತ್ತಿನ ಚವು ಕತ್ತೆಗೆ ತಿಳಿದೀತೇ ?

೩೧೨೯. ಮುತ್ತಿನಷ್ಟು ಗಂಡ ಇದ್ದರೆ
ಬೆಟ್ಟದಷ್ಟು ಮಕ್ಕಳ ಹೆರುವೆನು.

೩೧೩೦. ಮುತ್ತಿನಂಥ ಗಂಡ ಇರಬೇಕು
ಕತ್ತೆಯಂಥ ಅತ್ತೆ ಇರಬೇಕು.

೩೧೩೧. ಮುತ್ತು ಕೆಟ್ಟರೆ ಬತ್ತಕ್ಕಿಂತ ಕಡೆಯಾದೀತೇ ?

೩೧೩೨. ಮುತ್ತು ಹುಟ್ಟೋದು ಚಿಪ್ಪಿನಲ್ಲೇ.

೩೧೩೩. ಮುದ್ದುಕನ ಬಾಳು ತೀರಿದ ಮೇಲೆ
ಬದುಕು ಬಾಳು ಇದ್ದು ಫಲವೇನು ?

೩೧೩೪. ಮುದುಕನಾದರೂ ಕದಕು ಬಿಡಲಿಲ್ಲ.

೩೧೩೫. ಮುದ್ದೆಲ್ಲಾ ಮೂರನೆಯ ಹೆಂಡತಿಗೆ.

೩೧೩೬. ಮುದ್ದೆಗೆ ಎದ್ದು, ಗುದ್ದಲಿಗೆ ಬಿದ್ದ.

೩೧೩೭. ಮುದ್ದೆ ಬೆಲ್ಲವಾದರೆ ಮದ್ದಿಗೆ ಆಗದೇ ?

೩೧೩೮. ಮುದ್ದೇ ಕಬ್ಬಿಣ ಮುಣುಗುವುದು
ಬಿಲ್ಲೇ ಕಬ್ಬಿಣ ತೇಲುವುದು.

೩೧೩೯. ಮುಪ್ಪಾದ ಮೇಲೆ ಮೂರು ದಿನವಿರಬಾರದು.

೩೧೪೦. ಮುರಕ ಮನೆಗೆ ಒಡಕ ಗಡಿಗೆ.

೩೧೪೧. ಮುರುವಿಗೆ ಬಗೆ ಇಲ್ಲದಿದ್ದರೆ
ಹರವಿಗೂ ದರಿದ್ರವೇ ?

೩೧೪೨. ಮುರುಕು ಇದ್ದವಗೆ ನರಕ ತಪ್ಪದು.

೩೧೪೩. ಮುರುಕು ಇಲ್ಲದ ಹೆಂಗಸಿಲ್ಲ
ಸುರುಕು ಇಲ್ಲದ ಊಟವಿಲ್ಲ.

೩೧೪೪. ಮುಳ್ಳು ತೆಗೆದು *ಕೊಳ್ಳಿ* ಹೆಟ್ಟಿದ ಹಾಗೆ.

೩೧೪೫. ಮುಳ್ಳು ಮೊನೆಯಷ್ಟು ಆಸ್ಪದ ಕೊಡದವನ
ತಳ್ಳಿಗೆ ಹೋಗ ಬೇಡ.

೩೧೪೬. ಮೂಕನ ಸ್ವಪ್ನ ಹೇಳಲಿಕ್ಕೆ ತಿಳಿಯದು, ಹೇಳದೆ ತೀರದು.

೩೧೪೭. ಮೂಕನೆದುರಿಗೆ ಮೂಗು ತುರಿಸಿಕೊಂಡ ಹಾಗೆ.

೩೧೪೮. ಮೂಗಿಗಿಂತ ಮೂಗುತಿ ಭಾರ.

೩೧೪೯. ಮೂಗಿನ ಮೇಲೆ ಮುಸಿ ಅಂದರೆ ಕೋಪ.

೩೧೫೦. ಮೂಗಿಲ್ಲದವಳಿಗೆ ಮೂಗುತಿ ಯಾಕೆ?

೩೧೫೧. ಮೂಗು ಕೊಯ್ಯಿಕೊಂಡು
ಅವಲಕ್ಷಣ ಅನ್ನಿಸಿಕೊಂಡ ಹಾಗೆ.

೩೧೫೨. ಮೂಗು ಕೊಯಿದರೂ ಮೂಗಿನ ಸೊಳ್ಳೆ ಉಂಟಲ್ಲ ಅಂದಹಾಗೆ.

೩೧೫೩. ಮೂಡಣ ಸಂತೆಗೆ ಹೋಗಬೇಡ
ಮುಂಡೇ ಮಗಳನ್ನು ತರಬೇಡ.

---

* ದಸಿ.

೩೧೫೪. ಮೂಢಗೆ ಹೇಳಿದ ಬುದ್ಧಿ
ಅಡಿಗೆ ಹಾಕಿದ *ಸೊಪ್ಪು*.

೩೧೫೫. ಮೂಢಭಕ್ತಿಗೆ ಕೇಡಿಲ್ಲ
ಮೂಡೆ ರಾಗಿಗೆ ಭಯವಿಲ್ಲ.

೩೧೫೬. ಮೂರು ದಾರಿ ಆರು ಬಟ್ಟೆ.

೩೧೫೭. ಮೂರು ದಿನದ ಬಾಳಿಗೆ ಆರು ಜೋಡು ಓಲೆ.

೩೧೫೮. ಮೂರು ಗಾವುದದೊಳಗೆ ಬ್ರಾಹ್ಮಣರಿಲ್ಲದಿದ್ದರೆ
ಅಶ್ವಮೇಧಯಾಗ ಮಾಡ್ಯೇನು ಅಂದ ಹಾಗೆ.

೩೧೫೯. ಮೂರು ನಾಮದವ ಸ್ವರ್ಗಕ್ಕೆ ಹೋದರೆ
ಹನ್ನೆರಡು ನಾಮದವ ಎಲ್ಲಿ ಹೋದಾನು ?

೩೧೬೦. ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ.

೩೧೬೧. ಮೂರ್ಖನಾದವಗೆ ಮಾರ್ಕಂಡೇಯನ
ಆಯುಷ್ಯವಿದ್ದರೂ ಏನು ಫಲ ?

೩೧೬೨. ಮೂರ್ಖಗೆ ಹೇಳಿದ ಬುದ್ಧಿ
ಗೋರ್ಕಲ್ಲ ಮೇಲೆ ಹೊಯಿದ ಮಳೆ.

೩೧೬೩. ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು.

೩೧೬೪. ಮೂಲ ತಿಳಿದವಗೆ ಮೇಲೆ ತೋರಿಸಬೇಡ.

೩೧೬೫. ಮೂಲೆಗೆ ಇಡುವಂಥಾದ್ದು ಮಧ್ಯದಲ್ಲಿಡಬಾರದು.

---

* ಮೇವು.

೩೧೬೬. ಮೂವರ ಹೊತ್ತ ಬಂಡಿ
ಹೊಲಕ್ಕೆ ಹೋಗದು, ಮನೆಗೆ ಬಾರದು.

೩೧೬೭. ಮೂವತ್ತು ವರುಷದವರೆಗೆ ಮದುವೆ ಆಗದವಳಿಲ್ಲ
ಮೂರು ಜಾವಕ್ಕೆ ಊಟ ಆಗದವನಿಲ್ಲ.

೩೧೬೮. ಮೂವರ ಕಿವಿಗೆ ಮುಟ್ಟಿದ್ದು
ಮೂರು ಲೋಕಕ್ಕೆ ಮುಟ್ಟುವುದು.

೩೧೬೯. ಮೂಸಿ ನೋಡಿದರೆ ಹೂಸಿನ ನಾತ ಹೋದೀತೇ ?

೩೧೭೦. ಮೂಳಿಗೆ ಮುಕ್ಕುಮಡಿಕೆ ಆದರೆ ಆಗದೇ ?

೩೧೭೧. ಮೂಳೀ ಮೂಗುತಿ ಹೋದ ದೆಸೆಯಿಂದ
ಮೂಲೇ ಕಸವೆಲ್ಲ ಹೋಯಿತು.

೩೧೭೨. ಮೆಚ್ಚಿದವನಿಗೆ ಮಸಣವೇ ಸುಖ.

೩೧೭೩. ಮೆಟ್ಟಿದಲ್ಲದೆ ಹಾವು ಕಡಿಯದು.

೩೧೭೪. ಮೆಟ್ಟಿದಾಕ್ಷಣ ಗಟ್ಟ ತಗ್ಗೀತೇ ?

೩೧೭೫. ಮೆಟ್ಟೀ ಅಂದರೆ, ತಿಂದರೇನು ಕೋಟ್ಟೀ ಅಂದ.

೩೧೭೬. ಮೆಟ್ಟುಗಲ್ಲೇ ಗಟ್ಟ, ಬಾವಿನೀರೇ ಭಾಗೀರಥಿ.

೩೧೭೭. ಮೆಟ್ಟುಗಲ್ಲು ಚಿನ್ನವಾದರೆ ನಿನಗರವಾಸಿ, ನನಗರವಾಸಿ.

೩೧೭೮. ಮೆಣಸು ಕೊಳತರೆ ಜೋಳಕ್ಕಿಂತ ಕಡೆಯೇ ?

೩೧೭೯. ಮೆದೇ ಹುಲ್ಲು ಸೂರೆಯಾಗುತ್ತದೆ
ಒಡಿ ಹುಲ್ಲಿಗೆ ಒದ್ದಾಡುತ್ತಾನೆ.

೩೧೮೦. ಮೆಯ್ ಬೆಳ್ಳಗಾದರೆ ನೆರಳು ಬೆಳ್ಳಗೆಯೇ ?

೩೧೮೧. ಮೈಯ್ಯಲ್ಲ ಚಿನ್ನ, ಕಿವಿ ಮಾತ್ರ ಹಿತ್ತಾಳೆ.

೩೧೮೨. ಮೆಯ್ಯಲ್ಲಿ ಹುಟ್ಟಿದ ರೋಗಕ್ಕಿಂತ
ಕಾಡಿನಲ್ಲಿ ಹುಟ್ಟಿದ ಔಷಧ ಮೇಲು.

೩೧೮೩. ಮೆಯ್ತುಂಬ ಬಟ್ಟೆ, ಹೊಟ್ಟೆ ತುಂಬ ಅನ್ನ.

೩೧೮೪. ಮೇಘ ನೋಡಿ ನವಿಲು ಕುಣಿದರೆ
ಗೂಗೆ ನೋಡಿ ಕೋಳಿ ಕುಣಿಯಿತಂತೆ.

೩೧೮೫. ಮೇಟಿ ಬಲವಿದ್ದರೆ ಕೋಟಿ ಗೆಲಬಹುದು.

೩೧೮೬. ಮೇದ ಮೋಟೂ ಹೋದ ಹೆಜ್ಜೆಯೂ ಕಾಣುವುದಿಲ್ಲ.

೩೧೮೭. ಮೇಲಿನ ಮೋಡ ನೋಡಿ
ವರ್ತನೇ ಬಾವಿಯಲ್ಲು ಉಚ್ಚೆ ಹೊಯಿದ ಹಾಗೆ*

೩೧೮೮. ಮೇಲಿನಿಂದ ಹದ್ದು ಅರಿಯದು
ಕೆಳಗಿನಿಂದ ಕಾಗೆ ಅರಿಯದು.

೩೧೮೯. ಮೇಲುಗೋಟೆ ಜಾತ್ರೆಯಲ್ಲಿ, ನನ್ನ
ಬೋಳದಾಸಯ್ಯನ ಕಂಡಿಯಾ ?

೩೧೯೦. ಮೇಲು ಮಾಡಿದರೆ ಕೀಳು ಆಗುವುದು.

೩೧೯೧. ಮೇಲೆ ಬಿದ್ದ ಸೂಳೆ ಕಾಸಿಗಾದರೂ ಬೇಡ†

---

* ಮೋಡವು ಕಂಡರೆ ನಾಯಿ ಬಾವಿಗೆ
ಉಚ್ಚೆ ಹೊಯಿದ ಹಾಗೆ.

† ಮೇಲೆ ಬಿದ್ದ ಸರ್ಕಿಗೆ ಹಾಗದ ಕಾಸು.

೩೧೯೨. ಮೇಳ ಕೂಡಿಸದೆ ತಾಳ ಬಡಿದ ಹಾಗೆ.

೩೧೯೩. ಮೈತ್ರನಾದರೂ ಮೆಯ್ಯ್ ತಗಲಿಸ ಕೂಡದು.

೩೧೯೪. ಮೊಕಮಡಿಯನಾಗಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ.

೩೧೯೫. ಮೊಗೆ ಮಾಡದ ಕುಂಬಾರ ಗುಡಾಣ ಮಾಡ್ಯಾನೇ ?

೩೧೯೬. ಮೊಗೆ ನೀರಿನೊಳಗೊಂದು ನೆಗಳ್ ಆಡಿದಂದಿಗೆ
ತಗುಣೆ ಹೆಬ್ಬುಲಿಯ ಹಿಡಿದಂದು ಹೆಣ್ಣಿನ ಬಗೆಯ ನಂಬುವುದು.

೩೧೯೭. ಮೊಟ್ಟೆ ಕಟ್ಟಲಿಕೆ ತಿಳಿಯದವ ಹೊಟ್ಟೆ ಕಟ್ಟ್ಯಾನೇ ?

೩೧೯೮. ಮೊಣಕಾಲು ಊರಲಿಕ್ಕೆ ತಿಳಿಯದವ
ಮೊಳಕೈಯಿಂದ ನಿತ್ತಾನೇ ?

೩೧೯೯. ಮೊದಲು ಮಳೆ, ಆಮೇಲೆ ಕೊಳೆ.

೩೨೦೦. ಮೊದಲು ದೇವರು ಮೂಲೇಲಿದ್ದರೂ
ಹನುಮಂತರಾಯನಿಗೆ ದೀಪೋತ್ಸವವು.

೩೨೦೧. ಮೊದಲು ಕೂಡ ಬಾರದು
ಕೂಡಿ ಕಾಡ ಬಾರದು.

೩೨೦೨. ಮೊದಲಿಗೆ ಮೋಸ, ಲಾಭಕ್ಕೆ ಗುದ್ದ್ಯಾಟ.

೩೨೦೩. ಮೊಮ್ಮಗನಾದರೆ ಗುಮ್ಮನ ಹಾಗಿರಬೇಕೋ ?

೩೨೦೪. ಮೊರದಿಂದ ಕತ್ತಲೆಯನ್ನು ಹೊರ ಹಾಕಬಹುದೇ ?

೩೨೦೫. ಮೊಲದ ಕಣ್ಣು ಬೇಟೆಗಾರಗೆ ಮುದ್ದೇ ?

೩೨೦೬. ಮೊಲ ಬರುವಾಗ ನಾಯಿ ಬಯಲ್ಕಡೆಗೆ ಕೂತುಕೊಂಡಿತು.

೩೨೦೭. ಮೊಸರು ಹುಳಿಯೆಂತ ಹಸುರು ಹುಲ್ಲ ಹಿಡಿದನಂತೆ.

೩೨೦೮. ಮೊಸಳೆಗೆ ಉಪಕಾರ ಮಾಡಿ ನಶಿಸಿ ಹೋದ ಹಾಗೆ.

೩೨೦೯. ಮೊಳೆ ಮಾಡಲಿಕ್ಕೆ ತಿಳಿಯದ ಕಮ್ಮಾರ
ಮರಸುತ್ತು ಮಾಡ್ಯಾನೇ ?

೩೨೧೦. ಮೊಳಕೈಯ್ಯಾಡಿದರೆ ಮುಂಗೈಯ್ಯಾಡುತ್ತದೆ.

೩೨೧೧. ಮೋಕ್ಷ ಸಿಕ್ಕಬೇಕಾದರೆ ಭಕ್ಷ ತಿನ್ನಬೇಕೇ ?

೩೨೧೨. ಮೋಟಮರ ಗಾಳಿಗೆ ಮಿಂಡ.

೩೨೧೩. ಮೋರೆ ಕಂಡರೆ ತಿಳಿಯೋದಿಲ್ಲವೇ ? ಅಂದಹಾಗೆ.

೩೨೧೪. ಮೋರೆ ಕಂಡರೆ ಮನಸು ಇಳಿದೀತೇ ?

೩೨೧೫. ಮೋಸ ಯಾರ ದಾಸನಲ್ಲ.

೩೨೧೬. ಮೋಸಗಾರನ ಮನಸ್ಸು ಮಹೇಶ್ವರ ಬಲ್ಲ.

೩೨೧೭. ಮೌನಂ ಸರ್ವತ್ರ ಸಾಧನಂ.

೩೨೧೮. ಮಂಕಿ ಮಗನಾದರೆ ಸುಂಕ ಕೊಡಬಾರದೇ ?

೩೨೧೯. ಮಂಕುಮೂಳಿಯಾದರೆ ಬೆಂಕಿ ಹೊತ್ತದೇ ?

೩೨೨೦. ಮಂಗ ಬೆಣ್ಣೆ ತಿಂದು ಆಡಿನ ಬಾಯಿಗೆ ಒರಸಿತು.

೩೨೨೧. ಮಂಗನ ಕೈಯ್ಯಲ್ಲಿ ಮಾಣಿಕ ಕೊಟ್ಟಹಾಗೆ.

೩೨೨೨. ಮಂಗನ ಕೊಂದರೆ ಮೈಯ್ಗೆಲ್ಲ ಹೇಲು.

೩೨೨೩. ಮಂಗನ ಪಾರುಪತ್ಯ
ಹೊಂಗೇ ಮರದ ಕೆಳಗೆ.

೩೨೨೪. ಮಂಗನನ್ನು ಕಟ್ಟಿ ನೋಡು
ಜಾಡನನ್ನು ಬಿಟ್ಟು ನೋಡು.

೩೨೨೫. ಮಂಗಳ ಗಾನ ಮಂಗಕ್ಕೆ ಆದೀತೇ ?

೩೨೨೬. ಮಂಗಳವಾರದವರೆಗೆ ಗಂಗಳ ತೊಳೆಯಬಾರದೇ ?

೩೨೨೭. ಮಂಗಳಾರ್ತೀ ಕಾಲದಲ್ಲಿ ಮಂಗ ಬಂದ ಹಾಗೆ.

೩೨೨೮. ಮಂಚಕ್ಕೆ ಮಣೆ ಯಾಕೆ
ಲಿಂಚಕ್ಕೆ ಹೊಣೆ ಯಾಕೆ ?

೩೨೨೯. ಮಂಚದ ಕಾಲು ಆದರೆ
ಹಂಚು ಮಾಡಬಹುದೆ ?

೩೨೩೦. ಮಂಜಿ ಒಡದರೆ ಗುಂಜಿಗಿಂತ ಕಡೆಯೇ ?

೩೨೩೧. ಮಂಜು ಬಿದ್ದರೆ ನಂಜು ಹೋದೀತೇ ?

೩೨೩೨. ಮಂಜು ಸುರಿದರೆ ನಂಜನಗೂಡು ಮುಣುಗೀತೇ ?

೩೨೩೩. ಮಂಟಪದಲ್ಲಿ ಕೂತರೂ ಕಂಟಕ ಬಿಡಲಿಲ್ಲ.

೩೨೩೪. ಮಂಡಿ ಹಾಕಿ ಕೂತರೆ ಮಂಡಿಗೆ ಬಡಿಸ್ಯಾರೇ ?

೩೨೩೫. ಮಂಡೆ ಇರುವಾಗ್ಯೆ ಮೊಣಕಾಲಿಗೆ ಪಟ್ಟವೇ ?

೩೨೩೬. ಮಂಡೆಬೋಳು, ಕುಂಡೆ ಬತ್ತಲೆ.

೩೨೩೭. ಮಂಡೇ ನೋತಕ್ಕೆ ಕುಂಡೆಗೆ ಲೇಪವೇ ?

೩೨೩೮. ಮಂಡೇ ಮೇಲೆ ಹಾಕಿದ ನೀರು
ಕಾಲಿಗೆ ಬಾರದೇ ?

೩೨೩೯. ಮಂತ್ರ ತಿಳಿಯದಿದ್ದರೂ ತಂತ್ರಕ್ಕೆ ಕಡಿಮೆ ಇಲ್ಲ.

೩೨೪೦. ಮಂತ್ರಕ್ಕೆ ಮಾವಿನಕಾಯಿ ಬಿದ್ದೀತೇ ?

೩೨೪೧. ಮಂತ್ರವಿದ್ದರೂ ತಂತ್ರವಿರಬೇಕು.

೩೨೪೨. ಮಂತ್ರಿಯ ಮನೆ ಹಾಳು
ತಂತ್ರಿಯ ಕುಲ ಹಾಳು.

೩೨೪೩. ಮಂಥನದಿಂದ ಬಾರದ ಬೆಣ್ಣೆ
ಕಂಥೆಯಿಂದ ಬಂದೀತೇ ?

೪೨೪೪. ಮಂದ ಮಗನಿಗೆ ಮಂದಹಾಸ ಚಂದ
ಮಕ್ಕಳಿಗೆ ಆಟ ಚಂದ.

೩೨೪೫. ಮಂದಬುದ್ಧಿಯವನಾದರೂ
ಸಂದ ಪ್ರಾಯವರಿಯನೇ ?

೩೨೪೬. ಮಂದಿಯುಳ್ಳವನು ಮಂದನಾದರೆ
ಕುಂದು ಬರೋದು ತಪ್ಪದು.

೩೨[illegible] ಮಂದಿ ಹೇಳಿದರೆಂದು ಹಂದಿ ತಿನ್ನಬಹುದೇ ?

೩೨೪೮. ಮಂದೇ ಬಳಿಗೆ ತೋಳ ಬಂದರೆ
ತಂದೇ ಬಳಿಗೆ ಓಡಿ ಹೋದ.

೩೨೪೯. ಮಿಂಚು ಕಡಗ ತಾಲಿ ಇಲ್ಲದೆ ಮದುವೆಯೇ ?

೩೨೫೦. ಮಿಂದುಟ್ಟ ಮಡಿಯಾದರೂ
ಹಿಂದು ಮುಂದು ನೋಡದವ
ಮಂದಿಗೆಲ್ಲಾ ಮುಟ್ಟಿಸ್ಯಾನು.

೩೨೫೧. ಮುಂಜಾನೆ ಮಳೆ ಅಪ್ಲ
ಮಧ್ಯಾಹ್ನದ ನೆಂಟನಲ್ಲ.

೩೨೫೨. ಮುಂಡೆಗೆ ಗಂಡ ಬಾಳನು
ಮೂಳ ಕಿವಿಗೆ ಓಲೆ ಬಾಳದು.

೩೨೫೩. ಮುಂಡೆಗೆ ಮುಂಡೆ ಕಂಡರೆ
ಉಂಡಷ್ಟು ಸಂತೋಷ.

೩೨೫೪. ಮುಂಡೆ ಹೆತ್ತು ಗುಂಡಿಗೆ ಹಾಕಿದ ಹಾಗೆ.

೩೨೫೫. ಮುಂಡೇ ಮದುವೆಗೆ ಮೂವತ್ತು ವಿಘ್ನ.

೩೨೫೬. ಮುಂಡೇ ಮದುವೆಯಲ್ಲಿ ಉಂಡವನೇ ಜಾಣ.

೩೨೫೭. ಮುಂಡೇ ಅಂದರೆ ಮುಂಡೇಗಂಡ ಅಂಬುವುದು.

೩೨೫೮. ಮುಂದಣ ಬುದ್ಧಿ ತಪ್ಪಿದರೆ
ಮೂರುದಾರಿಯ ಮಣ್ಣೆ.

೩೨೫೯. ಮುಂದಿನ ಮುಕ್ತಿಗಿಂತ ಈಗಿನ ಭುಕ್ತಿ ಲೇಸು.

೩೨೬೦. ಮೆಂತೆ ತಿಂದಾಕ್ಷಣ ಕುಂತೀ ಮಗನಾದಾನೇ ?

೩೨೬೧. ಮೊಂಡ ಕೊಡಲಿ ರಟ್ಟೆಗೆ ಮೂಲ.

೩೨೬೨. ಮೊಂಡನ ಕೊಂದವರಿಲ್ಲ
ನಾಯಿಯ ತಿಂದವರಿಲ್ಲ.

೩೨೬೩. ಮೊಂಡಪ್ಪನ ಕತ್ತಿ ಬೆಣ್ಣೆ ಕೊಯ್ಯುವಷ್ಟು ಹದವು.

೩೨೬೪. ಯಥಾ ರಾಜಾ ತಥಾ ಪ್ರಜಾ.

೩೨೬೫. ಯಾಕೆ ಅಳುತೀದಿ ತಮ್ಮ ?
ನನ್ನ ಕಣ್ಣು ಅಂಥಾವು ಅಂದ ಹಾಗೆ.

೩೨೬೬. ಯಾತ ತಲೆ ತೂಗಿದರೆ ಪಾತಾಳದ ನೀರು ಬಂತು
ತಾತ ತಲೆ ತೂಗಿದರೆ ಪಗಡಿ ಬಿತ್ತು.

೩೨೬೭. ಯಾತರಲ್ಲಿ ಏನೂ ಇಲ್ಲ
ಪಾತ್ರದಾಗೆ ಕಲ್ಲು ಬಿತ್ತು.

೩೨೬೮. ಯಾತ್ರೆಗೆ ಹೋದರೂ ಪಾತ್ರೆ ಬಿಡಲಿಲ್ಲ.

೩೨೬೯. ಯಾತ್ರೆಗೆ ಹೋದಾಕ್ಷಣ ಮಾತ್ರೇ ಗುಣ ತಿಳಿದೀತೇ.

೩೨೭೦. ಯಾರಿಗೆ ನಿತ್ತರೂ ಬೊಮ್ಮಬಟ್ಟಗೆ ನಿಲ್ಲಲಿಲ್ಲ.

೩೨೭೧. ಯಾರಿಗೆ ಯಾರಿಲ್ಲ, ದಾರಿಗೆ *ಸುಂಕವಿಲ್ಲ.*

೩೨೭೨. ಯಾರಿಗೆ ಶರಣು ಬಿದ್ದರೂ ಮರಣ ಭಯ ತಪ್ಪದು.

೩೨೭೩. ಯಾರೂ ಇಲ್ಲದ ಊರಿಗೆ ಹೋಗಿ
ನೀರು ಮಜ್ಜಿಗೆ ಬಯಸಿದ ಹಾಗೆ.

೩೨೭೪. ಯಾರೂ ಇಲ್ಲದ ಊರಿಗೆ
ಅಗಸರ ಮೂಳಿಯೇ ಮುತ್ತಯ್ದೆ.

---

* ಸಂಗಾತವಿಲ್ಲ.

೩೨೭೫. ಯಾವ ಊರೋ ಗೌಡ ಅಂದರೆ
ಕಂಬಳಿ ನೂರು ಹಣ ಅಂದ.

೩೨೭೬. ಯಾವ ದೇವರು ವರ ಕೊಟ್ಟರೂ
ಗಂಡನಿಲ್ಲದೇ ಮಕ್ಕಳಾಗದು.

೩೨೭೭. ಯಾವ ಕಾರ್ಯವೂ ಹಿಂದೆ
ದೇವ ಕಾರ್ಯ ಮುಂದೆ.

೩೨೭೮. ಯಾವ ಕಾಲ ತಪ್ಪಿದರೂ ಸಾಯುವ ಕಾಲ ತಪ್ಪದು.

೩೨೭೯. ಯಾವ ದೇವರಿಗೆ ರಾಜ್ಯವಾದರೂ
ರಾಗಿ ಬೀಸೋದು ತಪ್ಪೋದಿಲ್ಲ.

೩೨೮೦. ಯುಕ್ತಿಯ ಮಾತು ಮಕ್ಕಳಿಂದಾದರೂ ತಿಳುಕೊ.

೩೨೮೧. ಯುಕ್ತಿವಂತನು ಶುಕ್ರನ ಭುಕ್ತಿಯಲ್ಲಿ
ಮುಕ್ತಿ ಪಡೆದನಂತೆ.

೩೨೮೨. ಯೋಗಕ್ಷೇಮ ತಿಳಿಯದಿದ್ದರೂ ರೋಗದ ಚಿಕಿತ್ಸೆ ಬಲ್ಲ.

೩೨೮೩. ಯೋಗವಿದ್ದಷ್ಟು ಭೋಗಿಸ್ಯಾನು.

೩೨೮೪. ಯೋಗಿಯಾದರೂ ಭೋಗ ಬಿಡ.

೩೨೮೫. ಯೋಗ್ಯತೆಯರಿಯದ ದೊರೆತನವೂ
ರೋಗವರಿಯದ ವೈದ್ಯನೂ ಒಂದೇ.

೩೨೮೬. ಯೋಚಿಸಿದ ಹಾಗೆ ಸೂಚಿಸುವುದು.

೩೨೮೭. ಯೋಜನ ನಡೆಯಲಿಕ್ಕೆ ಕೂಡದಿದ್ದರೂ
ಭೋಜನದಲ್ಲಿ ಕಡಿಮೆಯಿಲ್ಲ.

೩೨೮೮. ಯೌವನ ಕುಂದಿದರೂ ಗಂಹರ ಬಿಡಲಿಲ್ಲ.

೩೨೮೯. ರಕ್ಷಣೆ ಕೊಡಲಿಕ್ಕೆ ತಿಳಿಯದಿದ್ದರೂ
ಭಕ್ಷಣೆ ಮಾಡಲಿಕ್ಕೆ ಬಲ್ಲ.

೩೨೯೦. ರಚನೆಯಲ್ಲಿ ಕಡಿಮೆಯಾದರೂ ವಚನದಲ್ಲಿ ಕಡಿಮೆಯಿಲ್ಲ.

೩೨೯೧. ರಜಪುತ್ರನಾದರೂ ಅಜನ ಬರಹ ಮಿಾರ್‍ಯಾನೇ ?

೩೨೯೨. ರಟ್ಟೆ ಇದ್ದರೂ ಅಟ್ಟು ಉಣ್ಣ.

೩೨೯೩. ರಟ್ಟೆ ಮುರಿಯಬೇಕು, ರೊಟ್ಟಿ ತಿನ್ನಬೇಕು.

೩೨೯೪. ರತ್ನ ಒಳ್ಳೆಯದಾದರೆ ಇದ್ದ ಠಾವಿನಲ್ಲೇ ಬೆಲೆಯಾಗುತ್ತದೆ.

೩೨೯೫. ರವಿ ಕಾಣದ್ದು ಕವಿ ಕಂಡ
ಕವಿ ಕಾಣದ್ದು ಹೆಡಿಗೆಗುಮ್ಮ ಕಂಡ.

೩೨೯೬. ರಾಕ್ಷಸನಾದರೆ ಭಿಕ್ಷುಕನಿಗೆ ಏನು ?

೩೨೯೭. ರಾಗ ನೆನಪಾಗುವಾಗ ತಾಳ ಮರೆತುಹೋಯಿತು.

೩೨೯೮. ರಾಗ ಬರುವಾಗ ತಂತಿ ಹರಿಯಿತು.

೩೨೯೯. ರಾಗಿ ತಿಂದವ ರೋಗಿ, ಅಕ್ಕಿ ತಿಂದವ ಹಕ್ಕಿ.

೩೩೦೦. ರಾಜರ ಠೀವಿ ತಿರುಕರ ಲಕ್ಷಣ.

೩೩೦೧. ರಾಜಕ ಬಂದರೂ ರಾಜ್ಯಕ್ಕೆ
ದೈವಿಕ ಬಂದರೂ ರಾಜ್ಯಕ್ಕೆ.

೩೩೦೨. ರಾಣಿಯಾದರೆ ಗೋಣಿ ಯೆತ್ತಬಾರದೇ ?

೩೩೦೩. ರಾಮನಂಥಾ ರಾಜನಿಲ್ಲ
ರಾಮನಂಥಾ ಪುರುಷನಿಲ್ಲ.

೩೩೦೪. ರಾಮ ರಾಮ ಜಪ ಮಾಡುವುದು
ತಲೆಕೂದಲಿಂದ ಕ್ಯತ್ತಿಗೆ ಕೊಯ್ಯುವುದು.

೩೩೦೫. ರಾಮಾಣ್ಯವು ಸಾಮಾನ್ಯವಲ್ಲಣ್ಣ
ಆಳಿಗೆ ಆಳು ಭಾರ.

೩೩೦೬. ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು.

೩೩೦೭. ರಾಯರ ಹೆಂಡತಿ ಹೆತ್ತರೆ ಊರೆಲ್ಲ ತಿಣಕಬೇಕೋ ?

೩೩೦೮. ರಾಯರ ಪಾದದಾಣೆ ಹಾರೆ ನುಂಗು ಅಂದ ಹಾಗೆ.

೩೩೦೯. ರಾಯರು ಸತ್ತ ಹಾವಳಿ.

೩೩೧೦. ರಾಯ ಸತ್ತರೂ ಹೆಣ
ನಾಯಿ ಸತ್ತರೂ ಹೆಣ.

೩೩೧೧. ರಾಯಗೋಪುರವನ್ನು ಹದ್ದು ಕೊಂಡು ಹೋಯಿತೋ ?

೩೩೧೨. ರಾವಣನ ಹೊಟ್ಟೆಗೆ ಅರೆಕಾಸಿನ *ಮಜ್ಜಿಗೆ*

೩೩೧೩. ರುಚಿಯಿಲ್ಲದಿದ್ದರೆ ಹಸಿ ಅಕ್ಕಿ ತಿಂದಾನೇ ?

೩೩೧೪. ರುಚಿ ಕಂಡ ನಾಯಿ ಸುಚಿಯಾದರೂ ಬಿಡದು.

೩೩೧೫. ರುದ್ರನಾದರೇನು ಭದ್ರನಾದರೇನು ನಿದ್ರೆ ಬಂದರೆ ಸರಿ.

೩೩೧೬. ರುಪ್ಪಿ ಕೊಡದವ ರುಮಾಲು ಕೊಟ್ಟಾನೇ ?

---

* ಸುಂಟಿ.

೩೩೧೭. ರೂಢಿಯಿಲ್ಲದ ಪದ ಹಾಡಿದರೆ ತಿಳಿದಾನೇ?

೩೩೧೮. ರೆಪ್ಪೆ ಹಂದಿದರೆ ಇಪ್ಪೆ ಹಾಕುವುದು ಬಿಟ್ಟೀತೇ?

೩೩೧೯. ರೇಕೇ ಮಾಡಲಿಕ್ಕೆ ತಿಳಿಯದಿದ್ದರೆ
ತೋಕೂರಿಗೆ ಹೋಗಲಿಕ್ಕೆ ತಿಳಿಯದೇ?

೩೩೨೦. ರೇಣು ಮಾಣಿಕವಾದರೂ ವಾಣಿಜತನ ಬಿಟ್ಟಾನೇ?

೩೩೨೧. ರೊಕ್ಕಕ್ಕೆ ಕಡಿಮೆಯಾದರೆ ದುಕ್ಕಕ್ಕೂ ಕಡಿಮೆಯೇ?

೩೩೨೨. ರೊಟ್ಟಿಗೆ ಬಂದ ನಾಯಿ ತುಪ್ಪಕ್ಕೆ ಬಂದೀತೇ?

೩೩೨೩. ರೊಟ್ಟಿ ತೊಳೆದು ನೀರು ಕುಡಿದ ಹಾಗೆ.

೩೩೨೪. ರೋಗವಾದರೇನು ಭೋಗವಾದರೇನು
ಹೋಗಲಿಕ್ಕಾಗದೇ?

೩೩೨೫. ರೋಗಿ ಬಯಸಿದ್ದು ಹಾಲೋಗರ
ವೈದ್ಯ ಹೇಳಿದ್ದು ಹಾಲೋಗರ*

೩೩೨೬. ರೋಮವಿದ್ದರೇನು ಗೋಮು ತಿಳಿಯದೇ?

೩೩೨೭. ರಂಗನ ಮುಂದೆ ಸಿಂಗನೇ?

೩೩೨೮. ರಂಗೋಲೆ ಹಾಕಲಿಕ್ಕೆ ತಿಳಿಯದಿದ್ದರೂ
ಹೊಂಗರಕನ ಕೆತ್ತೆ ತೆಗೆಯಲಿಕ್ಕೆ ತಿಳಿಯದೇ?

೩೩೨೯. ರಂಡೆಗೆ ಗಂಡನಿಲ್ಲ, ಬಂಡೆಗೆ ನೀತಿಯಿಲ್ಲ.

೩೩೩೦. ರಂಭಾ ನೃತ್ಯಕ್ಕೇಂ ಡೊಂಬರೇ?

* ರೋಗಿ ಬಯಸಿದ್ದೇ ವೈದ್ಯ ತರಿಸಿದ.

೩೩೩೧. ಲಕ್ಷವಾದರೂ ಭಿಕ್ಷೆ ಬೇಡಬಾರದು.

೩೩೩೨. ಲಕ್ಷಕ್ಕೆ ಒಬ್ಬ ಭಕ್ತ
ಕೋಟಿಗೆ ಒಬ್ಬ ಮುಕ್ತ.

೩೩೩೩. ಲಕ್ಷಣಗೇಡಿ ಹೆತ್ತಳೇ ಲೆಕ್ಕವಿಲ್ಲದ ಮಕ್ಕಳ!

೩೩೩೪. ಲಕ್ಷೇಶ್ವರನೊಬ್ಬ, ಭಿಕ್ಷೇಶ್ವರನೊಬ್ಬ.

೩೩೩೫. ಲಗ್ನಕಾಲಕ್ಕೆ ವಿಘ್ನ ಮಾಡಬಾರದು.

೩೩೩೬. ಲಲಾಟದಲ್ಲಿ ಇಲ್ಲದ್ದು
ಲಾಗಾಟ ಹಾಕಿದರೂ ಸಿಕ್ಕದು.

೩೩೩೭. ಲಾಟಗೆ ಲಾಟು, ಹೊಳೆದಾಟು.

೩೩೩೮. ಲಾಭವಿಲ್ಲದ ಸೆಟ್ಟಿ ಹಳ್ಳಿಗೆ ಹೋಗ.

೩೩೩೯. ಲಾಭ ಲೋಭಿಸಿತು.

೩೩೪೦. ಲಾಲನೆ ಮಾಡಲಿಕ್ಕೆ ಕಡಿಮೆಯಿಲ್ಲದಿದ್ದರೂ
ಪಾಲನೆಗೆ ಮಾತ್ರ ಕಡಿಮೆ.

೩೩೪೧. ಲಾವಂಚವೂ ಹುಲ್ಲೇ, ಲಕ್ಷ್ಮೀಶ್ವರನೂ ಮನುಷ್ಯನೇ
ಆದರೆ ಭೇದವಿಲ್ಲವೇ ?

೩೩೪೨. ಲಿಪಿ ಮೀರಲಿಕ್ಕೆ ಪಿಪೀಲಿಕೆಯಿಂದ ಕೂಡೀತೇ ?

೩೩೪೩. ಲೀಲೆ ಕೇಳಿದಾಕ್ಷಣ ಮೇಲಕ್ಕೆ ಏರ್ಯಾನೇ ?

೩೩೪೪. ಲೆಕ್ಕ ತಿಳಿಯದಿದ್ದರೆ ಒಕ್ಕಲಿಗರೇನು ಮಾಡ್ಯಾರು ?

೩೩೪೫. ಲೆಕ್ಕವಿಲ್ಲದ ಬದುಕು ಒಮ್ಮಾರು ಕಡಿಮೆ.

೩೩೪೬. ಲೆಕ್ಕದಿಂದ ಹೊತ್ತದಕ್ಕೂ ಮುಪ್ಪಿನಿಂದ ಸತ್ತದಕ್ಕೂ ದುಕ್ಕವೇನು?

೩೩೪೭. ಲೆತ್ತ ಹಾಕಲಿಕ್ಕೆ ಹೋದರೆ ಬೋಕಿ ಬಿತ್ತು.

೩೩೪೮. ಲೇವಡೀ ರುಚಿ ಹಾವಡಿಗ ಬಲ್ಲನೇ !

೩೩೪೯. ಲೇಸು ಆಗುವಾಗ್ಯೆ ಗಾಸಿಗೊಳ್ಳಬಾರದು.

೩೩೫೦. ಲೇಹ ಕುಡಿದರೆ ಲೇಸು ಆದೀತು.

೩೩೫೧. ಲೊಟ್ಟೆಯಲ್ಲಿ ಗಟ್ಟಿಗನಾದರೂ
ಕೊಟ್ಟ ವಿನಹಾ ಬಿಡುವುದಿಲ್ಲ.

೩೩೫೨. ಲೋಕದವರೆಲ್ಲಾ ಸತ್ತರೆ ಶೋಕ ಮಾಡುವವರು ಯಾರು ?

೩೩೫೩. ಲೋಕ ಹಾಳಾದರೆ ನಾಕ ಹಾಳಾದೀತೇ ?

೩೩೫೪. ಲೋಗರ ಮನೇಲಿ ಎಮ್ಮೆಯಿದ್ದರೆ
ತನ್ನ ಮನೇಲಿ ಹಾಲೋಗರಕ್ಕೆ ಕಡಿಮೆಯೇನು ?

೩೩೫೫. ಲೋಪವೇನೂ ಇಲ್ಲ, ದೀಪಕ್ಕೆ ಮಾತ್ರ ಬಗೆ ಇಲ್ಲ.

೩೩೫೬. ಲೌಕಿಕ ನಡಿಸಿ ಲೋಕವೇ ಮರೆತ.

೩೩೫೭. ಲಂಕೆಗೆ ಹೋದರೂ ಕೊಂಕಣಿಕೆ ಬಿಡಲಿಲ್ಲ.

೩೩೫೮. ಲಂಚ ಕೊಟ್ಟರೂ ಸಂಚು ತಿಳಿಸಲಿಲ್ಲ.

೩೩೫೯. ಲಂಚ ಕೊಂಡವ ಕೊಂಚ.

೩೩೬೦. ಲಿಂಗಕ್ಕೆ ಹೊಲೆಯಿಲ್ಲ, ಗಂಗೆಗೆ ಮಡಿಯಿಲ್ಲ.

೩೩೬೧. ಲಿಂಗ ಹರಿದ ಮೇಲೆ ಜಂಗಮನ ಹಂಗೇನು ?

೩೩೬೨. ವಚನ ಕೇಳಿದ್ದರಿಂದ ಆಹಾರ ಪಚನವಾದೀತೇ ?

೩೩೬೩. ವಟ್ಟ ಕೊಟ್ಟ ವಿನಹಾ ಸೆಟ್ಟ ಬಿಡ.

೩೩೬೪. ವನ ಹಣ್ಣಾಯಿತು, ಗಿಣೀ ಬಾಯಿಗೆ ಹುಣ್ಣಾಯಿತು.

೩೩೬೫. ವನವಾಸಕ್ಕೆ ಹೋದರು ಘನಕಷ್ಟ ಬಿಡಲಿಲ್ಲ.

೩೩೬೬. ವಮನ ಮಾಡಿ ಮಾಡಿ ಗಮನಕ್ಕೆ ಸಿದ್ಧವಾದ.

೩೩೬೭. ವಯಸ್ಸು ಕಡಿಮೆಯಾದರೂ
ಆಯಾಸದಲ್ಲಿ ಕಡಿಮೆಯಿಲ್ಲ.

೩೩೬೮. ವರಹವಲ್ಲದಿದ್ದರೂ ವಚನಕ್ಕೆ ದರಿದ್ರವೇ ?

೩೩೬೯. ವರದಿ ಹೇಳುವವನಿಗಾದರೂ
ಹರದನ ಹಂಗು ಬೇಕು.

೩೩೭೦. ವರಾತದವನಿಗೆ ಪರಾತವಾದರೂ
ಮಾರಿ ಕೊಡಬೇಕು.

೩೩೭೧. ವರುಷ ಹೆಚ್ಚಾದರೆ ಪರಸೇ ಸಂಗಡ ಹೋಗಲಿಕ್ಕೇನು ?

೩೩೭೨. ವರ್ಗದಲ್ಲಿ ತಪ್ಪಿದರೆ ಊಳಿಗದಲ್ಲಿ ತಪ್ಪೀತೇ ?

೩೩೭೩. ವರ್ಣ ಹೆಚ್ಚಿದರೂ ಮರಣ ಪಡೆಯದೆ ಇರ.

೩೩೭೪. ವರ್ತಿ ಉರಿಯಿತೋ ? ತೈಲ ಉರಿಯಿತೋ ?

೩೩೭೫. ವರ್ಮ ಬಲ್ಲವ ಕೆಲಸಕ್ಕೆ ಅಂಜ್ಯಾನೇ ?

೩೩೭೬. ವಶವೊಪ್ಪಿಸಿದರೂ ದಸೆ ಬಿಡುವುದಿಲ್ಲ.

೩೩೭೭. ವಸನವಿದ್ದವನಿಗೂ ಮಸಣ ತಪ್ಪದು.

೩೩೭೮. ವಸ್ತಿಯಿದ್ದಲ್ಲಿ ಕುಸ್ತಿ ಮಾಡಬಾರದು.

೩೩೭೯. ವಾಕ್ಚಾತುರ್ಯವಿದ್ದವನಾದರೆ ನಾಕ ಸೇರುವನೇ ?

೩೩೮೦. ವಾಡಿಕೆಯಿಲ್ಲದವನಾದರೆ ಹಾಡಿಕೆ ತಿಳಿಯುವುದೇ ?

೩೩೮೧. ವಾತರೋಗ ಇದ್ದವನಾದರೆ ವಾದ್ಯ ಬಾರಿಸುವುದೇ ?

೩೩೮೨. ವಾದ ಮಾಡಿ ಮಾಡಿ ಹಾದರ ಕಲಿತುಕೊಂಡ.

೩೩೮೩. ವಾದಿಯ ಸಂಗಡ ವಾದಿಸಲು ಸಲ್ಲ
ಕುಂಟನ ಕೂಡ ಹಾದಿ ನಡೆಯಲು ಸಲ್ಲ.

೩೩೮೪. ವಾರಿಯಿಲ್ಲದ ಸುಂಕ ದಾರಿಗೆ ದಾರಿಯೇ ?

೩೩೮೫. ವಾಲಿಯಂಗಕ್ಕೆ ಕಲೆಯಿಲ್ಲ
ರಾಮನ ಬಾಣಕ್ಕೆ ಹುಸಿಯಿಲ್ಲ.

೩೩೮೬. ವಾಲೀ ಹಾಗೆ ಬಲವಂತನಿಲ್ಲ
ಹಾಲಿನಕ್ಕಿಂತ ಸವಿಯಿಲ್ಲ.

೩೩೮೭. ವಾಸ ತಪ್ಪಿದರೂ ಹಾಸಲಿಕ್ಕೆ ತಪ್ಪಲಿಲ್ಲ.

೩೩೮೮. ವಾಸಿಯಾಗದ ರೋಗಕ್ಕೆ
ರಾಶಿ ಮದ್ದು ಮಾಡಿದರೂ ವ್ಯರ್ಥ.

೩೩೮೯. ವಾಸೀಲಿ ಸಿಕ್ಕಿದ ಜೀನಸು
ಹಾಸಿಗೆಯಲ್ಲಿ ಆದರೂ ಕೊಂಡಾನು.

೩೩೯೦. ವಿಖ್ಯಾತಿಪಟ್ಟರೂ ಅಪಖ್ಯಾತಿ ಹೋಗಲಿಲ್ಲ.

೩೩೯೧. ವಿಘ್ನವಾಯಿತೆಂದು ನಗ್ನವಾದರೆ ಆದೀತೇ ?

೩೩೯೨. ವಿಚಾರದಲ್ಲಿ ಕಡಿಮೆಯಾದರೂ
ಆಚಾರದಲ್ಲಿ ಕಡಿಮೆ ಇಲ್ಲ.

೩೩೯೩. ವಿಜಾಪುರದಲ್ಲಿ ಇಜಾರದವರೆಷ್ಟು ಜನ ಅಂದ ಹಾಗೆ.

೩೩೯೪. ವಿಟನಾದವಗೆ ಮಠವಾದರೇನು ?

೩೩೯೫. ವಿಠಲಭಟ್ಟನ ಪುರಾಣ ಬಿಟ್ಟಲ್ಲಿಯೇ ಮುಗಿಯಿತು.

೩೩೯೬. ವಿಡೂರ ಬಂದದ್ದು ಆಡೂರಿಗೆ ಹೋದರೆ ಬಿಟ್ಟೀತೇ ?

೩೩೯೭. ವಿದ್ಯಕ್ಕಿಂತ ಬುದ್ಧಿ ಶ್ರೇಷ್ಠ
ಬುದ್ಧಿಗಿಂತ ಆಹಾರ ಶ್ರೇಷ್ಠ.

೩೩೯೮. ವಿದ್ಯವಿಲ್ಲದವ ಹದ್ದಿಗಿಂತಲೂ ಕಡೆ.

೩೩೯೯. ವಿದ್ಯಾ ಬಂಡಾರಿಸಿ, ಬಿಟ್ಟು ದೊಡ್ಡೆಯಾಗಿ
ಬಂಡಿಯ ಬೋವನಾದ.

೩೪೦೦. ವಿದ್ಯೆಗೆ ಎಣೆಯಿಲ್ಲ, ಬುದ್ಧಿಗೆ ಕಡೆಯಿಲ್ಲ.

೩೪೦೧. ವಿದ್ವಾಂಸನಾದರೂ ವಿಧ್ವಂಸನಾಗದೆ ಇರ.

೩೪೦೨. ವಿದ್ವಾಂಸರ ಮುಂದೆ ವಿದ್ವಾಂಸರು ಬರಬಹುದೇ, ಗೋವಿಂದ ?

೩೪೦೩. ವಿಧ ತಿಳಿದವನಾದರೂ ವಿಧಿ ಬಿಡದು.

೩೪೦೪. ವಿಧ ತಿಳಿಯದಿದ್ದರೆ ಮದ ಹೋದೀತೇ ?

೩೪೦೫. ವಿನಿಯೋಗಕ್ಕೆ ಕಡಿಮೆಯಾದರೂ
ಹನಿಯೋಗಕ್ಕೆ ಕಡಿಮೆಯಿಲ್ಲ.

೩೪೦೭. ವಿಪತ್ತು ಬಂದರೂ ಆಪತ್ತು ಬಿಡಲಿಲ್ಲ.

೩೪೦೭. ವಿಮಾನ ಏರಬೇಕಾದರೆ
ಪರಮಾನ್ನ ತಿನ್ನಬೇಕೇ ?

೩೪೦೮. ವಿಷ ತಿಂದರೆ ಬದುಕಬಹುದು
ವಿಷಮದಲ್ಲಿ ಬದುಕ ಕೂಡದು.

೩೪೦೯. ವಿಷದನ್ನ ಉಂಡಲ್ಲದೆ ವಿಷ ತಿಳಿಯದು.

೩೪೧೦. ವಿಷಯ ತಿಳಿಯದಿದ್ದರೆ ವಿಷಮ ತಿಳಿಯದೇ ?

೩೪೧೧. ವೀಣೆ ಬಾರಿಸಲಿಕ್ಕೆ ತಿಳಿಯದಿದ್ದರೆ
ಸಾಣೆ ತೇಯಲಿಕ್ಕೆ ತಿಳಿಯದೆ ?

೩೪೧೨. ವೀರನ ಶೌರ್ಯ ಹಾರುವನ ಮೇಲೆಯೇ ?

೩೪೧೩. ವೀಸಕ್ಕೆ ಲೆಕ್ಕ ತಿಳಿಯದವ
ಬಾಸೆಯ ಲೆಕ್ಕ ಮಾಡ್ಯಾನೇ ?

೩೪೧೪. ವೃಕ್ಷ ದೊಡ್ಡದಾದರೂ ಪಕ್ಷಿ ಹೇಲದೆ ಬಿಡದು.

೩೪೧೫. ವೆಚ್ಚಕ್ಕೆ ಕಡಿಮೆಯಾದರೂ ಮಚ್ಚರಕ್ಕೆ ಕಡಿಮೆಯಿಲ್ಲ.

೩೪೧೬. ವೇಗದವನಿಗೆ ರೋಗ ತಪ್ಪದು.

೩೪೧೭. ವೇದವೆಂಬುವುದು ಗಾದೆಯೋ ?

೩೪೧೮. ವೇದಾ ತಿಳಿದವನಾದರೂ ವೇದನೆ ಬಿಟ್ಟೀತೇ ?

೩೪೧೯. ವೇದಾ ಗಾದೆಯ ಮಾತು
ಶಾಸ್ತ್ರ ಸಂತೆಯ ಗುಲ್ಲು
ಪುರಾಣ ಪುಂಡರ ಗೋಟ್ಟಿ.

೩೪೨೦. ವೇದಾ ತಿಳಿಯದಿದ್ದರೆ ಹಾದಿ ತಿಳಿಯದೇ ?

೩೪೨೧. ವೇದಾ ಪಠಿಸಿದವ ಭೇದಾ ಮಾಡ್ಯಾನೇ ?

೩೪೨೨. ವೇಷಕ್ಕೆ ತಕ್ಕ ಹಾಸ್ಯ,
ದೇಶಕ್ಕೆ ತಕ್ಕ ಭಾಷೆ.

೩೪೨೩. ವೇಳೆ ಕಳೆವೆನೆಂದರೆ ಕಷ್ಟಳ ಕೇಳ್ಯಾನೇ ?

೩೪೨೪. ವೈಕುಂಠಕ್ಕೆ ಹೋದರೂ ಕುಂಟಣಗಿತ್ತಿಯ
ಉಪದ್ರವ ತಪ್ಪಲಿಲ್ಲ.

೩೪೨೫. ವೈದಿಕ ತಿಳಿಯದಿದ್ದರೂ ಬೈದಾಡಲಿಕ್ಕೆ ಬಲ್ಲ.

೩೪೨೬. ವೈದ್ಯನಿಗೆ ಅಯ್ದು ಹಣ ಕೊಟ್ಟರೂ
ಅಯ್ದುವುದು ತಪ್ಪಲಿಲ್ಲ.

೩೪೨೭. ವೈರವಿದ್ದವನಿಂದ ಕ್ಷೌರ ಮಾಡಿಸಿಕೊಂಡ ಹಾಗೆ.

೩೪೨೮. ವೈರಾಗ್ಯವುಳ್ಳವನಾದರೂ ವೈರತ್ವ ಬಿಡಲಿಲ್ಲ.

೩೪೨೯. ವೈಶಾಖಮಾಸ ಬಂದರೂ
ವೈಶ್ಯರ ಉಪದ್ರವ ಬಿಡಲಿಲ್ಲ.

೩೪೩೦. ವೈಷ್ಣವರ ಮಕ್ಕಳಿಗೆ ಅಂಗಾರವೇ ಬಂಗಾರ
ಸ್ಮಾರ್ತರ ಮಕ್ಕಳಿಗೆ ಗಂಧವೇ ಚಿನ್ನ.

೩೪೩೧. ವ್ಯಭಿಚಾರ ಮಾಡಿದರೂ ಅಭಿಚಾರ ಬಿಡಲಿಲ್ಲ.

೩೪೩೨. ವ್ಯರ್ಥವಾದದಕ್ಕೆ ಸ್ವಾರ್ಥ ಪಟ್ಟಾರೇ ?

೩೪೩೩. ವ್ಯವಹಾರಕ್ಕೂ ಆಹಾರಕ್ಕೂ ದಾಕ್ಷಿಣ್ಯ ಮಾಡಬಾರದು.

೩೪೩೪. ವ್ಯಸನವಿದ್ದವ ಹಸನು ಆಗನು.

೩೪೩೫. ವ್ಯಾಜ್ಯಮಾಡುವವ ಅಜ್ಜಗೆ ಬಿಟ್ಟಾನೇ ?

೩೪೩೬. ವಂಚಕನಿಗೆ ಸಂಚು ಕೊಟ್ಟ ಹಾಗೆ.

೩೪೩೭. ವಂಚನೇ ಹಣ ಸಂಚಯನಕ್ಕೆ ಬಾರದು.

೩೪೩೮. ವಂಡಾರ ಕಂಬಳ, ಬಸರೂರ ಜಪ್ಪಳ
ಕೋಟೇಶ್ವರ ಕೋಡೀ ಹಬ್ಬ
ಮೂರೂ ಕಂಡರೆ ಮೋಚ.

೩೪೩೯. ವಂದನೆ ಮಾಡಿದರೂ ಹಂದೀ ಕಾಟ ಹೋಗಲಿಲ್ಲ.

೩೪೪೦. ವಂಶಸ್ಥನಾದರೂ ವ್ಯ[illegible]ಾಂತಕನಾದ.

೩೪೪೧. ವೆಂಕಟರಮಣ ಎಂದರೂ
ವೆಂಕಟಪ್ಪ ಬೆನ್ನುಬಿಡ.

೩೪೪೨. ವೆಂಕು ಪೆರಂಬೂರಿಗೆ ಹೋದ ಹಾಗೆ.

೩೪೪೩. ಶಕುನವಿಲ್ಲದಿದ್ದರೂ ಅವಶಕುನಕ್ಕೆ ಕಡಿಮೆಯಿಲ್ಲ.

೩೪೪೪. ಶಕುನದ ಹಕ್ಕಿಯ ಗೋಣು ಮುರಿದ ಹಾಗೆ.

೩೪೪೫. ಶಕುನವಾಗುತ್ತದೆಂದು, ಬೆಳಗತನಕ ಕದ್ದರೆ ಆದೀತೇ ?

೩೪೪೬. ಶಕ್ತಿಯಿದ್ದವನಾದರೂ ಯುಕ್ತಿಯಿದ್ದವನ ಕೆಳಗೆ.

೩೪೪೭. ಶಕ್ಯವಲ್ಲದ ಕಾರ್ಯ ಸಕ್ಕರೆಯಲ್ಲ.

೩೪೪೮. ಶನಿ ಕಾಡಿತೆಂದು, ಹನಿಗೆ ನಿತ್ತರೆ ಬಿಟ್ಟೀತೇ ?

೩೪೪೯. ಶನೀ ಕಾಟದಲ್ಲಿ ಸುಖವುಂಟೇ ?

೩೪೫೦. ಶಬ್ದದ ಅರ್ಥ ತಿಳಿಯದಿದ್ದರೂ
ಹಬ್ಬದ ಹೋಳಿಗೆ ತಿನ್ನಲಿಕೆ ಕಡಿಮೆಯಿಲ್ಲ.

೩೪೫೧. ಶರಣು ಬಿದ್ದವಗೆ ಮಾರಣವುಂಟೇ ?

೩೪೫೨. ಶಲ್ಯ ಹೊದ್ದು ಸಾಲಮಾಡಿ
ಕಂಬಳಿ ಹೊದೆಯಬಾರದು.

೩೪೫೩. ಶಸ್ತ್ರದ ಅಭ್ಯಾಸವಿಲ್ಲದಿದ್ದರೆ
ಕದಿಯಲಿಕ್ಕೆ ತಿಳಿಯದೋ ?

೩೪೫೪. ಶಾನಭೋಗನ ಗುಣ ಲೆಕ್ಕದಲ್ಲಿ ನೋಡು
ಮಾನವಂತನ ಗುಣ ನಡತೆಯಲ್ಲಿ ನೋಡು.

೩೪೫೫. ಶಾನಭೋಗನ ಸಂಬಳ ಸಂತೋ ಎಂದು ಕೇಳಬೇಡ
ಹೆಂಡತೀ ದೆಸೆಯವರು ಉಂಡರೋ ಎಂದು ಕೇಳಬೇಡ.

೩೪೫೬. ಶಾಪಾ ಕೊಡುವವ ಪಾಪಕ್ಕೆ ಹೆದರ.

೩೪೫೭. ಶಾಯಿಯಿಲ್ಲದೆ ಕಾಗದ ನಾಯಿಗೂ ಬೇಡ.

೩೪೫೮. ಶಾಲು ಹೊದ್ದವನಾದರೂ ಹಾಲು ಬಿಟ್ಟಾನೇ ?

೩೪೫೯. ಶಾಲು ಸಕಲಾತಿ ತೇಲಿ ಹೋಗುವಾಗ
ಕವುದಿ ತನ್ನ ಗತಿಯೇನು ಅಂದಿತು.

೩೪೬೦. ಶಾಲೆ ತರಲಿಕ್ಕೆ ದರಿದ್ರನಾದರೆ
ಮಾಲೆ ಹಾಕಲಿಕ್ಕೂ ದರಿದ್ರವೇ ?

೩೪೬೧. ಶಾವಿಗೆ ಸಿಕ್ಕಿ ಸತ್ತವನಿಲ್ಲ
ಹಾವಿಗೆ ಸಿಕ್ಕಿ ಬದುಕಿದವನಿಲ್ಲ.

೩೪೬೨. ಶಾಸ್ತ್ರ ತಿಳಿಯದಿದ್ದರೂ ವಸ್ತ್ರ ಮೈಲಿಗೆಯಾಗಿರಬೇಕೆ ?

೩೪೬೩. ಶಾಸ್ತ್ರ ಹೇಳಲಿಕ್ಕೆ ಮಾಡಿ ಅದೆ
ಬದನೆಕಾಯಿ ತಿನ್ನಲಿಕ್ಕೆ ಮಾಡಿ ಅದೆ.

೩೪೬೪. ಶಿಕ್ಷೆಗೆ ಪಾತ್ರನಾದರೂ ಭಿಕ್ಷೆಗೆ ನಾಚುವನಂತೆ.

೩೪೬೫. ಶಿಕ್ಷೆಯಿದ್ದರೆ ಭಕ್ಷ್ಯ ಬೇಯುತ್ತದೆ ಅಂದ.

೩೪೬೬. ಶಿವ ಕೊಟ್ಟದ್ದು ಸಿದ್ಧಪ್ಪ ಕೊಟ್ಟಾನೇ ?

೩೪೬೭. ಶಿವಾ ಎಂದರೆ ಸೆರಗು ಸುತ್ತಿಕೊಂಡ
ಭವಾ ಎಂದರೆ ಭೈರವಾಸ ಹರದುಬಿಟ್ಟ.

೩೪೬೮. ಶಿಶು ಹೋಗಿ ಕೆಸು ತಿಂತು ಎಂತ
ಮುಖಕ್ಕೆ ಮಸಿಯೊರಿಸಿಕೊಂಡ.

೩೪೬೯. ಶೀತ ಮೀರಿದವಗೆ ವಾತದ ಭಯವೇನು.

೩೪೭೦. ಶೀಲವಂತೆ ತಂದ ಅಗ್ಗಿಣಿ
ಜಂಗಮಗೆ ಶಿವಾರ್ಚನೆಗಾಯಿತು.

೩೪[illegible]. ಶೀಲ ಮೊಳ್ಳೇದಾದರೂ ಗುಣ ಕೆಟ್ಟದು.

೩೪೭೨. ಶೀಲವಂತರ ಓಣಿಯಲ್ಲಿ ಕೋಳಿ ಮಾಯವಾಯಿತು.

೩೪೭೩. ಶುಕ್ರ ವಕ್ರನಾದರೂ ತಕ್ರ ಬಿಡ.

೩೪೭೪. ಶುಕ್ಲಾಟಕ್ಕೆ ಶುಂಠಿ ತಿಂದು ಮುಕ್ಳಿಯೆಲ್ಲಾ ಉರಿ.

೩೪೭೫. ಶುಚಿಯಲ್ಲಿ ಕಡಿಮೆಯಾದರೂ
ಮಸಿ ಹಚ್ಚಿಕೊಳ್ಳೋದರಲ್ಲಿ ಕಡಿಮೆಯಿಲ್ಲ.

೩೪೭೬. ಶುದ್ಧಕ್ಕೆ ಹೋದರೆ ಒದ್ದೆ ಉಡಬೇಕಾಗುತ್ತದೆ.

೩೪೭೭. ಶುಭ ನುಡಿಯೋ ಶುಭಗೇಡಿ ಅಂದರೆ
ಹಂದರದವರೆಲ್ಲ ಬೋಳಿಯರು ಅಂದ.

೩೪೭೮. ಶುಭ ಕಾರ್ಯಕ್ಕೆ ಹೋದರೂ
ಅಶುಭವಾಗೋದು ತಪ್ಪಲಿಲ್ಲ.

೩೪೭೯. ಶೂಲಕ್ಕೆ ತಿಕಾ ಆನಿಸಿಕೊಂಡು
ಗವುಳೀ ಶಕುನ ಕೇಳಿದ.

೩೪೮೦. ಶೋಧಕನಾದರೆ ಬಾಧಕವಿಲ್ಲ.

೩೪೮೧. ಶ್ರವಣದಿಂದ ಮನನ, ಮರಣದಿಂದ ಮುಕ್ತಿ.

೩೪೮೨. ಶ್ರಾದ್ಧದ ಊಟಕ್ಕೆ ಕರದು
ಶ್ರಮ ಪಡಿಸಿದ ಹಾಗೆ.

೩೪೮೩. ಶ್ರಾದ್ಧ ಮಾಡಿ ವಡೆ ತಿನ್ನುವುದಕ್ಕಿಂತ
ಮದುವೆಮಾಡಿ ಒಬ್ಬಟ್ಟು ತಿನ್ನುವುದು ಲೇಸು.

೩೪೮೪. ಶ್ರೀ ಒಣಗಿದೆ. ಗ ಬಚ್ಚಿದೆ.

೩೪೮೫. ಶಂಖ ಹಿಡಿದರೂ ಮಂಕುತನ ಬಿಡಲಿಲ್ಲ.

೩೪೮೬. ಶಂಖ ಊದಿದವಗೆ ಹೂಸಿನ ಪರವಿಯೇನು ?

೩೪೮೭. ಶಾಂತಿ ತಿಳಿಯದವನಾದರೆ
ವಾಂತಿ ವಮನ ಆಗಲಿಕ್ಕಿಲ್ಲವೇ ?

೩೪೮೮. ಶಾಂತಿ ಮಾಡಿದರೂ ಭ್ರಾಂತಿ ಹೋಗಲಿಲ್ಲ.

೩೪೮೯. ಶುಂಠನಿಗೆ ಎಂಟಷ್ಟು ಕಲಿಸಿದರೂ ವ್ಯರ್ಥ.

೩೪೯೦. ಶೃಂಗಾರಕ್ಕೆ ಕಡಿಮೆಯಾದರೂ
ಮಂಗಾಟಕ್ಕೆ ಕಡಿಮೆಯಿಲ್ಲ.

೩೪೯೧. ಸಕ್ಕರೆ ಕಹಿ ಆಗದು
ನೆಕ್ಕರೆ ಐಶ್ವರ್ಯ ಬಾರದು.

೩೪೯೨. ಸಕ್ತಿ ಮಾಡಿದರೆ ಮುಕ್ತಿ ದೊರಕುವುದೇ ?

೩೪೯೩. ಸಕ್ರೆ ಇದ್ದರೆ ಚಕ್ರೇಶ್ವರನನ್ನಾದರೂ ಒಲಿಸಬಹುದು.

೩೪೯೪. ಸಗಣಿ ತಿನ್ನುವವ ಉಪ್ಪದ ರುಚಿ ಬಲ್ಲನೇ ?

೩೪೯೫. ಸಗಣಿ ತಿನ್ನುವವನಿಗೆ ಮೀಸೆ ಹಿಡಿಯುವವನೊಬ್ಬ.

೩೪೯೬. ಸಜ್ಜನನಿಗೂ ಸಜ್ಜನನಿಗೂ ಮೂರು ದಾರಿ
ದುರ್ಜನನಿಗೂ ದುರ್ಜನನಿಗೂ ಒಂದೇ ದಾರಿ
ಸಜ್ಜನನಿಗೂ ದುರ್ಜನನಿಗೂ ಎರಡು ದಾರಿ.

೩೪೯೭. ಸಟವಿದ್ದವನಿಗೆ ಹಟವು ಯಾಕೆ ?

೩೪೯೮. ಸಟ ನುಡಿಯುವವನಿಗೆ ಮಠದ ಪೂಜೆ ಯಾಕೆ ?

೩೪೯೯. ಸಟೆಗಾರನ ಮಾತು ದಿಟವಾದರೂ ನಂಬರು.

೩೫೦೦. ಸಡಿಲು ಬಿಟ್ಟವನಿಗೆ ಬುದ್ಧಿ ಮಡಲಲ್ಲಿ
ಹಾಕಿದರೂ ಬಾರದು.

೩೫೦೧. ಸಡ್ಡಕನ್ನಿಗಿಂತ ನಂಟನಿಲ್ಲ
ಲಡ್ಡಿಗೆಗಿಂತ ಕಜ್ಜಾಯವಿಲ್ಲ.

೩೫೦೨. ಸಣಸುವವನಾದರೆ ಹೆಣ ನೋಡಿ ಹೆದರ್‍ಯಾನೇ ?

೩೫೦೩. ಸಣ್ಣ ತಲೆಗೆ ದೊಡ್ಡ ಮುಂಡಾಸು.

೩೫೦೪. ಸಣ್ಣವನಾದರೂ ಚಂಪಿಗ ಸೆರೆಯರಿವೆ
ಕದಿಯದೆ ಬಿಡ.

೩೫೦೫. ಸಣ್ಣವನಿಂದ ಮಣ್ಣಿನ ಕೆಲಸ ಆಗದು.

೩೫೦೬. ಸತ್ತ ಸುದ್ದಿಯನ್ನಾದರೂ ಸಂತೋಷದಿಂದ ಹೇಳು.

೩೫೦೭. ಸತ್ತ ಕುರಿ ಕಿಚ್ಚಿಗೆ ಅಂಜೀತೇ ?

೩೫೦೮. ಸತ್ತ ಮಗುವಿನ ಚಂದ್ರ ತಾರಾಬಲ ಕೇಳಿದ ಹಾಗೆ.

೩೫೦೯. ಸತ್ತ ಮಗುವಿನ ಕಣ್ಣು ಸಾರೆ.

೩೫೧೦. ಸತ್ತ ಮುಕ್ಲಿ ಎತ್ತ ಬಿದ್ದರೇನು ?

೩೫೧೧. ಸತ್ತ ಎಮ್ಮೆಗೆ ಹಾನೆ ಹಾಲು
ಹೆತ್ತ ಎಮ್ಮೆಗೆ ಮಾನ ಹಾಲು.

೩೫೧೨. ಸತ್ತ ಎಮ್ಮೆಗೆ ಹಾಲು ಹೆಚ್ಚು.

೩೫೧೩. ಸತ್ತವನ ಕಾಲು ತಟ್ಟಿದ ಹಾಗೆ.

೩೫೧೪. ಸತ್ತವರ ಮಕ್ಕಳು ಇದ್ದವರ ಕೈಯಲ್ಲಿ.

೩೫೧೫. ಸತ್ತವರ ಮನೇಲಿ ಕೆಟ್ಟವರು ಯಾರು ಎಂದರೆ
ಸತ್ತವನೇ ಕೆಟ್ಟನು.

೩೫೧೬. ಸತ್ತವರಿಗೆ ಅತ್ತರೆ ಅತ್ತವರು ಸಾಯರೇ ?

೩೫೧೭. ಸತ್ಯಕ್ಕೆ ಹೋದವನ ಹೆಂಡತಿ ಬತ್ತಲೆ.

೩೫೧೮. ಸತ್ಯವಿದ್ದರೆ ಎತ್ತಲೂ ಭಯವಿಲ್ಲ.

೩೫೧೯. ಸತ್ತಿಗೆ ಅರ್ಥ ಬೋಯಿಗೆ
ಅತ್ತಿಗೆ ಅರ್ಥ ಭಾವಗೆ.

೩೫೨೦. ಸತ್ತು ಸಗ್ಗಾ ಕೂಡಲಿಲ್ಲ
ಇದ್ದು ದೈವಾ ಕೂಡಲಿಲ್ಲ.

೩೫೨೧. ಸದರು ಇಲ್ಲದಿದ್ದರೆ ಒದರುವುದಕ್ಕೂ ತಿಳಿಯದೇ ?

೩೫೨೨. ಸದ್ದು ಕೇಳಿದರೆ ಗವುಜಿ ನಿಲ್ಲುತ್ತದೆ
ಮದ್ದು ಕುಡಿದರೆ ರೋಗ ನಿಲ್ಲುತ್ತದೆ.

೩೫೨೩. ಸದೆ ಕೂಡಿಸಲಿಕ್ಕೆ ತಿಳಿಯದವ
ಹದನಾದ ಕೆಲಸ ಮಾಡ್ಯಾನೇ ?

೩೫೨೪. ಸನ್ನೆ ತಿಳಿಯದಿದ್ದರೆ ಮನ್ನಣೆಯೂ ತಿಳಿಯದೇ ?

೩೫೨೫. ಸಪ್ಪಗೆ ಇರು ಎಂದರೆ
ಅಪ್ಪಪ್ಪ ಎಂತ ಕೂಗಿದ.

೩೫೨೬. ಸಭೆ ಕೂಡಿದಾಕ್ಷಣ ಪ್ರಭೆ ಕೊಟ್ಟಾರೋ ?

೩೫೨೭. ಸಮಯಕ್ಕಾಗದ ಅರ್ಥ ಸಹಸ್ರವಿದ್ದರೂ ವ್ಯರ್ಥ.

೩೫೨೮. ಸಮಯಕ್ಕಾದವನೇ ನೆಂಟ
ಕೆಲಸಕ್ಕೊದಗಿದವನೇ ಬಂಟ.

೩೫೨೯. ಸಮರು ಮೀರಿದ ಹೆಣ್ಣು
ಸಂಬಾರ ಮೀರಿದ ಮೇಲೋಗರ.

೩೫೩೦. ಸಮಾಧಿಯಲ್ಲಿಯೂ ಸೊಳ್ಳೇ ಕಾಟ.

೩೫೩೧. ಸಮುದ್ರದ ನೆಂಟು, ಉಪ್ಪಿಗೆ ಮಾತ್ರ ಬಡತನ.

೩೫೩೨. ಸಮುದ್ರದಲ್ಲಿ ಕೊಳ್ಳಿ ಇಟ್ಟಹಾಗೆ.

೩೫೩೩. ಸಮುದ್ರ ದೊಡ್ಡದಾದರೂ
ಪಾತ್ರೆ ಇದ್ದಷ್ಟೇ ನೀರು ಸಿಕ್ಕೀತು.

೩೫೩೪. ಸಮುದ್ರ ಮೇರೆ ತಪ್ಪಿದಕ್ಕೆ ಯಾರು ಮಾಡೋದೇನು ?

೩೫೩೫. ಸರಕು ಒಪ್ಪಿಸಿದ ಮೇಲೆ ಸುಂಕವೇ ?

೩೫೩೬. ಸರಸವಾದದ್ದೆಲ್ಲಾ ವಿರಸಕ್ಕೆ ಹೇತು.*

೩೫೩೭. ಸರಸ ಬೆರಸಿಕೊಂಡಿತು.

೩೫೩೮. ಸರಸವಿದ್ದವನ ಮನೆಗೆ ಬರಿ ಸುಳ್ಳ ಹೋದರೆ
ಹೊರಿಸಿಕೊಟ್ಟನಂತೆ ಒಂದು ಮೊರ ಸುಳ್ಳು.

೩೫೩೯. ಸರಳು ಹೋದಾ ಕ್ಷಣ ಮರುಳುತನ ಬಿಟ್ಟಾನೇ ?

೩೫೪೦. ಸರಿ ಮನೆಯಾಕೆ ಸರಿಗೆ ಹಾಕಿಕೊಂಡರೆ
ನೆರ ಮನೆಯಾಕೆ ಉರುಳು ಹಾಕಿಕೊಂಡಳು.

೩೫೪೧. ಸರೇಲಿ ಬಿದ್ದವಗೆ ಮರೆಯೇನು.?

೩೫೪೨. ಸರ್ಪನ ಕೂಡೇ ಸರಸವೇ ?

---

* (i) ಸರಸವಾದರೆ ವಿರಸವಾದೀತು.
(ii) ಸರಸ ವಿರಸವಾಗದೇ ?

೩೫೪೩. ಸಲಹಲಿಕ್ಕೆ ತಿಳಿಯದಿದ್ದರೆ
ಕೊಲ್ಲಲಿಕ್ಕೆ ತಿಳಿಯದೇ?

೩೫೪೪. ಸಲಿಗೇ ನಾಯಿ ಮೊಲಕ್ಕೆ ಮುತ್ತು ಕೊಟ್ಟಹಾಗೆ.

೩೫೪೫. ಸಲಿಗೆ ಕೊಟ್ಟ ನಾಯಿ ತಲೆಗೇರಿತು.

೩೫೪೬. ಸಲ್ಲದ ಠಾವಿನಲ್ಲಿ ಸಲಿಗೆ ಮಾಡಿದರೆ
ಅಲ್ಲೇ ಹೋಯಿತು ಅಭಿಮಾನ.

೩೫೪೭. ಸಲ್ಲದ ಹೊನ್ನಿಗೆ ವಟ್ಟವಿಲ್ಲ.

೩೫೪೮. ಸಲ್ಲದ ನಾಣ್ಯ ಸಲ್ಲಿಕೆ ಮಾಡಿದರೆ
ಅಲ್ಲಿಗೆ ಹೋಯಿತು.

೩೫೪೯. ಸವತೀ ಗಂಡ ಸಾಯಲಿ ಅಂದರೆ
ಮುಂಡೆ ಆಗುವವರು ಯಾರು?

೩೫೫೦. ಸವತಿಗೆ ಮುಂಡೆ ಆಗು ಅಂದ ಹಾಗೆ.

೩೫೫೧. ಸವತಿ ಸಣ್ಣವಳಲ್ಲ. ದಾಯಾದಿ ಚಿಕ್ಕವನಲ್ಲ.

೩೫೫೨. ಸವತೀಕಾಯಿ ಕಹಿಯಾದರೆ
ಸವತಿ ಏನುಮಾಡುವಳು?

೩೫೫೩. ಸವುದೆ ತಾರದೆ ಇದ್ದರೆ
ಸವತಿ ಏನು ಮಾಡ್ಯಾಳು?

೩೫೫೪. ಸವುಟು ಕೈಯಲ್ಲಿ ಇದ್ದಾಗ
ಅವುಟು ಮಾಡಿದ್ದೇ ಬಂತು.

೩೫೫೫. ಸವುದೇ ಹೊರೆ ಹೊತ್ತುಕೊಂಡು
ಹಾದೇಲಿ ಕೂತ ಹಾಗೆ.

೩೫೫೬. ಸಸನೆ ಇರಲಾರದ ಬಡ್ಡಿ
ಗೇಡು ಚುಚ್ಚಿಸಿಕೊಂಡಳು.

೩೫೫೭. ಸಾಕಿದ ಮಗ ನಾಕ ಸೇರಿಸ್ಯಾನೋ ?

೩೫೫೮. ಸಾಕ್ಷಿ ಹೇಳಿದರೆ ಮೋಕ್ಷ ಸಿಕ್ಕೀತೇ ?

೩೫೫೯. ಸಾಟಿಯ ಸಂಸಾರ, ಗೋಟಡಕಿಯ ವ್ಯಾಪಾರ.

೩೫೬೦. ಸಾಣೆಗೆ ಕಾಲು ಮುಟ್ಟಿಸ್ಕೊ ಅಂದರೆ
ಆಚೇ ವರ್ಷದ ಹಾಗೆ ನಾಣ್ಯ ಕೊಡಬೇಕು ಅಂದ ಹಾಗೆ.

೩೫೬೧. ಸಾಣೆ ಕಲ್ಲಿಗೂ ಬೋಳು ತಲೆಗೂ ಗಂಟು.

೩೫೬೨. ಸಾಣೇ ಗುಣ ಗಂಧದಲ್ಲಿ ನೋಡು;
ನಾಣ್ಯದ ಗುಣ ಬಣ್ಣದಲ್ಲಿ ನೋಡು.

೩೫೬೩. ಸಾದ ಎತ್ತಿಗೆ ಎರಡು ಹೇರು.

೩೫೬೪. ಸಾಧಿಸಿದರೆ ಸಬಳ ನುಂಗಬಹುದು.

೩೫೬೫. ಸಾಧ್ಯವಲ್ಲದ ಕೆಲಸ ಮಧ್ಯಾಹ್ನದ ಮೇಲೆ ಆದೀತೇ ?

೩೫೬೬. ಸಾಮಾನ ಇದ್ದವಗೆ ಗುಮಾನ ಏನು ?

೩೫೬೭. ಸಾಯದಿದ್ದರೆ ಸಾವಿರ ಸೋಜಿಗ ಕಂಡೇನು.

೩೫೬೮. ಸಾಯುವ ಕಾಲಕ್ಕೆ ಮಾಳಪ್ಪ ಸೆಟ್ಟಿ
ಮೀನು ತಿಂದು ಸತ್ತ.

೩೫೬೯. ಸಾಯುವ ತನಕ ಸನೀಕಾಟವಾದರೆ
ಬಾಳೋದು ಯಾವಾಗ ?

೩೫೭೦. ಸಾಯುವ ತನಕ ಸಾಮು ಕಲಿತರೆ
ಯುದ್ಧ ಮಾಡುವುದು ಯಾವಾಗ?

೩೫೭೧. ಸಾಯುವನ ಕಣ್ಣಿಗೆ ಸುಳಿದವನೇ ಜವರಾಯ.

೩೫೭೨. ಸಾಯುವವರಿಗೆ ದೇವರಿಲ್ಲ
ಕೆಟ್ಟವರಿಗೆ ನೆಂಟರಿಲ್ಲ.

೩೫೭೩. ಸಾಯುವೆನೆಂದರೆ ಹೆಂಡತಿ ಬಂದಳು ಅಂದಹಾಗೆ.

೩೫೭೪. ಸಾರ ಬಲ್ಲವ ಸರ್ವಜ್ಞ.

೩೫೭೫. ಸಾರಿ ಕೊಂದರೆ ಪಾಪವಿಲ್ಲ.

೩೫೭೬. ಸಾರು ಚೆನ್ನಾಗಿದೆ, ನೀರು ಮಾತ್ರ ಹೆಚ್ಚಾಯಿತು.

೩೫೭೭. ಸಾಲ ತಲೇ ಹೊರೆ, ಬಡ್ಡಿ ಬಂಡೀ ಹೊರೆ.

೩೫೭೮. ಸಾಲವೋ ಶೂಲವೋ.

೩೫೭೯. ಸಾಲ ಸಲ್ಲದಿದ್ದರೆ ಹಾಲು ಕಹಿ ಆದೀತೇ?

೩೫೮೦. ಸಾಲಗಾರನ ಮನೆಗೆ ಸವುದೆ ಹೊತ್ತರೆ
ಮೇಲಣ ಬಡ್ಡಿಗೆ ಸಮವಾಯಿತು.

೩೫೮೧. ಸಾಲ ಕೇಳದೆ ಹೋಯಿತು
ಹೊಲ ನೋಡದೆ ಹೋಯಿತು.

೩೫೮೨. ಸಾಲದವನ ಮುಂದೆ ಇರು
ಅರಮನೆಯ ಹಿಂದೆ ಇರು.

೩೫೮೩. ಸಾಲ ಮಾಡಿ ಓಲೆ ಮಾಡಿದ
ಓಲೆ ಮಾಡಿ ಬಡ್ಡಿಗೆ ಹೋಯಿತು.

೩೫೮೪. ಸಾಲ ಮುಟ್ಟಲ್ಲದಾಕೆ ಮೂರು ಮನೆ ತಿರುಗಿದಳು.

೩೫೮೫. ಸಾಲಾ ಮಾಡಿದವ ತೀರಿಸಿ ಸಾಯಲಿಲ್ಲ
ಮೂಲಾ ಮಾಡಿದವ ಉಂಡು ಸಾಯಲಿಲ್ಲ.

೩೫೮೬. ಸಾಲೆಯಿಲ್ಲದ ಊರು, ನೂಲೆಯಿಲ್ಲದ ಪ್ರಸ್ತ
ಗೋಲಿಯಾಡುವವರಾದರೂ ಮೇಲು ಅಂದಾರೇ ?

೩೫೮೭. ಸಾವಿರ ಕೊಟ್ಟು ಸಂತೆ[illegible]ಡೆಯಬೇಕು.

೩೫೮೮. ಸಾವಿರ ಕುದುರೆಗೆ ಸರದಾರನಾದರೂ
ಮನೆ ಹೆಂಡತಿಗೆ ಕಾಸ್ತಾರ.

೩೫೮೯. ಸಾವಿರ ತನಕ ಸಾಲ, ಆಮೇಲೆ [illegible]ಲ.

೩೫೯೦. ಸಾವಿರ ತೂಕ ಚಿನ್ನಕ್ಕೆ
ಹಾಗ ತೂಕ ಮುಚ್ಚು.

೩೫೯೧. ಸಾವಿರ ಬೆಕ್ಕು ಕೂಡಿದರೆ ಒಂದು ಹುಲಿ ಆದೀ[illegible] ?

೩೫೯೨. ಸಾವಿರ ಬಾರಿ ಗೋವಿಂದ ಅನ್ನಬಹುದು
ಒಬ್ಬ ದಾಸಯ್ಯನಿಗೆ ಭಿಕ್ಷೆ ನೀಡೋದು ಕಷ್ಟ

೩೫೯೩. ಸಾವಿರ ಹಾರಿ ಹೋಯಿತು
ನೂರು ಬೆರಸಿ ಬಂತು.

೩೫೯೪. ಸಾವಿರ ಸುಳ್ಳು ಹೇಳಿ ಒಂದು ಮದಿವೆ ಮಾಡು.

೩೫೯೫. ಸಾವಿರ ಸುಳ್ಳನ ಮಗ ಕೋಟಿ ಸುಳ್ಳ.

---

* ದಾಸರಿಗೆ ಕಾಸು ಕೊಡುವುದು ಕಷ್ಟ.

೩೫೯೬. ಸಾವಿರ ಸುತ್ತಿಗೆ ಒಂದು ಗಂಟು.

೩೫೯೭. ಸಾವಿರ ವರುಷವಾದರೂ ಸಾವು ತಪ್ಪದು
ನೂರು ವರುಷವಾದರೂ ಬೇರಾಗೋದು ತಪ್ಪದು.

೩೫೯೮. ಸಾವಿಗೆ ಅಂಜದವನು ನೋವಿಗೆ ಅಂಜ್ಯಾನೇ ?

೩೫೯೯. ಸಾವುಕಾರರಾದರೇನು ಸಾವು ತಪ್ಪಿಸ್ಯಾರೋ ?

೩೬೦೦. ಸಾವೆ ತಿನ್ನುವವನ ಮನೆಯಲ್ಲಿ
ಸಜ್ಜಿಗೆ ಹುಡುಕಿದ ಹಾಗೆ.

೩೬೦೧. ಸಾಷ್ಟಾಂಗ ಮಾಡಿದರೂ ಅಟ್ಟುಂಬೋದು ಹೋಗಲಿಲ್ಲ.

೩೬೦೨. ಸಾಸಿವೆ ಕಾಳಷ್ಟು ಜೀವ ಉಳಿದರೆ
ಆನೆಯಷ್ಟು ಉಂಡೇನು ?

೩೬೦೩. ಸಾಸಿವೆ ಕಾಳು ಬೆಕ್ಕಿಗೆ ಪರ್ವತ.

೩೬೦೪. ಸಿಕ್ಕದ ಮೇಲೆ ಇಟ್ಟದ್ದು ಮಕ್ಕಳಿಗಾಗದೋ ?

೩೬೦೫. ಸಿಕ್ಕಿದರೆ ಉಚ್ಚೆ ಕುಡಿದೇನು
ಸೊಕ್ಕಿದರೆ ರಕ್ತ ಕುಡಿದೇನು*

೩೬೦೬. ಸಿಟ್ಟಿಗೆ ಕೊಯ್ದ ಮೂಗು
ಶಾಂತತ್ವಕ್ಕೆ ಹತ್ತೀತೇ ?

೩೬೦೭. ಸಿಟ್ಟು ತನಗೆ ಕೇಡು
ಸಮಾಧಾನ ಪರರಿಗೆ ಕೇಡು.

---

* ಸೊಕ್ಕು ಬಂದರೆ ನೆತ್ತರ ಕುಡಿದಾನು
ಸಿಕ್ಕು ಬಂದರೆ ಮುಸರೆ ತಿಂದಾನು.

೩೬೦೮. ಸಿಟ್ಟು ಬಂದರೆ ಹಿಟ್ಟುಮುಕ್ಕು.

೩೬೦೯. ಸಿಟ್ಟು ಬಂದರೂ ಅಟ್ಟು ವಿನಹಾ ಉಣ್ಣ ಕೂಡದು.

೩೬೧೦. ಸಿಡಿ ಸುರಿದ ಮೇಲೆ ಮಡಿ ಏನು ?

೩೬೧೧. ಸಿದ್ಧಪತ್ರಿ ಶಿವಧ್ಯಾನ
ನಿದ್ದೆ ಬಿದ್ದರೆ ಎಮ್ಮೆ ಕೋಣ.

೩೬೧೨. ಸಿದ್ಧರಸ ದೊರಕಿದರೂ ಕ್ಯಾಹ್ನ ದರಿದ್ರ ಹೋಗಲಿಲ್ಲ.

೩೬೧೩. ಸಿಪ್ಪೆ ಇದ್ದರೆ ಕಾಯಿ
ಮುಪ್ಪು ಆದರೆ ಮರಣ.

೩೬೧೪. ಸಿಬ್ಬು ಇದ್ದವ ತುರಿಸಿಕೊಂಡರೆ
ಅದೊಂದು ಹಬ್ಬವೇ ?

೩೬೧೫. ಸಿರಿ ಇದ್ದವಗೆ ನರೆ ಬಂದರೆ ಹರನಾದಾನೇ ?

೩೬೧೬. ಸಿರಿ ಬಂದರೆ ಐಶ್ವರ್ಯ
ಹರಿ ಒಲಿದರೆ ವೈಕುಂಠ.

೩೬೧೭. ಸಿಸ್ತು ಇಲ್ಲದ ಭೂಮಿಗೆ
ಶಾಮಿಲಾತು ಕೂಡೀತೋ ?

೩೬೧೮. ಸಿಹಿ ಆದರೆ ಮೆಲ್ಲುತ್ತಾನೆ
ಕಹಿ ಆದರೆ ಬಿಡುತ್ತಾನೆ.

೩೬೧೯. ಸೀತರೆ ಬೀಳುವ ಮೂಗು
ಶಿವರಾತ್ರಿ ವರೆಗೆ ಇದ್ದೀತೇ ?

೩೬೨೦. ಸೀನಿದರೆ ಹೇನು ಹೋದೀತೇ ?

೩೬೨೧. ಸೀನಿದರೆ ಶ್ವಾನನಾದಾನೇ ?

೩೬೨೨. ಸೀಮೆ ಸ್ವಲ್ಪವಾದರೂ ಕರಕರೆ ಹೆಚ್ಚು.

೩೬೨೩. ಸೀರೆ ಇಲ್ಲವೆಂದು ಹಾಳೆಉಟ್ಟುಕೊಂಡ ಹಾಗೆ.

೩೬೨೪. ಸೀರೆ ಆದರೆ ಹಾರವಗಿತ್ತಿಗೆ ಆಗದೇ ?

೩೬೨೫. ಸೀಸದ ಉಳಿಯಲ್ಲಿ ಶೈಲ್ಯ [illegible]ಯುಬಹುದೇ ?

೩೬೨೬. ಸೀಸವನ್ನು ಇಲಿ ತಿಂದರೆ
ತಿಂದಣ್ಣನ ಹದ್ದು ಕೊಂಡು ಹೋಯಿತು.

೩೬೨೭. ಸುಕೃತಕ್ಕೆ ಕಡಿಮೆಯಾದರೂ
ದುಷ್ಕೃತಕ್ಕೆ ಕಡಿಮೆ ಇಲ್ಲ.

೩೬೨೮. ಸುಖದುಃಖ ತಿಳಿಯದ ಮನುಷ್ಯ
ನಖಕ್ಕಿಂತ ಕಡೆ.

೩೬೨೯. ಸುಗ್ಗಿಯಲ್ಲಿ ಸೊಕ್ಕಲಿಲ್ಲ
ಆಷಾಢದಲ್ಲಿ ಸೊರಗಲಿಲ್ಲ.

೩೬೩೦. ಸುಗ್ಗಿ ಕಾಲದಲ್ಲಿ ನುಗ್ಗೆ ತಿಂದರೆ
ಕಾತಿಕೆ ಕಾಲದಲ್ಲಿ ಜಗಲಿ ತಿಂದಾನೇ ?

೩೬೩೧. ಸುಗ್ಗೀ ಮೇಲೆ ಕೊಳಕೆ
ಮುಗ್ಗೀ ಮೇಲೆ ಲೆಕ್ಕ

೩೬೩೨. ಸುಡುಗಾಡಿಗೆ ಹೋದ ಹೆಣ ತಿರುಗಿ ಬಂದೀತೇ ?

೩೬೩೩. ಸುಣ್ಣವಿಲ್ಲದ ವೀಳ್ಯದ ಹಾಗೆ.

೩೬೩೪. ಸುಣ್ಣವಿಲ್ಲವೆಂದು ಬೆಣ್ಣೆ ತಿಂದ.

೩೬೩೫. ಸುಣ್ಣ ಹಚ್ಚಿಕೊಂಡರೆ ತಣ್ಣಗಾದೀತೇ ?

೩೬೩೬. ಸುತನಿಲ್ಲದವಳ ಭಾಗ್ಯ
ಮತ ವಿಲ್ಲದವನ ಘನತೆ.

೩೬೩೭. ಸುತ್ತಿಗೆ ಇಲ್ಲದ ಹರದ
ಅತ್ತಿಗೆ ಇಲ್ಲದ ಮೈದುನ.

೩೬೩೮. ಸುದ್ದಿಯಲ್ಲಿ ಅದ್ದಿ ಹೋದ್ರೂ
ಮದ್ದು ಕೊಡದೆ ರೋಗ ಹೋಗದು.

೩೬೩೯. ಸುಭಾಷಿತವಿಲ್ಲದವ ಸಭಾನಾಯಕನಾದರೇನು ?

೩೬೪೦. ಸುರಂಗಾ ಕೊರೆದರೆ ಅವರಂಗಬಾದಿಗೆ ಹೋಗಬಹುದೇ ?

೩೬೪೧. ಸುರಿದು ಉಣ್ಣ ಬೇಕು
ಗೊರೆದು ಮಲಗಬೇಕು.

೩೬೪೨. ಸುರೆ ಕುಡಿಯುವವನಿಗೆ ಮರೆ ಅಂಬೋದೇನು ?

೩೬೪೩. ಸುಲಿಸಿಕೊಳ್ಳಬಹುದು, ಸುದ್ದಿ ಹೇಳಕೂಡದು.

೩೬೪೪. ಸುಪ್ಪಿ ಅಂದರೆ ತಿಳಿಯದೆ ಒನಕೆ ರಾಗ.

೩೬೪೫. ಸುಳುವು ಹೇಳದವ ಸುದ್ದಿ ಹೇಳ್ಯಾನೇ ?

೩೬೪೬. ಸುಳುವುಗೇಡಿ ಕೈಯಲ್ಲಿ ಸುಣ್ಣ ಕೊಟ್ಟರೆ
ಬೆಣ್ಣೆಯೆಂದು ಬಾಯಲ್ಲಿ ಹಾಕಿಕೊಂಡ.

೩೬೪೭. ಸುಳ್ಳನ ಮನೇಲಿ ಉಂಡಲ್ಲದೆ ಬದ್ಧವಲ್ಲ.

೩೬೪೮. ಸುಳ್ಳು ದೇವರಿಗೆ ಕಳ್ಳ ಪೂಜಾರಿ.

೩೬೪೯. ಸೂಜಿ ಚಿನ್ನವಾದರೆ ಹಾಗದ ಕಾಸು.

೩೬೫೦. ಸೂಜಿಗೆ ಸೂಜಿ ಮುತ್ತು ಕೊಟ್ಟಹಾಗೆ.

೩೬೫೧. ಸೂಜಿಯಷ್ಟು ಬಾಯಿ, ಗುಡಾಣದಷ್ಟು ಹೊಟ್ಟೆ.

೩೬೫೨. ಸೂಟೀ ಬೆಳಕಿಗೆ ಚಂದಾವರಕ್ಕೆ ಹೋದ ಹಾಗೆ.

೩೬೫೩. ಸೂರೆ ಹೋದರೂ ಮಾರಿ [illegible]ಲಿಲ್ಲ.

೩೬೫೪. ಸೂರ್ಯನ ಮೇಲೆ ಸುರೆ ಚೆಲ್ಲಿದರೆ
ಮೋರೇ ಮೇಲೆ ಬೀಳುವುದು.

೩೬೫೫. ಸೂಲು ತಪ್ಪಿದರೆ ಗೊಡ್ಡೇ ?

೩೬೫೬. ಸೂಳೆ ಮನೆಗೆ ಬೆಂಕಿ ಬಿದ್ದರೆ
ಪುಂಡಗಾರ ಅಂಡು ಕಾಸಿದ.

೩೬೫೭. ಸೂಳೆಗೆ ಕೊಟ್ಟ ಹಣ
ಸುಡುಗಾಡಿಗೆ ಹೋದ ಹಣ.

೩೬೫೮. ಸೂಳೆ ತಿರುಗಿ ಕೆಟ್ಟಳು
ಸುಂಕದವ ತಿರುಗದೆ ಕೆಟ್ಟನು.

೩೬೫೯. ಸೂಳೆ ಬಂದರೆ ಅಮ್ಮ ಅಂದಂತೆ.

೩೬೬೦. ಸೂಳೆ ಮುಪ್ಪಾಗಿ ಶೀಲ ಹಿಡಕೊಂಡಂತೆ.

೩೬೬೧. ಸೂಳೆ ಮುಪ್ಪಾಗಿ *ಗೊರವತಿ* ಆದಳು.

---

* ಜೋಗತಿ.

೩೬೬೨. ಸೂಳೆ ಯಾರಿಗೆ ಹೆಂಡತಿ
ದೊರೆ ಯಾರಿಗೆ ಅಪ್ಪ.

೩೬೬೩. ಸೂಳೆಯ ಬಾಗಲಲ್ಲಿ ಆನೆ ಕಟ್ಟಿಸಿದರೆ ಸಿಂದ.

೩೬೬೪. ಸೂಳೆಯ ಮಗ ಸುಬೇದಾರ
ಹಾದರಗಿತ್ತಿಯ ಮಗ ಹವಲ್ದಾರ.

೩೬೬೫. ಸೂಳೇ ಕೈಯಿಂದ ಜ್ಯೋ[illegible] ಕುಟ್ಟಿಸಿದ ಹಾಗೆ.

೩೬೬೬. ಸೆಕೆ ಹೆಚ್ಚಾಯಿತೆಂದು ಕಂಬಳಿ ಹೊದ್ದುಕೊಂಡ.

೩೬೬೭. ಸೆಟ್ಟಿ ಬಿಟ್ಟದೇ ಪಟ್ಣ.

೩೬೬೮. ಸೆಟ್ಟಿಯ ಬಾಳು ಸತ್ತಲ್ಲದೆ ತಿಳಿಯೊ[illegible].

೩೬೬೯. ಸೆಟ್ಟಿ ಏನು ಮಾಡುತ್ತಾನೆ
ಅಳೆಯುತ್ತಾನೆ, ಹೊಯ್ಯುತ್ತಾನೆ.

೩೬೭೦. ಸೆಟ್ಟಿ *ಸಿಂಗಾರವಾಗುವಾಗ್ಯೆ*
ಪಟ್ಣವೆಲ್ಲಾ ಸೂರೆ ಹೋಯಿತು.

೩೬೭೧. ಸೆಟ್ಟಿ ಸವಾ ಸೇರು, ಲಿಂಗ ಅಡಿ ಸೇರು.

೩೬೭೨. ಸೆಟ್ಟಿ ಹೆಡ್ಡ, ಕುಂಬಾರ ಜಾಣ.

೩೬೭೩. ಸೆಟ್ಟೇ ಸಂಗಾ ಮಾಡು
ಗಿಟ್ಟೇ ಸಂಗಾ ಮಾಡಬಾರದು.

೩೬೭೪. ಸೆರೇ ಮನೆಯಲ್ಲಿ ಬುತ್ತಿ ಬಿಚ್ಚಿದ ಹಾಗೆ.

** ಶಿಸ್ತು ಮಾಡುವುದರೊಳಗೆ

೩೬೭೫. ಸೆರೇ ವರಹ ಕೊಟ್ಟರೂ
ಸೀರೆ ವ್ಯಾಪಾರ ಬಿಡ.

೩೬೭೬. ಸೆಳೆಗೆ ಹೆದ್ರರದ ಮಗು ಬಳೆಗೆ ಹೆದರೀತೇ ?

೩೬೭೭. ಸೇಕರಾವುತ ಎಲ್ಲಿ ? ಗೋಕುಲಾಷ್ಟಮಿ ಎಲ್ಲಿ ?

೩೬೭೮. ಸೇದಿದ ನೀರು ಹಾದೀಲಿ ಹಾಕ್ಯಾರೇ ?

೩೬೭೯. ಸೇದು ಬಾವಿ ಕಂಡು ನಾ[illegible]ತೋಷ ಪಟ್ಟಹಾಗೆ.

೩೬೮೦. ಸೇರದ ಗಂಡನಿಗೆ ವೊಸರ[illegible] ಕಲ್ಲು.

೩೬೮೧. ಸೇರು ರಾಜ, ಮಣ [illegible]ಂಟ.

೩೬೮೨. ಸೇರು ಹೊರದ ತ್ರಾಸು ಭಾರ ಹೊತ್ತೀತೇ ?

೩೬೮೩. ಸೇರು ಕಡಿಮೆಯಾದರೂ ಮಾರಾಟದಲ್ಲಿ ಕಡಿಮೆ ಇಲ್ಲ.

೩೬೮೪. ಸೇವಕ[illegible]ಲಾವಕತನವಿರಬಾರದು.

೩೬೮೫. ಸೇ[illegible] ಬಂಟ, ಭಾವಕ್ಕಿಲ್ಲದ ಭಕ್ತಿ.

೩೬೮೬. [illegible]ಕ್ಕದ್ದು ಉಕ್ಕುತ್ತದೆ
ಉಕ್ಕಿದ್ದು ಒಲೆಯಲ್ಲಿ ಹಾರುತ್ತದೆ.

[illegible]೭. ಸೊಕ್ಕಿದರೆ ನೆತ್ರಾ ಕುಡಿದೇನು
ಮುಕ್ಕಿದರೆ ಮೂತ್ರಾ ಕುಡಿದೇನು ಎಂಬಂತೆ.

೩೬೮೮. ಸೊಣಕಪ್ಪನಾಯಕರು ಬಂದರು
ನಡವೆಯಲ್ಲಿ ಕೂಡಿಕೊಂಡು ದಡಿಯಲ್ಲಿ ಚಚ್ಚಿದರು.

೩೬೮೯. ಸೊರ್ಗಕ್ಕೆ ಹೋದರೂ ಸೊಸೆ ಹಂಬಲ ಬಿಡಲಿಲ್ಲ.

೩೬೯೦. ಸೊಲಗೆ ಅಳಿಯಲಿಕ್ಕೆ ತಿಳಿಯದವ
ಕಣಿ ಅಳಿಯುವನೇ ?

೩೬೯೧. ಸೊಲ್ಲು ಸೊಲ್ಲಿಗೆ ನಲ್ಲನಾದರೆ
ಸಾಯೋ ಪರಿಯಂತರ ಎಷ್ಟು ನಲ್ಲರು ?

೩೬೯೨. ಸೊಸೆ ಸತ್ತರೆ ಶೋಭನ
ಮಗ ಸತ್ತರೆ ಮನೆ ಹಾಳು.

೩೬೯೩. ಸೊಸೆಗೆ ಗೃಹ ಪ್ರವೇಶ ಅತ್ತೆಗೆ ಪರವಾಸ.

೩೬೯೪. ಸೊಸೆಗೆ ಬಿಸಿ ಇಲ್ಲ
ಹಂದರಿಗೆ ಹಸಿ ಇಲ್ಲ.

೩೬೯೫. ಸೊಸೆಗೆ ಬುದ್ಧಿ ಹೇಳಿ
ಅತ್ತೆ ಅಗಸನ ಹತ್ತಿರ ಹೋದಂತೆ.

೩೬೯೬. ಸೊಸೆ ಬಂದರೇನು ಅತ್ತೆ ಬಂದರೇನು
ಬಿಸಿಲಿಗೆ ಮಾತ್ರ ದರಿದ್ರ.

೩೬೯೭. ಸೊಸೆ ಸತ್ತರೆ ಅತ್ತೆ ಕಾರಾ ಕುಡಿದ ಹಾಗೆ.

೩೬೯೮. ಸೋಕಿದ ನಾಯಿ ಒಡೆಯನ ಗುರುತು ಬಲ್ಲಿತೇ ?

೩೬೯೯. ಸೋತ ಪುರುಕಿಗೆ ಸೋರೆಕಾಯಿ
ಗೆದ್ದ ಪುರುಕಿಗೆ ಸಕ್ಕರೆ ಕಾಯಿ.

೩೭೦೦. ಸೋದರತ್ತೆಗೆ ಮೀಸೆ ಬಂದರೆ
ಚಿಕ್ಕಪ್ಪ ಅನ್ನಿಸಿಕೊಂಡಾಳೇ ?

೩೭೦೧. ಸೋನೇ ಮಳೆ ಹಾಳೇಲಿ ಹಿಡಿದರೆ
ಪಾನಿಗೆ ಪಾನಿಯೇ ?

೩೬೦೨. ಸೋಮಾರಿ ಹುಡುಗಿಗೆ ಬೋಧಕನಾದರೂ ಬಾಧಕನೇ ?

೩೬೦೩. ಸೋರುವ ಮನೆಯನ್ನೂ ಹೋರುವ ಹೆಂಡತಿಯನ್ನೂ
ದೂರ ಬಿಡಬೇಕು.

೩೬೦೪. ಸೋರು ಮನೆಯೂ ಲೊಟಕುವ ಗಂಡನೂ ಸರಿ.

೩೬೦೫. ಸೋರುವ ಮನೆಯಲ್ಲಿ *ಉಚ್ಚೆ ಹೊಯ್ದರೆ*
ಹಳ್ಳದ ಕೂಡ ಹಳ್ಳ.

೩೬೦೬. ಸೋರೇಕಾಯಿ ಆದರೆ ಹಾ[illegible]ೋರಿಗೆ ಆಗಹೇ ?

೩೬೦೭. ಸೋಲದೆ ಗೆಲವು ಆಗದು;
ನೂಲದೆ ಬಟ್ಟೆ ಆಗದು.

೩೬೦೮. ಸೋವು ತಿಳಿದ ನ[illegible]ವ ನೂಲು ಬಿಟ್ಟಾನೇ ?

೩೬೦೯. ಸ್ತುತಿ ತಿಳಿ[illegible]ದವನಿಗೆ ಗತಿಯೇನು ?

೩೬೧೦. ಸ್ತ್ರೀಯ[illegible]ಭಾಗ್ಯ ಪುರುಷನ ಲಕ್ಷಣ.

೩೬೧೧. [illegible]ದವನಿಗೆ ನೆಳಲೇ ಆಸ್ಪದ.

೩೬[illegible]. ಸ್ಥಾನವಿಲ್ಲದವನಿಗೆ ಮಾನವೆಲ್ಲಿ ?

[illegible]. ಸ್ಥಿತಿಯಿಲ್ಲದಿದ್ದರೂ ಗತಿಗೆಡಬಾರದು.

೩೬೧[illegible]. ಸ್ನಾನ ತಪ್ಪಿದರೆ ಹೋಮದ ದಕ್ಷಿಣೆ ತಪ್ಪೀತೇ ?

೩೬೧೫. ಸ್ಮರಣೆ ತಪ್ಪಿದರೂ ಸ್ಮೈರಣೆ ಇರಬೇಕು.

---

* ನೀರು ಚೆಲ್ಲಿದರೆ.

೩೭೧೬. ಸ್ಮಾರ್ತರಿಗೆ ಸ್ವಾರ್ಥ ಹೆಚ್ಚು
ವೈಷ್ಣವರಿಗೆ ಉಷ್ಣ ಹೆಚ್ಚು.

೩೭೧೭. ಸ್ವಧರ್ಮ ತಪ್ಪಿದರೂ ಅಧರ್ಮ ಮಾಡಬಾರದು.

೩೭೧೮. ಸ್ವಪ್ನದಲ್ಲಿ ದಂಡಿಗೆ ಏರಿ
ಗೊಂಡೆ ಹಿಡಿದ ಹಾಗೆ.

೩೭೧೯. ಸ್ವಭಾವ ತಿಳಿದರೆ ನಿರ್ಭ್ರಮಿಸಬಹುದು.

೩೭೨೦. ಸ್ವರಗಾರ ಹಾಡಿದ್ದೇ ರಾಗ
ವೈದ್ಯಗಾರ ಹೇಳಿದ್ದೇ ರೋಗ.

೩೭೨೧. ಸ್ವರೂಪ ತಿಳಿದರೂ ಸ್ವಭಾವ ತಿಳಿಯಲಿಲ್ಲ.

೩೭೨೨. ಸ್ವರ್ಗದ ಬಾಗಿಲಿಗೆ ನರಕದ ನಾಯಿ.

೩೭೨೩. ಸ್ವರ್ಗವೂ ತಪ್ಪಿತು, ದುರ್ಗವೂ ತಪ್ಪಿತು.

೩೭೨೪. ಸ್ವರ್ಗವೆಂಬುದು ದುರ್ಗದ ಬಾಗಿಲೋ ?

೩೭೨೫. ಸ್ವರ್ಣತಿಂದರೆ ಮರಣ ತಪ್ಪೀತೇ ?

೩೭೨೬. ಸ್ವರ್ಣದ ಪರೀಕ್ಷೆ ತಿಳಿಯದಿದ್ದರೆ
ವರ್ಣದ ಪರೀಕ್ಷೆ ತಿಳಿಯದೇ ?

೩೭೨೭. ಸ್ವಲ್ಪದ ಅರಸನಿಗೆ ಅಲ್ಪದ ಪ್ರಧಾನಿ.

೩೭೨೮. ಸ್ವಸ್ಥವಿದ್ದವನ ಹಸ್ತ ನೋಡಬೇಕೇ ?

೩೭೨೯. ಸ್ವಾಮಿದ್ರೋಹಿಯ ಮನೆಗೆ
ಪಂಚ ಮಹಾಪಾತಕದ ಬಾಗಿಲು.

೩೭೩೦. ಸ್ವಾರ್ಥವಿದ್ದಲ್ಲಿ ಪ್ರೀತಿ ನಿಲ್ಲದು.

೩೭೩೧. ಸ್ವಾರ್ಥವಿದ್ದವನ ಅರ್ಥ ವ್ಯರ್ಥವೇ ಸರಿ.

೩೭೩೨. ಸಂಕಟ ಬಂದಾಗ ವೆಂಕಟರಮಣ.

೩೭೩೩. ಸಂಕ ಮುರಿದಲ್ಲೇ ಸ್ನಾನ
ಗ್ರಹಚಾರ ಹಿಡಿದಲ್ಲೇ ದಾನ.

೩೭೩೪. ಸಂಕಟಕ್ಕೆ ನಾರಾಯಣಾ [illegible]ರೂ
ವೆಂಕಟಪ್ಪ ಬೆನ್ನು ಬಿಡ.

೩೭೩೫. ಸಂಗತಿ ಸೀಯೋ, ಬಾಳೇಹಣ್ಣು ಸೀಯೋ?

೩೭೩೬. ಸಂಗತೀ ಗುಣ ಸ[illegible]ತು ನೋಡು
ಹೆಂಡತೀ ಗುಣ ಹೇತು ನೋಡು.

೩೭೩೭. ಸಂಗೀತ ತಿಳಿಯದಿದ್ದರೂ
ಅಂಗಿ ಹಾಕಿಕೊಳ್ಳಲಿಕ್ಕೆ ಬಲ್ಲ.

೩೭೩೮. [illegible] ದೊಡ್ಡದಾದರೆ ಮಂಚ ಹಿಡಿದೀತೇ?

೩೭೩೯. ಸಂಚು ನಡಿಸಲಿಕ್ಕೆ ಸಂಚಗಾರ ಕೊಡಬೇಕೇ?

೩೭೪೦. ಸಂಜೀವನ ಆಗಬೇಕಾದರೆ
ಮಂಜಿನ ನೀರು ಬೇಕೇ?

೩೭೪೧. ಸಂಡಿಗೆ ಹುರಿಯಬೇಕಾದರೆ
ಮಂಡೆ ಕೆಳಗೆ ಮಾಡಬೇಕೇ?

೩೭೪೨. ಸಂತಾನವಿಲ್ಲದವ ಮಂತಾನಸ್ತನಾದಾನೇ?

೩೭೪೩. ಸಂತೆಗೆ ಹೋಗುವುದು ಒಂದು ನಾಯಿ
ಊರಿಗೆ ಹೋಗುವುದು ಒಂದು ಊಡಕ
ಮನೆಯಲ್ಲಿ ಇರುವುದು ಒಂದು ಅರಗಿಣಿ.

೩೭೪೪. ಸಂತೆಗೆ ಚೀಟು, ಮುಂಗೈಗೆ ಬಳೆ.

೩೭೪೫. ಸಂತೆ ಹೋದರೂ ಭ್ರಾಂತಿ ಹೋಗಲಿಲ್ಲ.

೩೭೪೬. ಸಂತೆ ನೆರೆಯುವುದಕ್ಕಿಂತ ಮುಂಚೆ
ಗಂಟು ಕಳ್ಳರ ಹಾವಳಿ. [illegible]ತ್ರ

೩೭೪೭. ಸಂತೇ ಹೊತ್ತಿಗೆ ಮೂರು ಮೊಳ ನೇದ ಹಾಗೆ.

೩೭೪೮. ಸಂತೇ ಸೂಳೆಯ ನೆಚ್ಚಿ
ಮನೇ ಹೆಂಡತಿಯ ಬಿಟ್ಟ.

೩೭೪೯. ಸಂಧಿ ಮುಗಿದರೂ ಮಂದಿ ಹೋಗಲಿಲ್ಲ.

೩೭೫೦. ಸಂನ್ಯಾಸಿಗೆ ಕಚ್ಚಿದ ನಾಯಿ
ಪಾಪಕ್ಕೆ ಹೋಗ್ಲೋವರೆಗೆ ಕಾಲು ಕೊಳೆಯುತ್ತದೆ

೩೭೫೧. ಸಂನ್ಯಾಸೀ ಹೆಂಡತಿ ಮುಂ[illegible]ಯೂ ಅಲ್ಲ
ಮುತ್ತೈದೆಯೂ ಅಲ್ಲ.

೩೭೫೨. ಸಂಪಿಗೇ ಕೆಂಪು ಎಂಟು ಗಳಿಗೆ
ನೆಂಟರಿಷ್ಟರ ಗುಣ ಅರ್ಧ ಗಳಿಗೆ.

೩೭೫೩. ಸಂಬಳಕ್ಕಾದರೆ ಮುಂದೆ, ಚಾಕ್ರಿಗಾದರೆ ಹಿಂದೆ.

೩೭೫೪. ಸಂಭ್ರಮದ ಸಮ್ಮಾನಕ್ಕೆ ಒಮ್ಮಾನಕ್ಕಿ ಸಜ್ಜಿಗೆ.

೩೭೫೫. ಸಂಸಾರಿಗೆ ತಥ್ಯ, ರೋಗಿಗೆ ಪಥ್ಯ.

೩೭೫೭. ಸಂಸಾರ ಬೆಳೀತು ಅಂತ
ಮಾಂಸಾರ ಮಾಡಬಹುದೇ ?

೩೭೫೮. ಸಂಸಾರ ಗುಟ್ಟು, ರೋಗ ರಟ್ಟು.

೩೭೫೯. ಸಂಸಾರವೆಂಬುದು ಸಾಗರದ ಹೊಳೆ
ಈಸಬಲ್ಲವಗೆ ಎದೆಯುದ್ದ.

೩೭೫೯. ಸಂಸಾರಕ್ಕೆ ಸಾಗರ, ಅವಸರಕ್ಕೆ ಯಾರೂ ಇಲ್ಲ.

೩೭೬೦. ಸಂಸ್ಕೃತ ತಿಳಿಯದಿದ್ದರೆ ಮೆಣಸಿನ ಕಾರ ತಿಳಿಯದೇ ?

೩೭೬೧. ಸಂಸ್ಥಾನಕ್ಕೆ ಹೋದರೂ ಮನಸ್ತಾಪ ಹೋಗದು.

೩೭೬೨. ಸಂಹಾರ ಮಾಡುವವ ಕಮ್ಮಾರನಿಗೆ ಬಿಟ್ಟಾನೆ ?

೩೭೬೩. ಸಿಂಪಿಸಿದ ಹನಿಗೆ ಸಂಪಿಗೆ ಅರಳೀತೇ ?

೩೭೬೪. ಸಿಂಹವಾ[illegible]ದ್ದು ಸಂಹರಿಸಲಾರದೋ ?

೩೭೬೫. ಸುಂಕದವನ ಕೂಡೆ ಸುಖದುಃಖವೇ ?

೩೭೬೬. [illegible]ಪನ ಕೂಡೆ ಸುಖದುಃಖ ಹೇಳಿದರೆ
ಕಂಕುಳಲ್ಲಿ ಏನು ಅಂದನಂತೆ.

[illegible]. ಸುಂಕದವ ಸುಳ್ಳ, ಕೋಮಟಿಗ ಕಳ್ಳ.

೩೭೬[illegible]. ಸೊಂಟ ಮುರಿದ ಮೇಲೆ ನೆಂಟರಿಲ್ಲ
ಗಂಟಲು ಮುರಿದಮೇಲೆ ರಾಗವಿಲ್ಲ.

೩೭೬೯. ಹಕ್ಕಲಿಲ್ಲದ ಒಕ್ಕಲಿಲ್ಲ, ಮಕ್ಕಳಿಲ್ಲದ ಭಾಗ್ಯವಿಲ್ಲ.

೩೭೭೦. ಹಕ್ಕಿಯಿಲ್ಲದ್ದು ತೋಟವಲ್ಲ
ಮಕ್ಕಳಿಲ್ಲದ್ದು ಮನೆಯಲ್ಲ.

೩೭೭೧. ಹಗರಣಗಿತ್ತಿಯ ವೈಯ್ಯನ್ನು ತಗಣೆ ಕಡಿದರೆ
ಗುಡಾರ ಗಡತರ ಗುಳ್ಳೆ ಎದ್ದಿತು ಅಂದ ಹಾಗೆ.

೩೭೭೨. ಹಗರಣಗಿತ್ತಿ ಹಬ್ಬ ಮಾಡಿದರೆ
ಮನೇ ಗಂಡಗೆ ಉಪವಾಸ.

೩೭೭೩. ಹಗಲು ಸತ್ತರೆ ಅಕ್ಕಿಯಿಲ್ಲ
ರಾತ್ರಿ ಸತ್ತರೆ ಎಣ್ಣೆಯಿಲ್ಲ.

೩೭೭೪. ಹಗಲು ಕಾಡಿನಲ್ಲಿ ಮಾತಾಡಬೇಡ
ಇರುಳು ಮನೆಯಲ್ಲಿ ಮಾತಾಡಬೇಡ.

೩೭೭೫. ಹಗಲು ದೀವಟಿಗೆ ಕೊಟ್ಟವರು ಯಾರು ಅಂದರೆ
ನನ್ನ ಕೊನೇ ಹೊಲದ ಹರಳಪ್ಪನಾಯಕ ಅಂದ ಹಾಗೆ.

೩೭೭೬. ಹಗಲೆಲ್ಲಾ ಹಾದರ ಮಾಡಿ
ಇರುಳು ಗಂಡನ ತಲೆಯ ಹೇನು ಬಗೆದಳಂದೆ.

೩೭೭೭. ಹಗೆಯುದೊಳಗೆ ಬಿದ್ದ ನಾಯಿ ಹಾಕುವವರನ್ನರಿಯದು
ತೆಗೆಯುವವರನ್ನರಿಯದು.

೩೭೭೮. ಹಗೆಯವನ ಚಂದ್ರತಾರಾಬಲ ಕೇಳಿದರೆ
ಮಧ್ಯಾನಕ್ಕೆ ಮರಣ ಅಂದನಂತೆ.

೩೭೭೯. ಹಗೆಯವರ ಮಕ್ಕಳನ್ನು ನೆವದಲ್ಲಿ ಕೊಂದ ಹಾಗೆ.

೩೭೮೦. ಹಗೆಯವರಿಲ್ಲೆಂದು ಆಯುಧ ಮರೆಯಬಾರದು.

೩೭೮೧. ಹಗ್ಗ ಸುಟ್ಟರೆ ಹುರಿ ಹೋದೀತೇ ?

೩೭೮೨. ಹಚ್ಚಡ ಹೊದಿಸಿದರೆ ಹುಚ್ಚು ಹೋದೀತೇ ?

೩೭೮೩. ಹಚ್ಚಲಿಕ್ಕೆ ತಿಳಿಯದಿದ್ದರೆ ಮುಂಗೈ ಕಚ್ಚಿ ಕೊಂಡ ಹಾಗೆ.

೩೭೮೪. ಹಚ್ಚಿದೆಣ್ಣೆ ಬಚ್ಚಲು ಪಾಲು.

೩೭೮೫. ಹಟ ಮಾಡಿ ಮಾಡಿ ಮಠ ಮಾರಿಸಿಕೊಂಡ.

೩೭೮೬. ಹಟ್ಟೀಗೆ ಗತಿಯಿಲ್ಲದವ ಮಗ್ಗ ಕಟ್ಟ್ಯಾನೇ ?

೩೭೮೭. ಹಟ್ಟೀಲಿ ಹುಟ್ಟಿದ್ದಲ್ಲ, ಕ್ರಯಕ್ಕೆ ಕೊಂಡದ್ದಲ್ಲ.

೩೭೮೮. ಹಡಗ ಮುರಿದುಹೋಯಿತು
ಮಡದಿ ಬಿಟ್ಟುಹೋದಳು.

೩೭೮೯. ಹಡಗ ಹಡಪಲ್ಲ, ಮಡದಿ ರಾಣಿಯಲ್ಲ.

೩೭೯೦. ಹಡಗದ ಮೇಲೆ ತೆಗದ ಉಪವಾಸ
ಏಕಾದಶಿಗೆ ಸಂದಾಯ.

೩೭೯೧. ಹಣವಿದ್ದವರು ಹಾದರ ಮಾಡಿದ್ದಕ್ಕೆ
ಹಾದೀಲಿ ಹೋಗುವವರು ದಂಡತೆತ್ತರು.

೩೭೯೨. ಹಣವಿದ್ದರೆ ಹುಳುಕು ಮುಚ್ಚುತ್ತದೆ.

೩೭೯೩. ಹಣದಿಂದ ರುಣ ಆಗುವುದು
ಗುಣದಿಂದ ಮೋಕ್ಷ ಆಗುವುದು.

೩೭೯೪. ಹಣವುಳ್ಳವನ ಹೆಂಡತಿಯಾದರೂ
ರುಣವಿದ್ದಷ್ಟೇ ಸಿಕ್ಕೀತು.

೩೭೯೫. ಹಣವಿದ್ದವಗೆ ಗುಣವಿಲ್ಲ
ಗುಣವಿದ್ದವಗೆ ಹಣವಿಲ್ಲ.

೩೭೯೬. ಹಣವಿಲ್ಲದವನು ಹೆಣಕ್ಕಿಂತ ಕಡೆ.

೩೭೯೭. ಹಣವೆಂದರೆ ಹೆಣ ಬಾಯಿಬಿಡುತ್ತದೆ.

೩೭೯೮. ಹಣವಿದ್ದವಗೆ ತಿರುಪತಿ
ರುಣವಿದ್ದವಗೆ ಕಾವೇರಿ.

೩೭೯೯. ಹಣೇಲಿಲ್ಲದ್ದೂ ಹಣಕಿದರೆ ಸಿಕ್ಕೀತ್ತೇ ?

೩೮೦೦. ಹಣ್ಣಿಗೆ ಹಾರಿ ಕಣ್ಣಿಗೆ ಮಣ್ಣು ಬಿತ್ತು.

೩೮೦೧. ಹಣ್ಣು ಜಾರಿ ಹಾಲಲ್ಲಿ ಬಿದ್ದಹಾಗೆ.

೩೮೦೨. ಹಣ್ಣು ತಿಂದವ ನುಣ್ಣಗೆ ಆದ.
ಸಿಪ್ಪೆ ತಿಂದವ ಸಿಕ್ಕಿಕೊಂಡ.

೩೮೦೩. ಹಣ್ಣೆಂದು ಶಲಭ ದೀಪದ ಮೇಲೆ ಬಿದ್ದು ಸತ್ತಹಾಗೆ.

೩೮೦೪. ಹಣ್ಣೆಲೆ ಉದುರುವಾಗ ಚಿಗುರೆಲೆ ನಗುವುದು.

೩೮೦೫. ಹಣ್ಣೇ ಸೊಪ್ಪು ಬೇಯುವಷ್ಟರಲ್ಲಿ
ಹದಿನೆಂಟು ಮನಸು.

೩೮೦೬. ಹತ್ತರ ಬಡತನ ಹೋದೀತೇ ?

೩೮೦೭. ಹತ್ತರ ಕೂಡ ಹನ್ನೊಂದು
ಪರಸೇ ಕೂಡ ಗೋವಿಂದ.

೩೮೦೮. ಹತ್ತರ ಸಾವು ಮದುವೆಗೆ ಸಮಾನ.

೩೮೦೯. ಹತ್ತಿರಿದ್ದರೆ ಹೆಂಡತಿ, ಬಳಕಿದ್ದರೆ ಅಕ್ಕ,
ಒಳತು ಕೆಟ್ಟರೆ ಗೆಣೆಯ.

೩೮೧೦. ಹತ್ತರ ಹಲ್ಲಕಡ್ಡಿ ಒಬ್ಬನ ತಲೇ ಹೊರೆ.

೩೮೧೧. ಹತ್ತಿ ನೂಲಬೇಕು
ಮುತ್ತಯ್ದೆ ಹಾಡಬೇಕು.

೩೮೧೨. ಹತ್ತಿ ತೂಗುವಲ್ಲಿ ನೊಣಕ್ಕೆ ಉಪವಾಸ.

೩೮೧೩. ಹತ್ತಿಗೂ ಮುತ್ತಿಗೂ ಹಾಕಿದ ಹಣ
ಯಾತಕ್ಕೂ ಬಾರದು.

೩೮೧೪. ಹತ್ತು ಜುಟ್ಟು ಒಟ್ಟಿಗೆ ಇರಬಹುದು
ಎರಡು ತುರುಬು ಒಟ್ಟಿಗೆ ಇರಕೂಡದು.

೩೮೧೫. ಹತ್ತು ದುಡಿಯುವುದು ನನ್ನಿಂದ
ಮತ್ತೆ ಕಾಡುವುದು ನಿನ್ನಿಂದ.

೩೮೧೬. ಹತ್ತು ಮಂದಿಯ ಮಾತು ಮೀರಬೇಡ
ರಾಯರಿಗೆ ದೇವರಿಗೆ ಸುಳ್ಳು ಹೇಳಬೇಡ.

೩೮೧೭. ಹತ್ತುಮಂದಿಯ ಮಕ್ಕಳ ತಾಯಿಗೆ
ಸತ್ತ ಮಗುವಿನ ನೆನಪು ಹೋಗದು.

೩೮೧೮. ಹತ್ತುಮಂದಿಯ ತಾಯಿ
ಬೀದಿಲಿ ಬಿದ್ದು ಸತ್ತಳಂತೆ.

೩೮೧೯. ಹತ್ತು ಮಂದಿಯ ತಾಯಿ
ಹೊಳೇಲಿ ಬಿದ್ದ ನಾಯಿ.

೩೮೨೦. ಹತ್ತು ಹಡೆಯುವುದಕ್ಕಿಂತ
ಒಂದು ಮುತ್ತು ಹಡೆಯಬೇಕು.

೩೮೨೧. ಹತ್ತು ಹಣ ಹೋದರೂ ಮೃದಂಗ ಶಬ್ದ ನಿವರ್ತಿ ಆಯಿತು.

೩೮೨೨. ಹತ್ತು ಜನ ಎಂಬುವುದು ಮುತ್ತಿನ ಸಮಾನ.

೩೮೨೩. ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟಬೇಕು.

೩೮೨೪. ಹದ್ದು ಹಾರಲಿಕ್ಕೂ ಕೋವಿ ಹೊಡಲಿಕ್ಕೂ ಜೋಡು.

೩೮೨೫. ಹನಿ ಕೂಡಿದರೆ ಹಳ್ಳ
ತೆನೆ ಕೂಡಿದರೆ ಭತ್ತ.

೩೮೨೬. ಹನುಮನ ಮುಂದೆ ಹಾರೋ ಗುಬ್ಬಿಯೋ ?

೩೮೨೭. ಹನುಮಂತರಾಯ ಹಗ್ಗ ತಿಂದರೆ
ಪೂಜಾರಯ್ಯ ಸಣ್ಣ ಸಾವಿಗೆ ಬಯಸಿದನಂತೆ.

೩೮೨೮. ಹನ್ನೆರಡು ವರ್ಷ ರಾಮಾಯಣ ಕೇಳಿ
ರಾಮ ರಾಕ್ಷಸನೋ ರಾವಣ ರಾಕ್ಷಸನೋ ಎಂದು ಕೇಳಿದ ಹಾಗೆ.

೩೮೨೯. ಹನ್ನೆರಡು ವರ್ಷ ಸಾಧಕ ಮಾಡಿ
ಮನೆಯ ಮುದುಕೀ ಸೊಂಟ ಮುರಿದ ಹಾಗೆ.

೩೮೩೦. ಹನ್ನೊಂದು ಓದಿದ ಮೇಲೆ
ಇನ್ನೊಂದು ಕೇಳಬೇಡ.

೩೮೩೧. ಹಪ್ಪಳ ತಿಂಬುವವನಾದರೆ ಸಪ್ಪಳ ನುಂಗ್ಯಾನೆ ?

೩೮೩೨. ಹಪ್ಪಳಾ ಮುರಿಯೋಕೆ ದೊಗ್ಗಾಲು ಹಾಕಬೇಕೇ ?

೩೮೩೩. ಹಬೆಗೆ ತಾಳದೆ ಉರಿಯೊಳಗೆ ಬಿದ್ದನಂತೆ.

೩೮೩೪. ಹಬ್ಬ ಹಸನಾಗಿರಬೇಕು
ಹಾಲು ಉಳಿಯಬೇಕು.

೩೮೩೫. ಹಬ್ಬದ ಹೊತ್ತಿಗೆ ತಪ್ಪದೆ ಬಂದ.

೩೮೩೬. ಹಬ್ಬ ಊಟ, ಜಾತ್ರೆ ನೋಟ.

೩೮೩೭. ಹಬ್ಬ ತಪ್ಪಿದರೆ ಹೋಳಿಗೆ ತಪ್ಪೀತೇ ?

೩೮೩೮. ಹಬ್ಬದಲ್ಲಿ ಹಳೇ ಗಂಡನೇ ?

೩೮೩೯. ಹಬ್ಬದ ಊಟ, ಹರಿವಾಣದ ವೀಳ್ಯ.

೩೮೪೦. ಹಮ್ಮು ಮುರಿದ ಮೇಲೆ ಗುಮ್ಮನಾದ.

೩೮೪೧. ಹರ ತಿಂಬುವವನ ಬಳಿಗೆ
ತಿರಿದುಂಬುವವನು ಹೋದ ಹಾಗೆ.

೩೮೪೨. ಹರಕೆ ಕೊಟ್ಟರೂ ಹರಿಯೋದು ನಿಲ್ಲಲಿಲ್ಲ.

೩೮೪೩. ಹರಣ ಉಳಿಯೋದಾದರೆ ಮರಣಕ್ಕೆ ಅಂಜೆನು.

೩೮೪೪. ಹರದರ ವರಾತ ಎಂದು
ಹರವಿಯಲ್ಲಿ ತಲೆ ಅಡಗಿಸಿದ ಹಾಗೆ.

೩೮೪೫. ಹರದನ ಕುದುರೆಗೆ ಹರಕು ಜೀನ.

೩೮೪೬. ಹರವಿಯ ಅನ್ನದಲ್ಲಿ ಒಂದು ಅಗಳು ನೋಡಿದರೆ ಸರಿ.

೩೮೪೭. ಹರಸೋದು ತಪ್ಪೋದಿಲ್ಲ
ತಿರಿದುಂಬೋದು ಹೋಗೋದಿಲ್ಲ.

೩೮೪೮. ಹರಕಿನಲ್ಲಿ ಇಲಿ ಕಡಿಯಿತು.

೩೮೪೯. ಹರಿಯೋ ಪರಿಯಂತರ ಎಳೆಯಬಾರದು.
ಮುರಿಯೋ ಪರಿಯಂತರ ಬೊಗ್ಗಿಸಬಾರದು.

೩೮೫೦. ಹರೆಯಕ್ಕೆ ಹಂದಿ ಹಣವಡ್ಡ.

೩೮೫೧. ಹಲವರ ಸಂಗ ಕಲಹಕ್ಕೆ ಕಾರಣ.

೩೮೫೨. ಹಲವು ಸಮುಗಾರರು ಕೂಡಿ
ತೊಗಲು ಹದ ಕೆಡಿಸಿದರು.

೩೮೫೩. ಹಲವು ದೇವರನು ನಂಬಿ ಹಾರುವ ಕೆಟ್ಟ
ಹಾರುವಯ್ಯನನ್ನು ನಂಬಿ ಹಲವರು ಕೆಟ್ಟರು.

೩೮೫೪. ಹಲವು ಹಳ್ಳ ಕೂಡಿ ಒಂದು ಹೊಳೆಯಾಯಿತು.

೩೮೫೫. ಹಲಸು ತಿಂದರೆ ಹೊಲಸು ಹೋದೀತೇ ?

೩೮೫೬. ಹಲ್ಲಿದ್ದ ಮಾತ್ರಕ್ಕೆ ಕಲ್ಲು ಸುರಿದೀತೇ ?

೩೮೫೭. ಹಲ್ಲಿಗೆ ಹರಿಯದ ಮೂಳೆ
ಹತ್ತು ರುಪ್ಪಿಯ ಮಸಾಲೆ ಕೆಡಿಸಿತು.

೩೮೫೮. ಹಲ್ಲು ಇರುವಾಗಲೇ ಕಡ್ಲೆ ತಿನ್ನಬೇಕು.

೩೮೫೯. ಹಲ್ಲು ಕಚ್ಚಿಕೊಂಡು ಅವಲಕ್ಷಣ ಎನ್ನಿಸಿಕೊಂಡ.

೩೮೬೦. ಹಲ್ಲುಗಳ ನಡುವೆ ನಾಲಿಗೆ ಸಿಕ್ಕಿರುವ ಹಾಗೆ.

೩೮೬೧. ಹಲ್ಲು ಹೋದ ಮೇಲೆ
ಕಲ್ಲು ಜಗದೇನು ಅಂದ ಹಾಗೆ.

೩೮೬೨. ಹಲ್ಲುಬ್ಬಿ ನಕ್ಕರೂ ಕಾಣಬಾರದು
ಅತ್ತರೂ ಕಾಣಬಾರದು.

೩೮೬೩. ಹವುದೆಂದರೆ ಬಯ್ಯುತ್ತಾನೆ
ಅಲ್ಲೆಂದರೆ ಹೊಡಿಯುತ್ತಾನೆ.

೩೮೬೪. ಹಸಲಿಗೆ ಬಂಡಾಟ, ಲಾಭಕ್ಕೆ ಮಲ್ಲಾಟ.

೩೮೬೫. ಹಸಿ ಗೋಡೆಗೆ ಕಲ್ಲು ಹೊಡದ ಹಾಗೆ.

೩೮೬೬. ಹಸಿ ಬಿಸಿ ತಿನ್ನಲಿಕ್ಕೆ ಮನಸೇ ಪ್ರಧಾನ.

೩೮೬೭. ಹಸಿದ ಕೋಳಿಯ ಮುಂದೆ ಕಾಳು ಒದಗಿತು.

೩೮೬೮. ಹಸಿದ ಬೆಕ್ಕು ಹತ್ತಿಗೆ ಜಪ್ಪಿಸಿತು.

೩೮೬೯. ಹಸಿದ ಹಾರವನನ್ನು ತೊಡಗಬಾರದು
ಉಂಡ ತುರುಕನನ್ನು ತೊಡಗಬಾರದು.

೩೮೭೦. ಹಸಿದು ಹಣ್ಣು ತಿನ್ನು, ಉಂಡು ಕಬ್ಬು ತಿನ್ನು.

೩೮೭೧. ಹಸಿದು ಹಲಸು, ಉಂಡು ಮಾವು.

೩೮೭೨. ಹಸಿದು ಹೊಟ್ಟೆ ತೋರಿದರೆ
ಮಸೆದು ಕತ್ತಿ ತೋರಿಸಿದ.

೩೮೭೩. ಹಸಿವೆಗೆ ಬಾಯ್ಸವಿ ಬೇಡ
ನಿದ್ದೆಗೆ ಹಾಸಿಗೆ ಬೇಡ.

೩೮೭೪. ಹಸುರು ಹುಲ್ಲು ತಿನ್ನುವವಗೆ ಮೊಸರನ್ನ ಆಗದೇ!

೩೮೭೫. ಹಸ್ತದ ಗುಣ ಸ್ವಸ್ತವಾದ ಮೇಲೆ ನೋಡಬೇಕು.

೩೮೭೬. ಹಸ್ತಾಂತ್ರ ಬಾಕಿಯಾದರೆ
ಪುಸ್ತಕ ಏನು ಮಾಡೀತು.

೩೮೭೭. ಹಳದು ಮೀರಿ ಹೊಸದಿಲ್ಲ
ಬಿಳಿದು ಮೀರಿ ಬಣ್ಣವಿಲ್ಲ.

೩೮೭೮. ಹಳೆಯೆತ್ತು ಹೊರೆಯಲ್ಲಿ ಹೂಡಿ ನೋಡು.

೩೮೭೯. ಹಳ್ಳಿ ಹಾಳಾದರೇನು ? ಡಿಳ್ಳಿ ಪುಸ್ನಾದರೇನು ?

೩೮೮೦. ಹಳ್ಳೀ ಗವುಡನಿಗೆ ಹುಳ್ಳಿ ಕಜ್ಜಾಯ.

೩೮೮೧. ಹಳ್ಳೀ ಕುರುಬರಿಗೆ ಗಾಜೇಸ್ತ್ರಿಮಾಣಿಕ್ಯ.

೩೮೮೨. ಹಳ್ಳೀ ದೇವರಿಗೆ ಕೊಳ್ಳಿಯೇ ದೀಪ.

೩೮೮೩. ಹಾಕಿದ ಪಂತಕ್ಕೂ ಆಡಿದ ಜುಗಾರಿಗೂ ಅಂತರವಿಲ್ಲ.

೩೮೮೪. ಹಾಕುವುದಕ್ಕೆ ತೆಗೆಯುವುದಕ್ಕೆ
ಗವುಡನ ಕೋಳವೇ ?

೩೮೮೫. ಹಾಗಲವಾಡಿಗೆ ಹೋದರೆ ಗೀದರೆ
ಹಾಗಕ್ಕೊಂದೆಮ್ಮೆ ತಂದರೆ ಗಿಂದರೆ
ನಿಮ್ಮವರಿಗೆ ಮಜ್ಜಿಗೆ ಕೊಟ್ಟೇಯಾ ?

೩೮೮೬. ಹಾಗಲವಾಡಿ ಸಂಸ್ಥಾನದ ಹಾಗೆ.

೩೮೮೭. ಹಾಗದ ಕೋತಿ ಮುಪ್ಪಾಗದ ಬೆಲ್ಲ ತಿಂತು.*

೩೮೮೮. ಹಾಗೆ ಕುಣಿಯುವ ಬಡ್ಡಿ
ಹರೆಯಕ್ಕೆ ಬಂದರೆ ಬಿಟ್ಟಾಳೇ ?

---

* ಹಾಗಧ ಕೋಳಿ ಮುಪ್ಪಾಗದ ಮೇವು ತಿಂತು.

೩೮೮೯. ಹಾಡಲಿಕ್ಕೆ ತಿಳಿಯದಿದ್ದರೆ ಓಡಲಿಕ್ಕೂ ತಿಳಿಯದೇ ?

೩೮೯೦. ಹಾಡಿ ಹಾಡಿ ದಾಸಯ್ಯ ಅಡಿ ಮುಚ್ಚಿಕೊಂಡು ಆಚೆ ಹೋಗು.

೩೮೯೧. ಹಾಡಿದ್ದೇ ಹಾಡೋ ಕಿಸಬಾಯಿದಾಸ.

೩೮೯೨. ಹಾಡುವವರೆಗೂ ಹಾಡು
ಕಡೇಲಿ ಕದಾ ಮುಚ್ಚಿಕೊಂಡು ಹೋಗು.

೩೮೯೩. ಹಾಡುತ್ತಾ ಹಾಡುತ್ತಾ ರಾಗ
ಉಗುಳುತ್ತಾ ಉಗುಳುತ್ತಾ ರೋಗ.

೩೮೯೪. ಹಾಡೋ ತಮ್ಮ, ಹೂಡೋ ಬೊಮ್ಮ.

೩೮೯೫. ಹಾದರಕ್ಕೆ ಹುಟ್ಟಿದ ಮಗ ಹೊಯ್ಲಿಗೆ ಬಿದ್ದು ಸತ್ತ.

೩೮೯೬. ಹಾದರಗಿತ್ತಿಯ ಕರೆ ಹಂದರದೊಳಗೆ
ಗರ್ತಿಯ ಕರೆ ಪತ್ರಾವಳಿ ತೆಗೆಯುವುದಕ್ಕೆ.

೩೮೯೭. ಹಾದರಗಿತ್ತಿಗೆ ಹದಿನೆಂಟು ಹೆಸರು.

೩೮೯೮. ಹಾದರಗಿತ್ತಿಯ ಕಾಲು ಹಸೇ ಮೇಲೆ ನಿಲ್ಲದು.

೩೮೯೯. ಹಾದಿ ಜಗಳ ಹಣವಡ್ಡ
ಬೀದೀ ಜಗಳ ಮುಪ್ಪಾಗ.*

೩೯೦೦. ಹಾದಿಯಲ್ಲಿ ಹೋಗುವವನನ್ನು ಅಪ್ಪ ಅಂದರೆ
ನೀನು ಯಾರಿಗೆ ಹುಟ್ಟಿದಿ ಮಗನೆ ಅಂದ ಹಾಗೆ.

---

* ಹಾದಿ ಜಗಳವನ್ನು ಹಣವಡ್ಡಕ್ಕೆ ಕೊಂಡರು.

೩೯೦೧. ಹಾದಿ ಹೋಕನ ತಲೆ
ಕಟ್ಟಿ ದೇವರಿಗೆ ಪೂಜೆ.

೩೯೦೨. ಹಾರುವಯ್ಯನ ಸಂಗ ಹಲವಂಗ.

೩೯೦೩. ಹಾರುವರ ಮನೇಲಿ ಹರಿಸೇವೆ ಆದರೆ
ಮೂಳ ನಾಯಿಗೆ ಓಡ್ಯಾಟ.

೩೯೦೪. ಹಾರುವನಿಗೆ ಆಳಾಗಬೇಡ
ಗಾಣಿಗನಿಗೆ ಎತ್ತಾಗಬೇಡ.

೩೯೦೫. ಹಾರುವನ ಬದುಕು ಮಗನಿಗೆ
ಸೆಟ್ಟಿಯ ಬದುಕು ಅಳಿಯನಿಗೆ.

೩೯೦೬. ಹಾರುವನ ಮೋರೆಂಯಾದರೂ
ನೀರಿನಿಂದ ತೊಳೆಯದಿದ್ದರೆ ನಾರದೆ ಇದ್ದೀತೇ ?

೩೯೦೭. ಹಾರುವನಿಂದ ಊರು ಹಾಳು
ಏಡಿಯಿಂದ ಕೆರೆ ಹಾಳು.

೩೯೦೮. ಹಾರುವ ಮಾಡುವುದು ಪಿಂಡಕ್ಕೆ
ಹೊಲೆಯ ಮಾಡುವುದು ಹೆಂಡಕ್ಕೆ.

೩೯೦೯. ಹಾರುವನ ಬೊಟ್ಟು ಹರಬಾರಿ ದೂರ.

೩೯೧೦. ಹಾರುವರ ಮನೆ ಬೋನಗಿತ್ತಿಗೆ ನೀರೇ ದಿಬ್ಬಣ.

೩೯೧೧. ಹಾರುವ ಕಾಗೆ ಹೋರ್ಯಾಡಲಿಕ್ಕೆ ಬಲ್ಲಿತೇ ?

೩೯೧೨. ಹಾರುವ ಗುಬ್ಬಿಗೆ ಗೋದಿಕಲ್ಲು ಕಟ್ಟಿದ ಹಾಗೆ.

೩೯೧೩. ಹಾರೆ ಮೋಟು, ಗುದ್ದಲಿ ಬೊಡ್ಡು
ಗೆಯ್ಯುವವಗೆ ಒಕ್ಕಯ್.

೩೯೧೪. ಹಾರೇ ಕೆಲಸ ನನ್ನಿಂದ ಎಡೆಯ
ಉದ್ದಿನ ದೋಸೆಗೆ ನಾನು ಒಡೆಯ.

೩೯೧೫. ಹಾಲಕ್ಕಿ ಆದರೆ ಹಾಲು ಕರದೀತೇ ?

೩೯೧೬. ಹಾಲಿಗಿಂತ ಕೆನೆ ರುಚಿ.

೩೯೧೭. ಹಾಲಿದ್ದಾಗಲೇ ಹಬ್ಬಮಾಡು.

೩೯೧೮. ಹಾಲು ಕಂಡಲ್ಲಿ ಬೆಕ್ಕು
ಕೂಳು ಕಂಡಲ್ಲಿ ನಾಯಿ.

೩೯೧೯. ಹಾವಡಿಗನಿಗೆ ಹಾವಿನಿಂದಲೇ ಮರಣ

೩೯೨೦. ಹಾವಿಗೆ ಹಾಲೆರೆದರೆ ವಿಷ ಬಿಟ್ಟೀತೇ ?

೩೯೨೧. ಹಾವಿನ ಕೂಡೆ ಕಪ್ಪೆಗೆ ಸರಸವೇ ?

೩೯೨೨. ಹಾವಿನ ಹೆಜ್ಜೇ ಹಾವೇ ಬಲ್ಲದು.

೩೯೨೩. ಹಾವು ಕೊಂದು ಹದ್ದಿನ ಮುಂದೆ ಹಾಕಿದ ಹಾಗೆ.

೩೯೨೪. ಹಾವು ಕಚ್ಚಿದಲ್ಲಿ ಹಳೆ ಬಟ್ಟೆ ಒರಸಿದರೆ ಹೋದೀತೇ ?

೩೯೨೫. ಹಾವು ಕಚ್ಚಿ, ಬರೆ ಬಾಯಿ.

೩೯೨೬. ಹಾವು ಮುಪ್ಪಾದರೆ ವಿಷ ಮುಪ್ಪೇ ?

೩೯೨೭. ಹಾವು ಹಡದವ್ವ ಬೇಲಿ ಹೊಕ್ಕಳು.

೩೯೨೮. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು.

೩೯೨೯. ಹಾಸಿಗೆ ಹಾಸಲಿಕ್ಕೆ ತಿಳಿಯದಿದ್ದವಳು
ದೋಸೆ ಮಾಡ್ಯಾಳೇ ?

೩೯೩೦. ಹಾಳತ ತಿಳಿಯದ ಕೆಲಸಕ್ಕೆ
ಮಾಳಪ್ಪ ಏನು ಮಾಡ್ಯಾನು ?

೩೯೩೧. ಹಾಳು ತೋಟಕ್ಕೆ ನೀರು ಹಾಕಿ
ಬೀಳುರಟ್ಟೆ ಬಿದ್ದು ಹೋಯಿತು.

೩೯೩೨. ಹಾಳೂರಿಗೆ ಬೋಳು ಸುತ್ತಿಗೆ.

೩೯೩೩. ಹಾಳೂರಿಗೆ ಉಳಿದವನೇ ಗೌಡ.

೩೯೩೪. ಹಿಗ್ಗಿದವ ಮುಗ್ಗ್ಯಾನು, ತಗ್ಗಿದವ ಜಯ್ಸ್ಯಾನು.

೩೯೩೫. ಹಿಡಿದದು ತಪ್ಪದು, ಮುಟ್ಟಿದದು ಮುರಿಯಿತು.

೩೯೩೬. ಹಿಡಿಯುವುದಕ್ಕೆ ಪಟ್ಟಿಲ್ಲ
ನಿಲ್ಲುವುದಕ್ಕೆ *ನೆಲವಿಲ್ಲ.*

೩೯೩೭. ಹಿಡಿತಂದ ನಾಯಿ ಮೊಲ ಹಿಡಿದೀತೇ ?

೩೯೩೮. ಹಿಡಿ ಕಾಳಿಗೆ ಆಡಿ
ಪಡಿ ಕಾಳು ಕಳಕೊಂಡ.

೩೯೩೯. ಹಿಡಿ ತುಂಬ ಹಣ ಕೊಟ್ಟರೂ
ನುಡಿ ಹಸನಾಗಿರಬೇಕು.

೩೯೪೦. ಹಿಡಿಹೆಬ್ಬಾರನ ಕಾಲು ಹಿಡಿದಷ್ಟು ಗಾತ್ರ.

---

* ಕೊನೆಯಿಲ್ಲ.

೩೯೪೧. ಹಿತ್ತಲ ಗಿಡ ಮದ್ದಲ್ಲ
ಮಕ್ಕಳ ಮಾತು ನಿಜವಲ್ಲ.

೩೯೪೨. ಹಿಮ್ಮಡಿಯ ಗೂಟ ಕಟ್ಟುವ ಸೂತ್ರ.

೩೯೪೩. ಹಿಮ್ಮೇಳ ಇದ್ದರೆ ಮುಮ್ಮೇಳ
ಇಲ್ಲದಿದ್ದರೆ ಸಮ್ಮೇಳ.

೩೯೪೪. ಹಿರಿಯಕ್ಕನ ಚಾಳಿ ಮನೇ ಮಕ್ಕಳಿಗೆಲ್ಲ.

೩೯೪೫. ಹಿರೆ ಹೆಂಡತಿ ಒಳ್ಳೆಯವಳೆಂದರೆ
ಕಿರಿಯವಳು ಕೆಟ್ಟವಳೆಂದು ಹೇಳಬೇಕಾ?

೩೯೪೬. ಹೀಗೇ ಬಾಯಾಡಿಸುವವಳು
ಅವಲಕ್ಕೀಕಾಳು ಕಂಡರೆ ಬಿಟ್ಟಾಳೇ?

೩೯೪೭. ಹೀನನ ಸಂಗ ಮಾನಿಗೆ ಆಗದು
ಮಾನಿಯ ಸಂಗ ಹೀನಗೆ ಆಗದು.

೩೯೪೮. ಹುಗ್ಗಿ ತಿಂದಾಕ್ಷಣ ಮಗ್ಗಿ ಬಂದ ಹಾಗಾಯಿತೇ?

೩೯೪೯. ಹುಚ್ಚಲ್ಲ ಬೆಪ್ಪಲ್ಲ ಶಿವಲೀಲೆ.

೩೯೫೦. ಹುಚ್ಚ ಹೋದದ್ದೇ ದಾರಿ.

೩೯೫೧. ಹುಚ್ಚಗೆ ನಚ್ಚ ಬಾರದು
ಪಚ್ಚಕ್ಕೆ ಕೊರತೆ ಬಾರದು.

೩೯೫೨. ಹುಚ್ಚಿಗೆ ಬೆಚ್ಚಿ ಕಿಚ್ಚಿಗೆ ಬಿದ್ದ.

೩೯೫೩. ಹುಚ್ಚು ಹೋಗದೆ ಮದಿವೆ ಆಗದು
ಮದಿವೆ ಆಗದೆ ಹುಚ್ಚು ಹೋಗದು.

೩೯೫೪. ಹುಚ್ಚು ಹೋಯಿತು ಒನಕೆ ತಾ ಅಂದ.

೩೯೫೫. ಹುಚ್ಚು ಮುಂಡೇ ಪ್ರಯಾಣ ಅವಲಕ್ಕೀ ಕೇಡು.

೩೯೫೬. ಹುಟ್ಟಲ್ಲ ಸತ್ತಿಲ್ಲ ಸುಡುಗಾಡು ಕಂಡಿಲ್ಲ
ದುಕ್ಕ ಹ್ಯಾಗೆ ತಿಳಿದೀತು.

೩೯೫೭. ಹುಟ್ಟಿದ್ದು ಹೊಲೆಯೂರು, ಬೆಳೆದದ್ದು ಮೊಲೆಯೂರು
ಇದ್ದದ್ದು ಈ ಊರು, ಎದ್ದದ್ದು ಕಾಡೂರು.

೩೯೫೮. ಹುಟ್ಟಿದಾಗ ಅಣ್ಣತಮ್ಮ, ಬೆಳೆದಾಗ ದಾಯಾದಿ.

೩೯೫೯. ಹುಟ್ಟುವಾಗ ಬತ್ತಲೆ, ಸಾಯುವಾಗ ಕತ್ತಲೆ.

೩೯೬೦. ಹುಟ್ಟುತ್ತಲೆ ನನ್ನ ಮಗ ಉಡಿ ಗೆಜ್ಜೆ ಕದ್ದ.

೩೯೬೧. ಹುಟ್ಟು ಕುರುಡಗೆ ಸ್ವಪ್ನವಿಲ್ಲ
ಮಟ್ಟ ತಿಳಿದವಗೆ ರೋಗವಿಲ್ಲ.

೩೯೬೨. ಹುಟ್ಟು ಕುರುಡ ಹಾಲು ತಿಳುಕೊಂಡ ಹಾಗೆ.

೩೯೬೩. ಹುಟ್ಟು ಕುರುಡ ಹಾಳು ಬಾವೀಲಿ ಬಿದ್ದಹಾಗೆ.

೩೯೬೪. ಹುಟ್ಟು ಗುಣ ಬಿಟ್ಟು
ಕೊಟ್ಟ ಗುಣ ಬಂದೀತೇ?

೩೯೬೫. ಹುಟ್ಟು ಚಾಳಿ ಗಟ್ಟ ಹತ್ತಿದರೂ ಬಿಡದು.

೩೯೬೬. ಹುಟ್ಟು ಬುದ್ಧಿ ಸುಟ್ಟಲ್ಲದೇ ಹೋಗದು.

೩೯೬೭. ಹುಟ್ಟು ಮನೆ ಏಕಾದಶಿ
ಕೊಟ್ಟ ಮನೆ ಗೋಕುಲಾಷ್ಟಮಿ.

೩೯೬೮. ಹುಟ್ಟು ಇರುವಾಗ ಕೈಸುಟ್ಟು ಕೊಳ್ಳಬೇಕೇ ?

೩೯೬೯. ಹುಟ್ಟು ಕೋಲುಕಾರನದು
ಕಟ್ಟು ಸಾವಕಾರನದು.

೩೯೭೦. ಹುಡುಗ ನೆಂಟನಲ್ಲ, ಹುಲ್ಲು ಬೆಂಕಿಯಲ್ಲ.

೩೯೭೧. ಹುಡುಗ ಮಿಂಡನಲ್ಲ, ಗಿಡಗ ಪಕ್ಷಿಯಲ್ಲ.

೩೯೭೨. ಹುಡುಗ ಗಂಡನಲ್ಲ, ಗುಡ್ಲು ಮನೆಯಲ್ಲ.

೩೯೭೩. ಹುಣಿಸೆ ಮುಪ್ಪಾದರೆ ಹುಳಿ ಮುಪ್ಪೇ ?

೩೯೭೪. ಹುಣ್ಣು ಮಾದರೂ ಹುಣ್ಣಿನ ಕಲೆ ಮಾದೀತೇ ?

೩೯೭೫. ಹುಣ್ಣು ಮಾಯಬೇಕು
ಕಣ್ಣು ಬೆಳಗಬೇಕು.

೩೯೭೬. ಹುತ್ತ ಬಡಿದರೆ ಹಾವು ಸಾಯುವುದೇ ?

೩೯೭೭. ಹುಬ್ಬೇ ಮಳೆ ಅಬ್ಬೇ ಹಾಲು.

೩೯೭೮. ಹುರಿಯಲಿಕ್ಕೆ ಜೋಳವಿಲ್ಲ
ಹೂಡೇವು ಕಟ್ಟಿಸಲಿಕ್ಕೆ ಓಡ್ಯಾಡುತ್ತಿದ್ದ.

೩೯೭೯. ಹುರುಳೀ *ಹಾಲಿಗೆ* ಬಂದವಗೆ
† ಕುದುರೆ ಬೆಲೆ ಯಾಕೆ ?†

೩೯೮೦. ಹುರುಳೀ ತಿನ್ನುವವನಿಗೆ
ಕಂಠ ಹಿಡಿಯುವವರು ಮೂರು ಮಂದಿ.

---

* (i) ಕಟ್ಟಿಗೆ. (ii) ಸಾರು.
† ಕುದುರೆ ಕ್ರಯ ಕೇಳಿದ ಹಾಗೆ.

೩೯೮೧. ಹುಲಿ ಮರಿ ಹುಲ್ಲು ಮೇದೀತೇ !

೩೯೮೨. ಹುಲಿ ಕೂಡ ನರಿಗೆ ಸೆಣಸಾಟವೇ ?

೩೯೮೩. ಹುಲೀ ಬಣ್ಣಕ್ಕೆ ನರಿ ಮೈಸುಟ್ಟುಕೊಂಡ ಹಾಗೆ.

೩೯೮೪. ಹುಲ್ಲಿನ ಉರಿ ಕನಸಿನ ಸಿರಿ ನಿಲ್ಲದು.

೩೯೮೫. ಹುಲ್ಲು ಕೊಡವಿದವ ಉಂಡು ಬಂದ
ಗೋಣಿ ಕೊಡವಿದವ ಹಸಿದು ಬಂದ.

೩೯೮೬. ಹುಸಿ ಹೇಳಿದರೂ ಹಸನಾಗಿರಬೇಕು.

೩೯೮೭. ಹುಳ ತಿಂದ ಅಕ್ಕಿ ಆದರೆ
ಮಳೆಗೆ ನೆನೆಯದೇ ?

೩೯೮೮. ಹುಳಿಸಾರು ಮಾಡದವ ನಳಪಾಕ ಮಾಡ್ಯಾನೇ ?

೩೯೮೯. ಹೂಡಲಿಕ್ಕೆ ತಿಳಿಯದಿದ್ದರೆ ನೋಡಲಿಕ್ಕು ತಿಳಿಯದೇ ?

೩೯೯೦. ಹೂಡಿದರೆ ಒಲೆ, ಮಾಡಿದರೆ ಮನೆ,
ಕೂಡಿದರೆ ಗಂಡ.

೩೯೯೧. ಹೂಡುವ ಎತ್ತು ಕೊಟ್ಟು
ಆಡುವ ಹೋರಿ ತಂದ.

೩೯೯೨. ಹೂ ಮಾರಿದ ಅಂಗಡಿಯಲ್ಲಿ ಹುಲ್ಲು ಮಾರಿದಂತೆ.

೩೯೯೩. ಹೂ ಮಾರಿದ ಊರಲ್ಲಿ ಹುರಿ ಮಾರಬಾರದು.

೩೯೯೪. ಹೂವಿನಿಂದ ನಾರು ಸ್ವರ್ಗಕ್ಕೆ ಹೋಯಿತು.

೩೯೯೫. ಹೂವಿನಿಂದ ನಾರು ಮಂಡೆಯ ಮೇಲೆ.

೩೯೯೬. ಹೂವಿಗೆ ಬಡತನವಾದರೆ
ಹೂಸಿಗೆ ಬಡತನವಿಲ್ಲ.

೩೯೯೭. ಹೂಸದಿದ್ದರೆ *ಹೂ ಮುಡಿಸಿದ್ದಕ್ಕಿಂತ ಹೆಚ್ಚು.*

೩೯೯೮. ಹೂಸಿದ್ದಲ್ಲದೇ ನಾರದು.

೩೯೯೯. ಹೂಸಿದವಳು ಯಾರಂದರೆ
ಮೂಸಿದ ಬಟ್ಟೆಯವಳೇ ಅಂದ ಹಾಗೆ.

೪೦೦೦. ಹೆಗ್ಗಣ ಪರದೇಶಕ್ಕೆ ಹೋದರೂ
ನೆಲಾ ಕೊರೆಯೋದು ಬಿಡದು.

೪೦೦೧. ಹೆಗ್ಗಳ್ಳ ಎತ್ತಿಗೆ ಹರಿ ಎಂದದ್ದು ಒಂದೇ ಸೊನ್ನೆ.

೪೦೦೨. ಹೆಗ್ಗೊಂಬಾದರೂ ನುಗ್ಗೆ ಮರದ್ದಾಗದು.

೪೦೦೩. ಹೆಚ್ಚಿದ ಪಲ್ಯಕ್ಕೆ ನುಚ್ಚಿನ ಅನ್ನವೇ ?

೪೦೦೪. ಹೆಡ್ಡನಾದರೂ ದೊಡ್ಡವನೇ ಲೇಸು.

೪೦೦೫. ಹೆಡ್ಡಾಳಾದರೂ ಒಡ್ಡಾಳಾಗಿರಬೇಕು.

೪೦೦೬. ಹೆಣ ಸುಟ್ಟರೂ ರುಣ ಸುಡಲಿಲ್ಲ.

೪೦೦೭. ಹೆಣ ಹೊರುವವನಿಗೆ ರೋಮ ಬಾಧಿಯೇ ?

೪೦೦೮. ಹೆಣದವರು ಹೆಣಕ್ಕೆ ಅತ್ತರೆ
ಕೊರವ ದುಡ್ಡಿಗೆ ಅತ್ತ.

---

* ಹೂ ಕೊಟ್ಟಷ್ಟು ಫಲ.

೪೦೦೯. ಹೆಣ್ಣಾದರೇನು ಮಣ್ಣಾದರೇನು
ಪುಣ್ಯ ವಿನಹಾ ಸಿಕ್ಕದು.

೪೦೧೦. ಹೆಣ್ಣಿಗೆ ಇಟ್ಟ ಬಂಗಾರ
ಗೋಡೆಗೆ ಹಚ್ಚಿದ ಸುಣ್ಣ.

೪೦೧೧. ಹೆಣ್ಣಿನ ನೆಲೆ ಕುದುರೆಯ ನೆಲೆ ಯಾರಿಗೂ ಗೊತ್ತಿಲ್ಲ.

೪೦೧೨. ಹೆಣ್ಣು ದೂರದಿಂದ ತರಬೇಕು
ದನ ಹತ್ತಿರದಿಂದ ತರಬೇಕು.

೪೦೧೩. ಹೆಣ್ಣು ಬೊಮ್ಮಣ್ಣನಿಗೆ
ಅಪರಾಧ ತಿಮ್ಮಣ್ಣನಿಗೆ.

೪೦೧೪. ಹೆಣ್ಣು ಹಡದವನ ಮನೆ ತಣ್ಣಗೆ
ಗಂಡು ಹಡದವನ ಮನೆ ನುಣ್ಣಗೆ.

೪೦೧೫. ಹೆಣ್ಣು ಸೊಕ್ಕಿದರೆ ಮನೆಯಲ್ಲಿ ನಿಲ್ಲದು
ಎತ್ತು ಸೊಕ್ಕಿದರೆ ಹಟ್ಟಿಯಲ್ಲಿ ನಿಲ್ಲದು.

೪೦೧೬. ಹೆಣ್ಣು ಕೊಟ್ಟಿಯೋ? ಬೆನ್ನು ಕೊಟ್ಟಿಯೋ?

೪೦೧೭. ಹೆಣ್ಣು ಒಳ್ಳೇದೆ ಸರಿ
ಕಣ್ಣು ಮಾತ್ರ ಕಾಣುವುದಿಲ್ಲ.

೪೦೧೮. ಹೆಣ್ಣು ಹೆತ್ತು ತಿಳಿಯಬೇಕು
ಗಂಡು ತೆತ್ತು ತಿಳಿಯಬೇಕು.

೪೦೧೯. ಹೆಣ್ಣು ಮಕ್ಕಳಿಗೆ ಹಾಡ ಕಲಿಸಿದವರಿಲ್ಲ
ನಾಯಿಗೆ ಬೊಗಳ ಕಲಿಸಿದವರಿಲ್ಲ.

೪೦೨೦. ಹೆತ್ತವಳಿಗೆ ಹೆಗ್ಗಣ ಮುದ್ದು
ಕೂಡಿದವಳಿಗೆ ಕೋಡಗ ಮುದ್ದು.

೪೦೨೧. ಹೆತ್ತಯ್ಯಗೆ ಅರಿಯದವ ಮುತ್ತಯ್ಯಗೆ ಬಲ್ಲನೇ ?

೪೦೨೨. ಹೆತ್ತವರಿಗೆ ಮಕ್ಕಳು, ಬಿತ್ತಿದವರಿಗೆ ಬೆಳೆ
ಎತ್ತಿದಕ್ಕನ ಕೈ ಬರಿಗೈ.

೪೦೨೩. ಹೆತ್ತ ತಾಯಿಾನ ತಿಂಬುವವಳು ಅತ್ತಿಗೆ ಬಿಟ್ಟಾಳೇ ?

೪೦೨೪. ಹೆತ್ತಾತೆಯ ಹೊಟ್ಟೆ ಉರಿದರೆ
ನೆರಮನೆಯಾತೆಯ ಒಲೆ ಉರಿಯಿತು.

೪೦೨೫. ಹೆಪ್ಪು ಹಾಕಲಿಕ್ಕೆ ತಿಳಿಯದವಳು
ಮೊಸರು ಕಡದಾಳೇ ?

೪೦೨೬. ಹೆಮ್ಮೆಯವನಿಗೆ ಒಮ್ಮಾನಕ್ಕಿಯೂ ದೊರಕದು.

೪೦೨೭. ಹೆರರ ಜುತ್ತಿಗೆ ಉಳ್ಳಿಗಡ್ಡೆ ಸುಲಿದಂತೆ.

೪೦೨೮. ಹೆರರ ಬಾಯಲ್ಲಿಕ್ಕುವದ
ತನ್ನವರ ಕುಂಡೇಲಿಕ್ಕಿದಂತೆ.

೪೦೨೯. ಹೆರಲಾರದವಳು ಹೆತ್ತರೆ ಮನೆಯೆಲ್ಲಾ ಹೇಲು.

೪೦೩೦. ಹೆರೆಯಲಿಕ್ಕಿಲ್ಲವೆಂದು
ಗೊರಟೆ ಹೆರದ ಹಾಗೆ.

೪೦೩೧. ಹೆರೆಗೆ ಹೆದರಿದವ ಹಾವಿಗೆ ಹೆದರನೇ ?

೪೦೩೨. ಹೆಸರು ಕಾಳಿಗೆ ಮುಂಡ ಮೋಚಿಕೊಂಡ ಹಾಗಾಯಿತು.

೪೦೩೩. ಹೆಸರು ಮಾತ್ರ ಕ್ಷೀರಸಾಗರ ಭಟ್ಟರು
ಮನೆಯಲ್ಲಿ ಮಜ್ಜಿಗೇ ನೀರಿಗೆ *ತತ್ವಾರ*

೪೦೩೪. ಹೆಳವನಿಗೆ ಭಾಗೀರಥಿಯೋ
ಕಳುವವನಿಗೆ ಅರಮನೆಯೋ ?

೪೦೩೫. ಹೆಳವ ಹೆಮ್ಮರದ ಹಣ್ಣು ಬಯಸಿದರೆ
ಗಾಳಿ ಗುದ್ದಿ ಮೈನೋಯಿಸಿಕೊಂಡ.

೪೦೩೬. ಹೇಡಿಯ ಬೆನ್ನು ಕಟ್ಟಲು ಸಲ್ಲ
ಹೇಸಿಯ ನಿಬ್ಬಣಕ್ಕೆ ಹೋಗಲು ಸಲ್ಲ.

೪೦೩೭. ಹೇಡಿ ಯುದ್ಧಕ್ಕೆ ಹೋಗ
ಖೋಡಿ ಕೆಲಸಕ್ಕೆ ಹೋಗ.

೪೦೩೮. ಹೇತುವಿಲ್ಲದೆ ಮಾತು ಬಾರದು.

೪೦೩೯. ಹೇನು ಕುಕ್ಕುವುದಕ್ಕೆ ಅಂಬು ಬೇಕೇ ?

೪೦೪೦. ಹೇನು ಬೆಳದರೆ ಆನೆ ಆದೀತೇ ?

೪೦೪೧. ಹೇಮವಿಲ್ಲದಿದ್ದರೆ ಕಾಮಕ್ಕೆ ಕಡಿಮೆಯೇ ?

೪೦೪೨. ಹೇರು ನುಂಗುವವ ಸೇರು ಬಿಟ್ಟಾನೇ ?

೪೦೪೩. ಹೇರು ಒಪ್ಪಿಸಿದ ಮೇಲೆ
ಸುಂಕ ಕೇಳುವುದೇನು ?

೪೦೪೪. ಹೇಲು ಅಲ್ಲ ಭಟ್ಟ ಹೇತದ್ದು.

೪೦೪೫. ಹೇಲು ಬಂದರೆ ಹುಲಿಗೆ ಹೆದರ.

---

* ಗೊಟ್ಟು.

೪೦೪೬. ಹೇಲೂಕೆ ಕೂತರೆ ಹಂದಿ ಕಾಟ.

೪೦೪೭. ಹೇವಗೇಡಿಗಳಿಗೆ ವಾವಿಯೇನು ? ವರಸೆಯೇನು ?

೪೦೪೮. ಹೇಸಿಯ ಪಾಪ ಸಂನ್ಯಾಸಿಗೆ ಹತ್ತಿತು.

೪೦೪೯. ಹೇಸಿ ಮೈಲಿಗೆಗೆ ಅಂಜಳು
ನಾಸಿ ನಾಚಿಕೆಗೆ ಅಂಜಳು.

೪೦೫೦. ಹೇಳಿದರೆ ತಾಯಿ ಸಾಯುತ್ತಾಳೆ
ಹೇಳದಿದ್ದರೆ ತಂದೆ ನಾಯಿ ತಿನ್ನುತ್ತಾನೆ.

೪೦೫೧. ಹೇಳಿಕೆ ಮಾತಿಗೆ ಧರ್ಮರಾಯ ಮುನಿದ.

೪೦೫೨. ಹೇಳಿಕೊಟ್ಟ ಬುದ್ಧಿ, ಕಟ್ಟಿಕೊಟ್ಟ ಬುತ್ತಿ
ಎಲ್ಲಿತನಕ ಬರುವುದು.

೪೦೫೩. ಹೇಳಿಕೊಟ್ಟರೆ ಬರದ ವಿದ್ಯೆ
ಕೇಳಿ ಕಲಿತಾನೇ ?

೪೦೫೪. ಹೇಳುವುದು ಸದರ, ಮಾಡುವುದು ಕಷ್ಟ.

೪೦೫೫. ಹೇಳುವವರಿಗೆ ಸುದ್ದಿ, ಕೇಳುವವರಿಗೆ ಬುದ್ಧಿ.

೪೦೫೬. ಹೇಳುವವರು ಹೆಡ್ಡರಾದರೆ
ಕೇಳುವವರಿಗೆ ಮತಿ ಇಲ್ಲವೇ ?

೪೦೫೭. ಹೊಕ್ಕ ಮನೆ ಹಾಳು
ಇದ್ದ ಮನೆ ಬೋಳು.

೪೦೫೮. ಹೊಗಳಿದಷ್ಟೂ ಮಗಳು ಜಗಳಾಡೋದು ಬಿಡುವುದಿಲ್ಲ.

೪೦೫೯. ಹೊಗೆ ಇದ್ದಲ್ಲಿ ಬೆಂಕಿ
ತಗ್ಗು ಇದ್ದಲ್ಲಿ ಚಳಿ.

೪೦೬೦. ಹೊಟ್ಟು ಕುಟ್ಟೆ ಕೈಯೆಲ್ಲ ಗುಳ್ಳೆ.

೪೦೬೧. ಹೊಟ್ಟೆಯಿಂದ ಹುಟ್ಟಿದ್ದು ಬೆನ್ನಿನಲ್ಲಿ ಬಿದ್ದಿದ್ದೂ ನೋಡಬೇಕು.

೪೦೬೨. ಹೊಟ್ಟೆಗಿಲ್ಲದ್ದೇ ಏಕಾದಶಿ.

೪೦೬೩. ಹೊಟ್ಟೆಗಿಲ್ಲದ *ಶಾನುಭೋಗ*
ಹಳೇ ಕಡತ ಹುಡುಕಿದ ಹಾಗೆ.

೪೦೬೪. ಹೊಟ್ಟೇ ನಿನ್ನಿಂದ ಕೆಟ್ಟೆ.

೪೦೬೫. ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳುಮುಳ್ಳು.

೪೦೬೬. ಹೊಡಿಯಬೇಕೆಂಬವಗೆ ಕೂತ ಮಣೆಯೇ ಕೊರಡು.

೪೦೬೭. ಹೊತ್ತಿಗೆ ಒದಗಿಸಿದವನೇ ನೆಂಟ
ಕೆಲಸಕ್ಕೆ ಒದಗಿದವನೇ ಬಂಟ.

೪೦೬೮. ಹೊತ್ತು ಮೀರಿದರೆ †ತೊತ್ತು† ಹೆತ್ತವಳಾದಾಳೇ ?

೪೦೬೯. ಹೊನ್ನಿದ್ದಮ್ಮನ ತೊನ್ನು ಮುಚ್ಚಿತು
ಮಕ್ಕಳಿದ್ದಮ್ಮನ ಹಾದರ ಮುಚ್ಚಿತು.

೪೦೭೦. ಹೊನ್ನುಳ್ಳವನಿಗೆ ಮಾನ ಉಂಟು.

೪೦೭೧. ಹೊಯಿಗೇಲಿ ಬರೆದು ಉಡೀಲಿ
ಹಾಕಿಕೊಂಡ ಹಾಗೆ.

---

* ಸೆಟ್ಟಿ.

† ಸೂಳೆ.

೪೦೭೨. ಹೊರಗಿನ ಕಳ್ಳನನ್ನು ಹಿಡಿಯಬಹುದು
ಒಳಗಿನ ಕಳ್ಳನನ್ನು ಹಿಡಿಯಲಾಗದು.

೪೦೭೩. ಹೊರಗೆ ಹೋಗುವ ಮಾರಿ ನನ್ನ ಮನೇ ಹೊಕ್ಕು
ಹೋಗು ಅಂದ ಹಾಗೆ.

೪೦೭೪. ಹೊರಗೆ ಭಕ್ತಿ, ಒಳಗೆ ಕತ್ತಿ.

೪೦೭೫. ಹೊರಗೆ ನೋಡಿದರೆ ಕೋಟಿ
ಒಳಗೆ ನೋಡಿದರೆ ಹೋಟಿ.

೪೦೭೬. ಹೊರ ಬಲ್ಲವನಿಗೆ ಆಳು ಬೇಡ
ಆಡ ಬಲ್ಲವನಿಗೆ ಹೆಂಡತಿ ಬೇಡ.

೪೦೭೭. ಹೊರೆ ಹೊತ್ತವನ ತುರಿ ಮುರೆಯಾದರೆ ಹೋದೀತೇ ?

೪೦೭೮. ಹೊಲಕ್ಕೆ ಹೋದರೆ ಹುಲಿಯ ಕಾಟ
ಮನೆಗೆ ಬಂದರೆ ನುಸಿಯ ಕಾಟ.

೪೦೭೯. ಹೊಲ ಹಚ್ಚಗಾಯಿತು
ಒಡೆಯನ ಕಣ್ಣು ಕೆಂಪಗಾಯಿತು.

೪೦೮೦. ಹೊಲವೆಲ್ಲ ಹಾಳಾಯಿತು
ಹಿಡಿಸೂಡಿಗೆ ಬಡಿದಾಟ.

೪೦೮೧? ಹೊಲದ ಹತ್ತೀ ಹೊಲದಲ್ಲೇ
ನಿನಗೆ ಮೊಳ ಉದ್ದ, ನನಗೆ ಮೊಳ ಉದ್ದ ಎಂದ ಹಾಗೆ.

೪೦೮೨. ಹೊಲಾ ಬಿತ್ತಿ ನೋಡು
ನೆಲಾ ಸಾರಿಸಿ ನೋಡು.

೪೦೮೩. ಹೊಲಿಯುವವನ ಬಲಕ್ಕಿರ ಬೇಡ
ಅಳುವವನ ಎಡಕ್ಕಿರ ಬೇಡ.

೪೦೮೪. ಹೊಲೆಯನ ಚಿನ್ನಕ್ಕೆ ತರಡೇ ಒರೆಗಲ್ಲು.

೪೦೮೫. ಹೊಲೆಯನ ನಂಬಿ ಹೊಲವ ಹೊಗಬಾರದು
ಕುಳ್ಳನ ನಂಬಿ ನೀರಿಗಿಳಿಯಬಾರದು.

೪೦೮೬. ಹೊಲೆಯನ ಪಾಯಸ ಹಾರುವನಿಗೆ ಯಾಕೆ?

೪೦೮೭. ಹೊಲೆಯನ ಇಷ್ಟ ಉಪ್ಪಿನಕಾಯಿಗೆ ಕೇಡು.

೪೦೮೮. ಹೊಲೆಯ ಹೊತ್ತು ಅರಿಯ
ಕಬ್ಬಲಿಗ ಕಾರ್ಯ ಅರಿಯ.

೪೦೮೯. ಹೊಲೆಯಾಳಿಗೆ ಒಂದು ಮನೆಯಾಳು ಸೆರೆಯಾಯಿತು.

೪೦೯೦. ಹೊಸ ನೀರು ಬಂದು ಹಳೇ ನೀರು
ಕೊಚ್ಚಿಕೊಂಡು ಹೋಯಿತು.

೪೦೯೧. ಹೊಸ ಮನೆ ಹೊಗುತ್ತಾ ಕಾಗೆ ಕಂಕುಳಲ್ಲಿ
ಇಟ್ಟುಕೊಂಡ ಹಾಗೆ.

೪೦೯೨. ಹೊಸ ವೈದ್ಯಗಿಂತ ಹಳೇ ರೋಗಿ ವಾಸಿ.

೪೦೯೩. ಹೊಸತು ಮೆಯ್ಯಲ್ಲಿ. ಹಳತು ಹಗ್ಗಿದಲ್ಲಿ.

೪೦೯೪. ಹೊಸ್ತಿಲು ದಾಟುವಾಗಲೇ ಹೊಸ ಅತ್ತೆಯನ್ನು
ತರಬೇಕಂದ ಹಾಗೆ.

೪೦೯೫. ಹೊಸ್ತಿನಲ್ಲಿ ಅಗಸ ಗೋಣಿ ಒಗದ
ಹಳದಾದರೆ ಬಟ್ಟೆ ಒಗೆಯುವುದೇ ಪ್ರಯಾಸ*.

* ಹೊಸ ಅಗಸ ಗೋಣೀ ಒಗದ.

೪೦೯೬. †ಹೊಳೆ† ದಾಟಿದ ಮೇಲೆ ಅಂಬಿಗನ ಮಿಂಡ.

೪೦೯೭. ಹೊಳೆಗೆ ಹಾಕುವುದಾದರೂ ಅಳೆದು ಹಾಕಬೇಕು.

೪೦೯೮. ಹೊಳೆಗೆ ಇಳಿದ ಮೇಲೆ ಚಳಿಯೇನು ಮಳೆಯೇನು.

೪೦೯೯. ಹೊಳೆಗೆ ನೆನೆಯದ ಕಲ್ಲು ಮಳೆಗೆ ನೆನೆದೀತೇ ?

೪೧೦೦. ಹೊಳೆ ನೀರಿಗೆ ದೊಣ್ಣಪ್ಪನಾಯಕನ ಅಪ್ಪಣೆಯೇ ?

೪೧೦೧. ಹೊಳೆ ಮೂಗಾವದ, ಅನ್ನ ಕೆರಾ ಕಳಚುವುದುಂಟೇ ?

೪೧೦೨. ಹೊಳೇ ಪರ್ಯಂತರ ಓಟ
ದೊರೇ ಪರ್ಯಂತರ ದೂರು.

೪೧೦೩. ಹೋಕಿಲ್ಲದ ಕೆಲಸ ನಾಕದಲ್ಲಿಯು ಬೇಕು.

೪೧೦೪. ಹೋಗದಿದ್ದ ಊರಿಗೆ ಆಗದಿದ್ದ ಚೀಟು.

೪೧೦೫. ಹೋಗಬ್ಯೇಡ ಹೊಗೆ ಹಾಕುತ್ತೇನೆ.

೪೧೦೬. ಹೋಗು ಅನ್ನಲಾರದೆ ಹೊಗೆ ಹಾಕು.

೪೧೦೭. ಹೋತನಿಗೆ ಗಡ್ಡವೇ ಸಾಕ್ಷಿ.

೪೧೦೮. ಹೋತನ ಗಡ್ಡ ನೂತನವೆಂದು
ಕೊಯಿದರೆ ಕೋತಿ ಆದೀತೇ ?

೪೧೦೯. ಹೋದ ಪುಟ್ಟ ಬಂದ ಪುಟ್ಟ
ಪುಟ್ಟನ ಕಾಲಿಗೆ ನೀರಿಲ್ಲ.

---

† ದೋಣಿ.

೪೧೧೦. ಹೋದರೆ ಕಾಸಿ, ಇಲ್ಲದಿದ್ದರೆ ಗಾಸಿ, ಇದ್ದರೆ ವಾಸಿ.

೪೧೧೧. ಹೋದರೆ ಒಂದು ಕಲ್ಲು
ಬಂದರೆ ಒಂದು ಹಣ್ಣು.

೪೧೧೨. ಹೋದ ಒಡವೆ ಹೊರಡದು.

೪೧೧೩. ಹೋದೆಯಾ ಪೀಡೆ ಅಂದರೆ
ಬಂದೆ ಬೆಳಕಿನ ಕಿಂಡಿಯಿಂದ.

೪೧೧೪. ಹೋಮಕ್ಕೆ ಹೋದಲ್ಲಿಯೂ
ನಾಮ ಹಚ್ಚಿಕೊಳ್ಳಬೇಕೋ ?

೪೧೧೫. ಹೋಮ ತಿಳಿಯದಿದ್ದರೆ
ಹೋಳಿಗೆ ಊಟ ಉಣ್ಣಲಿಕ್ಕೆ ತಿಳಿಯದೇ ?

೪೧೧೬. ಹೋರಿ ನೆಚ್ಚಿ ಹೊಲ ಮಾಡಬಾರದು
ಪೋರಿ ನೆಚ್ಚಿ ಬೇರೆ ಆಗಬಾರದು.

೪೧೧೭. ಹೋರಿ ನಡೆಯದಿದ್ದರೆ ಹಾದಿ ಉದ್ದ ಅಂದ ಹಾಗೆ.

೪೧೧೮. ಹೋರಿ ಬಾಳುವುದಕ್ಕಿಂತ ಸೇರಿ ಬಾಳಬೇಕು.

೪೧೧೯. ಹೋರುವ ಮುಂಡೆ ಹೂರಿಗೆ ಬಿಟ್ಟಾಳೇ ?

೪೧೨೦. ಹೋರುವ ಹೆಂಡತಿ ನಾರುವ ನೀರು ತ್ಯಜಿಸು.

೪೧೨೧. ಹೋರೇವು ಇಲ್ಲದೆ ಮಠಕ್ಕೆ ಹೋದರೆ
ಮಠಪತಿ ಮೂರು ಬೊಟ್ಟು ವಿಭೂತಿ ಹಚ್ಚಲಿಕ್ಕೆ ಬಂದ.

೪೧೨೨. ಹೋರೇವು ಇಲ್ಲದೆ ಹೊರ ಗೋಡೆ ಸಾರಿಸಿದರು.

೪೧೨೩. ಹೋಳಿಯಾಡದಿದ್ದರೆ ಹೋಳಿಗೇ ತಿನ್ನಬಾರದೇ ?

೪೧೨೪. ಹೋಳಿಕೆಯೂ ನಾಲಿಗೆಯೂ ಸಮನಾಗಿರಬೇಕು.

೪೧೨೫. ಹೋಳಿಗೆ ಹುಗ್ಗಿ ಎಡೆ ಮಾಡಿದರೆ
ಜೋಳದ ಗುಗ್ಗರಿ ಬೇಡುತ್ತಿದ್ದ.

೪೧೨೬. ಹೌದು ಬಸವಾ ಹೌದು
ಅಲ್ಲ ಬಸವಾ ಅಲ್ಲ.

೪೧೨೭. ಹಂಕಾರಕ್ಕೆ ಉದಾಸೀನವೇ ಮದ್ದು.

೪೧೨೮. ಹಂಗಾಳಾದ ಮೇಲೆ ಮಂಗನ ಹಾಗೆ ಮಾಡಬೇಕು.

೪೧೨೯. ಹಂಗಿಸಿದರೂ ಮಂಗತನ ಬಿಡಲಿಲ್ಲ.

೪೧೩೦. ಹಂಗು ಹರಿದಮೇಲೆ ತೊಂಗೇನು ತೊಡರೇನು.

೪೧೩೧. ಹಂಚಿದವನಿಗೆ ಹಲ್ಲು ಉಳಿಯಲಿಲ್ಲ.

೪೧೩೨. ಹಂಚಿದವಗೆ ಹಲ್ಲು ಬಾಯಿ.

೪೧೩೩. ಹಂಚಿಗೆ ಹಲ್ಲು ಕಿಸಿದರೆ ಕನ್ನಡಿ ಆದೀತೇ ?

೪೧೩೪. ಹಂಚಿನಲ್ಲಿ ಉಣುವವರಿಗೆ ಹರಿವಾಣವು ಯಾಕೆ ?

೪೧೩೫. ಹಂಚು ಕಾಣದಿದ್ದವಳು ಕಂಚು ಕಂಡರೆ
ದಿನಕ್ಕೆ ಮೂರಾವರ್ತಿ ಬೆಳಗಿ ಉಂಡಳು.

೪೧೩೬. ಹಂಡೆಯಲ್ಲಿ ಕರಿಯಲಿಲ್ಲ
ಹಿಂಡಿನಲ್ಲಿ ಕೂಡಲಿಲ್ಲ.

೪೧೩೭. ಹಂಡೆ ತುಂಬಿದ ಮುಂಡೆ ಉಣ್ಣದೆ ಬಿಡಳು.

೪೧೩೮. ಹಂಡೇ ತುಂಬ ನೀರು ಮಿಂದರೂ
ಮಂಡೇ ಕೂದಲು ಬೆಳೆಯಲೇ ಇಲ್ಲ.

೪೧೩೯. ಹಂಡೇ ನೀರು, ಮುಂಡೇ ಅಡಿಗೆ.

೪೧೪೦. ಹಂಡೇ ಮಾರಬೇಡ
ಮುಂಡೆಗೆ ಹಾರಬೇಡ.

೪೧೪೧. ಹಂತಿ ತಪ್ಪಿದರೆ ಊಟ ತಪ್ಪೀತೇ ?

೪೧೪೨. ಹಂದಿಗೆ ಹಲವು ಮರಿ
ಸಿವನ್ನಿಗೆ ಒಂದೇ ಮರಿ.

೪೧೪೩. ಹಂದಿ ಹದಿನೆಯ್ದು ಈದರೂ
ಒಂದೂ ಹಯನಾಗಲಿಲ್ಲ.

೪೧೪೪. ಹಂದಿ ಹಾದವರಿಗೆ ಕಗ್ಗಲ್ಲು ಕಂಡರೆ ಭಯ.

೪೧೪೫. ಹಂದಿಗೆ ತೊಳದರೆ ಕೆಸರು ಬಿಡದು.

೪೧೪೬. ಹಂದಿಯವರು ಹಾದರ ಮಾಡಿದರೆ
ತಮಟೆಯವರು ದಂಡಾ ತೆತ್ತರು.

೪೧೪೭. ಹಂದೀ ಕೂಡ ಆಡಿ
ಕಂದ ಹೇಲು ತಿಂದನು.

೪೧೪೮. ಹಂದೀ ಮೇಲೆ ಕೂತವ ಹೇಸಿಗೆಗೆ ಅಂಜ್ಯಾನೇ ?

೪೧೪೯. ಹಂಪೆಗೆ ಹೋಗದಿದ್ದರೆ ಸಂಪಿಗೆ ನೋಡಲಿಲ್ಲವೇ ?

೪೧೫೦. ಹಂಪೆಗೆ ಹೋಗುವುದಕ್ಕಿಂತ
ನನ್ನ ಕೊಂಪೆಯಲ್ಲಿರುವುದೇ ಲೇಸು.

೪೧೫೧. ಹಂಬಲಿ ಬಿಟ್ಟರೂ ಮಮತೆ ಬಿಡೋದಿಲ್ಲ.

೪೧೫೨. ಹಂಸನಂಥಾ ಪಕ್ಷಿ ಇಲ್ಲ
ಕಂಸನಂಥಾ ರಾಕ್ಷಸನಿಲ್ಲ.

೪೧೫೩. ಹಂಸೇ ಹಾಗೆ ನಡೆಯಲಿಕ್ಕೆ ಹೋಗಿ
ಗುಬ್ಬಿ ಕುಪ್ಪಳಿಸಿ ಬಿದ್ದ ಹಾಗೆ.

೪೧೫೪. ಹಿಂಡೆಕೂಳು ಮುಂಡೆಗೆ ಆದೀತೇ ?

೪೧೫೫. ಹಿಂಡೊಡದ ಆಕಳು ಕಂಡ ಕಡೆ.

೪೧೫೬. ಹಿಂದಕ್ಕೆ ಮುಂದಕ್ಕೆ ದಾಸಯ್ಯನಾದರೆ
ತಿರುಮಂತ್ರಾ ಹೇಳ್ಯಾನು.

೪೧೫೭. ಹಿಂದಿನ ಭಿಕ್ಷೆ ಹೋಯಿತು
ಮುಂದಿನ ಕೋರಾನ್ನ ಹೋಯಿತು.

೪೧೫೮. ಹಿಂದಿನಿಂದ ಆನೆ ಹೋಗಬಹುದು
ಮುಂದಿನಿಂದ ನುಸಿ ಹೋಗಬಹುದು.

೪೧೫೯. ಹಿಂದೆ ಬಯ್ಯಬಾರದು
ಮುಂದೆ ಹೊಗಳಬಾರದು.

೪೧೬೦. ಹಿಂದೆ ಹೋದರೆ ಹೇಡಿ
ಮುಂದೆ ಬಂದರೆ ಗರ್ವಿ.

೪೧೬೧. ಹಿಂದೆ ಮರಿ, ಮುಂದೆ ಅರಿ.

೪೧೬೨. ಹೆಂಗಸರ ತಳ್ಳಿ ಕಾಲಿಗೆ ಬಿದ್ದ ಬಳ್ಳಿ.

೪೧೬೩. ಹೆಂಗಸರ ಬಾಯಲ್ಲಿ ಮಾತು ನಿಲ್ಲದು
ಗಂಡಸರ ಕೈಯಲ್ಲಿ ಕಾಸು ನಿಲ್ಲದು.

೪೧೬೪. ಹೆಂಗಸರ ಬುದ್ಧಿ ಮೊಣಕಾಲಿನ ಕೆಳಗೆ.

೪೧೬೫. ಹೆಂಡರಿಲ್ಲದ ಮನೆ ದಂಡು
ಗಂಡರಿಲ್ಲದ ಮನೆ ಬಂಡು.

೪೧೬೬. ಹೆಂಡ ಮಂಡೆಗೆ ಏರಿದ್ದು
ಕುಂಡೆ ಬಡಕೊಂಡರೆ ಇಳಿದೀತೇ ?

೪೧೬೭. ಹೆಂಡತಿ ಹೆಗ್ಗಡಿತಿಯಾದರೆ
ಗಂಡ ಮೂಳ ನಾಯಿಗಿಂತ ಕಡೆ.

೪೧೬೮. ಹೊಂಗೆಜ್ಜೆ ಮಂಗಕ್ಕೆ ಯಾಕೆ ?

4468

ಅರ್ಥಕೋಶ

ಅ

ಅಗಡುತನ	ತುಂಟತನ
ಅಗುಳು	ಅನ್ನದ ಚೂರು
ಅಗ್ಗಳ	ದೊಡ್ಡವ
ಅಚ್ಚಿ	ತಾಯಿ
ಅಚ್ಚಿನ ಮನುಷ್ಯ	ಬಲಶಾಲಿ
ಅಚ್ಚು	ಚೌಕಾಕಾರದ ಬೆಲ್ಲ
ಅಜ	ಬ್ರಹ್ಮ
ಅಟ್ಟೆ	ಚಪ್ಪಲಿಗೆ ಕೆಳಭಾಗಕ್ಕೆ ಹಾಕುವ ಚರ್ಮ
ಅಡವಿ	ಕಾಡು
ಅಣಕ	ಅಡಕ ದಟ್ಟಿ, ಭದ್ರವಾದ
ಅಪ್ಪಚ್ಚಿ	ರೊಟ್ಟಿ, ಎರೆಯಪ್ಪ
ಅಪ್ಪಂಥವರು	ದೊಡ್ಡವರು
ಅಪ್ಪಿಗೆ	ಹೋಲಿಗೆ, ತ್ಯಾಪೆ
ಅಬ್ಬೆ	ತಾಯಿ
ಅಮುಗ	ಅನುಕೂಲ ಕಾಲ, ಹಬ್ಬದ ದಿನ
ಅಮೇಧ್ಯ	ಹೇಸಿಗೆ
ಅರಣೆ	ಓತಿಕ್ಯಾತ
ಅರವಟ್ಟಿಗೆ	ಬಾಯಾರಿದವನಿಗೆ ಧರ್ಮಾರ್ಥವಾಗಿ ನೀರು ಕೊಡುವ ಜಾಗ
ಅರಿವೆ	ಬಟ್ಟೆ
ಅರೆ	ತೆಯ್ಯಿ
ಅರ್ತಿ	ಪ್ರೀತಿ, ಆಶೆ
ಅವುಟು	ಸಣ್ಣ ಪಿರಂಗಿ
ಅಸಡ್ಡಾಳು	ತಿರಸ್ಕಾರ, ಕ್ಷುದ್ರ, ನಿಕೃಷ್ಟ
ಅಹಿ	ಸರ್ಪ
ಅಳಿಗೆ	ನೀರಿಡುವ ಮಣ್ಣಿನ ದೊಡ್ಡ ಸಾಧನ

ಅಳೆ	ಮಜ್ಜಿಗೆ
ಅಂಕಣ	ಎರಡು ಕಂಬಗಳ ನಡುವಣ ಜಾಗ
ಅಂಗಲವಾಗಿ	ತೆಳುವಾಗಿ, ವಿರಳವಾಗಿ
ಅಂಗುಷ್ಟ	ಕಾಲಿನ ಹೆಬ್ಬೆರಳು
ಅಂಡೆ	ನೀರನ್ನು ತುಂಬಲು ಉಪಯೋಗಿಸುವ ದೊಡ್ಡ ಸಾಧನ
ಅಂತಕ	ಯಮ
ಅಂಬು	ಬಾಣ

ಆ

ಆಕಳು	ಹಸು
ಆಗಾತ್ಯಗಾರ	ಆತ್ಮಹತ್ಯ ಮಾಡಿಕೊಳ್ಳುತ್ತೇನೆ ಎಂದು ಹೆದರಿಸುವವ
ಆಟಾಳು	ಆಳಿನ ಆಳು
ಆಣೆಕಾರ	ಮೊಳೆ ಮಾಡುವವನು
ಆರಂಬ	ವ್ಯವಸಾಯ
ಆರು	ತಣ್ಣಗಾಗು, ಒಣಗು
ಆರುಗಾಲ	ಆರು ಋತುಮಾನಗಳು, ಯಾವಾಗಲೂ
ಆಲೆ	ಕಬ್ಬಿನ ಗಾಣ
ಆವಿಗೆ	ಮಡಕೆಗಳನ್ನು ಬೇಯಿಸಲು ಕುಂಬಾರ ಮಾಡಿಕೊಂಡಿರುವ ಬೆಂಕಿ ಗೂಡು

ಇ

ಇಕ್ಕು	ಬಡಿಸು
ಇಡು	ಹೊಡೆ
ಇಪ್ಪಣ	9 ಆಣೆ ಮತ್ತು 4 ಪೈಸೆ
ಇಬ್ಬಾಯಿ	ಎರಡು ಬಾಯಿ–ಮಾತಿಗೆ ತಪ್ಪುವವ
ಇರವಾರ	ಎರಡು ಪಟ್ಟು, ಹೆಚ್ಚಾಗಿ
ಇಂಬು	ಆಶ್ರಯ

ಈ

ಈಟು	ಇಷ್ಟು, ಸ್ವಲ್ಪ
ಈಡು	ಸಮಾನ, ಶಕ್ತ, ಐಶ್ವರ್ಯವಂತ, ಜೋಡಿ.
ಈಸೀಸು	ಇಷ್ಟಿಷ್ಟು

ಉ

ಉಕ್ಕೆ	ಉಳ (ಉಳುವುದು–ನೇಗಿಲಿನಿಂದ ಭೂಮಿಯನ್ನು ಹದ ಮಾಡುವುದು)
ಉಡಿ	ಮೊಳಕೆ, ನಡು, ಸೊಂಟ
ಉಡಿಕೆ	ಕೂಡಿಕೆ–ಮರುಮದುವೆ
ಉದ್ದುರುಟುತನ	ಒರಟುತನ
ಉಪದ್ರ	ತೊಂದರೆ
ಉಪ್ಪಾರ	ಉಪ್ಪು ಮಾಡತಕ್ಕವ, ಒಂದು ಜಾತಿ
ಉಮ್ಮಿ	ಉಬ್ಬಲು, ಭತ್ತ ರಾಗಿ ಮುಂತಾದವುಗಳ ಹೊಟ್ಟು.
ಉರುಟು	ವೃತ್ತಾಕಾರ
ಉಳಿ	ಮರ ಲೋಹ ಮುಂತಾದವುಗಳನ್ನು ಒಡೆಯಲು ಉಪಯೋಗಿಸುವ ಸಾಧನ
ಉಳ್ಳಿ	ಈರುಳ್ಳಿ

ಊ

ಊಚಿ	ಉಚ್ಚ, ಬೆಲೆಯುಳ್ಳ
ಊಡಕ	ಕಿವುಡ, ಉಂಡಾಡಿಗ
ಊಣೆಯು	ನ್ಯೂನತೆ, ಕೊರತೆ
ಊಬು	ಮುಳ್ಳಿರುವ ಹುಲ್ಲು
ಊರ್ವಿಕರು	ಹಳ್ಳಿಯ ಜನರು

ಎ

ಎಡವಟ್ಟು	ಹೆಡ್ಡತನ, ಮೂರ್ಖತನ
ಎಡೆ	ಊಟ, ನೈವೇದ್ಯ
ಎದೆಗುದಿ	ತಳಮಳ, ವ್ಯಥೆ
ಎರವು	ಕೈಗಡ, ಸಾಲ
ಎರೆ	ದಾನ ಮಾಡು
ಎಲು	ಎಲುಬು–ಮೂಳೆ
ಎಸರು	ಸಾರು
ಎಂಜಲು	ಊಟಮಾಡಿದ ಜಾಗ

ಒ

ಒಕ್ಕಲು	ಕುಟುಂಬ, ಕುಳ
ಒಕ್ಕಳ	ಅಳೆಯುವ ಸಾಧನ–10 ಸೇರು
ಒಡ್ಡಂತಿ	ವರ್ಧಂತಿ
ಒದಗು	ಜೋರಾಗಿ ಓಡು
ಒನಕೆ	ಭತ್ತ ಕುಟ್ಟುವ ಸಾಧನ
ಒಮ್ಮಾನ	ಒಂದು ಮಾನ—೩ ಸೇರು
ಒಮ್ಮಾರು	ಒಂದು ಮಾರು : ಎರಡು ಕೈಗಳನ್ನೂ ನೀಡಿ ಅಳೆಯುವುದು.
ಒರಳು	ಆಕಾರಡಿಸಲು ಉಪಯೋಗಿಸುವ ಕಲ್ಲಿನ ಸಾಧನ
ಒರಗು	ಗೋಡೆಯನ್ನು ಅವಲಂಭಿಸಿ ಮಲಗು
ಒಲಪುಗಾತಿ	ವಯ್ಯಾರಿ, ಬೆಡಗಿ
ಒಲ್ಲಿ	ಹೊದಪು
ಒಂಟಿ	ಗಂಡಸರು ಕಿವಿಗೆ ಧರಿಸುವ ಚಿನ್ನದ ಆಭರಣ

ಓ

ಓಗರ	ಅನ್ನ
ಓಟೆ	ಚಿಪ್ಪು, ಕಾಯಿಯ ಹೊರಭಾಗ, ಪೊಟೆ_ಹಳ್ಳ

ಓಣಿ	ಕಿರುದಾರಿ, ಇಕ್ಕಟ್ಟಾದ ಹಾದಿ

ಕ

ಕಕ್ಕುಲತೆ	ಚಿಂತೆ
ಕಟಿ	ನಡು, ಸೊಂಟ
ಕಟ್ಟಣ	ಮನೆ
ಕಡ	ಸಾಲ
ಕಡಗ	ತೋಳಿಗೆ ತೊಟ್ಟುಕೊಳ್ಳುವ ಹೆಂಗಸರ ಬೆಳ್ಳಿಯ ಆಭರಣ
ಕಡಗೋಲು	ಮೊಸರನ್ನು ಕಡೆಯುವ ಕೋಲು–ಮಂತು
ಕಡಗು	ಬಾಳೆಗಿಡಕ್ಕೆ ಮಾಡಿದ ಸಣ್ಣ ಕಾಲುವೆ
ಕಡಾಸು	ಚರ್ಮ (ತೊವಲು)
ಕಡು	ಹೆಚ್ಚಾದ
ಕಡುನಾಲಗೆ	ಯಾವಾಗಲೂ ಮಾತಾಡುತ್ತಾ ಇರುವುದು
ಕಣಿಕಾ	ಗೋಧಿಹಿಟ್ಟು
ಕತಿ	ಖತಿ—ಕೋಪ
ಕದನ್ನ	ಕೆಟ್ಟ ಅನ್ನ
ಕಬ್ಬಲಿಗ	ಬೆಸ್ತ
ಕರಡ	ಒಣಗಿದ ಹುಲ್ಲು
ಕರುಬು	ಅಸೂಯೆ
ಕಲಕಾಲ	ಎಲ್ಲಾ ಕಾಲ
ಕಲಕು	ಕದಡು
ಕವುದಿ	ಎತ್ತಿಗೆ ಹೊದಿಸುವ ಗೋಣಿಯ ತಟ್ಟು
ಕಸ್ತಿ	ಜಗಳ, ಗಲಾಟೆ
ಕಾಕು	ಕೊಂಕು ಮಾತು, ವಕ್ರ
ಕಾಟನಾಯಕ	ಕಾಡಿನ ಮುಖ್ಯಸ್ಥ
ಕಾವಲಿ	ಕಾಲುವೆ, ದೋಸೆಯ ಕಲ್ಲು
ಕಾವು	ಕೊಡಲಿ ಮುಂತಾದವುಗಳ ಮರದ ಹಿಡಿ.
ಕಾಸ್ತಾರ	ಕುದುರೆಯ ಚಾಕರ
ಕಿಟ್ಟ	ಗಜ್ಜುಗ
ಕಿಲಬು	ಕೊಳೆ

ಕಿಸವಾಯಿ	ತೆರೆದ ಬಾಯಿ
ಕಿಸೆ	ಜೇಬು
ಕುಕ್ಕುಟ	ಕೋಳಿ
ಕುಕ್ಕೆ	ಬಿದಿರಿನ ಪುಟ್ಟಿ
ಕುಡಿಕೆ	ಮಣ್ಣಿನ ಸಣ್ಣ ಪಾತ್ರೆ, ಮಿಳ್ಳೆ
ಕುಡಿ	ಬಳ್ಳಿಯ ತುದಿ
ಕುಣಿ	ಗುಳಿ
ಕುತ್ತರಿ	ಮೆದೆ
ಕುಬ್ಬಾಟ	ಗರ್ವಭರಿತ, ಜಂಬ
ಕುರಂಗ	ಜಿಂಕೆ
ಕುರುಜು	ಮಂಟಪ
ಕುರು	ಕೀವು ತುಂಬಿದ ಸಣ್ಣಗುಳ್ಳೆ
ಕುಲಾವಿ	ಟೋಪಿ
ಕುಳಗಾರು	ಒಕ್ಕಲು, ಒಕ್ಕಲಿಗರ ಸಮೂಹ
ಕೂಗಟೆ ಹುಣ್ಣು	ಕಿವಿಯಲ್ಲಿ ಗುಗ್ಗೆಯಿಂದ ಆಗಬಹುದಾದ ಹುಣ್ಣು
ಕೂಚು	ತೊಲೆಗೆ ಆಧಾರವಾದ ಗೋಡೆಯ ಮೇಲಿನ ಕಂಬ
ಕೂಡಿಕೆ	ಮರು ಮದುವೆ
ಕೂಳು	ಅನ್ನ
ಕೆತ್ತ	ಚಕ್ಕೆ, ಚೂರು
ಕೆಬ್ಬೆ	ಸಿಪ್ಪೆ
ಕೆರಾ	ಚಪ್ಪಲಿ
ಕೇರು	ಹೊಟ್ಟು ಮುಂತಾದ ಧೂಳು ಹೊರಗೆ ಹಾಕುವುದು
ಕೊಗ್ಗಿಡಿ	ಮುಳ್ಳಿರುವ ಕುರುಚಲು ಗಿಡ
ಕೊಟ್ಟಣ	ಭತ್ತವನ್ನು ಒನಕೆಯಿಂದ ಕುಟ್ಟುವುದು
ಕೊಟ್ಟಗೆ	ದನಗಳನ್ನು ಕಟ್ಟಿಹಾಕುವ ಜಾಗ
ಕೊಡತಿ	ಬಡಿಯಲು ಉಪಯೋಗಿಸುವ ಮರದ ಅಥವಾ ಕಬ್ಬಿಣದ ಸಾಧನ
ಕೊಮ್ಮೆ	ಭತ್ತವನ್ನು ತುಂಬುವ ಬಿದಿರಿನ ಸಾಧನ

ಕೊಳಕೆ	ಕೆರೆಯಲ್ಲಿ ಬೆಳೆದ ವಿಷಪೂರಿತ ಮುಳ್ಳಿನ ಗಿಡ; ಭತ್ತದ ಮೂರನೆ ಬೆಳೆ
ಕೊಳಗ	ಅಳೆಯುವ ಸಾಧನ (10 ಸೇರು)
ಕೊಳ್ಳಿ	ಬೆಂಕಿ ಹೊತ್ತಿಸಿದ ಸೌದೆ ತುಂಡು, ಸತ್ತಮೇಲೆ ಇದನ್ನು ಹಿಡಿಯಲೇಬೇಕು
ಕೊಸರು	ಹೆಚ್ಚಿಗೆ ಕೇಳುವುದು
ಕೋಡಗ	ಕಪಿ
ಕೋಲ	ಬಟ್ಟೆಬರಿ, ಸಿಂಗಾರ
ಕಂತು	ಅವಧಿ
ಕಂಬಳ	ಕೋಣಗಳನ್ನು ಕೆಸರಿನಲ್ಲಿ ಓಡಿಸುವ ಆಟ
ಕುಂಗು	ಕುಗ್ಗು
ಕುಂಟೆ	ಕಟ್ಟಿಗೆ ತುಂಡು
ಕುಂಟಣಗಿತ್ತಿ	ವ್ಯಭಿಚಾರಕ್ಕೆ ಹೆಣ್ಣು ಗಂಡುಗಳನ್ನು ಕೂಡಿಸುವವಳು
ಕುಂಬಿ	ಬಾಗು, ನಮಸ್ಕರಿಸು
ಕೊಂಚ	ಅಲ್ಪ, ಕೀಳು ಮನುಷ್ಯ
ಕೊಂಪೆ	ಸಣ್ಣ ಹಳ್ಳಿ

ಗ

ಗಡಿಗೆ	ನೀರು ತರಲು ಉಪಯೋಗಿಸುವ ಮಣ್ಣಿನ ಸಾಧನ
ಗಣೆ	ಗಳ (ದೊಂಬರಾಟದಲ್ಲಿ)
ಗದ್ಯಾಣ	ಚಿನ್ನದ ಒಂದು ನಾಣ್ಯ
ಗನ್ನ	ಮೋಸ
ಗಭಸ್ತಿ	ಕಾಂತಿ
ಗವಸಣಿಗೆ	ಹೊದಿಕೆ, ಮುಸುಕು
ಗವುಜಿ	ಗದ್ದಲ, ಗಲಾಟೆ
ಗವುಳಿ	ಹಲ್ಲಿ
ಗವ್ಯ	ಹಾಲು ಮೊಸರು ಮೊದಲಾದವು
ಗಸಣಿ	ತೊಂದರೆ
ಗಸಿ	ಎಣ್ಣೆ ಅಥವಾ ಬೆಣ್ಣೆಯ ಉಳಿದ ಚರಟ

ಗಿಡ್ಡ	ಚಿಕ್ಕ, ಕುಳ್ಳು
ಗುಗ್ಗರಿ	ಧಾನ್ಯಗಳನ್ನು ಉರಿದುಮಾಡಿದ ತಿಂಡಿ
ಗುಜ್ಜು	ನೋಡಿ : ಕೂಚು
ಗುಡಾಣ	ಮಣ್ಣಿನ ದೊಡ್ಡ ಸಾಧನ (ಪದಾರ್ಥಗಳನ್ನು ತುಂಬಲು)
ಗುಡಿಕಾರ	ಬಣ್ಣಗಾರ, ಚಿತ್ರಗಾರ
ಗುತ್ತಿಗೆ	ಜಮೀನು ಇತ್ಯಾದಿಗಳನ್ನು ಪೂರ್ಣ ಸ್ವಾಧೀನಕ್ಕೆ ತಂದುಕೊಳ್ಳುವುದು
ಗುದಿಗೆ	ದಡಿ, ಬಡಿಗೆ
ಗುಮಾನ	ರಹಸ್ಯ, ಸಂಶಯ
ಗುಮ್ಮಗಟ್ಟು	ಸಂದಣಿಯಲ್ಲಿ ಸೇರುವುದು
ಗುಲ್ಲು	ಗಲಾಟೆ
ಗೆರಸೆ	ಮೊರ
ಗೊಟ್ಟಕೆರೆ	ಬತ್ತಿದ ಕೆರೆ
ಗೊಟ್ಟು	ದುರ್ಲಭ
ಗೊಡವೆ	ಸಂಬಂಧ, ಸಂಪರ್ಕ
ಗೊಡ್ಡು	ಬಂಜೆ
ಗೊಬ್ಬು	ಗಬ್ಬು : ಹೊಲಸು
ಗೊರಟೆ	ಗೋರಂಟೆ ಗಿಡ
ಗೊರೆ	ಗೊರಕೆ
ಗೋಣಿ	ಚೀಲ, ನಾರಿನ ಕಟ್ಟು
ಗೋನಿ	ಗೋಣಿ
ಗೋಮು	ಸಾವಿರಕಾಲು (ಜರಿ)
ಗೋಳಿ	ಆಲದ ಮರ
ಗಂಗರ	ಗಗ್ಗರ—ಗೆಜ್ಜೆ
ಗಂಗಳ	ಊಟದ ತಟ್ಟೆ
ಗಂಜೀಪು	ಇಸ್ಪೀಟು
ಗಂಹರ	ಕೃತ್ರಿಮ, ಕಪಟ
ಗುಂಗುರು	ಸೊಳ್ಳೆಯಂತಿರುವ ಪ್ರಾಣಿ
ಗುಂಜಿ	ಒಂದು ಕಾಳಿನ ತೂಕ
ಗೊಂಗಡಿ	ಕಂಬಳಿ

ಗೊಂಡೆ	ಹೂವಿನ ಕುಚ್ಚು

ಚ

ಚಕ್ಕಂದ	ವಿನೋದ, ಆಟ
ಚಟ್ಟ	ಹೆಣ ತೆಗೆದುಕೊಂಡು ಹೋಗಲು ಕಟ್ಟುವ ಸಾಧನ
ಚಟ್ಟಿ	ಷಷ್ಠಿ–ಆರನೆ ದಿನ
ಚರಿಗೆ	ಚೌರಿಗೆ–ನೀರು ತರಲು ಉಪಯೋಗಿಸುವ ಸಾಧನ
ಚಾಕರ	ಸೇವಕ
ಚಾಕ್ರಿ	ಕೆಲಸ
ಚಾಳಿ	ನಡತೆ, ಅಭ್ಯಾಸ
ಚಿನ್ನಿವಾರ	ಚಿನ್ನ ಬೆಳ್ಳಿ ಕೆಲಸದವ
ಚೀಲಿ	ಬೆಕ್ಕು
ಚಿಂದಿ	ಹರಿದ ಜೂಲು ಜೂಲಾದ ಬಟ್ಟೆ
ಚಿಂಪಿಗ	ಬಟ್ಟೆ ಹೊಲೆಯುವವ
ಚುಂಗಡಿ	ಚಿಲ್ಲರೆ
ಚೆಂಗಾಟ	ಚೆಲ್ಲಾಟ

ಜ

ಜತನ	ಯತ್ನ, ಎಚ್ಚರಿಕೆ
ಜರೆ	ಮುಪ್ಪು
ಜಲ್ಲು	ದೋಣಿಯ ಕಂಬ
ಜವ	ಯಮ
ಜಾಗಟೆ	ದಾಸಯ್ಯನ ಬಡಿದು ಧ್ವನಿಮಾಡುವ ಲೋಹವಾದ್ಯ
ಜಾಡಗಿತ್ತಿ	ನೇಕಾರನ ಹೆಂಡತಿ
ಜಾಲಿಸು	ನೀರಲ್ಲಿ ಅದ್ದಿ ತೊಳೆ
ಜಿನ್ನದೇವ	ಜಿನದೇವ
ಜೀತಗಾರ	ಗುಲಾಮ, ಕೂಲಿಮಾಡುವವ

ಜೀನ	ಲೋಭಿ
ಜೀನಸು	ಜಿನಸು : ತಿನಸು_ತಿಂಡಿ
ಜುಗಾರು	ಜೂಜು
ಜುಣುಗು	ನಾಯಿ ?
ಜುಮ್ಮುಗಾರ	ಜೂಜುಗಾರ
ಜೂತಿ	ಚಪ್ಪಲಿ
ಜೋಡು	ಸಮ, ಜೊತೆ, ಚಪ್ಪಲಿ
ಜೋಲಿಗಾರ	ಕಾಲ ಕಳೆಯುವವ, ತಿರುಗಾಡುವವ
ಜೋಳಿಗೆ	ಕಂಕುಳಲ್ಲಿ ನೇತುಹಾಕುವ ಭಿಕ್ಷೆಯ ಚೀಲ
ಜಂಬರ	ಕೆಲಸ
ಜೊಂಡು	ಕೆರೆಯ ಶೀತ ಪ್ರದೇಶದಲ್ಲಿ ಬೆಳೆಯುವ ಒಂದು ತರದ ಹುಲ್ಲು

ಟ

ಟಕ್ಕ	ಠಕ್ಕ_ಮೋಸಗಾರ
ಟವಳಿಗಾರ	ಮೋಸಗಾರ
ಟವಣೆ	ಹಲವನ್ನು ಕೂಡಿಸುವುದು
ಟಳಾಣ್ಯ	ಜಾಗ, ಸ್ಥಳ
ಟೊಣಪೆ	ದೊಣ್ಣೆ
ಟೊಣೆ	ಮೋಸ, ಕದಿ, ವಂಚಿಸು
ಟೊಣ್ಣೆ	ದಪ್ಪನೆಯ ಒರಟು ಹೆಂಗಸು
ಟಂಕು	ಕುದುರೆ ಜೀನನ್ನು ಭದ್ರಪಡಿಸಲು ಅದರ ದೇಹದ ಸುತ್ತಲೂ ಬಿಗಿಯುವ ಚರ್ಮದ ಅಥವಾ ಬಟ್ಟೆಯ ಪಟ್ಟಿ
ಟಂಟೆ	ಅನುಕರಣ ಧ್ವನಿ
ಟೊಂಕ	ಸೊಂಟ

ತ

ತಕ್ಯ	ದಿಂಬು, ಮೆತ್ತನೆ
ತಕ್ರ	ಮಜ್ಜಿಗೆ

ತಗಡು	ಲೋಹ (ತಾಮ್ರ)
ತಗಲುಗಾರ	ಅಪ್ರಾಮಾಣಿಕ ಮನುಷ್ಯ
ತಟಕು	ತೊಟ್ಟು, ಸ್ವಲ್ಪ, ಹನಿ
ತಟಾಯಿಸು	ಪಾರಾಗಿ ಹೋಗು
ತಡೇ ಕಟ್ಟುವವ	ಅಡ್ಡಿಮಾಡುವವ, ಯಂತ್ರ ಮಂತ್ರ ಮಾಡುವವ
ತತ್ರ ಬಿತ್ರಿ	ತಂತ್ರಗಾರ, ಗಾರುಡಿಗ
ತತ್ವಾರ	ಕೊರತೆ
ತಪ್ಪನೆ	ತಕ್ಷಣ, ಕೂಡಲೆ
ತಫಾವತುಗಾರ	ಹಣವನ್ನು ತಿಂದುಹಾಕುವವ
ತಬಕು	ಎಲೆಅಡಿಕೆ ತಟ್ಟೆ
ತಬ್ಬರಿಸು	ಗಾಬರಿಯಾಗು, ಬೆರಗಾಗು
ತಮ್ಮಡಿ	ಪೂಜಾರಿ
ತರಹರಿಸು (ಕೆ)	ಸಮಾಧಾನ, ಸಹನೆ
ತರಗು	ಮರದಿಂದ ಬಿದ್ದ ಒಣ ಎಲೆಗಳು, ಕಸ
ತರುಬು	ಅಡ್ಡಕಟ್ಟು, ಹೊಡೆ
ತವುಡು	ಭತ್ತದ ಹೊಟ್ಟು
ತಳಿಗೆ	ತಣಿಗೆ—ತಟ್ಟೆ
ತಳ್ಳಿ	ಚಾಡಿ, ಜಗಳ
ತಾಟುಗಾರ	ಗರ್ವದ ಮನುಷ್ಯ
ತಾಪೆ	ನರ್ತನ ಮೇಳ
ತಾರ	ಎರಡು ಕಾಸಿನ ತಾಮ್ರದ ನಾಣ್ಯ
ತಾಲಿ	ಮಾಂಗಲ್ಯ
ತಾವು	ಠಾವು-ಸ್ಥಳ, ಜಾಗ
ತಿಗಳ	ತಮಿಳು ನಾಡಿನಿಂದ ವಲಸೆ ಬಂದವ
ತಿದಿ	ಗಾಳಿ ಊದುವ ಚರ್ಮದ ಚೀಲ
ತಿಮರು	ಕಡಿತ, ನವೆ
ತಿಂಕೆ	ತಿರುಪೆ—ಭಿಕ್ಷೆ
ತಿರಿಚು	ಸುತ್ತು, ಹೊರಳಿಸು
ತಿರುಗ	ಮತ್ತೆ
ತೀಟೆ	ಆಶೆ, ನವೆ
ತೀನಿ	ತಿಂಡಿ, ಸವಿ

ತುಟಾರ	ಮಿತಿ ಮೀರಿದ, ವ್ಯರ್ಥವಾದ
ತುಟ್ಟಿ	ಬೆಲೆ ಏರಿಕೆ
ತುಪಟ	ಕುರಿಯ ಕೂದಲು, ಉಣ್ಣೆ
ತುಪಾನು	ಬಿರುಗಾಳಿ, ಅಪವಾದ
ತುಬ್ಬಾಗ	ಹುಡುಕುವಾಗ
ತುರಂಗ	ಕುದುರೆ
ತುರಿ	ನವೆ, ತೀಟೆ
ತೂಬು	ಕೆರೆಯಿಂದ ನೀರು ಹೊರಗೆ ಹೋಗುವಂತೆ ಮಾಡಿರುವ ಜಾಗ
ತೂಳು	ಆವೇಶ
ತೆಕ್ಕೆ	ಜೋಡಿ, ಬಂಧಿಸು
ತೆವರಿ	ಗದ್ದೆಯ ಪಾತಿಯಲ್ಲಿ ಮಧ್ಯ ಮಧ್ಯ ಕಟ್ಟಿರುವ ಮಣ್ಣಿನ ಸಣ್ಣ ದೊಡ್ಡ ಏರಿ, ಬದ
ತೇಗು	ಒಂದು ಮರ, ಉಂಡಮೇಲೆ ಬರುವ ತೇಗು
ತೇಟೆ (ನೀರು)	ತಿಳಿಯಾದ ನೀರು, ಶುಚಿಯಾದ ನೀರು
ತೇವಾನ	ಸವೆಸು, ವ್ಯರ್ಥ
ತೊಗಲು	ಚರ್ಮ
ತೊಟ್ಟೆ	ತೆಂಗಿನ ಗರಿಯ ಬುಟ್ಟಿ
ತೊಪ್ಪೆ	ಸಗಣಿ
ತೊವ್ವೆ	ಬೇಳೆಕಾಳಿನ ಸಪ್ಪೆಯ ಸಾರು
ತೋರ	ದಪ್ಪ
ತ್ಯಾಪೆ	ಹರಿದ ಬಟ್ಟೆಗಳನ್ನು ಸೇರಿಸಿ ಹೊಲಿಯುವುದು
ತಂಗಳು	ಹಳಸಿದ ಅನ್ನ
ತಂಟೆ	ಜಗಳ
ತಂಡುಲ	ಅಕ್ಕಿ
ತಂಬಟೆ	ತಮ್ಮಟೆ–ವಾದ್ಯವಿಶೇಷ
ತಂಬು	ಡೇರೆ
ತೊಂಡೆ	ಕಬ್ಬಿನ ತುದಿಯ ಭಾಗ, ಕಬ್ಬಿನ ಗರಿ (ಊಜಾಳೆ)
ತೊಂಕು	ಸುತ್ತು, ಹತ್ತುವಿಕೆ

ದ

ದಗಡಿ	ದಾಂಡಿಗ, ದಡೂತಿ ಆಸಾಮಿ
ದಟ್ಟಿ	ಸಣ್ಣ ಪಂಚೆ
ದಡಂಬಡಿಕೆ	ಉದ್ರೇಕ, ಜೋರು
ದಡಿ	ಮರದ ಕೋಲು (ದೊಣ್ಣೆ)
ದಡೆ	10 ಸೇರಿನ ತೂಕ
ದದ್ದು	ಸೂಲು ಬಿಟ್ಟಿರುವುದು, ಒಡೆದಿರುವುದು
ದರಣ	ಧರಣ-11 ಆಣೆ 8 ಕಾಸು
ದವನ	ಜವನ-ಸುವಾಸನೆಯ ಗಿಡ
ದವುತಿ	ಮಸಿ ಕುಡಿಕೆ
ದಾವಳಿ	ಉಣ್ಣೆ ವಸ್ತ್ರ
ದಾವಣಿ	ದನಗಳನ್ನು ಸಾಲಾಗಿ ಕಟ್ಟು (ಹಾಗೆ ಕಟ್ಟುವ ಜಾಗ, ಹಗ್ಗ)
ದುಗ್ಗಾಣಿ	ಎರಡು ಕಾಸು
ದುಸ್ತು	ಬಟ್ಟೆ
ದುಹಿ	ದ್ವೇಷ, ದುಷ್ಟತನ
ದೆಬ್ಬೆ	ಬೊಂಬಿನ ಸಣ್ಣ ಸಣ್ಣ ಭಾಗಗಳು
ದೊಡ್ಡಿ	ಒಕ್ಕಲು
ದೊಣೆ	ಕೊಳ
ದೋಮೆ	ಸೊಳ್ಳೆ
ದೋಳು	ಡೋಲು-ವಾದ್ಯ ವಿಶೇಷ
ದ್ರಾಬೆ	ಬುದ್ಧಿಹೀನ, ಮೂರ್ಖ, ಹೆಡ್ಡ
ದಂಡಿಗೆ	ಪಲ್ಲಕ್ಕಿ
ದೊಂದಿ	ಪಂಜು
ದೊಂಬಿ	ಜಗಳ

ನ

ನಖ	ಉಗುರು
ನಗ	ಆಭರಣ
ನಡಾಂತರ	ಮಧ್ಯದಲ್ಲಿ

ನತ್ತಿ	ಅಸ್ಪಷ್ಟ, ತೊದಲು
ನತ್ತು	ಒಡವೆ
ನಯನ	ಕಣ್ಣು
ನರಟುಗಾರ	ಗೊಣಗು ಮನುಷ್ಯ, ಅತೃಪ್ತ
ನರಡ	ಒರಟು
ನವೆ	ಸಣ್ಣಗಾಗು, ಸವೆ
ನಸ	ಕ್ಷೀಣ, ಕಳೆಗುಂದು
ನಸೆ	ನಸ್ಯ, ಭೋಗಾಭಿಲಾಶೆ
ನಸೆನಸೆ	ಅನುಮಾನ, ಸಂಶಯ
ನಳಿಗೆ	ಕೊಳವೆ
ನಳ್ಳಿ	ಏಡಿ
ನಾಕ	ಸ್ವರ್ಗ
ನಾಗಳ	40 ಸೇರು
ನಾಟರಾಗ	ಒಂದು ಬಗೆಯ ರಾಗ
ನಾದಿದ	ನೆನಸಿದ, ಲೇಪಿಸಿದ
ನಾದಿಗ	ನಾಪಿತ, ಕ್ಷೌರಿಕ
ನಾಭಿ	ಹೊಕ್ಕುಳು
ನಾರಂಗ	ಕಿತ್ತಳೆ
ನಾರು	ಕೊಳಚೆ, ನಾರುಮಡಿ, ವಲ್ಕಲ
ನಾಲೆ	ಕಾಲುವೆ
ನಾಳ	ಕೊಳವೆ
ನಿಗದಿ	ಸಂಬಳ
ನಿಚ್ಚಣಿಗೆ	ಏಣಿ
ನಿಯತ್ತು	ಸತ್ಯಬುದ್ಧಿ
ನಿಲಬಾಕಿ	ನಿಂತ ಹಣ
ನಿವಾಳಿ	ದೃಷ್ಟಿದೋಷದ ಆರತಿ
ನಿಸ್ತ್ರಾಕು	ತೂಕವಿಲ್ಲದ, ಹಗುರ, ನಿಶ್ಶಕ್ತ
ನೀಗು	ಬಿಡು
ನೀಳ	ಉದ್ದ
ನುಚ್ಚು	ಚೂರಾದ ಅಕ್ಕಿ
ನುರಿ	ತೆಯ್ಯಿ, ಸಣ್ಣಗೆ ಚೂರುಮಾಡು

ನುಸಿ	ನ.ಸುಳು, ಜೊರಡು
ನೆಗಳು	ಮೊಸಳೆ
ನೆಗ್ಗು	ನಾಶಮಾಡು
ನೆನ	ಒದ್ದೆಯಾದ, ತೇವವಾದ
ನೆಲು	ಮೊಸರು ಹಾಲುಗಳನ್ನು ಇಡಲು ಮೇಲ್ಚಾವಣಿಗೆಗೆ ಕಟ್ಟಿ ನೇತುಹಾಕಿರುವ ಹಗ್ಗದ ಸಾಧನ
ನೆಲ್ಲು	ಭತ್ತ
ನೆವರು	ಜಾರು
ನೆಸ್ರಾಟ	ಕೋಪದಿಂದ ನೆಗೆದುಕೊಂಡು ಹೋಗುವಿಕೆ
ನೇವಳ	ಹಾರ
ನೊಗ	ಉಳಲು ಹೇರನ್ನು ಕಟ್ಟುವಾಗ ಎತ್ತುಗಳ ಕೊರಳಿಗೆ ಇಡುವ ಮರದ ಸಾಧನ
ನೊರಜು	ಸೊಳ್ಳೆ
ನೊಸಲು	ಹಣೆ
ನೋತ	ನೋವು

ಪ

ಪಕಾಲಿ	ನೀರು ತರುವ ಚರ್ಮದ ಚೀಲ
ಪಗಡಿ	ಉಮಾಲು
ಪಗದಿ	ತೆರಿಗೆ, ಕಪ್ಪಕಾಣಿಕೆ
ಪಚ್ಚು	ಪೆಚ್ಚು–ದಡ್ಡತನ, ತಬ್ಬಿಬ್ಬು
ಪಟ್ಟಾಂಗ	ಸೋಮಾರಿ ಮಾತು
ಪಟ್ಟಿ	ಸಂಬಳ, ಎಲೆಅಡಿಕೆ ಕೂಡಿಸಿ ಕಟ್ಟಿದುದು (ಪಾನಪಟ್ಟಿ)
ಪಟ್ಟೆ	ರೇಶ್ಮೆ
ಪಡಪೋಸಿ	ಎಚ್ಚರವಿಲ್ಲದವ, ದಡ್ಡ
ಪಡಿ	ಹಬ್ಬ ಮದುವೆ ಮುಂತಾದವುಗಳಲ್ಲಿ ಊಟ ಮಾಡದೆ ಇರುವವರಿಗೆ ಭತ್ಯ ಕೊಡುವುದು, ಒಂದು ಅಳತೆ
ಪತ್ರಾವಳಿ	ಊಟದ ಎಲೆ

22

ಪನ್ನಿ	ಹೆಮ್ಮೆ, ಜಂಭ
ಪರಡು	ಕೈಯಿಂದ ತಡವರಿಸಿ ಹುಡುಕಾಡು
ಪರಡಿ	ಶಾವಿಗೆ ತಿಂಡಿ
ಪರತರ	ಶ್ರೇಷ್ಠ, ಉತ್ತಮ
ಪರಸು	ಪರಶು—ಗಂಡುಕೊಡಲಿ
ಪರಾತ	ತಟ್ಟೆ
ಪರ್ವ	ಹಬ್ಬ
ಪಳ್ಳಿ	ಒಂದು ರೀತಿಯ ಆಟ
ಪಾಗಾರ	ಪ್ರಾಕಾರ–ಗೋಡೆ
ಪಾಗು	ಒಂದು ರೀತಿಯ ಟೋಪಿ
ಪಾಟ	ರೂಪ
ಪಾಣಿ	ಕೈ, ಕ್ರಮ
ಪಾದ್ಯ	ಕಾಲಿಗೆ ಕೊಡುವ ನೀರು
ಪಾಪೋಸು	ಚಪ್ಪಲಿ
ಪಾಲಿ	ಕಾವಲು, ಆಳತೆ
ಪಾವಲೆ	ಪಾವಲಿ–ನಾಲ್ಕು ಆಣೆ
ಪಿಪೀಲಿಕೆ	ಇರುವೆ
ಪಿಸುರು	ಸೊಕ್ಕು
ಪಿಸುಣ	ಹಮ್ಮು, ಚಾಡಿಕೋರ
ಪುಕ್ಕ	ಪುಕ್ಕಲು–ಹೆದರಿಕೆ
ಪುಟಗೋಸಿ	ಸಣ್ಣ ಅರಿವೆ (ಲಂಗೋಟಿ)
ಪುಣುಗು	ಒಂದು ಜಾತಿಯ ಬೆಕ್ಕಿನಿಂದ ಹೊರಡುವ ಸುಗಂಧ ದ್ರವ್ಯ
ಪೆಗ್ಗ	ದಡ್ಡ, ಮೂರ್ಖ
ಪೇಚು	ತೊಂದರೆ, ಸಂದಿಗ್ಧತೆ
ಪೈತ್ಯ	ಪಿತ್ತ
ಪೈಸಲು	ತೀರ್ಮಾನ
ಪೊಡವಿ	ಭೂಮಿ
ಪೋಕ	ಪೋಲಿ, ಉಂಡಾಡಿ, ಅಪ್ರಯೋಜಕ ಮನುಷ್ಯ
ಪೋಟ	ಗುಳಿ, ಹಳ್ಳ
ಪೋರ	ಹುಡುಗ

ಫೌಜು	ಸೈನ್ಯ
ಫಂಗು	ಹೆಳವ, ಕುಂಟ, ಶನೀಶ್ವರ
ಫಂಚಮುಶಾಲೆ	ಹಿತ್ತಾಳೆ ಕೆಲಸಮಾಡುವವನ ಮನೆ
ಫಂತ	ಪಂದ್ಯ, ಹಟ
ಪಿಂಡಾರಿ	ದರೋಡೆಕೋರ

ಬ

ಬಕ್ಕರೆ	ಮಡಕೆಯ ಚೂರು
ಬಗದಾಳ	ಕೆಲವು ಸಂಗ್ರಹಿತ ಶ್ಲೋಕಗಳು
ಬಗಲು	ಪಕ್ಕ, ಕಂಕುಳು
ಬಚ್ಚು	ಬಡಕಲು
ಬಡಾಯಿ	ಜಂಭ, ನ್ಯೆಯ್ಯಾರ
ಬಡಿವಾರ	ಬೆಡಗು, ಒಣ ಹೆಮ್ಮೆ
ಬಡ್ಡು	ದಡ್ಡ, ನಿಷ್ಪ್ರಯೋಜಕ ಮನುಷ್ಯ
ಬತ್ತೇರಿ	ಕೋಟೆಯ ಮೇಲೆ ತೋಪು ಇಡುವ ಜಾಗ
ಬಯಲ್ಕಡೆ	ಕಕ್ಕಸ್ಸಿಗೆ ಹೋಗುವುದು
ಬಯ್ರಿಗೆ	ರಂಧ್ರ ಮಾಡಲು ಉಪಯೋಗಿಸುವ ಅಕ್ಕಸಾಲಿಗನ ಸಾಧನ
ಬರಡು	ಬಂಜೆ
ಬರಗು	ಧಾನ್ಯವಿಶೇಷ
ಬವರ	ಯುದ್ಧ, ಜಗಳ
ಬಸೆ	ನೆಣ (ಕೊಬ್ಬು)
ಬಳ್ಳ	ಒಂದು ಅಳತೆ–ಕೊಳಗದ ¼ ಭಾಗ
ಬಾಚಿ	ಅಕ್ಕಸಾಲಿಗನ ಕೆತ್ತುವ ಸಾಧನ
ಬಾಣಸಿಗ	ಅಡಿಗೆ ಮಾಡುವವ
ಬಾದಿ	ಸಹಾಯಕ, ಇಷ್ಟರು
ಬಾರು	ಚರ್ಮದ ದಾರ (ಪಟ್ಟಿ)
ಬಾವು	ಊದಿಕೊಳ್ಳುವ ರೋಗ
ಬಿಕ್ಕೆ	ಭಿಕ್ಷೆ
ಬಿದ್ದಿನ	ಅತಿಥಿ, ನಂಟ
ಬಿಸಾಟ	ಬಿಸಾಡಿದಂತೆ, ನಿರ್ಲಕ್ಷ್ಯ

ಬೀಡಿಕೆ	ಬೀಡು ಬಿಟ್ಟು, ವಿಶ್ರಾಂತಿ
ಬೀಳು	ಬಳ್ಳಿ (ಲತೆ)
ಬುಗಡಿ	ಮುತ್ತೈದೆ ಕಿವಿಯ ಆಭರಣ
ಬುಟೇದಾರಿ	ಹೂವಿನ ಕಸೂತಿಯಿಂದ ಅಲಂಕಾರವಾಗಿರುವ
ಬುರುಜು	ಕೋಟೆಯ ಮೇಲಿನ ಅಟ್ಟಣೆ
ಬೂಟಕ	ಮೋಸಗಾರ
ಬೆಡೆ	ಮರದ ಸಣ್ಣ ಗೂಟ
ಬೆನಕ	ಗಣೇಶ
ಬೆಸನ	ಹೆರಿಗೆ
ಬೇಗಡೆ	ಹೊಳಪು, ತಗಡು
ಬೇಹಾರ	ವ್ಯವಹಾರ (ವ್ಯಾಪಾರ)
ಬೊಕ್ಕ	ಹಲ್ಲಿಲ್ಲದವ
ಬೊಕ್ಕೆ	ಗುಳ್ಳೆ, ಮೊಡವೆ
ಬೊಜ್ಜ	ಭೋಜ್ಯ>ಬೊಜ್ಜ–ಉತ್ತರಕ್ರಿಯೆ
ಬೊಟ್ಟು	ತೊಟ್ಟು, ಹನಿ
ಬೊಡ್ಡು	ಮೊಂಡು
ಬೊಬ್ಬೆ	ಆರ್ಭಟ
ಬೋಕಿ	ಒಡಕು ಪಾತ್ರೆ, ಬಕ್ಕರೆ
ಬೋಣಿ	ಮೊದಲು ಮಾರುವಿಕೆ
ಬೋಡು	ಹಲ್ಲಿಲ್ಲದವ
ಬೋನ	ಅನ್ನ
ಬೋವ	ಗಾಡಿ ನಡೆಸುವ ಆಳು
ಬಂಡ	ದ್ರವ್ಯ ವಸ್ತು
ಬಂಡಾರಿಸು	ಕೆಲಸಕ್ಕೆ ಬಾರದಾಗು
ಬೊಂದಿ	ಶರೀರ
ಬೋಂದು ಗಿಡ	ಕಾಫಿ ಗಿಡ

ಭ

ಭಗಂದರ	ಆಸನದ ವ್ರಣ
ಭಾಂಡ	ಕೊಡ, ಪಾತ್ರೆ
ಭುಕ್ತಿ	ಊಟ

ಭೂರಿ	ಅಪಾರ, ಬಹಳ
ಭೋಷ	ಗೌರವ
ಭೌಮವಾರ	ಮಂಗಳವಾರ

ಮ

ಮಕರ	ಮೊಸಳೆ
ಮಜ್ಜನ	ಸ್ನಾನ
ಮಟ್ಟು	ಇಳಿಮುಖ, ಮಂದ, ಯೋಗ್ಯತೆ, ಹಾಡು
ಮಟ್ಟಿ	ಮಣ್ಣು (ಭೂಮಿ)
ಮಡಲು	ಹೆಂಗಸರು ಹೊಟ್ಟೆಯ ಹತ್ತಿರ ಕಟ್ಟಿಕೊಳ್ಳುವ ಸೀರೆಯ ಪದರು
ಮಡ್ಡ	ಬೆಪ್ಪ
ಮಡ್ಡು (ಡ್ಡಿ)	ಕೆಸರು, ಗಪ್ಪು, ಕಲಗಚ್ಚು
ಮಣಗು	ಬಾಗು, ಸೌಮ್ಯ
ಮಣಿಯಗಾರ	ಮಣಿಗಳನು ಮಾರುವವ
ಮದ್ದು	ಔಷಧಿ
ಮರಸುತ್ತು	ಸ್ಕ್ರೂ
ಮರ್ಕಟ	ಕೋತಿ
ಮರ್ಷ	ಸಹನೆ
ಮಲಕು	ಒಂದು ರೀತಿಯ ಕೊರಳಸರ
ಮಸ್ತಾಟ	ಕಾದಾಟ, ಜಗಳ
ಮಹಿ	ಭೂಮಿ
ಮಾಜ	ಮಸುಳಿಸು, ಮಾಸು
ಮಾಣಿ	ಹುಡುಗ
ಮಾನ	ಅಳತೆಯ ಸಾಧನ, ಮರ್ಯಾದೆ
ಮಾಯಿ	ತಾಯಿ
ಮಾರಣ	ವಿಘ್ನ
ಮಿಟಾದ	ಉದ್ದವಾದ, ದೊಡ್ಡ
ಮಿಣ	ಸ್ನಾನ
ಮುಕ್ಕು	ಬಾಯಿತುಂಬ ಏನನ್ನಾದರೂ ಎಸೆದುಕೊಳ್ಳು, ಒಡೆದುಹೋಗಿರುವ

ಮುನಕೊಳ್ಳು	ಮುನಿಸುಕೊಳ್ಳು
ಮುಪ್ಪಾಗ	ಹಳೆಯಕಾಲದ ಒಂದು ಅಳತೆ
ಮುರವ	ತಿರುಕ
ಮುರವು	ಕಿವಿಮೂಗಿನ ಆಭರಣ
ಮುರಿ	ಕಬ್ಬಿಣದ ಹಗ್ಗ
ಮುರುಕು	ಬೆಡಗು, ಕೊಂಕು
ಮುಸರೆ	ಪಾತ್ರೆಗಳಲ್ಲಿ ಉಳಿದ ಚರಟ
ಮೂಗಳ	30 ಸೇರು
ಮೂಡೆ	ಕಾಳು ಕಡ್ಡಿಗಳನ್ನು ಕಟ್ಟಲು ಉಪಯೋಗಿಸುವ ಸಾಧನ
ಮೂಲ	ಆರಂಬ-ವ್ಯವಸಾಯ
ಮೃಗನಾಭಿ	ಕಸ್ತೂರಿ ಮೃಗದ ಸುಗಂಧದ್ರವ್ಯ
ಮೆಟ್ಟು	ಚಪ್ಪಲಿ
ಮೆದೆ	ಹುಲ್ಲಿನ ಗುಡ್ಡೆ
ಮೆಳ್ಳ	ಮೂಲುಗಣ್ಣು ಉಳ್ಳವ
ಮೇಟ	ಮೂಲಭದ್ರ, ಕಣದ ಮಧ್ಯದಲ್ಲಿ ನೆಡುವ ಮರದ ದಡಿ
ಮೊಗಚು	ಬದಲಿಸು, ಅಡಿಮೇಲಾಗಿಡು
ಮೊಗೆ	ಮಣ್ಣಿನ ಚಿಕ್ಕಪಾತ್ರೆ
ಮೊರ	ಕಾಳು, ಭತ್ತ ಇತ್ಯಾದಿಗಳ ಸಿಪ್ಪೆ ತೆಗೆಯಲು ಕೇರುವ ಸಾಧನ
ಮೋಚ	ಮೋಕ್ಷ, ಬಿಡುಗಡೆ
ಮೋಚೆ (ಮೊಚ್ಚೆ)	ಬೂಟ್ಸು, ಚಪ್ಪಲಿ
ಮೋಟು	ತುಂಡು, ಮೇದು ಉಳಿದುಕೊಂಡ ಭಾಗ
ಮೋಟುಗಾರ	ತನ್ನಿಂದಲೆ ತಾನು ಮೂರ್ಖನಾಗುವುದು
ಮ್ಹೋಳ	ಕೆಟ್ಟ, ಹುಚ್ಚ
ಮಂಕ್ರಿ	ಕಸ ಸುರಿಯಲು ಉಪಯೋಗಿಸುವ ಈಚಲು ಮರದ ಕಡ್ಡಿಯಿಂದ ಮಾಡಿದ ಸಾಧನ
ಮಂಜಿ	ಒಂದು ಪಟಸ್ತಂಭವನ್ನು ಒಳಗೊಂಡ ದೊಡ್ಡ ದೋಣಿ
ಮಂಡಿಗೆ	ಸಿಹಿ ತಿಂಡಿ

ಮಂತಾನಸ್ತ	ಗೃಹಸ್ಥ, ಗೌರವ ವ್ಯಕ್ತಿ
ಮಿಂಚು	ಒಂದು ಒಡನೆ
ಮುಂಡಾಸು	ರುಮಾಲು
ಮೊಂಡ	ಹರಿತವಿಲ್ಲದ, ಒರಟ, ಉದ್ಧಟ

ರ

ರಾಜಕ	ಅರಸುಗಳ ಗುಂಪು
ರಾತೀಬು	ದಿನಕ್ಕೆ ಬೇಕಾದ ಆಹಾರ
ರುವ್ವಿ	ಕಾಸು
ರೇಣು	ಧೂಳು
ರೊಕ್ಕ	ಹಣ

ಲ

ಲಡಾಯಿ	ಜಗಳ
ಲತ್ತೆ	ಒದೆತ
ಲಲಾಟ	ಹಣೆ
ಲಾಟು	ಬಹಳ, ಅಪಾರ
ಲಾವಕತನ	ಕದಿವ ಕೆಲಸ
ಲಾವಂಚ	ಒಂದು ಬಗೆಯ ಸುಗಂಧದ ಬೇರು
ಲಾಳಿ	ನೇಕಾರನ ಉಪಕರಣ
ಲೂತಿ	ಆಸನದ ಹುಣ್ಣು
ಲೆತ್ತ	ಪಗಡೆಯಾಟ, ಜೂಜು
ಲೊಟ್ಟೆ	ಬಾಯಿ ಚಪ್ಪರಿಸು
ಲೊಲ್ಲಟ್ಟೆ	ಸಂಪೂರ್ಣ ಶೂನ್ಯ
ಲೋಗರು	ಜನರು

ವ

ವಟ್ಟ	ಸೋಡಿ, ಕಮಿಶನ್
ವಟ್ಟಗಾರ	ನಿಸ್ಸಂಗಿ

ವಮನ	ವಾಂತಿ
ವರಾತ	ಒತ್ತಾಯ, ಬಲವಂತ
ವರ್ತನೆ	ನೇಮಕ
ವರ್ತಿ	ಬತ್ತಿ
ವಸ್ತಿ	ಜನಸಂದಣಿ
ವಾಯಸ	ಕಾಗೆ
ವಾರಿ	ಕ್ರಮ, ಸರತಿ
ವಾವಿ	ನೆಂಟು, ಬಂಧುತ್ವ
ವಿಡೂರ	ಶತ್ರುತ್ವ
ವಿತ್ತ	ಹಣ
ವೀಸ	ಹಣದ $\frac{1}{16}$ ನೆ ಭಾಗ
ವೆಗ್ಗಳ	ಹೆಚ್ಚಳ, ಪ್ರಾಮುಖ್ಯತೆ
ವ್ರಣ	ಗಾಯ

ಶ

ಶಕ್ರ	ಇಂದ್ರ
ಶಲಭ	ಮಿಡತೆ
ಶಾಮಿಲಾತು	ತನ್ನ ಜಮೀನಿಗೆ ಸೇರಿದ ಹಾಗೆ ಇರುವ ಭಾಗ
ಶುನಕ	ನಾಯಿ
ಶ್ವಾನ	ನಾಯಿ

ಸ

ಸಕಲಾತಿ	ಕೇಸರಿಬಣ್ಣದ ಉಣ್ಣೆಯ ಉಡುಪು
ಸಗಾಟ	ಒಳ್ಳೆಯ ಸ್ನೇಹ
ಸಟ	ದುರಭಿಮಾನ
ಸಟೆ	ಸುಳ್ಳು
ಸಡ್ಯ	ಶಾಠ್ಯ—ದುಷ್ಟತನ, ಕಪಟ
ಸಣ್ಣ	ರೇಶಿಮೆ ವಸ್ತ್ರ
ಸತ್ತಿಗೆ	ಛತ್ರಿ
ಸದರು	ದಿವಾನಖಾನೆ